ಗತಿ

ಬಿ. ಟಿ. ಲಲಿತಾ ನಾಯಕ

ಆಶಾ ಸಾಹಿತ್ಯ ಪ್ರಕಾಶನ
ನಂ. 2, 2ನೇ ಮುಖ್ಯ ರಸ್ತೆ
ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು - 560 003
ದೂರವಾಣಿ : 364476, 3342023

GATHI - A Novel in Kannada by B.T. Lalitha Naik and Published by Asha Sahithya Prakashana, No.82, 2nd Main, P.G. Halli, Bangalore - 560 003. Ph.: 364476, 3342023.
Pages : IV+135

ಬೆಲೆ : 30.00

Printed at :
Chandana Printers
No. 83/1, Ramanjaneya Road,
Sreenagar,Bangalore - 560 019.

"ಗತಿ" ಕುರಿತು ಎರಡು ಮಾತು

'ಪತ್ರಿಕೆ ಪ್ರಕಾಶನ'ದಿಂದ ಹೊರಬಂದ 'ನಂರೂಪ್ಲಿ'ಗೆ ಲಂಕೇಶರೇ ಮುನ್ನುಡಿ-ಹಿನ್ನುಡಿಯ ಅಂಚುಕಟ್ಟಿ ಅಲಂಕರಿಸಿದ್ದರಿಂದ, 'ಗತಿ'ಕಾದಂಬರಿಗೂ ಅವರೇ ಬರೆದಾರೆಂದು ತಿಳಿದು ನಿಶ್ಚಿಂತಳಾಗಿರುವಾಗ, 'ಇದಕ್ಕೊಂದು ಮುನ್ನುಡಿ ಬರೆಯಿರಿ' ಎಂದು ಅವರು ಸೂಚಿಸಿದ್ದಾರೆ.

ಈ ಸಮಾಜದಲ್ಲಿ ಹೆಣ್ಣಿಗಾಗುತ್ತಿರುವ ನಿರಂತರ ಶೋಷಣೆಯನ್ನು ಅವಹೇಳನ, ಅನ್ಯಾಯವನ್ನು ಪರಿಣಾಮಕಾರಿಯಾಗಿ, ಕಲಾತ್ಮಕವಾಗಿ ಕಾದಂಬರಿಯಲ್ಲಿ ಬಿಚ್ಚಿಡಲು ನಾನಿನ್ನು ಸಮರ್ಥಳಾಗಿಲ್ಲ ಎಂಬ ಅತೃಪ್ತಿ ನನಗಿದೆ. ನನ್ನ ಮೊದಲ ಕಾದಂಬರಿ 'ನೆಲೆಬೆಲೆ'ಯಲ್ಲಿ (1980) ಅದನ್ನು ಹೇಳಲು ಪ್ರಾರಂಭಿಸಿದ ನಾನು 'ಗತಿ'ಯಲ್ಲಿಯೂ ಅಷ್ಟನ್ನೇ ಹೇಳುತ್ತಿದ್ದೇನೇನೋ ಅನ್ನಿಸುತ್ತದೆ.

ಹೆಣ್ಣು ಯಾವುದೇ ವರ್ಗ-ವರ್ಣಕ್ಕೆ ಸೇರಿರಲಿ, ವಿದ್ಯಾವಂತೆ ಇರಲಿ, ಅವಿದ್ಯಾವಂತೆಯಾಗಿರಲಿ ಸಮಾಜ ಅವಳನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿಯೇ ಗುರುತಿಸುವುದು ಮಾತ್ರ ನಿಜ.

ಮಹಿಳಾ ವಿಮೋಚನೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಹೋರಾಟ ನಡೆಸಿರುವ ಮಹಿಳೆಯರ ಸುಸಂಘಟಿತ ಸಂಘ-ಸಂಸ್ಥೆಗಳು ವಿದ್ಯಾವಂತೆಯರಾದ ಹಾಗೂ ನಗರ ಪ್ರದೇಶದ ಮಹಿಳೆಯರ ದುಃಸ್ಥಿತಿಯನ್ನು ನಿವಾರಿಸುವುದರಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯಾದಾವು. ಆದರೆ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳ ಸ್ಥಿತಿ ಅತ್ಯಂತ ದಾರುಣವಾದುದು, ಯಾತನಾಮಯವಾದುದು.

ಅಲ್ಲಿ ಕುಡುಕ ಗಂಡ-ಮಾವ-ಭಾವ-ಮೈದುನರಿಂದ ಹೊಡೆತ ತಿಂದು ಗೋಳಾಡದ ಹೆಂಗಸೇ ಪುಣ್ಯವಂತೆ! ಗಂಡುಮಕ್ಕಳನ್ನು ಹಡೆದವಳಷ್ಟೇ ಭಾಗ್ಯವಂತೆ. ಇಲ್ಲವಾದವಳ ಬದುಕು ನರಕ.

ಇದು ಬುಡಕಟ್ಟು ಜನಾಂಗಗಳಲ್ಲಿ ಮಾತ್ರ ಇರಬಹುದಾದ ರೋಗವಲ್ಲ. ಎಲ್ಲಾ ಹಳ್ಳಿಗಾಡುಗಳ (ಪಟ್ಟಣಗಳಲ್ಲಿಯೂ ಇರಬಹುದಾದ) ಕರ್ಮ ಕಥೆಯೂ ಹೌದು. ಇಲ್ಲಿ ಗೊಡ್ಡು ಸಂಪ್ರದಾಯಗಳು, ಕಂದಾಚಾರ ಪದ್ಧತಿಗಳು, ಜೀವ ವಿರೋಧಿ ಮೂಢನಂಬಿಕೆಗಳು, ದೇವರು-ಧರ್ಮದ ಹೆಸರಿನಲ್ಲಿ

ಶೋಷಿಸುವ ಪುರೋಹಿತಶಾಹಿಗಳು, ಅನಕ್ಷರತೆ, ಬಡತನ, ದಾರಿದ್ರ್ಯ ತುಂಬಿ ತುಳುಕುತ್ತಿವೆ.

ಅವರ ಎಲ್ಲಾ ಗೋಳನ್ನು 'ರಸಿಕತೆ'ಗೆ ಮಾರ್ಪಡಿಸಿ, ಜಾನಪದೀಕರಣಗೊಳಿಸಿ ಅವರು ಕಣಿವೆಯ 'ಕೋಗಿಲೆಗಳು', ಮುಗ್ಧರು-ಶತಮಾನಗಳು ಉರುಳಿದರೂ ಮೊದಲಿದ್ದ ಸ್ಥಿತಿಯಲ್ಲೇ ಇರಬೇಕು. ನಾಗರಿಕತೆಗೆ 'ಬಲಿ'ಯಾಗಬಾರದು ಎಂದು ಕಲಿತ ಮಂದಿ ಕೂಗು ಹಾಕುವುದು ಇದೆ.

ಆದರೆ ಈ ಕಾಲಗತಿಯಲ್ಲಿ ಆ ಕಾಡು ಜನಾಂಗ ಕೂಡ ಒಂದಲ್ಲ ಒಂದು ದಿನ ಕಣ್ಣು ತೆರೆಯುವ ಸಂಭವವಿದೆ. ಪ್ರಾಣಿಗಳಂತೆ ಬದುಕುತ್ತಿರುವ ತಾವು ಸಂಕುಚಿತತೆಯ ಹೊಂಡದಿಂದ ಹೊರಬಂದು ಮನುಷ್ಯರಾಗಬಹುದಾಗಿದೆ. ನಾಗರಿಕ ಜಗತ್ತಿನಲ್ಲಿ ಅಮರಿಕೊಳ್ಳುವ ಅಮಾನವೀಯ ಚಟಗಳನ್ನು ಮೆಟ್ಟಿನಿಂತು, ಶುದ್ಧ ಪ್ರಜ್ಞಾವಂತಿಕೆಯನ್ನು ಗಳಿಸಿ ಹೊಸತನದ ಅನುಭವಕ್ಕೆ ತಮ್ಮನ್ನು ಒಡ್ಡಿಕೊಳ್ಳಬಹುದಾಗಿದೆ.

'ಗತಿ' ಕಾದಂಬರಿ ಇದೆಲ್ಲವನ್ನು ಎಷ್ಟರಮಟ್ಟಿಗೆ ಹೇಳುವುದೋ ತಿಳಿಯದು.

ಎರಡು ದಶಕಗಳಿಂದಲೂ ಹೈದ್ರಾಬಾದ್ ಕರ್ನಾಟಕದಲ್ಲಿ ನೆಲೆಸಿರುವ ನಾನು ಇಲ್ಲಿಯ ಪರಿಸರವನ್ನು ಜನಜೀವನವನ್ನು, ಅವರ ಸಂಸ್ಕೃತಿಯನ್ನು ಯೋಗ್ಯತಾನುಸಾರವಾಗಿ ಕಂಡುಂಡಿದ್ದೇನೆ. ಅವರುಗಳೊಡನೆ ಒಂದಾಗಿದ್ದೇನೆ. ಅವರ ಸಮಸ್ಯೆಗಳು ನನ್ನವೂ ಆಗಿವೆ. ಅವರುಗಳೊಡಗೂಡಿ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಹಾದಿಯಲ್ಲಿ ತೆವಳುವುದೂ ನನಗೆ ಸಾಧ್ಯವಾಗಿದೆ.

ಈ ತೆವಳುವಿಕೆಗೆ ಸಹಕಾರಿಯಾಗಬಲ್ಲ ದಾರಿದೀಪಗಳು ಅಲ್ಲೊಂದು ಇಲ್ಲೊಂದು ಮಿನುಗುತ್ತಿರುತ್ತವೆ. ಸೋದರ ಲಂಕೇಶರೂ ಇಂತಹ ಒಂದು ದೀಪವೇ ಹೌದು. 'ಪತ್ರಿಕೆ'ಯಲ್ಲಿ 'ಗತಿ'ಯನ್ನು ಧಾರವಾಹಿಯಾಗಿ ಪ್ರಕಟಿಸಿದರು. ಈಗ ಪುಸ್ತಕ ರೂಪದಲ್ಲಿ ಮುದ್ರಿಸಿ, ಕಾಡು ಜನಾಂಗದ ಕಿರುದನಿಯೊಂದನ್ನು ನಾಡಿನ ಜನರ ಮಡಿಲಿಗೆ ಹಾಕುತ್ತಿದ್ದಾರೆ.

ಅವರಿಗೆ ನಾನು ಕೃತಜ್ಞಳಿರುವಂತೆ ಈ ಪುಸ್ತಕದ ಚಿತ್ರಕಲಾವಿದರಿಗೂ, 'ಪತ್ರಿಕೆ'ಯ ಸಿಬ್ಬಂದಿವರ್ಗಕ್ಕೂ, ಪ್ರತ್ಯಕ್ಷ-ಅಪ್ರತ್ಯಕ್ಷವಾಗಿ ಈ ಕಾರ್ಯದಲ್ಲಿ ನೆರವಾದ ಬಂಧುಗಳೆಲ್ಲರಿಗೂ ನಾನು ಚಿರಕೃತಜ್ಞಳು.

ಬಿ. ಟಿ. ಲಲಿತಾ ನಾಯಕ

ಗತಿ

ಆ ಹಳ್ಳಿಗೆ ಹೆಸರಿಲ್ಲ. ಸಮಸಮೀಪದಲ್ಲಿರುವ ಯಾವುದೇ ಒಂದು (ಕು) ಗ್ರಾಮದ ಹೆಸರಿನಡಿಯಲ್ಲಿ ಅದರ ಅಸ್ತಿತ್ವವನ್ನು ಗುರುತಿಸುತ್ತಾರೆ ಜನ. ಆದರೂ ಕರೆಯಲೊಂದು ಹೆಸರು ಬೇಕೇ ಆಗಿರುವುದರಿಂದ 'ದಿಬ್ಬದ ತಾಂಡ್ಯ' ಎಂದು ಕರೆಯುತ್ತಾರೆ. ಕಾರಣ-ಅದನ್ನು ತುಸು ದಿಬ್ಬದ ಪ್ರದೇಶ ದಲ್ಲಿ ಕಟ್ಟಲಾಗಿದೆ.

ಸುಮಾರು 70 ಕ್ಕಿಂತ ಹೆಚ್ಚು ಮನೆಗಳು ಅಲ್ಲಿಲ್ಲ. ಜನತಾ ಸರ್ಕಾರ ಬರುವ ಮೊದಲೇ ಮಂಜೂರಾಗಿದ್ದ 25 ಜನತಾ ಮನೆಗಳು ಇತ್ತೀಚೆಗೆ ತಾನೆ ಇಲ್ಲಿ ಕಟ್ಟಲ್ಪಟ್ಟು, ಅವುಗಳ ಪೈಕಿ ಹತ್ತು ಮನೆಗಳು ಬಿದ್ದು, ಹದಿನೈದು ಮನೆ ಗಳು ಉಳಿದುಕೊಂಡಿವೆ.

ಉಳಿದ 30-40 ಜೋಪಡಿಗಳು ಬಲವಾದ ಬಿರುಗಾಳಿ ಬೀಸುವ ವರೆಗೂ ಭದ್ರವೆಂದೇ ಭಾವಿಸಬಹುದು. ಎಂಟೊಂಬತ್ತು ಮಣ್ಣಿನ ಮಾಳಿಗೆ ಮನೆಗಳೂ ಈ 'ದಿಬ್ಬ'ದಲ್ಲಿವೆ. ಅವುಗಳಲ್ಲೊಂದು-ಸೇವಾಲಾಲ್ ಮತ್ತು ಮರಿಯಮ್ಮ ಎಂಬ ಜಂಟಿ ದೇವರುಗಳ ಗುಡಿ. ಅದರ ಮೇಲೆ ಒಂದಾನೊಂದು ಕಾಲದಲ್ಲಿ ಬಿಳಿಯ ಬಣ್ಣದ್ದಿರಬಹುದಾದ, ಈಗ ಕಂದು ಬಣ್ಣಕ್ಕೆ ತಿರುಗಿರುವ ಪತಾಕೆಯೊಂದು ಹಾರಾಡುತ್ತಿದೆ. ಇದರಿಂದಾಗಿ ಹೊರ ಗಿನಿಂದ ಬಂದವರಿಗೂ ಸಹ ಇದು ಗುಡಿ ಎಂಬುದು ತಿಳಿದು ಬಿಡುತ್ತದೆ.

ಮತ್ತೊಂದು ಹರಸಿಂಗನ ಮನೆ. ಮಗದೊಂದು ಅಂಗಡಿ ಲಚ್ಮಿಯ ಮನೆ. ಉಳಿದ ಐದಾರು ಮನೆಗಳು-ಅಷ್ಟಿಷ್ಟು ಜಮೀನು ಮಾಡಿಕೊಂಡು ಇದ್ದುದರಲ್ಲೇ ಅನುಕೂಲಸ್ಥರೆಂದು ಪರಿಗಣಿತರಾದ ಚಾಟು ರಾಠೋಡ್, ಪವಲ್ಯಾ, ಮೋತಿ ಪವಾರ್ ಮುಂತಾದ ಮುಖಂಡರವು.

ತಮ್ಮ ಮಕ್ಕಳಿಗೆ ವಿದ್ಯೆಯ ಅವಶ್ಯಕತೆ ಇದೆ ಎಂದು 'ದಿಬ್ಬ'ದ ಜನಕ್ಕೆ ಎಂದೂ ಅನ್ನಿಸಿಲ್ಲವಾದ್ದರಿಂದ ಶಾಲೆಯ ಅಗತ್ಯವೂ ಕಂಡು ಬಂದಿಲ್ಲ. ಹರ ಸಿಂಗನ ಮಗ ಮಾನಸಿಂಗ್ ಒಬ್ಬ ಮಾತ್ರ ಸಮೀಪದ ಬೆಟ್ಟದೂರು ಶಾಲೆಗೆ ನಡೆದುಕೊಂಡು ಹೋಗಿ 8ನೇ ತರಗತಿ ಫೇಲಾಗುವವರೆಗೂ ಓದಿದ್ದೊಂದು

ಹಿರಿಯ ಸಾಧನೆ. ನಂತರ ಆತ ಭಟ್ಟಿ ಸರಾಯಿ ಇಳಿಸುತ್ತಿದ್ದ ತನ್ನ ತಂದೆಗೆ ನೆರವಾಗಬೇಕಾಗಿ ಬಂದಿದ್ದರಿಂದ, ಅಷ್ಟಕ್ಕೇ ಶಾಲೆಯ ಸಹವಾಸವನ್ನು ಕಡಿದು ಕೊಳ್ಳಬೇಕಾಯಿತು. ಪತ್ರವ್ಯವಹಾರದ ಗೋಜಿಲ್ಲವಾದ್ದರಿಂದ 'ದಿಬ್ಬ'ದ ಜನಕ್ಕೆ ಅಂಚೆ ಕಛೇರಿಯ ಕಲ್ಪನೆಯೂ ಇಲ್ಲ.

ಪೂರ್ವಜರು ತೋಡಿಸಿದ್ದ ಒಂದು ಪುರಾತನ ಬಾವಿ ಇದ್ದು, ಕುಡಿಯುವ ನೀರಿಗೆ ತೊಂದರೆ ಇಲ್ಲ. ಎಂದಾದರೊಮ್ಮೆ ಅರಿವೆ-ಅಚ್ಚಡಿ ಒಗೆಯ ಬೇಕೆನಿಸಿದರೆ, ಮೈಲು ದೂರದಲ್ಲಿದ್ದ ಹಳ್ಳಕ್ಕೋ, ಕೆರೆಗೋ ಹೋಗಿ ಮಡಿ ಮಾಡಿಕೊಳ್ಳುತ್ತಾರೆ.

ತಮ್ಮ ದನ ಕುರಿ ಮೇಯಿಸಲು, ಕಟ್ಟಿಗೆ ಕಡಿದು ತರಲು ಸುತ್ತಮುತ್ತ ಗುಡ್ಡಗಾಡುಗಳಿವೆ. ಅವು ತಮ್ಮ ಪಾಲಿಗೆ ದೈವ ಒದಗಿಸಿರುವ ಸಂಪತ್ತಿನ ಗಣಿಗಳೆಂದು ಭಾವಿಸುವುದರಿಂದ ಬೇರೆ ಯಾವುದೇ ಔದ್ಯೋಗಿಕ ಸವಲತ್ತುಗಳನ್ನು ಅವರು ಬಯಸುವುದಿಲ್ಲ.

ಎಲ್ಲಾ ಹಳ್ಳಿ ಊರುಗಳಲ್ಲಿಯೂ ಹೊತ್ತು ಹುಟ್ಟುತ್ತಿದ್ದಂತೆಯೇ ಜನಗಳ ಕಾರ್ಯ ಚಟುವಟಿಕೆಗಳು ಶುರುವಾಗುವಂತೆ, ಇಲ್ಲಿಯೂ ಸಹ ಅಂದು ಬೆಳಗಿನ ಕರ್ಮ ಶುರುವಾಗಿತ್ತು. ಹೆಂಗಸರು ನೀರು ತರುವುದು, ಗಡಿಗೆ-ಮಡಿಕೆ ತೊಳೆಯುವುದು, ರೊಟ್ಟಿ ತಟ್ಟುವುದು, ಮೀನು ಹುರಿಯುವುದು, ಹಿಂಡಿ ಅರೆಯುವುದು, ನುಚ್ಚು ಬೇಯಿಸುವುದು ನಡೆಸಿದ್ದರು. ಗಂಡಸರು ರಂಟೆ ಕುಂಟೆ ಹೂಡಿಕೊಂಡು ಬೇಸಾಯಕ್ಕೆ ನಡೆದಿದ್ದರು.

ಕಟ್ಟಿಗೆ ತರಲೆಂದು ಹೊರಟ ಹೆಂಗಸರ ಗುಂಪೊಂದು ತಲೆಯ ಮೇಲೆ ಬುತ್ತಿಯ ಗಂಟು ಇರಿಸಿಕೊಂಡು ಕಲಕಲ ಮಾತಾಡುತ್ತಾ, ಒಮ್ಮೊಮ್ಮೆ ಹಾಡುತ್ತ ಗುಡ್ಡದತ್ತ ನಡೆದಿತ್ತು. ಭಟ್ಟಿ ಸರಾಯಿಗಾಗಿ ಚೆಕ್ಕೆಗೆಂದೂ ಹೊರಟವರಿದ್ದರು. ಅಂದು ಶುಕ್ರವಾರವಾದ್ದರಿಂದ ಗುಡಿಯ ಪೂಜಾರಿ ಕಾಶಪ್ಪ ರಾತೋಡ ಜಳಕ ಮಾಡಿ ಬಂದು, ಗುಡಿಯ ಅಂಗಳ ಗುಡಿಸಿ, ಸಗಣಿಯಿಂದ ಗರ್ಭಗುಡಿಯ ನೆಲ ಸಾರಿಸಿದ. ಮೂರ್ತಿಯ ಮೇಲೆ ವಾರದಿಂದ ಜಮಾಯಿಸಿದ್ದ ಧೂಳು ಕೊಡವಿ ಚೊಕ್ಕಟ ಪಡಿಸಿದ ನಂತರ ಊದಿನ ಕಡ್ಡಿ ತರಲೆಂದು ಅಂಗಡಿಯ ಕಡೆ ಹೊರಟಿದ್ದ.

ಡಬ್ಬದಂಗಡಿಯ ಲಚ್ಮಿ ಹಿಂಡಿ-ರೊಟ್ಟಿ ತಿಂದು, ಹೊರಕಟ್ಟೆಯಲ್ಲಿ ಕಾದುಕುಳಿತಿದ್ದ ಕುರುಡು ಕಾಳಜ್ಜಿಯ ಕೈಗೊಂದು ರೊಟ್ಟಿ ನೀಡಿ, ತನ್ನ ಅಂಗಡಿಯ ಬಾಗಿಲು ಖುಲ್ಲಾ ಮಾಡಿದಳು.

ಹಿಂದಿನ ರಾತ್ರಿ ಇಳಿಸಿದ್ದ ಭಟ್ಟಿ ಸರಾಯಿಯನ್ನು ಪ್ಲಾಸ್ಟಿಕ್ ಬುರುಡೆಗೆ ತುಂಬಿಸಿಕೊಂಡು ಪೇಟೆಯ ಹಾದಿ ಹಿಡಿದಿದ್ದ ಮುದುಕ ಹರಸಿಂಗ್—ತನ್ನ ಮಾಜಿ ಪ್ರೇಯಸಿ-ರಮಣಿ ತರಲು ಹೇಳಿದ್ದ ಲಂಗದ ಬಟ್ಟೆಯ ಬೆಲೆ ಎಷ್ಟಾಗ ಬಹುದೆಂದು ಲೆಕ್ಕ ಹಾಕುತ್ತ ದಾರಿ ಸವೆಸುತ್ತಿದ್ದ.

ಅವನ ಸೊಸೆ-ಸೋನಿ ಸೆರಗಿನಿಂದ ಪದೇ ಪದೇ ಕಣ್ಣೀರು ತೊಡೆದು ಕೊಳ್ಳುತ್ತ, ನಿನ್ನೆ ಸಂಜೆಯಿಂದ ಕಾಣೆಯಾಗಿದ್ದ ತನ್ನ ಮುದ್ದು ಕೋಳಿಯನ್ನು ಹುಡುಕುವ ದಂಧೆಗೆ ತೊಡಗಿದ್ದಳು. ಅವಳ ಸೆರಗು ಹಿಡಿದು ಹಿಂಬಾಲಿಸಿದ್ದ ಮಕ್ಕಳಿಬ್ಬರೂ "ಅವ್ವಾ, ಹಸಿವಾಗತೈತಿ, ಉಂಬಾಕ ಕೊಡು ಬಾ!" ಎಂದು ಒಂದೇ ಸಮನೆ ಕಾಡತೊಡಗಿದ್ದವು.

ಸೋನಿ ಅವುಗಳ ಗೋಳಿಗೆ ಕಿವಿಗೊಡದೆ ಊರತುಂಬ ಹತ್ತಾರು ಬಾರಿ ಅಡ್ಡಾಡಿ ಅನುಮಾನ ಬಂದ ಮನೆಗಳಲ್ಲೆಲ್ಲ ನುಗ್ಗಿ ಜಪ್ತಿ ಮಾಡಿ ಎಲ್ಲಿಯೂ ಅದರ ಸುಳಿವು ಸಿಗದಾಗ ಹತಾಶಳಾಗಿ ಬೆದರಿಕೆ ಹಾಕಿದಳು. "ಮಾರಮ್ಮಗ ಬೇಡ್ಕೊಂಡು ಅಕ್ಕಿಕಾಳು ಮಂತ್ರಿಸಿ ತರತೀನ್ನೋಡ್ರಿ! ಯಾರರ ಮುಚ್ಚಿಟ್ಟುಕೊಂಡಿದ್ರಂದ್ರ ಮರ್ವಾದಿಲಿಂದ ನನ್ನ ಕೋಳಿನ ಬಿಟ್ಟುಬಿಡ್ರಿ!"

ಆದರೆ ಅವಳ ಅಸ್ತ್ರ ಯಾರ ಮೇಲೂ ಯಾವುದೇ ಪರಿಣಾಮವನ್ನು ಬೀರಲಿಲ್ಲ. "ಅಷ್ಟೇ ಮಾಡಬೇ. ಮಾರಮ್ಮ ಬೆಂಕಿಯಂಥಾವಳು! ಆಕಿಗ ಬೇಡ್ಕೋ. ಮಂತ್ರದ ಕಾಳು ತಿನ್ಸು. ಕದ್ದು ತಿಂದ ಕಳ್ಳರಂಡೇರು ಬಾಯಾಗ್ ಮಣ್‌ಹಾಕ್ಕೊಂಡ್ ಹೋಗ್ತಾರ!" ಎಂದು ಕಳ್ಳರ ಬಗ್ಗೆ ಜಿಗುಪ್ಸೆ ವ್ಯಕ್ತ ಪಡಿಸಿ, ತಮ್ಮ ಸಾಚಾತನವನ್ನು ಸಾಬೀತುಪಡಿಸಿದರು.

ಕಳೆದ ಕೆಲವು ತಿಂಗಳ ಹಿಂದೆ ತನ್ನ ದುಡಿಮೆಯ ಹಣದಲ್ಲಿ ಕೇವಲ ಒಂದು ರೂಪಾಯಿಗೆ ಅವಳು ಕೊಂಡಿದ್ದ ಮರಿಪಿಳ್ಳೆ ಈಗ ಭಾರಿ ಹೆಂಟೆಯಾಗಿ, ಮೊಟ್ಟೆ ಇಡಲಾರಂಭಿಸಿತ್ತು. ಅದನ್ನು ಕಾವಿಗೆ ಕೂರಿಸಿ, ಹತ್ತಾರು ಮರಿ

ಮಾಡಿಸುವ ಇಚ್ಛೆ ಅವಳಿಗಿದ್ದಿತಾದರೂ, ತನ್ನ ಮಕ್ಕಳಿಬ್ಬರ ಮೈಮೇಲಿನ ಲಂಗ ಹರಿದು ಚಿಂದಿಯಾಗಿದ್ದರಿಂದ ಅದನ್ನು ಮಾನ್ವಿ ಸಂತೆಗೆ ಒಯ್ದು ಮಾರಿ ಬಿಡಲು ತೀರ್ಮಾನಿಸಿದ್ದಳು. 20-25 ರೂಪಾಯಿಗಳಿಗೆ ಅದು ಮಾರಾಟ ವಾದರೆ, ಹುಡುಗಿಯರಿಬ್ಬರಿಗೂ ಒಂದು ಜೊತೆ ಚೀಟಿನ ಲಂಗ, ಮೇಲೆ ರೊಕ್ಕವೇನಾದರೂ ಉಳಿದರೆ ತನ್ನ ದಾವಣಿ ಅಂಚಿಗೆ ಹೊಲಿಯಲು ಒಂದಿಷ್ಟು ಗಾಜಿನ ಚೂರು, ಬಣ್ಣದ ದಾರಕೊಂಡು ತರುವ ಯೋಜನೆ ಹಾಕಿಕೊಂಡಿದ್ದಳು. ಆದರೆ ಯೋಜನೆ ಬುಡಮೇಲಾಗಿ, ಕನಸು ನನಸಾಗುವ ಅವಕಾಶ ತಪ್ಪಿಹೋಗಿತ್ತು.

ಅಂದು ರಾತ್ರಿಯೆಲ್ಲ ನಿದ್ರೆ ಬಾರದೆ ಚಾಪೆಯ ಮೇಲೆ ಹೊರಳಾಡಿದ್ದಳು. ಪದೇ ಪದೇ ಹೊರಗೆದ್ದು ಬಂದು "ಬ್ಬಾ, ಬ್ಬಾ ಬ್ಬಾ ಖ್ಬ್ ಖ್ಬ್ ಖ್ಬ್" ಎಂದು ಆರ್ತಿಯಿಂದ ಕೋಳಿಯನ್ನು ಕೂಗಿ ಕರೆದು, ನಿರಾಶೆಯಿಂದ ಒಳನಡೆದಿದ್ದಳು. ಮುಂಜಾನೆ ನಸುಕಿನಲ್ಲೆದ್ದು ಪುನಃ ಹುಡುಕಾಟಕ್ಕೆ ತೊಡಗಿದವಳು ಹೊತ್ತೇರಿದರೂ ಬಿಡದೆ ಮುಂದುವರಿಸಿದ್ದಳು.

ಅವಳು ಅಂಗಡಿಯ ಮುಂದಿನಿಂದ ಎರಡು ಮೂರು ಬಾರಿ ಅಡ್ಡಾಡಿದ್ದನ್ನು ಗಮನಿಸಿದ ಲಚ್ಮಿ "ಸಿಗಲಿಲ್ಲೇನ ಕೋಳಿ?" ಎಂದು ವಿಚಾರಿಸಿದಳು. "ಅದಿನ್ನೆಲ್ಲಿಂದ ಸಿಗತೈತತ್ತೀ? ಯಾ ನನ ಸವ್ತಿ ಗಡಿಗೆಗಿಕ್ಕಿ ಕುಚ್ಚಿದಳೋ, ಯಾ ನನ ಹಾಟ್ಯಾ ತಿಂದು ಒಡ್ಲು ಹರಕೊಂಡ್ನೋ! ಜೀವ ತಡೀಲಾರ್ದ ಕೆಲ್ಸ ಬೊಗ್ಸೆ ಬಿಟ್ಟು ಸುಳ್ಳೇ ಹುಡುಕಲಿಕ್ಕ ಹತ್ತೀನಿ!" ಎಂದು ಸೋನಿ ಹತಾಶಳಾಗಿ ನುಡಿದಾಗ, ಲಚ್ಮಿ ಮನೆಯ ಮಾಡಿನಲ್ಲಿ ಕಾಲುಮಡಿಯಲೆಂದು ಕೂತಿದ್ದ ಪೂಜಾರಿ ಕಾಶಪ್ಪ, ಅಲ್ಲಿಂದಲೇ ಕೂಗಿ ಹೇಳಿದ "ಗುಡಿಗ ಬಾರಬೇ ಸೋನಿ ಬಾಯಿ. ಕಳ್ರು ಯಾರಂಬೋದು ತಾನೇ ಗೊತ್ತಾಗತೈತಿ!"

"ಹೌದಲ್ಲತ್ತಿ! ದೇವರಿಗಾರ ಒಂದ್ಮಾತು ಕೇಳಿ ನೋಡಲೇನು ಅಂತೀನಿ!" ಸೋನಿ ತುಂಬು ಆಸೆಯಿಂದ ಸಲಹೆ ಕೇಳಿದಳು. "ಅದ್ನೇನು ಕೇಳ್ತಿ ಬಿಡ ಹುಚ್ಚಿ. ಕಣ್ಣು-ಬಾಯಿ ಇರೋ ಮನಸ್ರು ಯಾರಾರ ಕಂಡಿದ್ರೆ ಹೇಳ್ತಾರ ನೋಡು!..." ಲಚ್ಮಿಯ ಮಾತನ್ನು ಕೇಳಿಸಿಕೊಂಡ ಕಾಶಪ್ಪ ಅವಸರದಲ್ಲಿ ಜಲಬಾಧೆ ಮುಗಿಸಿ ತುಂಡು ಧೋತ್ರದ ಅಂಚನ್ನು ಜಗ್ಗಿ, ತೊಡೆ ಮುಚ್ಚಿ

ಕೊಳ್ಳುತ್ತ ಅಲ್ಲಿಗೆ ಓಡಿಬಂದ. "ಏ ಸೋನಿಬಾಯಿ, ಲಚ್ಮವ್ವನ ಮಾತೇನು ಕೇಳ್ತಿದ್ದಿ, ಈಕೆ ಯಾವಾಗಾದ್ರೂ ಇಷ್ಟೆ ನೋಡು. ದೇವ್ರು ದಿಂಡ್ರಿಗಿನ್ನ ಮನ್ಸಾರೇ ಮೇಲು ಅಮ್ತಾಳೆ...ನಿನ್ಗ ಹೂ ಬೇಡೋದರಾಗ ಸಮಾಧಾನ ಇಲ್ಲಂದ್ರು, ಸೇವಾಲಾಲಗ ಮಣೆ ಹಾಕುಬಾ. ಏನಿರೋದೆಲ್ಲ ಖುಲ್ಲ ಹೇಳಿ ಬಿಡ್ತಾನ!" ಎಂದು ಸಲಹೆ ಮಾಡಿದ.

ಸೋನಿ ಜಿಜ್ಞಾಸೆಗೆ ಬಿದ್ದಿರುವುದು ಸ್ಪಷ್ಟವಾಗಿತ್ತು. "ನಿನಗ ಕೇಳೋ ಮನ್ಸಿತ್ತಂದ್ರ ಹೋಗು. ನಾ ಬ್ಯಾಡಂಬೋದಿಲ್ಲ" ಎಂದು ಲಚ್ಮಿ ಸಮ್ಮತಿ ನೀಡಿದಾಗ, ಸೋನಿ ಕಾತರದಿಂದ ಗುಡಿಯತ್ತ ಹೊರಡಲನುವಾದಳು.

"ಬರೇ ಕೈ ಹೊಂಟು ಬಿಟ್ಯಲ್ಲ ಬೇ!...ಒಂದ್ ಪಾವ್ಲಿ ಊದಿನಕಡ್ಡಿ ತಗೊ, ಕಾಣ್ಕೆ ಇಡಲಾಕ್ ಒಂದ್ ಪಾವ್ಲಿ ರೊಕ್ಕ ತಗೊಂಬರಬೇಕು" ಕಾಶಪ್ಪ ರೇಟು ರಿವಾಜು ತಿಳಿಹೇಳಿದಾಗ ಸೋನಿಯ ಮುಖ ಬಾಡಿತು.

ಅವಳು ತನ್ನ ಸೊಂಟದ ಪುಟ್ಟ ಸಂಚಿಯನ್ನು ಹೊರತೆಗೆದು, ಅದರ ಬಾಯಿ ಹಿಗ್ಗಲಿಸಿ, ಎಡಅಂಗೈ ಒಡ್ಡಿ, ಅದನ್ನು ಕೊಡವಿದಳು. ಎರಡು ಹತ್ತು ಪೈಸೆಗಳು ಉದುರಿದವು, "ಇಷ್ಟೇ ನೋಡು ಕಾಶಣ್ಣ ನನ್ನ ಬಲ್ಲಿ ರೊಕ್ಕ ಇರೋದು" ಎಂದು ಅವನತ್ತ ಅಂಗೈ ಚಾಚಿ ತೋರಿಸಿದಳು.

"ಆತಗೇನು ತೋರ್ಸಾಕ ಹತ್ತಿದಿ? ದೇವ್ರೇನು ರೊಕ್ಕ ಬೇಡಂಗಿಲ್ಲ. ಇರುವಷ್ಟು ಇಕ್ಕು ಹೋಗು" ಎಂದು ಲಚ್ಮಿ ಸಲಹೆ ಮಾಡಿ, ಅವಳ ಕೈಗೆ ನಾಲ್ಕು ಊದಿನಕಡ್ಡಿ ಕೊಟ್ಟಳು. ಇದನ್ನು ಕಂಡ ಕಾಶಪ್ಪ- "ಅಲ್ಲ ಬೇ ಲಚ್ಮವ್ವಾ, 'ಒಂದ್ ಹತ್ತು ಪೈಸೆ ಊದಿನಕಡ್ಡಿ ಉದ್ರಿ ಕೊಡವ್ವ, ಸಂಜಿ ಮುಂದ ರೊಕ್ಕ ತಂದು ಕೊಡ್ತೀನಿ' ಅಂತ ನಾ ಎಷ್ಟು ಕೇಳಿದ್ನೆಲ್ಲ ನಿನ್ಗ? 'ವಲ್ಯಪ್ಪ, ಬೋಣಿಯಾಗಿಲ್ಲ' ಅಂದು ಬಿಟ್ಟೇ!" ಎಂದ ನಿಷ್ಠುರವಾಗಿ.

"ಹೌದೇಳು. ಈಗ್ಲೂ ಅದೇ ಮಾತು ಅಂತೀನಿ!" ಲಚ್ಮಿ ಅಷ್ಟೇ ಒರಟಾಗಿ ಹೇಳಿದಳು.

"ನಾ ಏನು ನಿನ್ನ ಹತ್ತು ಪೈಸೆ ಮುಣಗ್ಸಿ ಎತ್ತಾಗಾರ ಓಡ್ಹೋಗಿತ್ತಿದ್ನೇನು? ಸೇವಾಭಾಯ ನಿನ್ನ ಸೊಕ್ಕು ಮುರಿತಾನೇಳು-ಯಾಕ ಬಿಡ್ತಾನ!" ಎಂದು ಶಪಿಸುತ್ತ ಆತ ಸೋನಿಯೊಡನೆ ಗುಡಿಯತ್ತ ಹೆಜ್ಜೆ ಹಾಕಿದ.

ಒಂದರ್ಧ ತಾಸು ಕಳೆದ ನಂತರ ಸೋನಿ ಸೋತ ಕಾಲೆಳೆಯುತ್ತ ಅಂಗಡಿಯ ಬಳಿ ಬಂದಳು. "ಸುಳ್ಳೀ ಮುಂದಿ ಮನಿ ತಲಾಶ್ ಮಾಡ್ಕೊಂತ, ಗುಡಿ ಬಾಗ್ಲಿಗ ಅಡ್ಡ ಬಿದ್ಕೊಂತ ತ್ರಾಸ್ ಪಡಲಿಕ್ಕ ಹತ್ತಿದಿ....ನೋಡಿದ್ರ ನಿನ್ಗಂಡನೇ ಒಯ್ದಾನಂತ ಕೋಳಿನ!" ಎಂದಳು ಲಚ್ಮಿ.

"ನಿನಗ್ಯಾರು ಹೇಳಿದ್ರತ್ತಿ?! ಅಲ್ಲಿ ಸೇವಾಭಾಯಾನೂ ಇದೇ ಮಾತು ಹೇಳಿದ್ದು!" ಎಂದು ಸೋನಿ ಸೋಜಿಗ ವ್ಯಕ್ತಪಡಿಸಿದಳು.

"ಎಲ್ಲೆ ಸೇವಾಭಾಯನ್ನ ಹಚ್ಚಿದೀ ಬಿಡು. ಚಾಪುಡಿ ಕೊಳ್ಳಲಿಕ್ಕಂತ ಆ ರತ್ನಿ ಬಂದಿದ್ಲು. ನಿನ್ನೆ ಸಂಜಿಮುಂದ ನಿನ್ನ ಗಂಡ ಒಂದ್ ಕರೆ ಕೋಳಿ ಒಯ್ಯಿದ್ದನ್ನ ಆಕೆ ಕಂಡಳಂತ. ಆ ಕಾಶ್ಯಾನೂ ನೋಡಿರ್ತಾನ. ಅದ್ಕೇ ಇಷ್ಟೆಲ್ಲ ನಾಟ್ಕ ಮಾಡಿದಾನ ಮಗ!"

ಸೋನಿಯ ಮನದಲ್ಲಿ ಹೆಪ್ಪುಗಟ್ಟಿದ್ದ ಶೋಕ ಕಣ್ಣೀರಾಗಿ ಹರಿದು ಬಂತು. ಬಿಕ್ಕಿಬಿಕ್ಕಿ ಅಳುತ್ತ ಹೇಳಿದಳು-"ಇಂಥ ಖುಣಗೇಡಿ ಕೂಡ ನಾ ಹ್ಯಾಂಗ ಬಾಳ್ವೆ ಮಾಡಲತ್ತಿ?...ಜೀವಕ್ಕೆ ಬ್ಯಾಸ್ರ ಬಂದೈತಿ ನೋಡು. ಯಾವುದಾರ ಕೆರೆ ಬಾವಿ ನೋಡ್ಕೋಬೇಕು ಅಂಬೊ ಹಂಗಾಗ್ಯೆತಿ!"

"ಯಾರಾರ ಹುಚ್ಚಿ ಅಂದಾರು! ನಿನಗಂಡ ಮಾವನ ಮ್ಯಾಗ ಸಿಟ್ಟಾಗಿ ಜೀವ ಕಳಕೊಂಡಿ ಅಂದ್ರ ನಾಳೆ ನಿನ್ನ ಮಕ್ಕಳಿಗ ಯಾರು ದಿಕ್ಕು. ನಿಮ್ಮ ಜಗಳದಾಗ ಈ ಎಳೆ ಮಕ್ಳು ಹಸ್ದು ಸಾಯುಹಂಗ ಮಾಡಬ್ಯಾಡ. ಆ ಸೂಳೀ ಮಗ ಹೊಳ್ಳಿಮನಿಗೆ ಬಂದಾಗ, ಯಾರಂಗಡಿಗೆ ಒಯ್ದು ಕೊಟ್ಟಾನ ಕೇಳುವಂತಿ. ಈಗ ಮೊದಲು ಮನಿಗ ಹೋಗಿ ಒಲಿ ಹಚ್ಕೋಗು" ಎಂದು ಬುದ್ಧಿವಾದ ಹೇಳಿ ಮಕ್ಕಳಿಬ್ಬರ ಕೈಗೆ ಒಂದೊಂದು ಸಕ್ಕರೆ ಕಡ್ಡಿ ಕೊಟ್ಟು ಕಳುಹಿಸಿದಳು.

ಮನೆಗೆ ಬಂದ ಸೋನಿ ತಲೆಗೆ ಕೈ ಹೊತ್ತು ಚಿಂತಿಸುತ್ತ ಕುಳಿತಳು. ಐದು ವರ್ಷದ ಮಗಳು ಸೀತಾ, ಸಕ್ಕರೆ ಕಡ್ಡಿಯ ಚೂರನ್ನು ಮುರಿದು ತನ್ನ ಅವ್ವನ ಬಾಯಿಗಿಕ್ಕಿ 'ಅವ್ವಾ ತಿನ್ನು' ಎಂದು ಪ್ರೀತಿಯಿಂದ ನುಡಿದಾಗ, ಕಿರಿಯ ಶಾರದಿಯೂ ತನ್ನ ಅಕ್ಕನನ್ನೇ ಅನುಕರಿಸಿದಳು.

ಸೋನಿ ತನ್ನ ಮಕ್ಕಳ ಪುಟ್ಟಪುಟ್ಟ ಕೈಗಳಿಗೆ ಮಮತೆಯಿಂದ ಮುತ್ತಿಕ್ಕಿ-ಲಚ್ಮೆತ್ತಿ ಹೇಳೋದ್ ಖರೆ. ಈ ನನ್ನ ಕಂದಮ್ಮಗಳಿಗಾಗಿಯಾದ್ರೂ ನಾ ಬದುಕ ಬೇಕು. ನಾಳೆಯಿಂದ ಕಟ್ಟಿಗೆ ಮಾರಿ ಬಂದ ರೊಕ್ಕವನ್ನು ಖರ್ಚು ಮಾಡ ಬಾರ್ದು. ಲಚ್ಮೆತ್ತಿ ಕೈಗೆ ಕೊಟ್ಟು ಬಿಡಬೇಕು. ಇಪ್ಪತ್ತು ಮೂವತ್ತು ರೂಪಾಯಿ ಜಮಾಯಿಸಿದಾಗ ಮಕ್ಕಳಿಗೆ ಅರವಿ ತರಬೇಕು...ಎಂದುಕೊಂಡಳು.

ಅದೇಹೊತ್ತಿಗೆ ಪಕ್ಕದ ಮನೆಯ ರುದ್ರಿ ರಂಗುರಂಗಿನ ಹೊಸಲಂಗ ಹಾಕಿಕೊಂಡು, ತನ್ನ ಗೆಳತಿಯರಿಗೆ ತೋರಿಸಲೆಂದು ಸಂಭ್ರಮದಿಂದ ಓಡಿ ಬಂದಳು. ಸೀತಾ—ಶಾರದಿಯರು ಆಶೆ ಕಂಗಳಿಂದ ಲಂಗವನ್ನು ನೋಡುತ್ತ "ಯಾರು ತಂದುಕೊಟ್ರ?" ಎಂದು ಕೇಳಿದರು.

"ನಮ್ಮಪ್ಪ ತಂದುಕೊಟ್ಟಾನ! ಬರೋ ಶುಕ್ರವಾರ ನಾವೆಲ್ಲಾ ಗದ್ದ ಮ್ಮನ ಜಾತ್ರಿಗ ಹೊಕ್ಕೇವಿ. . .ಆಗ ಇದನ್ನ ಉಟ್ಕೊಂತೀನಿ. . ." ಎಂದು ರುದ್ರಿ ಹೇಳಿಕೊಂಡಾಗ, ಸೀತಾ ತಾಯಿಯನ್ನು ಕುರಿತು "ಅವ್ವಾ, ನಾವೂ ಜಾತ್ರಿಗ ಹೋಗೋಣಾ..." ಎಂದು ಗೋಗರೆದಳು. ಸೋನಿ ಒಮ್ಮೆ ನಿಡು ಸುಯ್ದು, ಮಗಳ ಮನನೋಯಿಸಲಿಚ್ಛಿಸದೆ "ಹೋಗೋಣ" ಎಂಬಂತೆ ತಲೆ ಹಾಕಿದಳು.

ಸೀತಾ ಸಂತೋಷಗೊಂಡು "ರುದ್ರಿ ಅಪ್ಪನ್ಹಂಗ ನಮ್ಮಪ್ಪನೂ ನನಗ ಶಾರದಿಗ ಲಂಗ ಯಾಕ ತಂದುಕೊಡೋವಲ್ಲನವ್ವಾ?" ಎಂದು ಪ್ರಶ್ನಿಸಿದಳು! "ಅಪ್ಪಾಗಿದ್ದನಂದ್ರ ತಂದುಕೊಡೋನು-ಅವನ ಬಾಯಾಗ ಮಣ್ಣು ಹಾಕ್ಲಿ! ಆತನೇನು ತಂದುಕೊಟ್ಟಾನು ಬಿಡು. ಮುಂದ್ಲ ಸಂತಿಗ ನಾ ತಂದುಕೊಡ್ತೀನಿ!" ಎಂದಳು ಸೋನಿ ಬೇಸರ-ಕೋಪ ಬೆರೆತ ದನಿಯಲ್ಲಿ.

"ಈಕಿನಂಥಾದ್ದೇ ತಂದುಕೊಡಬೇಕು ನೋಡು!" ಎಂದು ಸೀತಾ ತಾಕೀತು ಮಾಡಿದಾಗ ಸೋನಿ ಒಪ್ಪಿಕೊಂಡಳು. ಇನ್ನು ಚಿಂತಿಸುತ್ತ ಕೂರು ವುದರಲ್ಲಿ ಅರ್ಥವಿಲ್ಲ ಎನ್ನಿಸಿತು. ಬಾವಿಯಿಂದ ನೀರು ಸೇದಿತಂದು, ಒಲೆ ಹೊತ್ತಿಸಲು ನೋಡಿದಾಗ ಕಟ್ಟಿಗೆ ಇಲ್ಲದ್ದು ಅರಿವಿಗೆ ಬಂದಿತು.

ಸದ್ಯಕ್ಕೆ ಸಣ್ಣ-ಪುಟ್ಟ ಪುರಲೆಗಳಿಂದಲೇ ಅಡಿಗೆ ಮುಗಿಸಿ ಮಕ್ಕಳೊಡನೆ

ಉಂಡು, ರಾತ್ರಿಯ ಅಡಿಗೆಗಾಗಿ ಒಂದು ಹೊರೆ ಕಟ್ಟಿಗೆ ತರಲು ಗುಡ್ಡದ ಕಡೆ ನಡೆದಳು. ಮಕ್ಕಳಿಬ್ಬರೂ ಓರಗೆಯ ಹುಡುಗಿಯರೊಡನೆ ಕೂಡಿ ಅಂಗಳ ದಲ್ಲಿ 'ಮನೆ'ಯಾಟ ಆಡತೊಡಗಿದರು.

ಸೋನಿ ಭಾರಿ ಹೊರೆಹೊತ್ತು ಮನೆಗೆ ಮರಳಿದಾಗ ಹೊತ್ತು ನೆತ್ತಿಗೇ ರಿತ್ತು; ಹಿಂದಿನ ದಿನ ಎಲ್ಲಿಗೋ ಹೋದ ಗಂಡನಾಗಲಿ, ಶರಾಬು ಮಾರಲು ಪೇಟೆಗೆ ಹೋಗಿದ್ದ ಮಾವನಾಗಲಿ ಇನ್ನೂ ಮನೆಗೆ ಹಿಂತಿರುಗಿರಲಿಲ್ಲ. ಅವಳು ಗಟಗಟನೆ ಒಂದು ತಂಬಿಗೆ ನೀರು ಕುಡಿದು ಸುಧಾರಿಸಿಕೊಳ್ಳುತ್ತ ಕೋಳಿ ಮುಚ್ಚುತ್ತಿದ್ದ ಮೂಲೆಯತ್ತ ದೃಷ್ಟಿ ಹರಿಸಿದಳು. ಅದು ಬಿಕೋ ಎನ್ನು ವುದನ್ನು ಕಂಡು ಮನದ ಬೇಜಾರು ಹೆಚ್ಚಾಯಿತು. ಬಾಗಿಲು ಮುಂದೆ ಎಳೆದು ಚಿಲುಕ ಹಾಕಿಕೊಂಡು ಲಚ್ಮತ್ತಿಯ ಅಂಗಡಿ ಮನೆಗೆ ಹೊರಟಳು. ಮಕ್ಕಳು ತಾಯಿಯನ್ನು ಹಿಂಬಾಲಿಸಿದವು.

ಅದೇತಾನೆ ಉಂಡು ಅಂಗೈ ಮೇಲೆ ತಂಬಾಕು ತೀಡುತ್ತ ಕುಳಿತಿದ್ದ ಲಚ್ಮಿ, ಆಕೆ ಬಂದಿದ್ದನ್ನು ಕಂಡು ಸಂಭ್ರಮದಿಂದ 'ಬಾ ಬಾ' ಎಂದು ಸ್ವಾಗತಿ ಸಿದಳು. ತಾನೆಷ್ಟು ಮರೆಯಬೇಕೆಂದರೂ ಸಾಧ್ಯವಾಗದೆ ಮನದ ಮೂಲೆ ಯಲ್ಲಿ ಅಡಗಿಕುಳಿತಿದ್ದ ಮುದ್ದು ಕೋಳಿಯ ಪ್ರಸ್ತಾಪ ತನಗರಿವಿಲ್ಲದಂತೆಯೇ ಸೋನಿಯ ಬಾಯಿಂದ ಹರಿದು ಬರಲಾರಂಭಿಸಿತು.

ಅವರಿಬ್ಬರ ನಡುವೆ ಮಾತುಕತೆ ಶುರುವಾದಷ್ಟೇ ಸಹಜವಾಗಿ ಹೇನು ಹೆಕ್ಕುವ ಕ್ರಿಯೆಯೂ ಪ್ರಾರಂಭವಾಯಿತು. ಆ ಕೆಲಸ ಎಷ್ಟು ನಿರಾತಂಕವಾಗಿ ನಡೆಯತೊಡಗಿತೆಂದರೆ-ಸೋನಿಯ ಮನದ ಬೇಗೆ, ತಳಮಳ, ಮಾತಿನ ಭರಾಟೆ ಇವು ಯಾವುವೂ ಅವಳ ಕ್ರಿಯೆಯ ಮೇಲೆ ವಿರುದ್ಧ ಪರಿಣಾಮ ವನ್ನುಂಟುಮಾಡಲಿಲ್ಲ.

ಅವಳ ಕಣ್ಣುಗಳು ಎದುರಿನ ಕೂದಲ ರಾಶಿಯನ್ನು ಸೂಕ್ಷ್ಮವಾಗಿ ಭೇದಿ ಸುತ್ತಲೇ ಇದ್ದವು. ಹುಡುಕಾಟದ ಸುಳಿವು ಹತ್ತಿದೊಡನೆ ಜೀವಭಯದಿಂದ ಸರಸರನೆ ಹರಿದಾಡಿ ಮರೆಯಾಗಲು ಹವಣಿಸುವ ಹೇನುಗಳನ್ನೂ ಭದ್ರವಾಗಿ ಕೂದಲ ಬುಡಕ್ಕಂಟಿ ಕುಳಿತ ಸೀರುಗಳನ್ನು ಅವಳ ಕೈಗಳು ಅತ್ಯಂತ ಚಾಕ

ಚಕ್ಯತೆಯಿಂದ ಸೆಳೆದು, ಎಡಗೈ ಉಂಗುಷ್ಠದ ಉಗುರಿನ ಭಾಗದ ಮೇಲಿಟ್ಟು ಕಚಕ್ಕನೆ ಕುಕ್ಕಿ ಒಗೆಯುತ್ತಿದ್ದವು. ಅವೇ ಸಮಯಕ್ಕೆ ಸರಿಯಾಗಿ ಅವಳ ನಾಲಿಗೆಯೂ 'ಸ್ಸ್ ಸ್ಸ್' ಎಂದು ಸಾಕ್ಷೋದ್ಗಾರ ಹೊರಡಿಸಿ ಕಾರ್ಯದ ಸಫಲತೆಯನ್ನು ಸಾರಿಕೊಳ್ಳುತ್ತಿತ್ತು.

ಅವಳ ಕೈಗೆ ತಲೆಯೊಪ್ಪಿಸಿದ ಲಚ್ಮಿ ಇಹಲೋಕದ ಜಂಜಾಟವನ್ನು ತೊರೆದು ಪೂರ್ಣ ಸುಖಾನುಭವದ ತೂಕಡಿಕೆಯಲ್ಲಿ ತೇಲಲಾರಂಭಿಸಿದ್ದಳು. ಆ ಸಮಯದಲ್ಲಿ "ಏಯ್ ಸೀತಾ, ಎತ್ತಾಗ ಹಾಳಾಗಿ ಹ್ವಾದ್ಲೇ ನಿಮ್ಮವ್ವಾ!" ಎಂದು ಅಷ್ಟು ದೂರದಲ್ಲಿ ನಿಂತು ಕೂಗಿಕೊಂಡ ಮಾನ್ಯಾನ ಕರ್ಕಶವಾಣಿ, ಅನಿರೀಕ್ಷಿತವಾಗಿ ಕಿವಿಗೆ ಅಪ್ಪಳಿಸಿದಾಗ-ತಾಯಿ- ಮಕ್ಕಳಷ್ಟೇ ಅಲ್ಲ, ತೂಕಡಿಸುತ್ತಿದ್ದ ಲಚ್ಮಿಯೂ ಸಹ ಬೆಚ್ಚಿಬಿದ್ದು, ಸೆರಗಿನಿಂದ ಕಟುವಾಯಿ ಜೊಲ್ಲನ್ನು ಒರೆಸಿಕೊಳ್ಳುತ್ತ ತಿರುಗಿ ನೋಡಿದಳು. ಮಾನ್ಯಾ ಇವರತ್ತಲೇ ದುರುಗುಟ್ಟಿ ನೋಡುತ್ತ ನಿಂತಿದ್ದು ಕಾಣಿಸಿತು.

"ಬಂದನಲ್ಲವ್ವಾ ಮೈಸಾಸುರ! ಮೊದಲು ನೀರು ನಿಡಿಕೊಟ್ಟು, ಉಂಬಾಕ್ ಇಕ್ಕಿ ಹಿಂದಾಗಡಿ ಕೋಳಿ ಪ್ರಸ್ತಾಪ ಎತ್ತು. ಪೈಲಿನೆ ಗಡ್‌ಬಡ್ ಮಾಡ್ಕೋಬ್ಯಾಡ. ಕೆಟ್ಟ ಸಿಟ್ಟಿನ ಮನ್ಸ ಅಂವ..." ಎಂದು ಸಲಹೆ ಮಾಡುತ್ತಾ ಲಚ್ಮಿ ಪಕ್ಕಕ್ಕೆ ಸರಿದಳು. ತನ್ನ ಹಂಡ ಬಂಡ ಮೋಟುಗೂದಲನ್ನು ಹಿಂದೆ ಬಿಗಿದು ಗಂಟುಹಾಕಿ "ಕೂದಲದಾಗ ಕೊಳ್ಳಿ ಇಕ್ಕಿದ್ಹಂಗ ಆಗ ಲಿಕ್ಕಹತ್ತಿತ್ತವ್ವ ತಾಯಿ ಈಗೆಷ್ಟೊ ತಂಪಾತ್ನೋಡು!" ಎಂದು ಕೃತಜ್ಞಳಾಗಿ ನುಡಿದಾಗ "ಸವುಡಾದಾಗ ಬಂದು ಮತ್ತೆ ನೋಡ್ತಿನತ್ತಿ" ಎಂದು ಹೇಳಿ ಹೋನಿ ಅಲ್ಲಿಂದ ಭರಭರನೆ ಹೊರಟಳು.

ಲಚ್ಮಿಯ ಅಣತಿಯಂತೆ ಹುಡುಗಿಯರಿಬ್ಬರೂ ಅಲ್ಲಿಯೇ ನಿಂತರು. ಆಕೆ ಒಳಗಡೆಯಿಂದ ತಂದುಕೊಡಬಹುದಾದ ಯಾವುದೋ ತಿನಿಸನ್ನು ಪಡೆದುಕೊಳ್ಳಲು ಆ ಎಳೆಯ ಜೀವಿಗಳೆರಡೂ ಮೈಯೆಲ್ಲ ಕೈಯಾಗಿ ಕಾತರಿಸುತ್ತ ನಿಂತವು. ತಮ್ಮ ಮನೆಯಲ್ಲಿ ಸಜ್ಜೆ ರೊಟ್ಟಿ, ನುಚ್ಚು, ಕೆಲವೊಮ್ಮೆ ನವಣಕ್ಕಿ ಅನ್ನ ಮಾಡುವುದಿತ್ತು. ಅಪರೂಪಕ್ಕೊಮ್ಮೆ ನೆಲ್ಲಕ್ಕಿ ಅನ್ನ ಸಿಗುತ್ತಿತ್ತು.

ಅವ್ವ-ಅಪ್ಪ ಜಗಳವಾಡಿಕೊಂಡಾಗ ತುಣುಕು ರೊಟ್ಟಿಗೂ ಬರ ಬರುತ್ತಿತ್ತು. ಆಗೆಲ್ಲ ತಮ್ಮನ್ನು ಸುಧಾರಿಸುತ್ತಿದ್ದವಳು ಲಚ್ಮತ್ತಿಯೇ.

ಅವಳ ಮನೆಯಲ್ಲಿ ಅಂತಹ ಯಾವ ಕಿರಿ ಕಿರಿಯೂ ಇಲ್ಲ. ಜೋಳದ ರೊಟ್ಟಿ, ಗಟ್ಟಿ ಬ್ಯಾಳಿ, ಗುರೆಳ್ಳುಪುಡಿ, ಕೆನೆಮೊಸರು, ನುಚ್ಚು ಇವು ಆಕೆಯ ನಿತ್ಯದ ಆಹಾರ. ಒಣಮೀನು, ಸಿಗಡಿ ಚಟ್ನಿ, ತತ್ತಿಸಾರು ಮುಂತಾದ ಅಪ ರೂಪದ ಪಲ್ಯವನ್ನು ಆಗಾಗ ಮಾಡುತ್ತಿರುತ್ತಾಳೆ. ತಮ್ಮ ಮೇಲೆ ಹೆಚ್ಚಾಗಿ ಅವ್ವನ ಮೇಲೆ ಲಚ್ಮತ್ತಿಗೆ ವಿಶೇಷ ಪ್ರೀತಿ. ಪ್ರತಿದಿನವೂ ಏನಾದರೊಂದಿಷ್ಟು ತಿನಿಸುಕೊಡದೆ ಒಬ್ಬಾಕೆ ಉಂಡು ಕೈ ತೊಳೆದದ್ದೇ ಇಲ್ಲ. ಲಚ್ಮತ್ತಿ ಎಂದರೆ ಅವ್ವನಿಗೂ ಬಲು ಜೀವ. ಅವಳ ಲಂಗ ದಾವಣಿಗೆಲ್ಲ ಅವ್ವನೇ ಕಸೂತಿ ಕೆಲಸ ಮಾಡುವುದು. ಜಳಕಕ್ಕೆ ಕೂತಾಗ ಬೆನ್ನು ತಿಕ್ಕುವುದು, ತಲೆಯ ಹೇನು ಹೆಕ್ಕು ವುದೂ ಸಹ ಅವ್ವನೇ...

ಗಂಡನ ಕರೆಗೆ ಓಗೊಟ್ಟು ಲಗುಬಗೆಯಿಂದ ಮನೆಗೆ ಬಂದ ಸೋನಿ ಅವನ ಉರಿಯುತ್ತಿದ್ದ ಗಂಟು ಮೋರೆಯನ್ನು ಕಂಡು, ತಾನಾಡಬೇಕೆಂದಿದ್ದ ಮಾತುಗಳನ್ನು ಹಾಗೆಯೇ ನುಂಗಿಕೊಂಡಳು. ಬಾಗಿಲ ಚಿಲಕವನ್ನು ಸಹ ತೆಗೆಯುವ ಗೋಜಿಗೆ ಹೋಗದೇ, ತನ್ನತ್ತಲೇ ತೀಕ್ಷ್ಣವಾಗಿ ನೋಡುತ್ತಿದ್ದವ ನಿಂದ ಹುಟ್ಟಿಕೊಂಡ ಭಯವನ್ನು ಅದುಮಿಟ್ಟುಕೊಳ್ಳುತ್ತ, ಬಾಗಿಲು ತೆರೆದು ಒಳಹೊಕ್ಕಳು.

ಹಿಂದೆಯೇ ಬಂದ ಮಾನ್ಯಾ ಮೂಲೆಯಲ್ಲಿದ್ದ ಮರದ ಸಂದೂಕದ ಮೇಲೆ ಕುಳಿತು ಬೀಡಿ ಹೊತ್ತಿಸಿದ. ಸೋನಿ ಚರಿಗೆಯಲ್ಲಿ ನೀರು ತಂದು ಅವನೆದುರಿಗಿಟ್ಟು "ಉಣ್ಣೇಳು" ಎಂದಳು. ಅವನು ಬೀಡಿ ಸೇದಿಬಿಟ್ಟ ಹೊಗೆಯೊಡನೆ ಹೆಂಡದ ವಾಸನೆಯೂ ಕಲೆತು ಮನೆ ತುಂಬ ನಾತ ಇಡುಗಿತು. "ನಿನ್ನೆ ದಿವ್ಸ ನನ್ನ ಕೋಳಿನ ಎತ್ತಾಗ್ ಒಯ್ದಿ?" ಸೋನಿ ತಡೆಯಲಾರದೆ ಧೈರ್ಯವಹಿಸಿ ಮೆಲುದನಿಯಲ್ಲಿ ಕೇಳಿದಳು.

"ಯಾಕ? ಭಾಳ ಕೇಳಾಕಹತ್ತಿಯಲ್ಲ? ನಿಮಪ್ಪಗಿಪ್ಪೇನಾರ ಕೊಟ್ಟಿ ದ್ದೇನು ಅವನ್ನ?" ಮಾಮೂಲು ಒರಟು ದನಿಯಲ್ಲಿ ಮರು ಪ್ರಶ್ನೆ ಮಾಡಿದ.

"ನಾ ಕಟ್ಟಿಗೆ ಮಾರಿದ ರೊಕ್ಕದಾಗ ಅದನ್ನ ಕೊಂಡಿದ್ನಿ...ಸಂತಿಗ ಒಯ್ದು ಮಾರಿ ಮಕ್ಕಳಿಗ ಅರಿವಿ ತರಬೇಕಂತ ಮಾಡಿದ್ನಿ..." ಆತನ ಕೆಂಗಣ್ಣ ನೋಟವನ್ನು ಎದುರಿಸಲಾಗದೆ ಹೇಳುತ್ತಲೇ ಒಳಕ್ಕೆ ನಡೆದಳು. ಆತ ಆಲಿಸುತ್ತಿದ್ದುದಂತೂ ನಿಜ...ಮತ್ತೆ ಮುಂದುವರಿಸ್ಸಿದಳು-"ನಂಗೊಂದ್ಮಾತು ಹೇಳ್ಲಿಲ್ಲ ಬಿಟ್ಟಿಲ್ಲ...ಸುಳ್ಳೆ ಊರೆಲ್ಲಾ ಹುಡುಕಾಕ ಹಚ್ಚಿದಿ!..."

ಉತ್ತರ ರೂಪವಾಗಿ ಮಾನ್ಯಾನ ಎದುರಿಗಿದ್ದ ತುಂಬಿದ ಹಿತ್ತಾಳಿ ಚರಿಗೆ ರೊಯ್ಯನೆ ಬೀಸಿಬಂದು ಅವಳ ಹಿಂದಲೆಗೆ ಬಡಿಯಿತು! "ಅಯ್ಯೋಯವ್ವಾ! ಸತ್ನೇ!...ನಾಯೇನು ಅಂಥಾದ್ ಆಡಬಾರದ್ದು ಆಡಿದ್ನೇಯವ್ವಾ! ಇವನ ಕೈ ಸೇದ್ಹೋಗ್ಲಿ! ನನ್ನ ತಲಿ ಒಡದ್ನಲೆ-ಇವನ ಕೈ ಕತ್ತರ್ಸಿ ಹೋಗ್ಲಿ!" ಎಂದೆಲ್ಲ ಬೈಯುತ್ತ ದೊಡ್ಡ ದನಿಯಲ್ಲಿ ಅಳಲಾರಂಭಿಸಿದಳು ಸೋನಿ.

"ಎಲಾ ರಂಡೆ! ಹೊಳ್ಳಿ ನನ್ನ ಬೈತಿಯೇನ್ಲೇ!" ಎನ್ನುತ್ತ ಆತ ಜಿಗಿದು ಬಂದು ಮತ್ತೆ ಬೆನ್ನಿಗೆ ಬಾರಿಸತೊಡಗಿದ. ಸೋನಿಯ ಅಳು ಬೈಗಳು ದ್ವಿಗುಣಿಸಲು, ಎಂದಿನಂತೆ ನೆರೆಹೊರೆಯ ಮಂದಿ ಓಡಿ ಬಂದು ಅವನ ಹಿಡಿತದಿಂದ ಪಾರುಗೊಳಿಸಿದರು.

ಅವಳ ತಲೆಯಿಂದ ಬಳಬಳನೆ ಒಸರುತ್ತಿದ್ದ ರಕ್ತವನ್ನು ಕಂಡು ಕೆಲವರ ಹೃದಯ ಮಿಡಿಯಿತು. 'ಹೆಣ್ಮಕ್ಕಳ ಬಾಳೆಲ್ಲ ಇಷ್ಟೇ ನೋಡು, ಬದುಕಿರೂ ತಾನ-ಬರೇ ಬೈಸಿಕೊಂಬೋದು. ಬಡಿಸಿಕೊಂಬೋದು!' ಎಂದು ಮರುಗುತ್ತ, ಗಾಯಕ್ಕೆ ಸುಣ್ಣ, ಸುಟ್ಟ ಅರಿವೆಯ ಕರಕು ತುಂಬಿ ಪಟ್ಟಿ ಕಟ್ಟತೊಡಗಿದರು. ಜೊತೆಗೆ "ಎಲ್ಡ ಮಕ್ಕಳ ತಾಯಿಯಾದ್ರು ಬುದ್ಧಿ ಬರಲಿಲ್ಲ ಬಿಡ ಖೋಡಿ ನಿನ್ಗ! ಹೆಣ್ಣು ಮಕ್ಕಳು ತಗ್ಗಿ ಬಗ್ಗಿ ಇರಬೇಕೆಂಬೋದು ತಿಳಿದಿಲ್ಲೇನು ನಿನ್ಗ? ಗಂಡನ ಮಾತಿಗೆ ಎದುರಾಡಿ ಹಿಂಗ್ ಬಡಿಸಿಕೊಂಬೋದೇನು?" ಎಂದು ನವಿರಾಗಿ ಮೂದಲಿಸಿದರು. ಸೋನಿ ಅವರುಗಳೊಂದಿಗೆ ವಾದಿಸಲಿಚ್ಛಿಸದೆ ನೋವುಣ್ಣುತ್ತ ತೆಪ್ಪಗಾದಳು. ಅತ್ತ ಗಂಡಸರು ಮಾನ್ಯಾನಿಗೆ ಉಪದೇಶ ನೀಡಲಾರಂಭಿಸಿದ್ದರು. "ಸಾಕಷ್ಟಾರ ಕಲ್ತೋನಿದ್ದಿ! ಹೆಣ್ತಿಗೆ ಬಡಿಬಾರದಂಬೋದ್ ತಿಳಿಯಂಗಿಲ್ಲೇನು?...ಖರೆ ಗಂಡುಮಗ ಆದೋನ್ರ

ಹೆಣ್ಮಕ್ಕಳಿಗ ಬಡೀಲಿಕ್ಕ ಹೋಗಂಗಿಲ್ಲ! ಬರೇ ಕಣ್ಣಿನ ನೋಟದಾಗೇ ನಡು ಗಿಸಿಕೊಂಡಿರಬೇಕು! ತಿಳಿತೊ ಇಲ್ಲೋ?

"ಇಂಥ ಪರಿ ಹೊಡ್ತಾ ಬಿದ್ರು ಸತ ಅಂಜಲಾರದ ಈ ಭೋಸುಡಿ ನನ್ನ ಕಣ್ಣದೃಷ್ಟೀಗ್ ಅಂಜ್ತಾಳಾ!? ಭೇಷ್ ಹೇಳ್ತೀರಿ ಬಿಡ್ರಿ ನೀವು" ಎನ್ನುತ್ತ ಮಾನ್ಯಾ ಬೀಡಿ ಹೊಚ್ಚಿದ.

ಸೋನಿಗೆ ಹೊಡೆತ ಬಿದ್ದ ಸುದ್ದಿ ಲಚ್ಮಿಗೂ ಮುಟ್ಟಿ, ಆಕೆ ಅಲ್ಲಿಗೆ ಓಡಿ ಬಂದಳು. ತುಸುಹೊತ್ತಿನ ಹಿಂದೆ ತನ್ನ ತಲೆಯುರಿಯನ್ನು ಶಮನಗೊಳಿಸಿದ ಉಪಕಾರಿ ಹೆಣ್ಣಿಗೆ ಎಂಥ ಹೀನಸ್ಥಿತಿ ಬಂದೊದಗಿತಲ್ಲಾ ! ಎಂದು ಆಕಿ ಮಿಡಿದಳು.

ಮೂಲೆಯ ಸಂದೂಕದ ಮೇಲೆ ಮಹಾರಾಜನ ಗತ್ತಿನಲ್ಲಿ ಕುಳಿತು ಹೊಗೆ ಕಾರುತ್ತಿದ್ದ ಮಾನ್ಯಾನನ್ನು ಕಂಡು ಅವಳ ಮೈ ಉರಿಯಿತು. "ಯಾಕಲಾ ಏಬರಗೇಡಿ! ತಲಿ ಒಡಿಯೋ ಅಂಥ ತಪ್ಪು ಅದೇನ್ಲಾ ಆಕೆ ಮಾಡಿದ್ದು?" ತನ್ನ ಎಡಗೈಯನ್ನು ಸೊಂಟಕ್ಕೇರಿಸಿ, ಬಲಗೈಯಿಂದ ಅವನ ಮೂತಿಗೆ ತಿವಿಯುವಂತೆ ಅಭಿನಯಿಸುತ್ತ ಪ್ರಶ್ನಿಸಿದಳು.

ಮಾನ್ಯಾ ಕ್ರೂರವಾಗಿ ಅವಳತ್ತ ನೋಡುತ್ತ "ಹೆಚ್ಚು ಕಮ್ಮಿ ಮಾತಾಡ ಬ್ಯಾಡ ಬೇ. ಕೂಳು ತಿಂಬಾಕ ಒಂದ್ ಹಲ್ಲು ಉಳಿಲಾರ್ದಂಗ ಉದರ್ಯಾವು ನೋಡು! ನನ್ನ ಹೆಂಡ್ತಿಗ ನಾ ಬೇಕಾದ್ದು ಮಾಡ್ಕೊಂತೀನಿ! ನೀ ಪೈಲಿ ಹೊಂಟೋಗ್ ನನ್ಮನಿಯಿಂದ!" ಎಂದು ಆಜ್ಞಾಪಿಸಿದ.

ಅಷ್ಟರಲ್ಲಿ ಸಾರಾಯಿ ವ್ಯಾಪಾರ ಮುಗಿಸಿಕೊಂಡು ಮನೆಗೆ ಬಂದ ಹರ ಸಿಂಗ್‌ನಿಗೆ ಯಾರೂ ವಿವರಿಸದೆಯೇ ಪರಿಸ್ಥಿತಿಯ ಅರಿವಾಯಿತು. ಗದ್ದಲ ಹಾಕುವ ಸೊಸೆಯ ಬಗ್ಗೆ, ತಮಾಶೆ ನೋಡಲು ಓಡೋಡಿ ಬಂದು ಗುಂಪು ಗೂಡುವ ನೆರೆಹೊರೆಯವರ ಬಗ್ಗೆ ಭಯಂಕರ ಸಿಟ್ಟು ಬಂತು.

"ಒಂದೀಟು ಗದ್ಲಾ ಆಗಲ್ಲಿಲ್ಲ-ಹ್ಲೂಂ ಅಂತ ಓಡಿ ಬಂದು ಮಾರಮ್ಮನ ಪರ್ಸಿಗ ನೆರಿಯೂ ಅಂಗ ಮನಿ ತುಂಬ ಮುಕ್ಕರ್ಸಿ ಬಿಡ್ತೀರಲ್ಲ. ಮಾಡಲಿಕ್ಕೇನಾರ ಪಗದ ಇಲ್ಲೇನೂ ನಿಮಗ?" ನೆರೆದವರಿಗೆ ಛೀಮಾರಿ ಹಾಕಿದ.

"ಏ ಯಜ್ಜಾ. ನಿನ್ನ ಮಗ ಹೆಂಡ್ತಿ ತಲಿ ಒಡದಾನ! ಅದರ ಸಲು

ವಾಗೇ ಈಸೊಂದು ಮಂದಿ ಜಮಾಯಿಸಿರೋದು!" ಎಂದು ಹೈದನೊಬ್ಬ ನೆರೆದವರ ಪರವಾಗಿ ನುಡಿದಾಗಲೂ ಮುದುಕನ ಕೋಪ ತಗ್ಗಲಿಲ್ಲ. "ಈ ಮೂರ್ಕಾಸಿನ ಲೌಡೀರು ನ್ಯಾಲಿಗ್ಗ ಉದ್ದ ಮಾಡಿವರಂದ್ರ ತಲಿನೂ ಒಡಿಬೇಕಾ ಗತ್ತೈತಿ! ಎಲ್ಲವೂ ಮುರಿಬೇಕಾಗತ್ತೈತಿ! ನಡ್ರಿನಡ್ರಿ ಇನ್ನು ನಿಮ್ನಿಮ್ಮ ಮನೆಗುಳಿಗೆ!"

ಕಂಠಮಟ್ಟ ಕುಡಿದು ಮತ್ತನಾಗಿದ್ದ ಅವನೊಡನೆ ವಾದಕ್ಕಿಳಿಯಲು ಅಪೇಕ್ಷಿಸದೆ ನೆರೆದವರು ಆಗಿಂದಾಗಲೇ ಚದುರಿದರು. ಜಂಬಲಕ್ಕಿದ್ದವರೆಲ್ಲ ಹೊರಟು ಹೋದಾಗ ಸೋನಿಯ ಮನದ ಭೀತಿ ಹೆಚ್ಚಿತು. ಪೆಟ್ಟು ತಗು ಲಿದ್ದ ಬಾಧೆಗಿಂತಲೂ ಮಾನಸಿಕ ವ್ಯಥೆ, ಗಾಬರಿ, ಆತಂಕಗಳು ಅವಳ ನರ ನರವನ್ನೂ ಸಣ್ಣಗೆ ನಡುಗಿಸುತ್ತಿದ್ದವು. ತಾಯಿಯಷ್ಟೇ ಭೀತಿಗೊಂಡಿದ್ದ ಮಕ್ಕಳಿಬ್ಬರೂ ಅವ್ವನಿಗೆ ಅಂಟಿ ಕುಳಿತು ಅಜ್ಜ-ಅಪ್ಪನ ಚಲನ ವಲನಗಳನ್ನು ವೀಕ್ಷಿಸುತ್ತಿದ್ದವು.

ಲಚ್ಮತ್ತಿ ಕೊಟ್ಟು ಕಳುಹಿಸಿದ್ದ ಗೋಧಿರೊಟ್ಟಿಯ ಮಾಲ್ದಿಯನ್ನು ತಿನ್ನಲು ಧೈರ್ಯಸಾಲದೆ ಲಂಗದಲ್ಲಿ ಮುದುರಿ ಹಿಡಿದಿದ್ದವು. ಅವುಗಳ ಗೌರ ವರ್ಣದ ಮುದ್ದು ಮೊಗ-ಗುರುತು ಹತ್ತದಂತೆ ಜಿಡ್ಡು, ಕೊಳೆ, ಕಣ್ಣೀರ ಕಲೆಗಳಿಂದ ಅಂದಗೆಟ್ಟಿತ್ತು.

ಅವುಗಳಿಗೆ ತಿಳುವಳಿಕೆ ಬಂದಾಗಿನಿಂದಲೂ ಮನೆಯಲ್ಲಿ ಇಂತಹ ಘಟನೆ ಗಳು ಮೇಲಿಮೇಲೆ ನಡೆಯುವುದು ಸರ್ವಸಾಮಾನ್ಯವಾಗಿತ್ತು. ಗಂಡ ಹೊಡೆದು ಬಡಿದು ಮಾಡಿದಾಗ ಸೋನಿ ಮುನಿಸಿಕೊಂಡು ತೌರುಮನೆಗೆ ಓಡಿ ಹೋಗಿದ್ದು ಆದೆಷ್ಟೋ ಬಾರಿ. ಆದರೆ ಅಲ್ಲಿ ಹೆಚ್ಚು ಕಾಲ ಉಳಿಸಿಕೊಳ್ಳಲು ಅವಳ ತಂದೆ ತಾಯಿಗಳು ಇಷ್ಟಪಡುತ್ತಿರಲಿಲ್ಲ. "ಕೊಟ್ಟ ಹೆಣ್ಣು ಕುಲಕ್ಕ ಹೊರಗು. ನಿನ ಗಂಡ ಎಷ್ಟಾರ ಹಿಂಸೆ ಕೊಡವಲ್ಲನ್ಯಾಕ, ಸೈಸಿಕೊಂಡು ಬಾಳ್ವೆ ಮಾಡಬೇಕವ್ವ!" ಎಂದು ಉಪದೇಶ ನೀಡಿ, ಗಂಡ ಕರೆಯಲು ಬರಲಿ, ಬಿಡಲಿ, ಮಗಳನ್ನು ಸಾಗುಹಾಕಿ ಬಿಡುತ್ತಿದ್ದರು.

ಸೋನಿಯ ತಂದೆ-ಶಿವಲ ಸೌದೆ ಹೊತ್ತು ಮಾರಿ ಜೀವಿಸುವ ಬಡ ಕೂಲಿಕಾರ, ತನ್ನ ನಾಲ್ವರು ಹೆಣ್ಣುಮಕ್ಕಳನ್ನು ಗಂಡಿನವರ ಕಡೆಯಿಂದ ತಲಾ

ನೂರು ರೂಪಾಯಿಗಳ ಪ್ರಕಾರ ತೆರ ಪಡೆದು ಮದುವೆ ಮಾಡಿಕೊಟ್ಟಿದ್ದ. ಐದನೇ ಮಗಳು ಸೋನಿಯನ್ನು ಕೇಳಿಕೊಂಡು ಬಂದ ಹಲವಾರು ಸಂಬಂಧಗಳ ಪೈಕಿ 'ವಿದ್ಯಾವಂತ'ನೆನ್ನಿಸಿಕೊಂಡ ಮಾನಸಿಂಗ್‌ನನ್ನು ಬಲು ಪ್ರೀತಿಯಿಂದ ಒಪ್ಪಿ ಆರಿಸಿದ್ದ.

ಮೂರು ಕೂರಿಗೆ ಜಮೀನು, ಮಾಳಿಗೆ ಮನೆ ಉಳ್ಳವ; ಮೇಲಾಗಿ ಸಾಲಿ ಕಲಿತವ! ಮೊದಲು ಲಗ್ನ ಮಾಡಿಕೊಟ್ಟ ಯಾವ ಮಗಳಿಗೂ ಇಂಥ ಯೋಗ್ಯ ಸಂಬಂಧ ದೊರಕಿರಲಿಲ್ಲ. ಎಲ್ಲರೂ ತನ್ನ ಮಟ್ಟದವರೇ. ಕೂಲಿ ನಾಲಿ ಮಾಡಿ ಕೂಳು ಕಾಣುವವರು. ಸೋನಿಯ ಅದೃಷ್ಟ ಹಿರಿಯದು! ಅತ್ತೆ-ನಾದಿನಿಯರ ಕಾಟವಿಲ್ಲ. ಒಬ್ಬ ಮೈದುನ ಇದ್ದೋನು ಅಗದಿ ಸಣ್ಣಾಂವ ಇದ್ದಾಗ್ಲೇ ಎತ್ತಾಗೋ ಮನೆ ಬಿಟ್ಟು ಓಡಿ ಹೋದಾಂವ ಹೊಳ್ಳಿ ಬಂದಿಲೇ ಇಲ್ಲಂತೆ! ...

ತನ್ನ ಮಗಳಂತು ಕೂಲಿ ಕಷ್ಟ ಮಾಡುವಂತಿಲ್ಲ. ಸ್ವಂತ ಹೊಲ, ಸ್ವಂತ ಮನೆ, ಗಂಡ-ಹೆಂಡ್ತಿ ಬದುಕು ಮಾಡ್ಕೊಂಡು ಸುಖವಾಗಿರಾರೆ. ಮನೆಗೆ ಹಿರೆದಿಕ್ಕಾಗಿ ಒಬ್ಬ ಮಾವ ಅದಾನ-ಆಯ್ತು. ಎಲ್ಲಾ ವಿಷಯ ದಾಗೂ ಹೇಳಿ ಮಾಡ್ಸಿದಂಥ ಜೀಗಸ್ತನ!....ಶಿವಲ ಆತನ ಹೆಂಡತಿ ಹರ್ಷ ಚಿತ್ತರಾದರು.

ಆದರೆ 'ನನ್ನ ಮಗ ಕಲಿತವ. ತೆರಗಿರ ನಾವು ಕೊಡುವವರಲ್ಲ. ಅವರೇ ಅಳಿಯನ ಕೊರಳಿಗೊಂದು ಬಂಗಾರದ ಚೈನು ಮಾಡಿಸಿಕೊಟ್ಟು ಲಗ್ನ ಮಾಡಿಕೊಡಬೇಕು.' ಎಂದು ಹರಸಿಂಗ್ ಹೇಳಿ ಕಳುಹಿಸಿದಾಗ, ಶಿವಲ ಈ ಹೊಸ ಸಂಪ್ರದಾಯದ ಬಗ್ಗೆ ಚಿಂತಿತನಾದ. ಆತನ ಹೆಂಡತಿ "ಹತ್, ಬ್ಯಾಡ ಬ್ಯಾಡಬಿಡು. ನಮ್ಮಕ್ಕಳ ಹೊಟ್ಟಿಗೇ ನೆಟ್ಟಗ್ ಕೂಳಿಲ್ಲ. ಆತಗೆಲ್ಲಿಂದ ಚಿನ್ನದ ಸರ ಮಾಡ್ಸಿ ಹಾಕಾಮು? ಸೀಮೆಮ್ಯಾಗ ಗಂಡಿಗೇನೂ ಬರಬಂದಿಲ್ಲ. 'ನಾ ನೀ' ಅಂತ ಮ್ಯಾಲಬಿದ್ದು, ತೆರಕೊಟ್ಟು ನಮ್ಮ ಮಗಳನ್ನ ಲಗ್ನ ಮಾಡ್ಕೊಳೊ ಗಂಡು ಮಕ್ಕಳು ರಗಡ್ ಮಂದಿ ಅದಾರ !' ಎನ್ನತೊಡಗಿದಳು.

ಈ ಮಾತು ನಿಜವೆಂದು ಶಿವಲನಿಗೆ ಗೊತ್ತು. ತನ್ನ ಮಕ್ಕಳ ಪೈಕಿ ಯಾರೊಬ್ಬರೂ ಕುರೂಪಿಗಳಾಗಲಿಲ್ಲ. ಒಪ್ಪತ್ತು ಉಂಡು ಒಪ್ಪತ್ತು ಹಸಿದು ಮಳೆ ಬಿಸಿಲೆನ್ನದೆ ಮೈಮುರಿದು ದುಡಿದು ದಣಿದರೂ, ಅವರ ಸೌಂದರ್ಯಕ್ಕೆ ಯಾವುದೇ ರೀತಿಯ ಕುಂದು ಬಂದಿಲ್ಲ. ಗುಣದಿಂದಲೂ ತಾಳ್ಮೆ, ಸಜ್ಜನಿಕೆ, ಸ್ವಾಭಿಮಾನ ಉಳ್ಳವರು...ಅಂಥದ್ದವರಲ್ಲಿ ಒಬ್ಬ ಮಗಳಿಗಾದರೂ ತುಸು ಸುಧಾರಿಸಿದ ಮನೆಗೆ ಕೊಡಬೇಕು ಎನ್ನುವ ಹಂಬಲ ಆತನಿಗೆ.

ಅಳಿಯ ತೆರ ಕೊಡದಿದ್ದರೆ ಬೇಡ. ಮಗಳಿಗಿಂತಲೂ ರೊಕ್ಕ ಹೆಚ್ಚಿನದೇನೂ ಅಲ್ಲ. .ಆದರೆ "ನನ್ನಂಥವರು ಚಿನ್ನದ ಒಡವೆ ಮಾಡಿಸಿಕೊಡುವುದೆಂದರೇನು? ನನ್ನ ಯೋಗ್ಯತೆಗೆ ಮೀರಿದ ಕೆಲಸ...!" ಎಂದು ಆತ ತಲೆ ಕೊಡವಿದಾಗ "ಹಂಗಾದ್ರ ಆ ಸಂಬಂಧ ನಮಗ ಬ್ಯಾಡೇ ಬ್ಯಾಡ!" ಎಂದು ಹರಸಿಂಗ್ ದೂರ ಸರಿದ.

ಆದರೆ ಹುಡುಗಿಯ ರೂಪಿಗೆ ಮನಸೋತಿದ್ದ ಮಾನ್ಯಾ ತನ್ನ ಅಪ್ಪನಷ್ಟು ತುರ್ತಾಗಿ ದೂರವಾಗಲು ಇಷ್ಟಪಡಲಿಲ್ಲ. "ಹೋಗ್ಲಿ ನನಗೊಂದು ಸೈಕಲ್ ಕೊಡಿಸಿಬಿಡ್ಲಿ ಸಾಕು. ಮತ್ತೇನೂ ನಾ ಕೇಳೋದಿಲ್ಲ" ಎಂದು ಚೌಕಾಶಿಗೆ ತೊಡಗಿದ.

ಶಿವಲನಿಗೆ 'ಆಗದು' ಎನ್ನಲು ಬಾಯಿ ಬರಲಿಲ್ಲ. ಹೆಂಡತಿಯ ವಿರೋಧವನ್ನು ಲೆಕ್ಕಿಸದೆ "ಈಗೀಂದೀಗಲೇ ಬೇಕಂದ್ರ ಆಗೋದಿಲ್ಲ ತಮ್ಮಾ. ಮುಂದಿನ ವರ್ಷದ ದೀಪಾಳಿಗಿ ಹಬ್ಬಕ್ಕ ಕೊಡಿಸ್ತೀನಿ" ಎಂದೊಪ್ಪಿಕೊಂಡ. ಇದಕ್ಕೆ ಅಳಿಯ ಸಮ್ಮತಿಸಿದ ಕಾರಣ ಲಗ್ನ ಕಾರ್ಯ ಮುಗಿದುಹೋಯಿತು. ಆದರೆ ತಿಂಗಳೊಪ್ಪತ್ತಿನಲ್ಲೇ ಬೀಗರ ಬಣ್ಣ ಬೆಳಕಿಗೆ ಬಂದು, ಶಿವಲ ಹಾಗೂ ಅವನ ಹೆಂಡತಿ ಹತಾಶರಾದರು. ತನ್ನ ಅಕ್ಕಂದಿರಿಗೆ ಲಭ್ಯವಾಗದ ಸುಂದರ ಬದುಕು ತನ್ನದಾಯಿತೆಂದು ಒಳಗೊಳಗೇ ಹಿಗ್ಗಿ ಹೂವಾಗಿದ್ದ ಸೋನಿ, ಭ್ರಮನಿರಸಗೊಂಡು ಹೌಹಾರಿದಳು!

ಮಾನ್ಯಾನ ಅಕ್ಷರ ಕಲಿಕೆ ಆತನ ಬದುಕಿನಲ್ಲಿ ಯಾವುದೇ ಮಹತ್ವದ ಪಾತ್ರವನ್ನು ವಹಿಸದೆ, ಎತ್ತಲೋ ದಾರಿತಪ್ಪಿಸಿಕೊಂಡಿತ್ತು. ತಂದೆ-ಮಗ

ತಮ್ಮ ಪಾಲಿನ ಹೊಲವನ್ನು ಒತ್ತೆ ಇಟ್ಟು ವರ್ಷಗಳೇ ಸಂದಿದ್ದವು. ಭಟ್ಟಿ ಸರಾಯಿ ತಯಾರಿಸಿ ಜೀವನ ಸಾಗಿಸುತ್ತಿದ್ದ ಅವರಿಬ್ಬರಿಗೂ, ಬೇರೆಯವರ ಕುರಿ-ಕೋಳಿ ಕದ್ದು ತಂದು ತಿನ್ನುವುದು, ಹೂರುವುದು ನೀರು ಕುಡಿದಷ್ಟು ಸಲೀಸು ವೃತ್ತಿಯಾಗಿತ್ತು. ಪರ ಹೆಂಗಸರ ಸಂಗದಲ್ಲಿ ಸುಖಿಸುವ ಚಟ ತಂದೆಯಿಂದ ಮಗನಿಗೂ ಅಂಟಿರುವುದು ಊರಿಗೆಲ್ಲ ತಿಳಿದ ಸಂಗತಿಯಾಗಿತ್ತು.

"ಆದದ್ದಾತು. ಎಷ್ಟೋತ್ತಾಗ್ಲಿ ಕಟ್ಟಿಕೊಂಡವನ ಸಂಗಾತ ಬಾಳ್ವೆ ಮಾಡಾಕೇಬೇಕು...ಹಸ್ಕೊಳೋದಲ್ಲ, ಮುಸ್ಕೊಳೋದಲ್ಲ-ಅಂದ ಬಳಿಕ ಜಗ್ಗಾಡೋದರೊಳಗ ಹಾಯ್ದು ಏನದ? ಗಂಡನ್ನ ಚಲೋ ದಾರಿಗಹಚ್ಚ ಬೇಕಂಬೊ ಮನ್ಸು ನಿನಗಿತ್ತಂದ್ರ ಎಲ್ಲಾ ಚಲೋನೇ ಆಗ್ತದ...ಹಣೆಬರ ತಪ್ಪಿಸಲಿಕ್ಕ ನಮ್ಮಂಥ ನರ ಮನ್ಸರ ಕಡಿಂದ ಆದೀತಾ?" ಎಂದು ವಿಶ್ಲೇಷಿಸಿ ಸಕಲ ಹೊಣೆಯನ್ನು ಸೋನಿಯ ಹಣೆಬರಹದ ಮೇಲೆ ಹೊರೆಸಿ, ತಂದೆ ತಾಯಿಗಳು ನಿಶ್ಚಿಂತರಾದರು.

ಗಂಡ-ಮಾವನೊಡನೆ ಹೊಂದಿಕೊಳ್ಳುವುದರ ಹೊರತು ಸೋನಿಗೆ ಅನ್ಯ ಮಾರ್ಗವಿರಲಿಲ್ಲ. ಅವರ ಯಾವ ಅಪಲಕ್ಷಣ ಕಂಡರೂ ಕಾಣದವಳಂತೆ ಸೂತ್ರದ ಬೊಂಬೆಯಾಗಿ ಕಾರ್ಯ ನಿರ್ವಹಿಸುವುದನ್ನು ರೂಢಿಸಿಕೊಂಡಳು.

ದಿನ ಉರುಳಿ ದೀಪಾವಳಿ ಕಾಲಿಟ್ಟಿತು. ಮಾವ ಸೈಕಲ್ ಕಾಣಿಕೆ ನೀಡಬೇಕಾದುದನ್ನು ನೆನಪಿಸಲು ಮಾನ್ಯಾ ಹೆಂಡತಿಯನ್ನು ತೌರಿಗಟ್ಟಿದ್ದ. "ಹಾಸಲಿಕ್ಕಿದ್ರ ಹೊಚ್ಚಲಿಕ್ಕಿಲ್ಲ. ಹೊಚ್ಚಲಿಕ್ಕಿದ್ರ ಹಾಸಲಿಕ್ಕಿಲ್ಲಥಂಗಾಗಿ ನಾವು ತ್ರಾಸು ಪಡಲಿಕ್ಕ ಹತ್ತೇವಿ...ಮುಂದ್ಲವರ್ಷ ಸುಗ್ಗಿ ಚಲೋ ಆತಂದ್ರ ಕೊಡಸ್ತೇವಿ. ಅಸ್ಕಾತ ತಡ್ಕೊ ಅನ್ನು; ಮಾತಿಗ ತಪ್ಪೊದಿಲ್ಲ." ಎಂದು ಶಿವಲ ಹೇಳಿ ಕಳುಹಿಸಿದಾಗ ಮಾನ್ಯಾ ಹಲ್ಲು ಮಸೆದು ಸುಮ್ಮನಾದ.

ಮತ್ತೆ ದೀಪಾವಳಿ ಬಂದೇ ಬಂತು. ಮಾನ್ಯಾ ಕಾಣಿಕೆ ವಸೂಲಿಗಾಗಿ ಹೆಂಡತಿಯೊಡನೆ ತಾನೂ ಬಂದಿಳಿದ. ಸೋನಿಗೆ ತಿಳಿದಿತ್ತು-ಈ ಬಾರಿಯೂ ತಂದೆಯಿಂದ ಕೊಡಿಸಲು ಸಾಧ್ಯವಾಗದೆಂದು. ಸುಗ್ಗಿ ಚನ್ನಾಗಿ ಆಗಿದ್ದರೆ ಮನೆ ಮಂದಿ ಎಲ್ಲಾ ಕೂಲಿ ಮಾಡಿ ಗಳಿಸಿ ಸೈಕಲ್ ಕೊಂಡುಕೊಡುವ ಸಂಭವವಿತ್ತು.

ಮಾವ ಇದೇ ಕಾರಣ ನೀಡಿ "ದೇವರ ದಯದಿಂದ ಮುಂದ್ಲ ವರ್ಷನಾರ ಸುಗ್ಗಿ ಚಲೋ ಆತಂದ್ರ ಕೊಡಿಸಿ ಕೊಡ್ತೇನಿ" ಎಂದಾಗ ಮಾನ್ಯಾ ಜೋರಾಗಿ ತಲೆ ಕೊಡವಿದ. "ದರಸರ್ತಿನೂ ಇದೇ ಮಾತು ಹೇಳಾಕ ಹತ್ತೀರಲ್ಲ ನಾಚಿಕೆಯಾಗೋದಿಲ್ಲೇನು ನಿಮ್ಗ?" ಎಂದು ಮೂದಲಿಸಿದಾಗ, ಮಾವ ತಲೆ ತಗ್ಗಿಸಿದರೂ ಅತ್ತೆ ಸಹಿಸಲಿಲ್ಲ-

"ನಾಚಿಕಿ ಪಡೂವಂಥ ಬೇಶರ್ಮಿ ಕೆಲ್ಸ ನಾವೇನೂ ಮಾಡಿಲ್ಲ ಬಿಡೋಯಪ್ಪ! ತೆರತಗೊಳ್ದ ಹೆಣ್ಣು ಕೊಟ್ಟಿದ್ದೂ ಅಲ್ದ ಸೈಕೊಲ್ ಕೊಡ್ಸು, ಮೋಟ್ರು ಕೊಡ್ಸು ಅಂತ ಕಾಸಿವ ಬಡ್ಡಿ ಮಾರ್ವಾಡಿ ಗತಿ ಕಾಡಾಕ ಹತ್ತಿದಿ, ಇದಕ್ಕ-ಮೊದಲು ನೀ ನಾಚಿಕಿ ಪಟ್ಕೊಬೇಕಾಗೈತಿ!"

ಮೂರನೆಯ ಕಣ್ಣಿದ್ದಿದ್ದರೆ ಅತ್ತೆಯನ್ನು ಒಂದೇ ನೋಟಕ್ಕೆ ಸುಟ್ಟು ಹಾಕಿಬಿಡುತ್ತಿದ್ದನೆನ್ನುವಂತೆ ಅವಳತ್ತ ಕೆಕ್ಕರಿಸಿ ನೋಡುತ್ತ ಹೇಳಿದ ಮಾನ್ಯಾ- "ನಿನ್ನಂಥ ಹೆಣ್ಣು ಕೊಡೊ ಹಂದಿಗಳು ನನಗ ನೂರೂನ್ನರು ಮಂದಿ ಇದ್ದಾರಬೇ! ನೀ ಇನ್ನ ಮುತ್ತಜ್ಜನ ಕಾಲದಾಗs ಇದ್ದಿ. ಅದಕ್ಕ ತೆರ ತೆರ ಅಂತ ಬಡ್ಕೋತಿದ್ದಿ. ನಾಲ್ಕಾರು ಊರು ತಿರುಗಿ ನೋಡಿದ್ಯಂದ್ರ ನಿನಗ ಗೊತ್ತಾಗ್ತಿತ್ತು.-ಈವತ್ತ ನಾಳೆ ಯಾವ ಗಂಡಸು ಮಗನೂ ವರದಕ್ಷಿಣೆ ತಗೋಳ್ಳಾರ್ದ ಹುಡುಗೀರನ್ನ ಲಗ್ನ ಮಾಡಿಕೊಂಬಂಗಿಲ್ಲ-ಅನ್ನೊ ಸುದ್ದಿ...! ನಾ ಏನು ಭಾರಿ ಆಸ್ತಿ ಕೇಳಿಲ್ಲ. ಖಾಲಿ ಒಂದ್ ಸೈಕಲ್ ಕೇಳಿದ್ದಕ್ಕ ಇಷ್ಟು ಗದ್ಲ ಎಬ್ಬಿಸಲಿಕ್ಕ ಹತ್ತೀರಿ. ಸಾವಿರ ಗಟ್ಲೆ ರೊಕ್ಕ ಬೇಡೊ ಮಂದಿ ಅದಾರ. ಅದೇನಾರ ಗೊತ್ತದೇನು ನಿಮಗ?"

"ಅದ್ಯಾವ ಭಾಡ್ಯಾನೋ ಅಂವ...ಅಂಥಪರಿ ನಾಚಿಗಿ ಬಿಟ್ಟು ಸಾವ್ರಾರು ರೂಪ್ಯಾ ರೊಕ್ಕ ಬೇಡಾಂವ? "ಎಂದು ಸೋನಿಯ ತಾಯಿ, ಬಾಯಿ ಮಾಡಲು ನಿಂತಾಗ, ಶಿವಲ ಆಕೆಯನ್ನು ನಡುವೆಯೇ ತಡೆದು ಅಳಿಯನಿಗೆ ತಿಳಿಹೇಳಿದ "ಕಂಡೀವೇಳಪ್ಪ ನಾವೂ ಇಂಥಾವ್ನೆಲ್ಲ...ಸಾವ್ರಾರು ರೂಪ್ಯಾ ವರದಕ್ಷಿಣೆ ಕೇಳೋರು ನನ್ನ-ನಿನ್ನಂಥ ಮೋಟು ಮಂದಿಯಲ್ಲ. ಬಾಳಷ್ಟು ಸಾಲೀಕಲ್ತು ಕೋರ್ಟು ಕಛೇರಿಯಾಗ ಸಾಹೇಬ ಆಗಿ, ಕುರ್ಚಿ ಮ್ಯಾಲ ಕುಂತು ಸಾವ್ರಾರು

ತಮ್ಮ ಪಾಲಿನ ಹೊಲವನ್ನು ಒತ್ತೆ ಇಟ್ಟು ವರ್ಷಗಳೇ ಸಂದಿದ್ದವು. ಭಟ್ಟಿ ಸರಾಯಿ ತಯಾರಿಸಿ ಜೀವನ ಸಾಗಿಸುತ್ತಿದ್ದ ಅವರಿಬ್ಬರಿಗೂ, ಬೇರೆಯವರ ಕುರಿ-ಕೋಳಿ ಕದ್ದು ತಂದು ತಿನ್ನುವುದು, ಮಾರುವುದು ನೀರು ಕುಡಿದಷ್ಟು ಸಲೀಸು ವೃತ್ತಿಯಾಗಿತ್ತು. ಪರ ಹೆಂಗಸರ ಸಂಗದಲ್ಲಿ ಸುಖಿಸುವ ಚಟ ತಂದೆಯಿಂದ ಮಗನಿಗೂ ಅಂಟಿರುವುದು ಊರಿಗೆಲ್ಲ ತಿಳಿದ ಸಂಗತಿಯಾಗಿತ್ತು.

"ಆದದ್ದಾತು. ಎಷ್ಟೊತ್ತಾಗ್ಲಿ ಕಟ್ಟಿಕೊಂಡವನ ಸಂಗಾತ ಬಾಳ್ವೆ ಮಾಡಾಕೇಬೇಕು...ಹರ್ಕೊಳೋದಲ್ಲ, ಮುರ್ಕೊಳೋದಲ್ಲ-ಅಂದ ಬಳಿಕ ಜಗ್ಗಾಡೋದರೊಳಗ ಪಾಯ್ದು ಏನದ? ಗಂಡನ್ನ ಚಲೋ ದಾರಿಗಹಚ್ಚ ಬೇಕಂಬೊ ಮನ್ಸು ನಿನಗಿತ್ತಂದ್ರ ಎಲ್ಲಾ ಚಲೋನೇ ಆಗ್ತದ...ಹಣೆಬರ ತಪ್ಪಿಸಲಿಕ್ಕ ನಮ್ಮಂಥ ನರ ಮನ್ಸರ ಕಡಿಂದ ಆದೀತಾ?" ಎಂದು ವಿಶ್ಲೇಷಿಸಿ ಸಕಲ ಹೊಣೆಯನ್ನು ಸೋನಿಯ ಹಣೆಬರಹದ ಮೇಲೆ ಹೊರೆಸಿ, ತಂದೆ ತಾಯಿಗಳು ನಿಶ್ಚಿಂತರಾದರು.

ಗಂಡ-ಮಾವನೊಡನೆ ಹೊಂದಿಕೊಳ್ಳುವುದರ ಹೊರತು ಸೋನಿಗೆ ಅನ್ಯ ಮಾರ್ಗವಿರಲಿಲ್ಲ. ಅವರ ಯಾವ ಅಪಲಕ್ಷಣ ಕಂಡರೂ ಕಾಣದವಳಂತೆ ಸೂತ್ರದ ಬೊಂಬೆಯಾಗಿ ಕಾರ್ಯ ನಿರ್ವಹಿಸುವುದನ್ನು ರೂಢಿಸಿಕೊಂಡಳು.

ದಿನ ಉರುಳಿ ದೀಪಾವಳಿ ಕಾಲಿಟ್ಟಿತು. ಮಾವ ಸೈಕಲ್ ಕಾಣಿಕೆ ನೀಡಬೇಕಾದುದನ್ನು ನೆನಪಿಸಲು ಮಾನ್ಯಾ ಹೆಂಡತಿಯನ್ನು ತೌರಿಗಟ್ಟಿದ್ದ. "ಹಾಸಲಿಕ್ಕಿದ್ರ ಹೊಚ್ಚಲಿಕ್ಕಿಲ್ಲ. ಹೊಚ್ಚಲಿಕ್ಕಿದ್ರ ಹಾಸಲಿಕ್ಕಿಲ್ಲಥಂಗಾಗಿ ನಾವು ತ್ರಾಸು ಪಡಲಿಕ್ಕ ಹತ್ತೇವಿ...ಮುಂದ್ಲ ವರ್ಷ ಸುಗ್ಗಿ ಚಲೋ ಆತಂದ್ರ ಕೊಡಸ್ತೇವಿ. ಅಸ್ಕ್ಯಾತ ತಡ್ಕೊ ಅನ್ನು; ಮಾತಿಗ ತಪ್ಪೋದಿಲ್ಲ." ಎಂದು ಶಿವಲ ಹೇಳಿ ಕಳುಹಿಸಿದಾಗ ಮಾನ್ಯಾ ಹಲ್ಲು ಮಸೆದು ಸುಮ್ಮನಾದ.

ಮತ್ತೆ ದೀಪಾವಳಿ ಬಂದೇ ಬಂತು. ಮಾನ್ಯಾ ಕಾಣಿಕೆ ವಸೂಲಿಗಾಗಿ ಹೆಂಡತಿಯೊಡನೆ ತಾನೂ ಬಂದಿಳಿದ. ಸೋನಿಗೆ ತಿಳಿದಿತ್ತು-ಈ ಬಾರಿಯೂ ತಂದೆಯಿಂದ ಕೊಡಿಸಲು ಸಾಧ್ಯವಾಗದೆಂದು. ಸುಗ್ಗಿ ಚನ್ನಾಗಿ ಆಗಿದ್ದರೆ ಮನೆ ಮಂದಿ ಎಲ್ಲಾ ಕೂಲಿ ಮಾಡಿ ಗಳಿಸಿ ಸೈಕಲ್ ಕೊಂಡುಕೊಡುವ ಸಂಭವವಿತ್ತು.

ಮಾವ ಇದೇ ಕಾರಣ ನೀಡಿ "ದೇವರ ದಯದಿಂದ ಮುಂದ್ಲ ವರ್ಷನಾರ ಸುಗ್ಗಿ ಚಲೋ ಆತಂದ್ರ ಕೊಡಿಸಿ ಕೊಡ್ತೇನಿ" ಎಂದಾಗ ಮಾನ್ಯಾ ಜೋರಾಗಿ ತಲೆ ಕೊಡವಿದ. "ದರಸರ್ತಿನೂ ಇದೇ ಮಾತು ಹೇಳಾಕ ಹತ್ತೀರಲ್ಲ ನಾಚಿಕೆಯಾಗೋದಿಲ್ಲೇನು ನಿಮ್ಗ?" ಎಂದು ಮೂದಲಿಸಿದಾಗ, ಮಾವ ತಲೆ ತಗ್ಗಿಸಿದರೂ ಅತ್ತೆ ಸಹಿಸಲಿಲ್ಲ-

"ನಾಚಿಕಿ ಪಡೂವಂಥ ಬೇಶರ್ಮಿ ಕೆಲ್ಸ ನಾವೇನೂ ಮಾಡಿಲ್ಲ ಬಿಡೋ ಯಪ್ಪ! ತೆರತಗೊಳ್ದ ಹೆಣ್ಣು ಕೊಟ್ಟಿದ್ದೂ ಅಲ್ದ ಸೈಕೊಲ್ ಕೊಡ್ಸು, ಮೋಟ್ರು ಕೊಡ್ಸು ಅಂತ ಕಾಸಿವ ಬಡ್ಡಿ ಮಾವಾ-ಡಿ ಗತಿ ಕಾಡಾಕ ಹತ್ತಿದಿ, ಇದಕ್ಕ-ಮೊದಲು ನೀ ನಾಚಿಕಿ ಪಟ್ಕೊಬೇಕಾಗೈತಿ!"

ಮೂರನೆಯ ಕಣ್ಣಿದ್ದಿದ್ದರೆ ಅತ್ತೆಯನ್ನು ಒಂದೇ ನೋಟಕ್ಕೆ ಸುಟ್ಟು ಹಾಕಿಬಿಡುತ್ತಿದ್ದನೆನ್ನುವಂತೆ ಅವಳತ್ತ ಕೆಕ್ಕರಿಸಿ ನೋಡುತ್ತ ಹೇಳಿದ ಮಾನ್ಯಾ-"ನಿನ್ನಂಥ ಹೆಣ್ಣು ಕೊಡೊ ಹಂದಿಗಳು ನನಗ ನೂರ್ನೂರು ಮಂದಿ ಇದ್ದಾರಬೇ! ನೀ ಇನ್ನ ಮುತ್ತಜ್ಜನ ಕಾಲದಾಗs ಇದ್ದಿ. ಅದಕ್ಕ ತೆರ ತೆರ ಅಂತ ಬಡ್ಕೋತಿದ್ದಿ. ನಾಲ್ಕಾರು ಊರು ತಿರುಗಿ ನೋಡಿದ್ಯಂದ್ರ ನಿನಗ ಗೊತ್ತಾಗ್ತಿತ್ತು.-ಈವತ್ತ ನಾಳೆ ಯಾವ ಗಂಡಸು ಮಗನೂ ವರದಕ್ಷಿಣೆ ತಗೊಳ್ಳಾರ್ದ ಹುಡುಗೀರನ್ನ ಲಗ್ನ ಮಾಡಿಕೊಂಬಂಗಿಲ್ಲ-ಅನ್ನೊ ಸುದ್ದಿ...! ನಾ ಏನು ಭಾರಿ ಆಸ್ತಿ ಕೇಳಿಲ್ಲ. ಖಾಲಿ ಒಂದ್ ಸೈಕಲ್ ಕೇಳಿದ್ದಕ್ಕ ಇಷ್ಟು ಗದ್ಲ ಎಬ್ಬಿಸಲಿಕ್ಕ ಹತ್ತೀರಿ. ಸಾವಿರ ಗಟ್ಲೆ ರೊಕ್ಕ ಬೇಡೊ ಮಂದಿ ಅದಾರ. ಅದೇನಾರ ಗೊತ್ತದೇನು ನಿಮಗ?"

"ಅದ್ಯಾವ ಭಾಡ್ಯಾನೋ ಅಂವ...ಆಂಥಪರಿ ನಾಚಿಗಿ ಬಿಟ್ಟು ಸಾವ್ರಾರು ರೂಪ್ಯಾ ರೊಕ್ಕ ಬೇಡಾಂವ? "ಎಂದು ಸೋನಿಯ ತಾಯಿ, ಬಾಯಿ ಮಾಡಲು ನಿಂತಾಗ, ಶಿವಲ ಆಕೆಯನ್ನು ನಡುವೆಯೇ ತಡೆದು ಅಳಿಯನಿಗೆ ತಿಳಿಹೇಳಿದ "ಕಂಡೀವೇಳಪ್ಪ ನಾವೂ ಇಂಥಾವ್ನೆಲ್ಲ...ಸಾವ್ರಾರು ರೂಪ್ಯಾ ವರದಕ್ಷಿಣೆ ಕೇಳೋರು ನನ್ನ-ನಿನ್ನಂಥ ಮೋಟು ಮಂದಿಯಲ್ಲ. ಬಾಳಷ್ಟು ಸಾಲೀಕಲ್ತು ಕೋರ್ಟು ಕಛೇರಿಯಾಗ ಸಾಹೇಬ ಆಗಿ, ಕುರ್ಚಿ ಮ್ಯಾಲ ಕುಂತು ಸಾವ್ರಾರು

ರೂಪಾಯ್ಯ ಪಗಾರ ತಗೊಂಬೊ ನಾಜೂಕ ಮಂದಿ ಅಷ್ಟು ಕೇಳ್ತಾರ. ಯದ ಕ್ಕಂದ್ರ-ಅವರು ತಮ್ಮ ಹೆಂಡ್ರಿಗ ಅನ್ನ-ತುಪ್ಪ ಉಣಿಸಿ ಪಲ್ಲಂಗದ ಮ್ಯಾಲ ಕುಂದರಿಸಿ, ಹೂವಿನ್ಹಂಗ ಜ್ವಾಕಿ ಮಾಡ್ತಾರ...ಹೆಂಡ್ತಿ ಕೈಯಾನ ಗೊಂಬಿ ಆಗಿರ್ತಾರ!"

ಮಾನ್ಯಾ ಹೆಗಲ ಮೇಲಿನ ಟವೆಲನ್ನು ಝಟ್ಟನೆ ಝಾಡಿಸಿ ಎದ್ದು ಹೊರಡುತ್ತ ಹೇಳಿದ- "ಅಷ್ಟೇ ಮಾಡ್ರಿ. ನಿಮ್ಮಗಳಿಗ ಅನ್ನತುಪ್ಪ ಉಣಿಸಿ ಪಲ್ಲಂಗದ ಮ್ಯಾಲ ಕೂರ್ಸೋ ಅಂಥ ಸಾವಿರ ರೂಪಾಯ್ಯ ಪಗಾರದವನನ್ನು ಹುಡುಕಿ ಉಡುಕಿ ಮಾಡ್ಸಿಬಿಡ್ರಿ! ನಾ ಹೊಕ್ಕೀನಿ!"

ಆತ ಭರ ಭರ ಹೊರಟೇಹೋದಾಗ ಏಳು ತಿಂಗಳ ಗರ್ಭ ಹೊತ್ತಿದ್ದ ಸೋನಿ ದಿಕ್ಕೆಟ್ಟವಳಂತೆ ಅಪ್ಪ-ಅವ್ವನ ಮೋರೆ ನೋಡಿದ್ದಳು. "ಬರ್ತಾ ನೇಳು; ಏಟು ದಿನ ಸೆಟಗೊಂಡಿರ್ತಾನ..." ಎಂದು ಅವಳ ತಂದೆ ಸಮಾಧಾನ ಹೇಳಿದ್ದು ಕೇವಲ ತಾತ್ಕಾಲಿಕವಾಯಿತು. ಸೋನಿಗೆ ದಿನತುಂಬಿ, ಅವಳು ಒಂದು ಹೆಣ್ಣು ಮಗುವಿನ ತಾಯಿಯಾದರೂ ಸಹ ಮಾನ್ಯಾ ತಿರುಗಿ ನೋಡ ಲಿಲ್ಲ.

ಮಗುವಿಗೆ ತಿಂಗಳು ತುಂಬಿದೊಡನೆ-'ಮಗಳನ್ನ ಹಡೆದ ತಪ್ಪಿಗೆ ನಾವೇ ಹೋಗ್ಬೇಕು!' ಎಂದು ತಮ್ಮ ಕರ್ಮವನ್ನು ಹಳಿದುಕೊಂಡ ತಂದೆ-ತಾಯಿ ಗಳು, ತಾವೇ ಸೋನಿಯನ್ನು ಕರೆದೊಯ್ದು ಗಂಡನ ಮನೆಗೆ ಬಿಟ್ಟು ಬಂದರು.

ಕರೆಯಿಸಿಕೊಳ್ಳದಯೇ ಮನೆಗೆ ಬಂದವಳನ್ನು ಗಂಡ-ಮಾವ ನಾಯಿ ಗಿಂತಲೂ ಕಡೆ ಎಂಬಂತೆ ಅನಾದರದಿಂದ ಕಾಣಲಾರಂಭಿಸಿದರು. ಇತಿಮಿತಿ ಇಲ್ಲದ ಕುಡುಕುತನ, ಮೇಲಾಗಿ ಸೂಳೆಯರ ಸಹವಾಸ; ಇವೆರಡಕ್ಕೂ ಕಳಶ ವಿಟ್ಟಂತೆ ಹೊತ್ತು ಗೊತ್ತಿನ ಪರಿವೇ ಇಲ್ಲದೆ ಹೆಂಡತಿಯನ್ನು ಹಿಡಿದು ಥಳಿಸು ವುದು-ಮಾನ್ಯಾನ ಪ್ರಿಯವಾದ ವ್ಯಸನಗಳಲ್ಲೊಂದಾಯಿತು.

ಅದೆಲ್ಲವನ್ನು ಹಲ್ಲುಕಚ್ಚಿ ಸಹಿಸುತ್ತಲೇ ಸೋನಿ ಇನ್ನೊಂದು ಹೆಣ್ಣು ಮಗುವಿನ ತಾಯಿಯೂ ಆದಳು. ಅದರ ನಂತರ ಮನೆ ಅವಳ ಪಾಲಿಗೆ ಮತ್ತಷ್ಟು ನರಕ ಸದೃಶವಾಯಿತು. 'ತಾಯಿ ಹಂಗ್ ಮಗಳೂ ನಮ್ಮನಿ

ಯನ್ನ 'ಹೆಣ್ಣರಸಿಪ್ಪರ' ಮಾಡಾಕ ನಿಂತಾಳ ಸನಿಗೇಡಿ!' ಎಂಬ ಚುಚ್ಚು ಮಾತುಗಳು ಅವಳ ಮನವನ್ನು ಇರಿಯುತ್ತಿದ್ದವು. ನಿಂದೆಯ ಮಾತು, ಮೈಮುರಿಯೆ ಹೊಡೆತ ತಾಳಲಾರದೆ "ಈ ಜೀವಾನೇ ನಾನೊಲ್ಲೆ. ಕೆರೆನೋ ಬಾವಿನೋ ಹಾರ್ಕೊಂತೀನಿ!" ಎಂದು ಒಮ್ಮೆ ಅವಳು ಊರ ಬಾವಿಯ ಕಡೆ ಓಡಿದ್ದಳು.

ಗಂಡ-ಮಾವ ಸೇದುವ ಹಗ್ಗವೊಂದನ್ನು ಹಿಡಿದು ಹಿಂಬಾಲಿಸಿ ಬಂದರು. ಅವಳನ್ನು ಹಿಡಿದು ಸೊಂಟಕ್ಕೆ ಹಗ್ಗ ಬಿಗಿದು "ಅಷ್ಟು ಧೈರ್ಯ ಇತ್ತಂದ್ರ ಟೊಂಕದ ಕುಣಿಕೆ ಬಿಚ್ಚಾಕಿ ಭಾವ್ಯಾಗ ಜಿಗಿದು ಸತ್ಬಿಡು! ಊರಾಗ ಹೆಣ್ಣು ಜಗ್ಗಿ ಅದಾವ! ಒಂದ್ ಬಿಟ್ಟು ಎರಡು ಸೈಕಲ್ ಕೊಟ್ಟು ಲಗ್ನ ಮಾಡ್ಕೊಡೊ ಮಂದಿ ರಗಡ್ ಅದಾರ!" ಎಂದು ಅಟ್ಟಹಾಸ ಮಾಡುತ್ತ ಅವಳನ್ನು ಬಾವಿಯಲ್ಲಿ ತೂಗುಬಿಟ್ಟರು.

ನಡುವೆ ಯಾರ ಪ್ರವೇಶವೂ ಇಲ್ಲದೇ ಹೋಗಿದ್ದರೆ, ಅದೇ ಆವೇಶದಲ್ಲಿ ಅವಳು ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಹಿಂದೆಗೆಯುತ್ತಿರಲಿಲ್ಲವೇನೋ. ಆದರೆ ಈಗ ಅವಳ ಆವೇಶ ಜರ್ರನೆ ಇಳಿದುಹೊಯಿತು. ತನ್ನ ಕರುಳಿನ ಕುಡಿಗಳೆರಡೂ 'ಅವ್ವಾ' ಎಂದು ಕೂಗಿ ಹಂಬಲಿಸುವ ದೃಶ್ಯ ಕಣ್ಣಿಗೆಕಟ್ಟಿದಂತಾಗಿ, ಅವುಗಳಿಗಾಗಿಯಾದರೂ ತಾನು ಬದುಕಿರಬೇಕು ಎನ್ನುವ ಅಪೇಕ್ಷೆ ತಲೆ ಎತ್ತಿತು. ಬದುಕು ಬೇಕೆನಿಸಿದಾಗ ಸಾವು ಅತ್ಯಂತ ಭಯಾನಕವಾಗಿ ಕಂಡಿತು. ತನ್ನನ್ನು ಇಡಿಯಾಗಿ ನುಂಗಿಹಾಕಲು ಬಾಯ್ದೆರೆದಿರುವ ಪಾತಾಳದಂತಹ ಬಾವಿ, ತನ್ನ ಸಾವನ್ನು ಒಂದು ರಂಜನೀಯ ಆಟವೆಂಬಂತೆ ಪರಿಗಣಿಸಲು ಸಿದ್ಧರಾಗಿ ನಿಂತಿರುವ ಈ ಯಮಧೂತರು! ಸೋನಿ ಅಪ್ರಯತ್ನವಾಗಿ ಜೋರಾಗಿ ಕಿರುಚಿಕೊಂಡಳು.

ಬಾವಿಯ ಒಳಗೋಡೆಗೆ ಅಪ್ಪಳಿಸಿದ ಕೂಗು ವಿಕಾರವಾಗಿ ಪ್ರತಿಧ್ವನಿಗೊಂಡಿತು. ಅಪ್ಪ-ಮಗ 'ಹ್ಹ ಹ್ಹ!' ಎಂದು ನಗೆಯಾಡುತ್ತ ಸೋನಿಯನ್ನು ಮೇಲಕ್ಕೆ ಸೆಳೆದುಕೊಂಡರು. ಅದೇ ಕೊನೆ. ಸೋನಿ ಎಷ್ಟೇ ಹೊಡೆತ ತಿಂದರೂ ಸಾಯುವ ಸೊಲ್ಲು ಎತ್ತುತ್ತಿರಲಿಲ್ಲ. ಅವಳ ತಂದೆ-ತಾಯಿಗಳು ಬಡತನದ ಬೇಗೆ ತಾಳಲಾರದೆ ಕೂಲಿ ನಾಲಿ ಅನುಕೂಲಕರವಾಗಿ

ಸಿಗುವಂತಹ ಊರನ್ನು ಅರಿಸಿಕೊಂಡು ಗುಳೆ ಹೊರಟುಹೋಗಿದ್ದರಿಂದ ಅವಳಿಗೆ ತೌರುಮನೆಗೆ ಹೊರಟುಬಿಡುವ ಅವಕಾಶವೂ ಅಲಭ್ಯವಾಗಿತ್ತು. ಸದ್ಯಕ್ಕೆ ಅವಳ ಪಾಲಿಗೆ ತಂದೆ-ತಾಯಿ, ಬಂಧುವಿನ ಸ್ಥಾನವನ್ನು ತುಂಬಿ ಕೊಟ್ಟಿದ್ದವಳೆಂದರೆ ಲಚ್ಮಿಯೊಬ್ಬಳೆ.

"ಅಂವ ಬಡ್ಡಾ ಅನ್ನೋದ್ನೇ ಒಂದ್. ನೆವ ಮಾಡ್ಕೊಂಡ್ ಗೌಡ ಶಾನಿಹಂಗ ಕುಂತುಬಿಟ್ಯಲ್ಲ! ಒಳಗ ಬಂದು ಉಂಬಾಕ ಇಕ್ಕಬಾರದೇನು?" ಮಾವ ಜಬರಿಸಿದಾಗ, ಸೋನಿ ತಲೆ ತುಂಬ ಸೆರಗು ಹೊದ್ದು ಅಡಿಗೆಕೋಣೆಗೆ ನಡೆದಳು. ತಾಟು ಚರಿಗೆ ತೊಳೆದು ಇಬ್ಬರಿಗೂ ಉಣಬಡಿಸಿದಳು.

ಅಪ್ಪ ಅಜ್ಜ ಊಟಕ್ಕೆ ಆರಂಭಿಸಿದಾಗ ಮಕ್ಕಳು ತುಸು ಧೈರ್ಯವಹಿಸಿ ಲಂಗದಲ್ಲಿ ಮುದುರಿ ಹಿಡಿದಿದ್ದ ತಿನಿಸನ್ನು ಹೊರತೆಗದು ತಿನ್ನಲಾರಂಭಿಸಿದವು. ತಂದೆ-ಮಗ ಅಸಹನೆಯ ಉರಿ ನೋಟದಿಂದ ಮಕ್ಕಳತ್ತ ನೋಡಿದಾಗ, ಅವು ಅಂಜಿ ತಮ್ಮ ಅವ್ವನತ್ತ ನೋಡಿದವು. ಸೋನಿ ಗಂಡಸರಿಬ್ಬರಿಗೂ ಮನ ದಲ್ಲೇ ಹಿಡಿಶಾಪ ಹಾಕುತ್ತ ತೊಡೆಮರೆಯಲ್ಲಿ ಲಟಿಕೆ ಮುರಿದಳು!

ರೊಟ್ಟಿ-ನುಚ್ಚು ಉಂಡಾದನಂತರ "ನವಣೆ ಇತ್ತಲ್ಲ ಮನಿಯಾಗ ಒಂದಿನ ನಾರ ಅದರ ಅನ್ನ ಮಾಡುವಲ್ಯಾಲ್ಲ ಯಾಕ?" ಎಂದು ವಿಚಾರಿಸಿದ ಮಾವ. ತನ್ನ ಮುದಿಗೆಣೆಕಾರ್ತಿ-ರಮಣಜ್ಜಿ ಬಂದು "ಈವತ್ತು ಮನಿಯಾಗ ಉಂಬಾಕ ಏನೂ ಇಲ್ಲ" ಎಂದು ಹೇಳಿದಾಗೆಲ್ಲಾ ಸೇರು ಸೇರು ನವಣೆ ತುಂಬಿಕೊಟ್ಟಿ ದ್ದನ್ನು ಈ ಮುದುಕ ಮರೆತು ಬಿಟ್ಟನೇನೋ ಪಾಪ! ತನ್ನ ಮಗ ಆ ಊರು ಈ ಊರು ಅಂತ ಓಡಾಡುವಾಗ ಕೈಯಲ್ಲಿ ಕಾಸಿಲ್ಲದಿದ್ದರೆ, ಕೈಚೀಲ ದಲ್ಲಿ ನವಣೆಕಾಳು ತುಂಬಿಕೊಂಡು ಹೋಗಿದ್ದನ್ನು ಈತ ಕಂಡಿಲ್ಲವೆ? ಆದರೂ ಕೇಳುತ್ತಾನಲ್ಲಾ! ಎಂದು ಸೋನಿಗೆ ಸಿಟ್ಟು ಬಂದಿತಾದರೂ, ಸಹನೆಯಿಂದ ಉತ್ತರಿಸಿದಳು-"ಇಲ್ಮಾವ. ಆಗಿಪೋಗ್ಯಾವ."

"ಏನಂದಿ! ಒಂದ್ ಚೀಲ ನವಣೆ ಈಟ್ ಲಗೂ ಖಲಾಸಾದ್ವಾ?" ಮುದುಕ ಅಪನಂಬಿಕೆಯಿಂದ ಹುಬ್ಬೇರಿಸಿ ಕೇಳಿದ.

"ನಾವೇ ಉಂಡಿದ್ವಂದ್ರ ಇನ್ನಾ ದೀಡ್ ತಿಂಗ್ಳು-ಎರಡು ತಿಂಗ್ಳು ಬರ

ತಿದ್ರು ಖರೆ...ಆ ಸೂಳಿ ಈ ಸೂಳಿಗೀಸೀಸು ಹಂಚೋದರೊಳಗ—" ಆಕೆ ಹೇಳುತ್ತಿದ್ದಂತೆಯೇ ಮಾನ್ಯಾ ಕೆರಳಿದ ಹುಲಿಯಂತೆ ಎದ್ದು ನಿಂತು ಗರ್ಜಿಸಿದ "ನೋಡ್ರಾ, ಈ ಹಲಕಟ್ ಲೌಡಿ ಎಂಥ ದೌಲತ್ತಿನ ಮಾತಾಡ್ತಾಳಂಬೋದನ್ನ! ತಲಿ ಒಡಿಯೋಹಂಗ ಬಡ್ತಾ ಬಿದ್ರುಸತೆ ಧಿಮಾಕಿನ ಮಾತಾಡೋದನ್ನ ಬಿಡು ವಲ್ಲಳು ! ನಾ ಜೇಲಿಗ್ ಹ್ವಾದೆನಂದ್ರೂ ಚಿಂತಿಲ್ಲ. ಈ ಲೌಡಿನ್ನ ಸಾಯಿಸೇ ಬಿಡ್ತೇನಿ....!"

ಮುದುಕ 'ಹಾಂ ಹಾಂ' ಎಂದು ತಡೆಯುವಷ್ಟರಲ್ಲಿಯೇ ಅವನು ಮುನ್ನುಗ್ಗಿ ಬಂದು ಸೋನಿಯ ಎದೆಗೆ ಕಾಲಿನಿಂದ ಜಾಡಿಸಿ ಒದ್ದ. ಅನಾಮತ್ತಾಗಿ ಹಿಂದಕ್ಕೆ ಬಿದ್ದ ಅವಳ ತಲೆಗೆ ಬೀಸುವ ಕಲ್ಲಿನ ಗೂಟ ರಭಸವಾಗಿ ಬಡಿಯಿತು. ಸ್ವಲ್ಪಹೊತ್ತಿನ ಹಿಂದೆ ತಾನೆ ಅರಿವೆ ಅಚ್ಚಡಿ ಹಾಕಿ ಕಟ್ಟಿದ್ದ ಪಟ್ಟಿ ಕಿತ್ತು ಬಂದು ರಕ್ತ ಜಿಲಜಿಲನೆ ಹರಿಯಲಾರಂಭಿಸಿತು.

ಪೆಟ್ಟಿನ ಮೇಲೆ ಪೆಟ್ಟು ತಿಂದು ಜರ್ಝರಿತಳಾದ ಸೋನಿ, ಒಮ್ಮೆ ಜೋರಾಗಿ ಚೀರಿಕೊಂಡು, ಜನಗಳು ಸೇರುವಷ್ಟರಲ್ಲಿ ಉಸಿರು ಕಳೆದುಕೊಂಡಂತೆ ಪ್ರಜ್ಞೆ ತಪ್ಪಿ ಬಿದ್ದಳು. ಲಚ್ಮಿ ಬಂದು ಎದೆ ಎದೆ ಬಡಿದುಕೊಂಡು ಅಳಲಾರಂಭಿಸಿದಳು.

ಯಾರೋ ಅವಳ ಮುಖಕ್ಕೆ ನೀರು ಹನಿಸಿದರು. ತಲೆಗೆ ಅರಿವೆ ಬಿಗಿದು ಕಟ್ಟಿದರು. ಆದರೂ ಸೋನಿಗೆ ಪ್ರಜ್ಞೆಯೂ ಬರಲಿಲ್ಲ, ರಕ್ತ ಸೋರುವುದೂ ನಿಲ್ಲಲಿಲ್ಲ. ಮಾನ್ಯಾ ಈ ಗಲಾಟೆಗೂ ತನಗೂ ಯಾವ ಸಂಬಂಧವೂ ಇಲ್ಲವೆಂಬಂತೆ ಕಾಲಿಗೆ ಚಪ್ಪಲಿ ಮೆಟ್ಟಿ ಆಚೆ ಕೇರಿಯ ಹಾದಿ ಹಿಡಿದ.

ಸೊಸೆಸತ್ತೇಹೋದಳೇನೋ ಎಂದು ತುಸು ಗಾಬರಿಗೊಂಡ ಹರಸಿಂಗ್, ನೆರೆದವರ ಸಲಹೆಯ ಮೇರೆಗೆ, ಎರವಲು ಎತ್ತಿನ ಬಂಡಿಯಲ್ಲಿ ಅವಳನ್ನು ಹಾಕಿಕೊಂಡು ಗ್ರಾಮದ ಸರ್ಕಾರಿ ದವಾಖಾನೆಗೆ ಹೊರಟ. ಲಚ್ಮಿ ತನ್ನ ಅಂಗಡಿಯನ್ನು ಮುಚ್ಚಿ, ಸ್ವ ಇಚ್ಛೆಯಿಂದ ಬಂಡಿ ಏರಿ ಸೋನಿಯ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಕುಳಿತಳು.

ಬಂಡಿಯಿಂದ ರೋಗಿಯನ್ನು ಕೆಳಗಿಳಿಸಿಕೊಳ್ಳಲು ನೆರವಾದ ಆಸ್ಪತ್ರೆಯ ಜವಾನ, ಅವಳ ರಕ್ತಸಿಕ್ತವಾದ ತಲೆ ಗಾಯುವನ್ನು ಕಂಡು "ಎಲ್ಲಿಂಪ ಬಿದ್ಲ? ಎಂದು ವಿಚಾರಿಸಿದ. ಲಚ್ಮಿ ಸಂಕಟದಿಂದ ವಿವರಿಸಿದ್ದನ್ನೆಲ್ಲ ಕೇಳಿ "ಮನುಷ್ಯನಲ್ಲ ಬಿಡು, ಆತನೆಲ್ಲೊ-ದನಗ್ಹುಟ್ಟಿದವ ಇರಬೇಕು!" ಎಂದು ಸೋನಿಯ ಗಂಡನ ಅಮಾನುಷ ವರ್ತನೆಯನ್ನು ಖಂಡಿಸಿದ.

"ತಲಿ ಪೂರಾ ಸೀಳಿಬಿಟ್ಟದ. ಏಳೆಂಟು ಹೊಲಗಿನಾರ ಬೀಳ್ತಾವ... ನೀವು 'ಹ್ಞೂಂ' ಅಂದ್ರ ಡಾಕ್ಟರ್ ಸಾಹೇಬ್ರು ಹೊಲಿಗೆ ಹಾಕ್ತಾರ. ಏನ ವ್ಹೇಳ್ತಿ?" ಎಂದ ಆತನ ಪ್ರಶ್ನೆಯ ಅರ್ಥ ಇಬ್ಬರಿಗೂ ತಿಳಿಯಲಿಲ್ಲ. "ನಿಮ್ಮ ಮರ್ಜೀನ್ರಿಯಪ್ಪ. ಹೆಂಗಾನ ಮಾಡ್ರಿ!" ಎಂದು ಹರಸಿಂಗ್ ವಿನೀತ ನಾಗಿ ನುಡಿದ.

"ಹಂಗಂದುಬಿಟ್ರ ಹ್ಯಾಂಗs ಮುದಿಯಾತ? ಥ್ವಾಡೆ ರೊಕ್ಕ ಖರ್ಚು ಮಾಡಬೇಕಾಕ್ತೈತಿ. ಅಂದ್ರ ಈ ಹೆಣ್ಣುಮಗಳು ಜೀವಸಹಿತ ಮನಿಗ ಬರ್ತಾಳ...." ಆತ ಬಿಡಿಸಿ ಹೇಳಿದ ನಂತರ ಎಲ್ಲವೂ ಅರ್ಥವಾಯಿತು. "ನಾ ಬಡವ ಅದೇನ್ರಿಯಪ್ಪ : ನೀವು ದೊಡ್ಡ ಮನಸ್ಸು ಮಾಡ್ಬೇಕು!" ಎಂದು ಮುದುಕ ಕೈ ಜೋಡಿಸಿದಾಗ, ಲಚ್ಮಿ ಆತಂಕದಿಂದ ಸೋನಿಯ ಮುಖವನ್ನೇ ದಿಟ್ಟಿಸುತ್ತಿದ್ದಳು.

"ಛೇಷಾತು ಬಿಡು. ಈಕಿನ ರಾಯಚೂರಿನ ದೊಡ್ಡ ದವಾಖಾನಿಗ ಒಯ್ರಿ. ಇಲ್ಲಿ ಆಗಂಗಿಲ್ಲ! ಡಾಕ್ಟರರ ಪರವಾಗಿ ತಾನೇ ಕಡ್ಡಿ ತುಂಡಾಗುವಂತೆ ಉತ್ತರಿಸಿ, ಜವಾನ ಹಿಂದಿರುಗುವವನಿದ್ದ. ಅಷ್ಟರಲ್ಲಿ ಲಚ್ಮಿ ಅವನ ತೋಳು ಹಿಡಿದು ನಿಲ್ಲಿಸಿ, ತನ್ನ ಕೊರಳಲ್ಲಿ ಸರದಂತೆ ಹಾಕಿಕೊಂಡಿದ್ದ ಪುಟ್ಟ ಸಂಚಿಯಿಂದ ಹತ್ತರ ಒಂದು ನೋಟನ್ನು ತೆಗೆದು ಅವನ ಕೈಗಿತ್ತಳು.

"ಇಷ್ಟೇ ಏನ್ಬೇ? ಇನ್ನೊಂದ್ ಹತ್ತಾರ ಕೊಡು. ನಮ್ಮ ದಂಡು ಭಾಳ ದ್ವಾಡ್ಡದೈತಿ? ಎಲ್ರಿಗೂ ಹಂಚಬೇಕಲ್ಲ..." ಎಂದು ಪುನಃ ಕೈಯೊಡ್ಡಿದ. "ಅಷ್ಟಿಲ್ಲೋಯಪ್ಪ ನನ್ನ ಕಥೆ!" ಎನ್ನುತ್ತ ಲಚ್ಮಿ ಐದರ ಮತ್ತೊಂದು ನೋಟನ್ನು ತೆಗೆದು ಆತನ ಕೈಗಿಟ್ಟಳು. "ಎಲ್ಡು ಮಕ್ಕಳ ತಾಯಿ ಅದಾಳ್ರಿ

ಯಪ್ಪಾ! ಏನಾರ ಹೆಚ್ಚುಕಮ್ಮಿ ಆತಂದ್ರ ಎಳೀ ಮಕ್ಳು ತಬ್ಬಲಿಯಾಗಿ ಬಿಡ್ತಾವ್ರಿ!" ಎಂದು ಆಕೆ ವಿನಂತಿಸಿಕೊಳುತ್ತಿರುವಂತೆಯೇ "ಆಗಲೇಳ್ಯಮ್ಮ, ನೀಯೇನು ಕಾಳಜಿ ಮಾಡಬ್ಯಾಡ. ಈಗ ಡಾಕ್ಟರ್ ಸಾಹೇಬ್ರು ಬಂದು ಬಿಡ್ತಾರ ಕುಂದ್ರು!" ಎಂದು ಮೃದುವಾಗಿ ನುಡಿದು ಜವಾನ ಒಳಸರಿದ.

ಮರುಕ್ಷಣದಲ್ಲೇ ಡಾಕ್ಟರ್ ಹಾಜರಾದ. ರೋಗಿಯನ್ನು ಒಳಕೋಣೆಗೆ ಒಯ್ಯಲಾಯಿತು. ಬಿಳಿ ಉಡಿಗೆಯ ದಾದಿಯರು ಚುರುಕಾಗಿ ಓಡಾಡಿದರು. ಲಚ್ಮಿ ಒಂದು ಮೂಲೆಯಲ್ಲಿ ಕುಳಿತು, ಮುಚ್ಚಿದ್ದ ಕೋಣೆಯ ಬಾಗಿಲನ್ನೇ ಆತಂಕದಿಂದ ನಿರೀಕ್ಷಿಸತೊಡಗಿದ್ದಳು...ಹಿಂದೊಂದು ಕಾಲದಲ್ಲಿ ದೂರದೂರಿನ ದವಾಖಾನೆಯಲ್ಲಿ-ತಾನು ತನ್ನ ಗಂಡ ಹೀಗೇ ರೋಗಿಗಳಾಗಿ ಮಲಗಿದ್ದ ಘಟನೆ ನೆನಪಾಗಿ ಲಚ್ಮಿಯ ಹೃದಯ ಭಾರವಾಯಿತು. ಅಗ ತಾನೆಷ್ಟು ಮುಗ್ಧೆ! ಎಷ್ಟೊಂದು ಅಮಾಯಕಳು! ಈಗಿನ ಅನುಭವವಾಗಲಿ, ತಿಳುವಳಿಕೆಯಾಗಲಿ ಆಗ ಇದ್ದಿದ್ದರೆ...ಎಂದುಕೊಳ್ಳುತ್ತ, ಕನಸಿನಲ್ಲಿಯಂತೆ ಮಿಂಚಿ ಮರೆಯಾಗಿ ಹೋದ ತನ್ನ ದಾಂಪತ್ಯದ ಸವಿಗಳಿಗೆಗಳನ್ನು ಅವಳು ಸ್ಮರಿಸಿಕೊಂಡಳು.

ಲಚ್ಮಿಯ ಗಂಡ ಹೀರಾ ಪವಾರ್ ಬೇಸಾಯದ ಕೆಲಸ ಮಾಡುವುದಕ್ಕಿಂತಲೂ, ಉತ್ತಮವಾದ ಭಟ್ಟಿ ಸರಾಯಿ ತಯಾರಿಸುವುದರಲ್ಲಿ ಹೆಚ್ಚು ಪರಿಣಿತನಾಗಿದ್ದ. ಅಂಗಡಿಯಿಂದ ಅಮೂಲ್ಯವಾದ ಟಾನಿಕ್ ಬಾಟಲಿ ಕೊಳ್ಳುವಂತೆ, ಜನ ಅವನಿಂದ ಸರಾಯಿಯ ಶೀಶೆ ಕೊಳ್ಳುತ್ತಿದ್ದರು! ಇದರಿಂದಾಗಿ ಹೀರಾ ತನ್ನ ಪಾಲಿನ ಐದು ಕೂರಿಗೆ ಹೊಲವನ್ನು ತನ್ನ ತಮ್ಮನಿಗೆ ಗೇಯ್ದು ತಿನ್ನಲು ಉದಾರವಾಗಿ ಕೊಟ್ಟುಬಿಟ್ಟಿದ್ದ.

ತನ್ನ ಪ್ರೀತಿಯ ಲಚ್ಮಿಗೆ ಯಾವುದೇ ಕಷ್ಟದ ಕೆಲಸದಲ್ಲಿ ತೊಡಗಿಸುವುದು ಅವನಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಆದ್ದರಿಂದ ಕುಳಿತಲ್ಲೇ ಗಳಿಸಬಹುದಾದ ಚಿಕ್ಕದೊಂದು ಡಬ್ಬಿಯಂಗಡಿಯನ್ನು ಆಕೆಗೆ ಹಾಕಿಕೊಟ್ಟಿದ್ದ. ವಿದ್ಯೆ ಇಲ್ಲದ ಅವಳಿಗೆ ಮೊದಮೊದಲು ಲೆಕ್ಕಾಚಾರ ತಿಳಿಯದೆ ತುಂಬ ತೊಂದರೆಯಾಗುತ್ತಿತ್ತು. ಆಗೆಲ್ಲಾ ಹೀರಾ ಅವಳ ಸಹಾಯಕ್ಕೆ ಬರುತ್ತಿದ್ದ.

ವರ್ಷ ಒಪ್ಪತ್ತಿನಲ್ಲಿ ಅವಳು ಗಂಡನಿಂದ ತಪ್ಪದೆ ಲೆಕ್ಕ ಮಾಡುವುದನ್ನು

ಕಲಿತಳು. ಗಂಡ ಸರಾಯಿ ಮಾರಿ ಗಳಿಸಿದರೆ, ಹೆಂಡತಿ ಅಂಗಡಿ ವ್ಯಾಪಾರ ದಿಂದ ಗಳಿಸುತ್ತಿದ್ದಳು. ಇಬ್ಬರೂ ಮಿತವಾಗಿ ಒಂದರ್ಧ ಮಾಪು ಸರಾಯಿ ಕುಡಿಯುತ್ತಿದ್ದರೆ ಹೊರತು ಬೇರೆ ಯಾವ ದುಶ್ಚಟಗಳೂ ಅವರಲ್ಲಿರಲಿಲ್ಲ

ಹೀರಾ ಅವಿದ್ಯಾವಂತನಾದರೂ ವ್ಯವಹಾರದಲ್ಲಿ ಪಳಗಿದವ. ಸಾಕಷ್ಟು ಪೇಟೆ-ಊರೂ ಸುತ್ತಾಡಿ ಕಲಿತ ಮಂದಿಯ ಸ್ನೇಹ-ಸಂಪರ್ಕ ಇರಿಸಿಕೊಂಡಿದ್ದವ. ಆದ್ದರಿಂದಲೇ ತಮ್ಮಿಬ್ಬರ ಗಳಿಕೆಯ ಹಣದಲ್ಲಿ ಒಳ್ಳೆಯದೊಂದು ಮಾಳಿಗೆ ಮನೆ ಕಟ್ಟಿಸಿದ್ದ. ಉಳಿದ ಹಣವನ್ನು ಬ್ಯಾಂಕಿನಲ್ಲಿ ಇರಿಸಿದ್ದ.

ಒಮ್ಮೆ ದಂಪತಿಗಳು ಅಂಗಡಿಯ ಸಾಮಾನು ತರಲೆಂದು ಬಂಡಿ ಹೂಡಿಕೊಂಡು ಪೇಟೆಗೆ ಹೊರಟರು. ಸಂತೆಯಲ್ಲಿ ಎಲ್ಲಾ ಕೊಂಡಾದನಂತರ "ನೀ ಏನು ತಗೊತಿದ್ದಿ ಲಚ್ಚು? ಬಳಿನೋ? ಸರಾನೋ? ಅರವಿನೊ!" ಹೀರಾ ಮಡದಿಯನ್ನು ಕೇಳಿದ.

"ಏನೂ ಬ್ಯಾಡ. ಹ್ವಾದಸರ್ತಿ ಜಾತ್ರಿಯಾಗ ನೀ ಕೊಡಿಸಿದ ಬಳಿ, ಉಂಗುರ, ಮಣಿಸರ ಎಲ್ಲಾ ಅದಾವು. ಕಾಳಿಬಾಯಿ ಈಗಾಗ್ಲೆ ಎರಡು ಜೊತೆ ಲಂಗ-ಅಲವಾಣ (ದಾವಣಿ) ಹೊಲಿದು ತಯಾರು ಮಾಡಿಟ್ಟಾಳ. ಅವೇ ಸಾಕು..." ಎಂದಳು ಲಚ್ಮಿ.

"ಮುಂದ ನಮ್ಮ ಮಗಳಿಗ ಬೇಕಾಗ್ತವ ಕಾಳಿಬಾಯಿಗ ಇನ್ನೊಂದೆರಡು ಜೊತೆ ಈಗಿಂದ್ಲೇ ಹೊಲಿಲಿಕ್ಕ ಹಚ್ಚಿಬಿಡು!" ಎಂದು ನಗೆಯಾಡಿದ ಹೀರಾ. ಮೂರು ತಿಂಗಳ ಬಸುರಿ ಇದ್ದ ಲಚ್ಮಿ ಲಜ್ಜೆಯಿಂದ ಮುಖಮರೆಸಿಕೊಂಡಳು.

"ಒಡವೇನೂ ಒಲ್ಲೆ ಅರಿವಿನೂ ಒಲ್ಲೆ ಅಂತಿದ್ದಿ. ಹೋಗಲಿ-ಏನು ತಿನ್ನಬೇಕೆಂತ ಬಯಕೆ ಆಗ್ತದ? ಅದನಾದ್ರು ಹೇಳು. ಇಲ್ಲೇ ಕಟ್ಟಿಸಿಕೊಂಡು ತರ್ತೀನಿ" ಎಂದು ಆತ ಕೇಳಿದಾಗ, ಅಂತಹ ಯಾವ ಬಯಕೆಯೂ ತನಗಿರಲಿಲ್ಲವಾದ್ದರಿಂದ ಲಚ್ಮಿ ಸುಮ್ಮನಾದಳು.

ಹೀರಾ ಬಿಡಬೇಕಲ್ಲಾ-"ಒಗ್ಗರಣೆ, ಬಜಿ, ಮೆಣಸಿನಕಾಯಿ, ಉಂಡಿ ಜಿಲೇಬಿ ಇವನ್ನೆಲ್ಲ ಚಾದಂಗಡಿಯಾಗ ಇಟ್ಟಿರ್ತಾರ. ಅಲ್ಲೇ ಹೋಗಾಮು ಬಾ. ನಿನಗೇನನು ತಿನ್ನಬೇಕು ಅನ್ನಿಸ್ತದ-ನನಗೆ ಹೇಳುವಂತಿ," ಎಂದು ಒತ್ತಾಯ

ದಿಂದ ಅವಳನ್ನು ಸಮೀಪದ ಒಂದು ಹೋಟೆಲಿಗೆ ಕರೆದೊಯ್ದ. ತಮ್ಮ ಎತ್ತು-ಬಂಡಿ ಕಾಣಿಸುವಂಥ ಜಾಗ ಹುಡುಕಿ ಇಬ್ಬರೂ ಕುರ್ಚಿಯಲ್ಲಿ ಕುಳಿತುಕೊಂಡರು.

ಎದುರು ಗೋಡೆಯ ಮೇಲೆ ತೂಗುಹಾಕಿದ್ದ ಒಂದು ವರ್ಣ ಚಿತ್ರದ ಮೇಲೆ ಲಚ್ಚಿಯ ದೃಷ್ಟಿ ಹರಿಯಿತು. ಆಕೆ ಪಿಸುದನಿಯಲ್ಲಿ ಗಂಡನಿಗೆ ಕೇಳಿದಳು-"ಆ ಪಟದಾಗ ಅದಾಳಲ್ಲ-ಹೆಣ್ಣು ಮಗಳು-ಯಾರಾಕಿ? ಏಸಕೊಂಡ್ ಕೈ ಅದಾವಲ್ಲ ಆಕಿಗ ?!"

"ಆಕಿ ಮನ್ಸಾಳಲ್ಲ-ದೇವತಿ; ಅದರ ಸಲುವಾಗಿ ಆಟಕ್ಕೊಂಡ್ ಕೈ ಅದಾವು. ಒಬ್ಬ ರಾಕ್ಷಸನ್ನ ಸಾಯಿಬಡಿಲಿಕ್ಕ ಹತ್ಯಾಳ!" ಎಂದುತ್ತರಿಸಿದ ಹೀರಾ.

"ಯಾಕ? ಅಂವ ಏನ್ಮಾಡಿದ್ದನಂತ?"

"ಮಂದಿನ ಭಾಳ ಕಾಡಿಸ್ತಿದ್ದನಂತ. ಆತನ ಹೆಸ್ರು 'ಮೈಸಾಸುರ' ಅಂತ. ಆ ದೇವತಿ ಹೆಸರು 'ಚಾಮುಂಡೇಶ್ವರಿ' ಅಂತ....ಇವೆಲ್ಲಾ ಮೈಸೂರು ಸೀಮೆಯಾಗ ಅದಾವಂತ." ಎಂದು ತನಗೆ ತಿಳಿದಷ್ಟನ್ನು ಹೇಳಿದ ಹೀರಾ.

"ಹಂಗಾದ್ರ ...ನಮ್ಮಂಥೋರೂ ನೋಡಬೌದೇನು ಅವನ್ನ?"

"ಯಾರು ಬೇಕಾದ್ರೂ ನೋಡಬೌದು. ರಾಕ್ಷಸನ್ನ ಕಲ್ಲಿನಾಗ ಕೆತ್ತಿ ನಿಂದರ್ಸ್ಯಾರಂತ! ನೋಡಿದ್ರ ಅಂಜಿಕೆ ಬರೂಹಂಗ ಅದಂತ! ದೇವತಿಗ ಗುಡಿ ಕಟ್ಟಿಸ್ಯಾರಂತ. ದಸರೀ ಹಬ್ಬದಾಗ ಯಾ ಯಾ ದೇಶದ ಮಂದಿ ಬಂದು ಪೂಜಿ ಮಾಡಿಸಿಕೊಂಡ್ ಹೋಗ್ತಾರಂತ ! ಮಾನ್ವಿ ಗೂಳೆಪ್ಪ ಮೈಸೂರು ಸೀಮೆಯಿಂದ್ಲೇ ಲಗ್ನ ಮಾಡ್ಕೊಂಡ್ ಬಂದಾನ. ಅಂವ ನನಗ ರಗಡ್ ಸರ್ತಿ ಹೇಳ್ಯಾನ ಇದರ ಕತೀನ—ಎಂದೆಲ್ಲಾ ವಿವರಿಸಿದ ಹೀರಾ "ಈ ದ್ವಾಸಿ ತಿನ್ನು. ಅಗದಿ ರುಚಿಯಾಗಿರ್ತದ!" ಎಂದು ಆಕೆಯತ್ತ ತಟ್ಟೆ ಸರಿಸಿದ.

ಆದರೆ ಲಚ್ಚಿ ಉಬ್ಬಳಿಸುತ್ತ ಹೊರಗೆದ್ದು ಹೋದಳು. ಅದು ತನಗೆ ಸೇರುವುದಿಲ್ಲವೆಂದು ಕೈಸನ್ನೆಯಿಂದ ಹೇಳಿದಾಗ, ಹೀರಾ ತಾನೆ ಅವನ್ನು

ತಿಂದು ಮುಗಿಸಿ ರೊಕ್ಕ ತೆತ್ತು ಹೊರಬಂದ. ಅವನು ಪೇಟೆಯಿಂದ ಬಂಡಿ ಹೊಡುವ ಹೊತ್ತಿಗೆ ಆಗಲೇ ಸಾಕಷ್ಟು ಕತ್ತಲಾಗಿತ್ತು. ಹೀರಾ ಬಂಡಿಯನ್ನು ಸಾವಕಾಶವಾಗಿ ನಡೆಸುತ್ತಿರುವಾಗ, ಲಚ್ಮಿ ಗಂಡನ ಸಮೀಪಕ್ಕೆ ಸರಿದು ಕೇಳಿದಳು. "ಮೈಸೂರು ಸೀಮಿ ಅಂದ್ಯಲ್ಲ-ಅದು ನಮ್ಮೂರಿಂದ ಏಸುದೂರದಾಗೈತಿ? ರೈಚೂರು ಅವಲ್ಲಾ-ಅದಕ್ಕಿಂತ್ಲೂ ದೂರೇನು?''

''ರಾಯಿಚೂರು ಆಟು ದೂರ ಇಲ್ಲ ಬಿಡು. ಇಲ್ಲೇ ಮಗ್ಗುಲದಾಗೈತಿ. ಮೈಸೂರು ಅಂಬೋದು ಭಯಂಕರ ದೂರ ಅದ. ಎರಡುನೂರೋ ಮೂರುನೂರೋ ಹರ್ದಾರಿ ದೂರ ಇರಬೌದು. ಯಾಕ ಕೇಳಾಕ ಹತ್ತಿದಿ? ಅಲ್ಲಿ ಹೋಗ್ಬೇಕು, ನೋಡ್ಬೇಕು ಅಂತ ನಿನಗ ಆಸೆಯಾಗದ ಹೌದಲ್ಲೊ?''

''ಆಟು ದೂರ ಹೆಂಗ್ ಹೋಗೋದ್ ಬಿಡು! ನಮ್ಮ ಬಂಡಿ ಅಲ್ಲೀತಾನ ಹೋಗಂಗಿಲ್ಲ; ಎತ್ತು ದಣಕೊಂಬಿಡ್ತಾವ ಪಾಪ!''

ಅವಳ ಮಾತಿಗೆ ಹೀರಾ ಜೋರಾಗಿ ನಕ್ಕು ಹೇಳಿದ-''ಹುಚ್ಚಿ ಆಟೊಂದು ದೂರ ಯಾರೂ ಬಂಡಿಯಾಗ ಹೋಗೂದಿಲ್ಲ. ರೈಲಿನಾಗೋ ಬಸ್ಸಿನಾಗೋ ಹೋಗಬೇಕಾಗತೈತಿ.''

''ಅದ್ರಾಗ ನಮ್ಮಂಥ ಮಂದಿನ್ನೂ ಕುಂದುರಸ್ತಾರೇನು?''

''ಜಗ್ಗಿ ರೊಕ್ಕ ಕೊಟ್ರೆ ಎಲ್ಲಾರನ್ನೂ ಕುಂದುರಸ್ತಾರ—ಆ ದೇವತಿನೂ, ರಾಕ್ಷಸನ್ನೂ ನೋಡಬೇಕು ಅಂತ ನಿನಗ ಮನಸ್ಸಾಗ್ಯದ ಅಂಬೋದ್ ನನಗ ಗೊತ್ತಾತೇಳು. ಈ ಸರ್ತಿ ದಸರೀ ಹಬ್ಬಕ್ಕ ನಿನ್ನ ಅಲ್ಲಿಗೆ ಕರಕೊಂಡ್ ಹೊಕ್ಕೀನಿ ಎಲ್ಲಾ ನೋಡುವಂತಿ!'' ಎಂದು ಗಂಡ ಭರವಸೆ ಇತ್ತಾಗ ಲಚ್ಮಿ ಹರ್ಷಚಿತ್ತಳಾದಳು...

''ಏಯ್ ಬಾಯಿ, ಎಷ್ಟು ಸರ್ತಿ ಒದರಬೇಕವ್ವಾ ನಿನ್ನ? ಅಗಾ ಅಲ್ಲಿ ಡಾಕ್ಟರ್ ಕರಿತಾ ಅದಾರ ಹೋಗು. ಆ ಮುದಿಯ ಎಲ್ಲದಾನ. ಆತನ್ನೂ ಕರಿ'' ಎಂದು ಜವಾನ ಬಂದು ಹೇಳಿದಾಗ, ಲಚ್ಮಿ ನೆನಪುಗಳನ್ನು ಕೊಡವಿ ಮೇಲೆದ್ದು ಒಳಗಿನ ಕೋಣೆಗೆ ಬಂದಳು. ತಲೆಗೆ ಪಟ್ಟಿ ಕಟ್ಟಿಸಿಕೊಂಡಿದ್ದ ಸೋನಿ ಗೆಲುವಿನಿಂದ ತನ್ನತ್ತ ನೋಡಿದಾಗ ಮನಸ್ಸಿಗೆಷ್ಟೋ ಸಮಾಧಾನ

ವಾಯಿತು. "ಈ ಔಷಧಿ ನಮ್ಮಲ್ಲಿಲ್ಲ. ಅಂಗಡಿಯಾಗ ತಗೋಬೇಕು" ಎಂದು ಡಾಕ್ಟರ್ ಮಾಮೂಲಿನಂತೆ ಉದ್ದನೆಯ ಚೀಟಿ ಬರೆಯತೊಡಗಿದಾಗ "ಆಗ್ಲಿ ಸಾಹೇಬ್ರೆ" ಎಂದಳು ಲಚ್ಮಿ.

ಇತ್ತ ಹರಸಿಂಗ್ ಆಸ್ಪತ್ರೆಯ ಹೊರ ಆವರಣಕ್ಕೆ ಬಂದು ಬಂಡಿಯ ಮೂಕಿಯ ಮೇಲೆ ಕುಳಿತು ಅತ್ತಿತ್ತ ನೋಡಿದ. ಯಾರೂ ತನ್ನನ್ನು ಗಮನಿಸುತ್ತಿಲ್ಲವೆಂಬುದನ್ನು ಖಾತ್ರಿ ಪಡಿಸಿಕೊಂಡು, ಕಿಸೆಯಿಂದ ನೋಟುಗಳನ್ನು ತೆಗೆದು ಎಣಿಸಿದ. ಐದರ ಎಂಟು ನೋಟುಗಳಿರುವುದನ್ನು ಖಚಿತಪಡಿಸಿಕೊಂಡು ಪುನಃ ಕಿಸೆಯಲ್ಲಿ ಭದ್ರಪಡಿಸಿ ಬೀಡಿ ಹಚ್ಚಿದ.

ಸ್ವಲ್ಪ ಹೊತ್ತಿಗೆಲ್ಲ ಶುಭ್ರವಾದ ಅಂಗಿ-ಧೋತ್ರ ಉಟ್ಟು, ನಯವಾಗಿ ಕ್ರಾಪು ಬಾಚಿದ ಮಾನ್ಯಾ ಕೈಚೀಲ ಹಿಡಿದು ಅಲ್ಲಿಗೆ ಬಂದು "ಯಪ್ಪಾ" ಎಂದು ಕರೆದಾಗ, ಮುದುಕ ತಲೆ ಎತ್ತಿ ನೋಡಿದ.

"ಸಿನ್ನೂರಾಗ ತಟಕ್ ಕೆಲ್ಸ ಅದ. ಹೋಗಿ ಬರ್ತೇನಿ-ಒಂದಿಷ್ಟು ರೊಕ್ಕಾ ತಾ" ಎಂದು ಆತ ಕೈ ಚಾಚಿದ.

"ಹ್ಲೂಂ! ನೀ ಹಿಂಗ ಚೈನಿ ಹೊಡ್ಕೊಂತ ಊರೂರು ಅಡ್ಯಾಡು. ನಾ ಇಲ್ಲಿ ನಿನ್ನ ಹೆಂಡ್ತಿನ ಕಾಯಿಕ್ಕಂಡ್ ಬಿದ್ದಿರತೇನಿ" ಎಂದು ಮುದುಕ ರೇಗಿಕೊಳ್ಳುತ್ತಲೇ ಐದರ ಎರಡು ನೋಟುಗಳನ್ನು ತೆಗೆದು ಮಗನ ಕೈಗಿಕ್ಕಿದ.

"ಆಕಿನ ಯಾಕ ಕಾಯಿಕ್ಕಂಡ್ ಕುಂದುರತಿದ್ದೀಯಪ್ಪಾ? ಸತ್ರ ಸಾಯ್ತಾಳ. ಬದುಕಿದಳಂದ್ರ ಮನಿಗ ಬರ್ತಾಳ. ಆ ಬೇವಾರ್ಸಿ ಮತ್ತ ಲ್ಲಾರ ಓಡಿಹೋಕ್ಕಾಳೇನು? ನಡೀ ನೀನು ಬಂಡಿ ಹೊಡಕೊಂಡು." ಮಗ ನೋಟನ್ನು ಕಿಸೆಗೆ ಸೇರಿಸುತ್ತ ಸಲಹೆ ಮಾಡಿದ.

"ಭೇಶ್ ಹೇಳ್ತಿದ್ಬಿ! ಮಗನ! ಎಲ್ಲಾರ ಆಕಿ ಸತ್ ಗಿತ್ ಹ್ವಾದಳಂದ್ರ ನೀ ಕಂಬಿ ಎಣಿಸಬೇಕಾಗತೈತಿ!....ಅದಾರ ಗೊತ್ತದ ಹೌದೋ!"

"ಒಂದ್ನಾಕ್ ವರ್ಷ ಜೇಲಾಗ ಇದ್ದು ಬಂದ್ರೂ ಚಿಂತಿಲ್ಲ. ಆಕಿ ಸಾಯಬೇಕು!" ಎಂದ ಮಗನ ಅಜ್ಞಾನದ ನುಡಿಗೆ ಮರಗುತ್ತ ಬೋಡಸೆಗೆ

ತೊಡಗಿದ ಹರಸಿಂಗ್-" ಇದಕ್ಕ ನೋಡು ನಿನಗ ಬುದ್ದಿಗೇಡಿ ಅಂಬೋದು! ಅಲ್ಲಲೆ... ಹೆಂಡ್ತಿ ಬೇಕಿಲ್ಲಂದ್ರೆ, ಆಕಿನ ಮಂದಿ ಮುಂದ ಬಡ್ದು ಸಾಯಿಸಿ! ಜೇಲಿಗ ಹೋಗಿ ತ್ರಾಸು ಪಡೋದರಾಗ ಎಂಥ ಶ್ಯಾಣೆತನ ಅದ ಹೇಳು. ಇಷ್ಟಾಗಿತಂದ್ರ ಹಿಂದಕ್ಕ ನಾನೂ ಜೇಲು ಕಾಣಬೇಕಾಗಿತ್ನೋಡು! "

"ಇರಲಿ—ಅಪಾ, ಕಪಗಲ್ ಕಡಿಂದ ಭಾರೀದೊಂದ್ ಕುರಿ ಮಂದೆ ಹೊಂಟದಂತ! ಒಂದ್ ಕೈ ನೋಡ್ತೀನಿ! ಮನಿಗ ತರಲಿಕ್ಕ ಅನುಕೂಲ ಆತಂದ್ರ ತಗೊಂಡೇ ಬಂದು ಬಿಡ್ತೇನಿ! ಇಲ್ಲಿಕ್ಕಂದ್ರ ಅಲ್ಲೇ ಎಲ್ಲಾರ ಮಾರಿ ರೊಕ್ಕ ತಂದುಬಿಡ್ತೇನಿ!" ಮಗ ಹುರುಪಿನಿಂದ ಹೇಳಿಕೊಂಡಾಗ "ಜ್ವಾಕಿನೋ ಯಪ್ಪ ಮತ್ತ!" ಎಂದು ಮುದುಕ ಎಚ್ಚರಿಕೆ ನೀಡಿದ.

ತಂದೆ-ಮಗನ ನಡುವೆ ಭಾರಿ ಮಹತ್ವದ ಸಂಭಾಷಣೆ ನಡೆದಿದ್ದಾಗ, ಲಚ್ಮಿ ಹರಸಿಂಗ್‌ನನ್ನರಸುತ್ತ ಅಲ್ಲಿಗೆ ಬಂದಳು. ಮದುಮಗನಂತೆ ಸಿಂಗರಿಸಿ ಕೊಂಡು ನಿಂತಿರುವ ಮಾನ್ಯಾ ಕಾಣಿಸಿದೊಡನೆ ಅವಳಿಂದ ಸುಮ್ಮನಿರಲಾಗ ಲಿಲ್ಲ. "ಯಾಕಲಾ ಜೋಕ್ಮಾರ, ಹೆಂಡ್ತಿ ಸತ್ತಾಳೋ ಇನ್ನಾ ಇಲ್ಲೋ ಅಂತ ನೋಡಲ್ಯಾಕ್ ಬಂದಿ ಏನು?" ಎಂದು ಮೂದಲಿಸಿದಳು.

"ಸತ್ತರ ಹೊತ್ತು ಹಾಕಲಿಕ್ಕ ನೀ ಅದೀಯಲ್ಲ ತಲ್ಹಿಡ್ಕಿ! ನಾ ಬ್ಯಾರೆ ದಗದಕ್ಕ ಹೊಂಟೀನಿ" ಎಂದವನೇ ತಂದೆಯುನ್ನುದ್ದೇಶಿಸಿ, "ಯಪ್ಪಾ, ನಾ ಹೋಗ್ಬರತೇನಿ. ಬಂಡಿ ತಗೊಂಡಕೇಸಿ ನೀ ಮನಿಗ ನಡಿ" ಎಂದು ಮತ್ತೊಮ್ಮೆ ಆದೇಶ ನೀಡಿ ಅಲ್ಲಿಂದ ಹೊರಟುಹೋದ.

"ಏನಪ್ಪಾ ಹರಸಿಂಗಣ್ಣಾ, ಎಂಥ ಮಗನ್ನ ಹಡದಿಯೋ. ಹಿಂದಕ್ಕ ನಿನ್ನ 'ಹೆಂಡ್ತಿ ಗೋಣು ಮುರಿದು ಹಾಕ್ದ' ಅಂತ ಮಂದಿ ಹೇಳೋದನ್ನ ಕೇಳೀನಿ! ಅದರ ಬದಲು ಈತನ ಗೋಣು ಮುರಿದು ಹಾಕಿದ್ದೀ ಅಂದ್ರ ಛೇಷಾಗ್ತಿತ್ತು ನೋಡು!" ಎಂದು ಲಚ್ಮಿ ನೋವಿನಿಂದ ನುಡಿದಾಗ, "ಅದು ನಿನ್ನಂಥ ಹೆಣ್ಣು ಮಗಳು ಮಾಡೋ ಕೆಲ್ಸ ! ಅಪ್ಪ ಎಂದಾರ ಹಡದ ಮಕ್ಕಳ ಗೋಣು ಮುರಿ ಯೂದ ನೀ ಕಂಡೀಯೇನು?" ಎಂದು ಕೇಳಿದ ಹರಸಿಂಗ್.

"ಖರೇಯಪ್ಪ. ನೀ ಅಗದಿ ದೊಡ್ಡ ಮನ್ಸ ಇದ್ದೀ. ಮಂದಿ ಗೋಣು

ಮುರಿದು ಮಗನ ಗೋಣು ಉಳ್ಸಾವನಿದ್ವಿ....! ಇರಲಿ, ಒಳಗ ಡಾಕಟ್ರು ಸಾಹೇಬ್ರು ಅದೇನೇನೋ ಗುಳಿಗಿ ತರಬೇಕಃ ಅನ್ನಲಾಕ ಹತ್ಯಾರ ನೋಡು ಬಾ" ಎಂದಳು.

ಮುದುಕ ಕೊಂಚ ಹೊತ್ತು ಮೌನವಾಗಿ ಕುಳಿತಿದ್ದು ನಂತರ ಬಾಯಿ ಬಿಟ್ಟ-" ಇದು ಸರ್ಕಾರಿ ದವಾಖಾನಿ ಅಲ್ವೇನ್ಬೇ ? ಚೂಜಿ, ಗುಳಿಗಿ ಎಲ್ಲಾ ಅವರೇ ಕೊಡಬೇಕು..."

"ಖರೆ. ಹೀಗಂತ ಸಾಹೇಬ್ರಿಗ ನೀನೇ ಹೇಳು ಬಾ." ಎಂದು ಲಚ್ಚಿ ಒತ್ತಾಯಿಸಿದಾಗ, ಮುದುಕ ತಲೆ ಕೊಡವಿದ. "ಪೈಲೆ ಸಟಕ್ನೆ ಲೋಟು ಲೋಟ್ನೇ ತಗ್ದು ತಗ್ದು ಅವನ ಕೈಗಿಟ್ಟಿದ್ವೀ—ಸವಿ ಕಂಡೋನು ಈಗ ಹ್ಯಾಂಗ ಬಿಟ್ಟಾನು ?"

"ಮತ್ತೇನು ಮಾಡಬೇಕಿತ್ತೋ ಯಪ್ಪ ? ನಿನ್ನಂಥ ದುಡಿಯೋ ಗಂಡು ಮಗ, ಖಾಸಾ ಮಾವ ಸನೇಹದಾಗ ಇದ್ದೂ ಸೈತ, ಆಕಿ ಸಾಯ್ತಾಳಲ್ಲ ಅಂತ ನಾನೇ ತಗದುಕೊಟ್ಟುಬಿಟ್ನಿ. ನಿನಗ ರೊಕ್ಕಾನೇ ದೇವ್ರು, ನನಗ ಮನಸ್ರೇ ದೇವ್ರು..."

"ಇರಲಿ ನಡಿ. ಈ ಬೀಡಿ ಸೇದ್ಹಾಕಿ ನಿನ್ನ ಹಿಂದೆ ಬರ್ತೀನಿ" ಎಂದು ಆತ ಹೇಳಿದಾಗ "ಲಗೂ ಬಾ" ಎಂದು ಕರೆದು ಆಕೆ ಒಳಗಡೆ ಹೋದಳು. ಕೂಡಲೆ ಹರಸಿಂಗ್ ಆತಾತುರವಾಗಿ ಬಂಡಿಹೂಡಿ ಊರಿಗಭಿಮುಖವಾಗಿ ಓಡಿಸಿದ.

ತುಸು ಹೊತ್ತುಕಾದು ನೋಡಿದ ಲಚ್ಚಿ, ಆತ ಬಾರದಾಗ ಸಿಟ್ಟಿನಿಂದ ಹೊರಗಡೆ ಬಂದಳು. ಬಂಡಿ ದೂರದಲ್ಲಿ ಹೊರಟಿರುವುದು ಕಾಣಿಸಿತು.ಅವಡು ಗಚ್ಚಿ ದಾಪುಗಾಲಿಕ್ಕುತ್ತ ಅದನ್ನು ಹಿಂಬಾಲಿಸಿದಳು. ಅವಳು ಬರುವುದನ್ನು ಕಂಡ ಹರಸಿಂಗ್ ಎತ್ತಿನ ಬಾಲ ತಿರುಚಿದ. ಅವಳಿಗೂ ಬಂಡಿಗೂ ಫರ್ಲಾಂಗ್ ದೂರದ ಅಂತರ ಉಂಟಾಯಿತು. ಆದರೂ ಅವಳು ನಿರಾಶಳಾಗದೆ ಏದುಸಿರು ಬಿಡುತ್ತ "ನಿಂದ್ರೋ ಏಯ್ ಹರಸಿಂಗಣ್ಣಾ ! ಹೊತ್ತು ಮುಳಗಾಕ ಬಂತು. ನೀ ಹಿಂಗ ಬಿಟ್ಟು ಹೊಂಟ್ರ ಆ ಹುಡುಗೀನ ಹ್ಯಾಂಗ ಕರಕೊಂಡ್ ಬರಲಿ. ನಿಂದರ್ರೋ..." ಎಂದು ಕೂಗುತ್ತ ಒಂದೇ ಸಮನೆ ಓಡತೊಡಗಿದಳು.

ಎದುರಿಂದ ಒಂದಿಬ್ಬರು ಪಡ್ಡೆ ಹುಡುಗರು ಬರುತ್ತಿರುವುದನ್ನು ಕಂಡರು. ಆಕೆ "ಓಟ್ಹೋಗಿ ಆ ಬಂಡೀನ ತಡೀರೋ ತಮ್ಮ. ಆ ಮುದಿ ಯಾತಗ ತಲಿ ನೆಟ್ಟಗಿಲ್ಲ. ನನ್ನ ಬಿಟ್ಟೇ ಹೊಂಟಾನ! ನಿಮ್ಮಿಬ್ಬರ ನಡು ರೂಪಾಯಿ ರೊಕ್ಕ ಕೊಡತೀನಿ!" ಎಂದು ವಿನಂತಿಸಿಕೊಂಡಳು.

ಹುಡುಗರು ಓಡಿಹೋಗಿ ಬಂಡಿಯನ್ನು ತಡೆದು ನಿಲ್ಲಿಸಿದರು. ಮುದುಕ ಎಷ್ಟು ರೋಪು ಹಾಕಿದರೂ ಕೇಳದೆ "ಬಾರಬೇಯಮ್ಮ, ದೌಡ್ ಬಾ!" ಎಂದು ಕೂಗಿ ಹೇಳಿ, ಎತ್ತಿನ ಮೂಗುದಾರ ಹಿಡಿದು ನಿಂತರು. ಲಚ್ಮಿ ಸಮೀಪಕ್ಕೆ ಬಂದವಳೇ ಹರಸಿಂಗ್‌ನನ್ನು ವಾಚಾಮ ಗೋಚರವಾಗಿ ನಿಂದಿಸತೊಡಗಿದಳು. "ನೀ ಏನು ಮನ್ಸ ಅದೀಯೋ ದೆವ್ವಗಿವ್ವ ಅದಿಯೋ ಅಡ್ನಾಡಿ! ಲಗೂ ಹೊಳ್ಸೋ ಬಂಡೀನ!" ಎಂದು ಗುಡುಗಿದಳು.

"ಆ ರಂಡೀ ಅಲ್ಲೇ ಸಾಯುವಲ್ಲಳ್ಯಾಕ. ನಾ ಮಾತ್ರ ಬಂಡಿ ಹೋಳ್ಸೋನಲ್ಲ!..." ಎಂದು ಖಡಾ ಖಂಡಿತವಾಗಿ ಅಬ್ಬರಿಸಿದ ಮುದುಕ. "ನೀ ಬೇಕಂದ್ರ ಹತ್ತಿ ಕುಂದ್ರು; ಕರಕೊಂಡ್ಹೋಗ್ತಿನಿ" ಎಂದು ರಿಯಾಯಿತಿ ತೋರಿದ.

"ಹಿಂಗ್ ನಾವಿಬ್ರೂ ಬಿಟ್ಟು ಹ್ವಾದೇವಂದ್ರ ಆಕಿನ ಗತಿ ಏನು? ಆಕಿನ ಹೊಟ್ಟೆ ಗತಿ ಹ್ಯಾಂಗ? ಮಕ್ಕೊಂಬೋದೆಲ್ಲಿ? ಪ್ಯಾಟಿ ಊರಿನ ದೊಡ್ಡ ದವಾಖಾನಿ ಇತ್ತಂದ್ರ ಅದರಾಗ ಮಕ್ಕೊಳ್ಳಿಕ್ಕ ಜಾಗ ಇರತೈತಿ ಬಿಡು. ಇಲ್ಲಿ?" ಲಚ್ಮಿ ಕಕ್ಕುಲತೆಯಿಂದ ಪ್ರಶ್ನಿಸಿದಳು.

"ಈ ದವಾಖಾನಿಯಾಗೂ ಜಾಗ ಅದೇಳು. ಒಬ್ಬಾಕಿ ಬೇಕಾದ್ಹಂಗ್ ಮಕ್ಕೋಬಹುದು. ಇಲ್ಲಿರೋ ಡಾಕಟ್ರೇ ನೋಡ್ಕೊಂತಾನ ಆಕಿನ-ಸರ್ಕಾರದಿಂದ ಪಗಾರ ತಗೊಂಬಂಗಿಲ್ಲೇನು ಆ ಮಗ?"

"ಆಕಿ ಸತ್ತುಗಿತ್ತು ಹೋದಳಂದ್ರ ಹ್ಯಾಂಗ್?"

"ಛೇಪಾಗ್ತದ. ಡಾಕಟ್ರನೇ ಸಾಯಿ ಬಡಿದಾನಂತ ಮುಂದಿಗ ಗೊತ್ತಾಗತೈತಿ! ನಮ್ಮ ಮ್ಯಾಲ ಯಾತಕ್ಕ ಬರತೈತಿ?"

ಲಚ್ಮಿ ಸಿಟ್ಟಿನಿಂದ ಕೆಂಪಾಗಿ ಸರಸರನೆ ಬಂಡಿ ಏರಿದಳು. ಸಡಿಲಾಗಿದ್ದ ಬಂಡಿಯ ಗುಟವೊಂದನ್ನು ಕಿತ್ತು ಕೈಯಲ್ಲಿ ಹಿಡಿದು "ಸೊಸಿ ಸತ್ತರ ಸಾಕಂತ

ಕಾಯ್ತಿದ್ದಿಯಲ್ಲಲೇ-ಭಾಡ್‌ಖಾವ್ ನನಮಗ್ನೆ! ಆಕಿನ ಜೋಡಿ ನೀನು ಸಾಯಿ!" ಎನ್ನುತ್ತ ಅವನ ಬೆನ್ನಿಗೊಂದು ಬಲವಾಗಿ ಬಾರಿಸಿದಳು.

ಅನಿರೀಕ್ಷಿತ ಹೊಡೆತದಿಂದ ತಳಮಳಿಸಿದ ಮುದುಕ ಪ್ರತಿಭಟಿಸಲೂ ತ್ರಾಣ ಸಾಲದೆ 'ಅಯ್ಯೊ! ಯಪ್ಪಾ!' ಎಂದು ನರಳುತ್ತ ಬಂಡಿಯಲ್ಲೇ ಒರಗಿದ. ರುದ್ರಕಾಳಿಯಂತೆ ಆವೇಶಭರಿತಳಾಗಿದ್ದ ಲಚ್ಮಿ ಅವನ ಟೊಂಕಕ್ಕೆ ಮತ್ತೊಂದು ಹೊಡೆತ ಕೊಟ್ಟಳು.

"ಸಾಯ್ತಾನ ಬಿಡಂಗೇಯಮ್ಮಾ!'' ತಮಾಷೆ ನೋಡುತ್ತ ನಿಂತಿದ್ದ ಹುಡುಗರು ಗಾಬರಿಯಿಂದ ಕೂಗಿಕೊಂಡರು. "ಈ ಪಾಪಿ ನನ್ಮಗನ್ನ ಸಾಯಿಸಿದ್ರೂ ಪಾಪ ತಟ್ಟೊದಿಲ್ಲ ತಮ್ಮಾ!'' ಎನ್ನುತ್ತ ಆಕೆ ಗೂಟವನ್ನು ಯಥಾಸ್ಥಾನಕ್ಕೆ ಸೇರಿಸಿ, ಮುದುಕನನ್ನು ಬಂಡಿಯ ನಡುಭಾಗಕ್ಕೆ ದಬ್ಬಿ, ತಾನೇ ಸಾರಥ್ಯವನ್ನು ವಹಿಸಿಕೊಂಡಳು.

ಮಾತು ಕೊಟ್ಟಂತೆ ಹುಡುಗರಿಗೆ ಹಣ ತೆತ್ತು ಬಂಡಿಯನ್ನು ದವಾಖಾನೆಯ ಆವರಣಕ್ಕೆ ತಂದು ನಿಲ್ಲಿಸಿದಳು. ವೈದ್ಯರು ಬರೆದು ಕೊಟ್ಟಿದ್ದ ಔಷಧಿ-ಮಾತ್ರೆಗಳನ್ನು ತನ್ನ ಸಂಚಿಯ ಹಣದಿಂದಲೇ ಕೊಂಡು, ಸೋನಿಯನ್ನು ನಿಧಾನವಾಗಿ ಬಂಡಿಗೇರಿಸಿಕೊಂಡು ಊರ ಕಡೆ ಚಲಾಯಿಸಿದಳು.

ದಾರಿಯುದ್ದಕ್ಕೂ 'ಯವ್ವಾ ಯಪ್ಪಾ!' ಎಂದು ನರಳುತ್ತಿದ್ದ ಹರಸಿಂಗ್ ಊರು ಮುಟ್ಟಿದ ಕೂಡಲೇ 'ಹೋ' ಎಂದು ಕೂಗಾಡಿ ಅಳತೊಡಗಿದ. ದುಡಿಮೆಯಿಂದ ಹಿಂತಿರುಗಿ ಅಡಿಗೆ ಮಾಡಲು, ಊಟಕ್ಕೆ ಕೂರಲು ಸಿದ್ಧರಾಗುತ್ತಿದ್ದ ಮಂದಿ, ಮುದುಕನ ಆರ್ತನಾದವನ್ನು ಆಲಿಸಿ, ಮಾಡುತ್ತಿದ್ದ ಕೆಲಸವನ್ನು ಅಲ್ಲಲ್ಲೇ ಕೈಬಿಟ್ಟು ಬೀದಿಗೋಡಿಬಂದರು. ಸೋನಿಗೇನೋ ಹೆಚ್ಚುಕಡಿಮೆಯಾಗಿರಬೇಕೆಂದು ಕೆಲವರು ಊಹಿಸಿದರು. ಆದರೆ ಆಕೆ ಬಂಡಿಯಲ್ಲಿ ಆರಾಮಾಗಿ ಕುಳಿತಿರುವುದನ್ನೂ ಮುದುಕನೇ ಬಿದ್ದುಕೊಂಡು ಒದರಾಡುತ್ತಿರುವುದನ್ನೂ ಕಂಡು ಜನ ಕುತೂಹಲ ತಾಳದಾದರು.

ಲಚ್ಮಿ ಬಂಡಿ ನಿಲ್ಲಿಸಿ ನೊಗ ಬಿಚ್ಚುತ್ತಿರುವಾಗ ಎಲ್ಲರೂ ಅವಳನ್ನು ಘೇರಾಯಿಸಿ "ಮುತ್ಯಾಗ ಏನಾತು? ಯದಕ್ಕ ಹಿಂಗ್ ಒದರಾಡಲಿಕ್ಕ

ಹತ್ಯಾನ?" ಎಂದು ಕಳಕಳಿಯಿಂದ ವಿಚಾರಿಸತೊಡಗಿದರು. ಆಕೆ ಬಾಯಿ ಬಿಡುವ ಮೊದಲೇ ಮುದುಕ ಗೋಳಾಡುತ್ತ "ಆಕಿಗೇನು ಕೇಳಾಕ ಹತ್ತೀರಪ್ಪಾ?! ಈ ರಂಡೆ ನನ್ನ ಸಿಕ್ಕ ಸಿಕ್ಕಂಗ ಬಡಿದಾಳ್ರೋಯಪ್ಪಾ! ನಾ ಸಾಯ್ತಿನ್ರೋಯಪ್ಪಾ!..." ಎಂದು ಪ್ರಲಾಪಿಸತೊಡಗಿದ. ಜನಸಮೂಹ ಅವನ ಗೋಳನ್ನು ತನ್ನದೇ ರೀತಿಯಿಂದ ಗ್ರಹಿಸಿಕೊಂಡು, ಲಚ್ಮಿ-ಸೋನಿಯರನ್ನು ಕೆಕ್ಕರಿಸಿ ನೋಡುತ್ತ, ಮುತ್ಯನನ್ನು ಅತ್ಯಂತ ಕರುಣೆಯಿಂದ ಬಂಡಿಯಿಂದಿಳಿಸಿಕೊಂಡಿತು.

ಮರುದಿನ ಸಾಯಂಕಾಲ ಹರಸಿಂಗ್‌ನ ದೂರಿನ ಮೇರೆಗೆ ಊರ ಮುಖ್ಯಸ್ಥರೆಲ್ಲರೂ ಪಂಚಾಯ್ತಿಗೆ ಸೇರಿದರು. ಎಲ್ಲರ ಕನಿಕರಕ್ಕೆ ಪಾತ್ರನಾಗಿದ್ದ ಹರಸಿಂಗನಿಗೆ 'ನ್ಯಾಯ' ದೊರಕುವುದು ತಡವಾಗಲಿಲ್ಲ. ಮಗ ಹೊಡೆದ ಅನ್ನುವ ಸಿಟ್ಟಿಗೆ, ಅವನ ಅಪ್ಪನನ್ನು ಹಿಡಿದು ಥಳಿಸುವುದು ಯಾವ ನ್ಯಾಯ? ಹರಸಿಂಗ್ ಎಷ್ಟೇ ಆಗಲಿ ಗಂಡುಮಗ, ಮೇಲಾಗಿ ಹಿರೇಮನ್ಸ. ಅಂಥೋನ ಮ್ಯಾಲೆ ಮೂರ್ಕಾಸಿನ ಹೆಣ್ಣುಮಗಳು ಕೈ ಮಾಡೋದೆಂದರೇನು ? ಲಚ್ಮಿಯ ಈ ಅಪರಾಧ ಅಕ್ಷಮ್ಯವೆಂದು ಸಭೆ 'ಸರ್ವಾನುಮತ'ದಿಂದ ತೀರ್ಪುನೀಡಿತು...

ಪಂಚಾಯ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಪ್ರವೇಶ ಇರಲಿಲ್ಲವಾದರೂ ಲಚ್ಮಿಯೇ ಅಪರಾಧಿನಿಯಾದ್ದರಿಂದ ಅವಳನ್ನು ಅಲ್ಲಿ ಕರೆಯಿಸಲಾಗಿತ್ತು. ತೀರ್ಪು ಕೇಳಿದೊಡನೆ ಆಕೆ ಎದ್ದು ನಿಂತಳು. ಅಲ್ಲಿ ಮಂಡಿಸಿದ್ದ ಗೌಡರು—ಹಿರಿಯರು ಬುದ್ಧಿವಂತರತ್ತ ಬೇಧಕ ನೋಟ ಬೀರಿದಳು...

ಇವರಲ್ಲಿ ಎಷ್ಟು ಜನ ಕಳವು ಮಾಡಲಾರದವರು, ಸುಳ್ಳು ಹೇಳಲಾರದವರು, ಕಂಡ ಹೆಂಗಸಿಗಾಗಿ ಚಪಲ ಪಡದವರು, ಸಂಪನ್ನರು ಇದ್ದಾರು?.. ಅಂತಹ ಕೆಲವೇ ಮಂದಿ ಸಭೆಯಲ್ಲಿ ಕುಳಿತಿರುವುದನ್ನು ಆಕೆ ಗುರುತಿಸಿದಳು. ಆದರೆ ಅವರು ಊರ ಹಿರಿಯರೆಂದಾಗಲಿ, ಬುದ್ಧಿವಂತರೆಂದಾಗಲಿ ಪರಿಗಣಿಸಲ್ಪಡುವವರಲ್ಲ. ಕೇವಲ ವೀಕ್ಷಕರಾಗಿ ಸಭೆಗೆ ಬಂದು ಕುಳಿತವರು. ನಾಲಿಗೆ ಇದ್ದರೂ ಧ್ವನಿ ಇಲ್ಲದವರು....

ಆಕೆ ಸಭಿಕರಿಗೆ ಕೈಜೋಡಿಸಿ ಹೇಳತೊಡಗಿದಳು.... "ಗೌಡ್ರು ಹಿರಿ

ಯರು...ನೀವೆಲ್ಲ ಹೇಳ್ಳಿಕ್ಕ ಹತ್ತೀರಿ-ಮುದಿಯನ ಮ್ಯಾಲ ನಾ ಕೈ ಮಾಡಿದ್ದು ತಪ್ಪು ಅಂತ. ಖರೆ ಒಪ್ಪಿಕೊಳ್ತೀನಿ. ಆದ್ರ ತಲಿ ಒಡ್ದು ಬೇಹೋಷ್ ಆಗಿ ಬಿದ್ದ ಸೊಸಿನ ದವಾಖಾನಿಗ ಒಯ್ದು ಈ ಮನ್ಸ-ಅತ್ಲಾಗ ಡಾಕಟ್ರ ಸಾಹೇಬ್ರು ಆಕಿನ ತಲಿಗಾಯಕ್ಕ ಹೊಲಿಗಿ ಹಾಕ್ತಿರುವಾಗ, ತಾ ಒಬ್ಬಾತ್ನೇ ಬಂಡಿ ಓಡಿಸ್ಕಂಡ್ ಊರಕಡೆ ಹೊಂಟು ಬಿಟ್ಟನಲ್ಲ-ಇದು ನಿಮಗ ಬರೋಬ್ಬರಿ ಅನ್ನಿಸತೈತೇನು ಹೇಳ್ರಿ ?"

"ಏ....ಹಿಂಗ ನಡುನೀರಾಗ ಕೈ ಬಿಟ್ಟರ, ಪಾಪ! ಅಲ್ಲಿ ಆ ಹೆಣ್ಣು ಮಗಳ ಗತಿ ಏನಾಗಬೇಕು? ಮುದಿಯನ ಬುದ್ಧಿ ಚಲೋ ಇಲ್ಲ ಬಿಡು!" ಸಭೆಯಲ್ಲಿ ಕುಳಿತ ಕೆಲರು ಸೊಲ್ಲೆತ್ತಿದರೆ, ಮುಖಂಡರು ನಾಲಿಗೆ ಸತ್ತವರಂತೆ ಮೌನವಹಿಸಿದರು.

ತನ್ನತ್ತ ಹರಿಯುತ್ತಿದ್ದ ಸಭಿಕರ ಒಲವು ಒಮ್ಮೆಲೆ ಲಚ್ಮಿಯತ್ತ ತಿರುಗಿದ್ದನ್ನು ಕಂಡು ಗಾಬರಿಬಿದ್ದ ಹರಸಿಂಗ್ ಕುಳಿತಲ್ಲಿಯೇ ಸಭೆಗೆ ಕೈ ಜೋಡಿಸಿ, ಅತಿ ವಿನಯದಿಂದ ಹೇಳಿದ: "ಯಪ್ಪಾ, ತಟಕ್ ನೀವೇ ವಿಚಾರ ಮಾಡಿ ನೋಡ್ರಿ. ಈ ಹೆಣ್ಣುಮಗಳು ಎಂಥ ಪರಿ ಸುಳ್ಳ್ಯಾಡ್ತಾಳಂಬೋದು ನಿಮಗs ಗೊತ್ತಾಗತೈತಿ...ಎಲ್ಲಾ ಗಂಡ-ಹೆಂಡಿರ ನಡುವೆ ಆಗೂಹಂಗ ನನ್ನ ಮಗ ಸೊಸಿನೂ ಜಗಳಾಡಿದ್ರು...ಸಿಟ್ಟಿನ ಭರದಾಗ ಆತ ಒಂದೇಟು ಹಾಕಿಬಿಟ್ಟ. ಏನೋ ಥ್ವಾಡೆ ಗದ್ಲ ಆಗಿಬಿಡ್ತು ಬಿಡ್ರಿ. ಇನ್ನ ನಾ ಹ್ಯಾಂಗ ಸುಮ್ಮನಿರಲಿಕ್ಕ ಬರ್ತದ-ಬ್ಯಾರೆದೋರ ಬಂಡಿ ಇಸಗೊಂಡು ದವಾಖಾನಿಗ ಒಯ್ದೆ. ಡಾಕಟ್ರು ಆಕಿನ ತಲಿಗ ಪಟ್ಟಿಗಿಟ್ಟಿ ಹಚ್ಚಿದ್ರು. ಮತ್ತ ಅವೆಂಥೆಂಥವೋ ಎಣ್ಣೆ-ಗುಳಿಗಿ ಎಲ್ಲಾದ್ದೂ ಈಟುದ್ದ ಕಾಗದದ ಮ್ಯಾಲ ಹಚ್ಚಿಕೊಟ್ರು.

ಅವನ್ನೆಲ್ಲ ಅಂಗಡಿಯಾಗ ತಗೋಬೇಕಂದ್ರ ಕಿಸೆಯಾಗ ರೊಕ್ಕ ದ್ದಿಲ್ಲ... ಅದಕ್ಕ ಈ ಹೆಣ್ಣುಮಗಳ ಕಡೆ 'ಒಂದಿಪ್ಪತ್ತು ರೂಪಾಯಿ ಇದ್ರ ಕೊಡಬೇ. ಮನೀಗ ಹ್ವಾದಿಂದ ಕೊಡ್ತೇನಿ' ಅಂತ ಕೇಳ್ದೆ. 'ಎಲ್ಯಪ್ಪ. ನಾ ಅಂಗಡಿ ಸಾಮಾನು ಒಯ್ಯಬೇಕಂತ ಬಂದೀನಿ. ಇರೋ ರೊಕ್ಕ ನಿನಗ ಕೊಟ್ಟು ನಾ ಏನು ಬರೇಕೈಲೆ ಮನಿಗ ಹೋಗಲೇನು?' ಅಂದುಬಿಟ್ಲು!"

ನಡುವೆಯೇ ಲಚ್ಮಿ ಗದರಿದಳು-''ಏಯ್ ಮುದ್ಕಾ. ಬಾಯಾಗ ಹುಳ ಬಿದ್ದಾವು ಬಿಡೋ. ಯಜಮಾನ ಮನ್ಸನಾಗಿ ಇಂಥ ಪರಿ ಸುಳ್ಯಾಡಾಕ ಹತ್ತೀಯಲ್ಲ. ನಾಚಿಕಿ ಬರಂಗಿಲ್ಲೇನಲಾ ಭಾಡ್ಯಾ ನಿನಗ?''

''ಬಾಯಿ ಮುಚ್ಚು ಬೇ! ತುಂಬಿದ ಸಭಾದಾಗ ಮುತ್ಯಾನ್ನ 'ಭಾಡ್ಯಾ' ಅನ್ನಾಕ ಹತ್ತಿದಿ! ಎಷ್ಟು ಸೊಕ್ಕು ನಿನಗ!...ಇದೇನು ಹುಡ್ಗಾಟದ ಮಾತಲ್ಲ. ಇದಕ್ಕ ನಾವು ದಂಡ ಹಾಕಬೇಕಾಗ್ತದ-ಯಾಕಪ್ಪಾ...?" ಮುಖಂಡನೊಬ್ಬ ಉಳಿದ 'ಬುದ್ವಂತ'ರನ್ನು ಕೇಳಿದ.

''ಖರೆ. ಈ ಹೆಣ್ಣುಮಗಳದ್ದು ಭಾರಿ ಆಗ್ಯದ. ಗಂಡು ಮಕ್ಕಳಂದ್ರ ಸ್ವಲ್ಪರೆ ಭಯ ಇಲ್ಲ. ಭಗತಿ ಇಲ್ಲ! ಬಾಯಿಗ ಬಂದ್ಹಂಗs ಒದರತಾಳ!''

"ನೋಡs ಲಚ್ಮವ್ವ, ಮುತ್ಯಾ ಏನೇನು ಹೇಳೊದದ ಎಲ್ಲಾದ್ನೂ ಹೇಳಿಬಿಡ್ಲಿ. ನೀ ನಡುಬರಕ್ಕ ಬಾಯಿ ಹಾಕಬ್ಯಾಡ. ಗಪ್ಪಕುಂದ್ರು.'' ಎಂದು ಲಚ್ಮಿಗೆ ಆದೇಶ ನೀಡಿ ಮುದುಕನಿಗೆ ಹೇಳಿಕೆ ಮುಂದುವರಿಸಲು ಅವಕಾಶ ನೀಡಲಾಯಿತು.

ಆತ ಯಾವ ಅಳುಕೂ ಇಲ್ಲದೆ ಹೆಚ್ಚಿನ ಉತ್ಸಾಹದಿಂದ ಮುಂದುವರಿಸಿದ. "ಈಕಿ ರೊಕ್ಕ ಕೊಡಲಿಕ್ಕೆ ವಲ್ಲೆ ಅಂದ್ಲು...ಮುಂದ ಹ್ಯಾಂಗಪ್ಪ ಅಂತ ನಾ ವಿಚಾರ ಮಾಡ್ಕೊಂಡ್ ಕುಂತಿದ್ದೆ. ಅದೇ ಟೇಮಿಂಗ್ ಬಂದ ನೋಡು-ದೇವ್ರು ಬಂದಂಗ-ಮಾಸ್ಯಾ! 'ನೋಡೊ ಮಗ ಹಿಂಗಿನ್ನಿಂಗ' ಅಂದೆ. ಬಡ ಬಡ ಅಂಗಡಿಗ ಹ್ವಾದ. ಆ ಕಾಗದದಾನೋವು ಓಸು ಜಾಸ್ತಿ ತಂದು ನನಕೈಗೆ ಕೊಟ್ಟ. ಹೆಂಡ್ತಿನ ಸಾವಕಾಶ ಎತ್ತಿಕೊಂಬಂದು ಬಂಡಿಯಾಗ ಕುಂದುರ್ಸಿ 'ನೀ ಇನ್ನ ನಡಿಯಪ್ಪ ಮನಿಗ. ನನಗ ಸಿನ್ನೂರಾಗ ತಟಕ ಕೆಲ್ಸ ಐತಿ' ಅಂದ ಕೇಸಿ ತಾ ಅತ್ತಾಗ ಹ್ವಾದ, ನಾ ಬಂಡಿ ಹೂಡಿದ್ನಿ...

ನನ್ನ ಸೊಸಿದs ನನಗ ರಗsಡ್ ಆಗಿತ್ತು ನೋಡು-ಈ ಹೆಣುಮಗಳ ಸುದ್ದಿನೇ ಮರ್ತು ಬಿಟ್ಟೇನಿ!...ಒಂದಷ್ಟು ದೂರ ಹೊಂಟಿದ್ದೆ ನೋಡಪ್ಪ... ಬಂಪುಬಿಟ್ಲು ಆಕ್ಕಡಿಯಿಂದ ಬಾಯಿ ಮಾಡ್ಕೊಂತ ಬಂಡಿ ಏರಿದ್ದೆ, ಗೂಟ ಕಿತಗೊಂಡಿದ್ವೇ ಹಾಕಿದ್ಲು ನೋಡು-ಟೊಂಕ ಮುರಿಯೂ ಹಂಗ!...ಬೇಹೋಷಾಗಿ ಬೀಳೂತಾನ ಬಿಡಲಿಲ್ಲ!...''

ಹಲ್ಲಿಯಂತೆ ಲೊಚಗುಟ್ಟುವ ಸದ್ದು ಸಭೆಯನ್ನು ತುಂಬಿತು.

“ಇಷ್ಟು ಹೊತ್ತು ಅಂವ ಹೇಳಿದ ಸುಳ್ಳು ಮಾತ್ನ ಕಿವಿಗೊಟ್ಟು ಕೇಳಿರಿ. ಖರೆ ನಡೆದಿದ್ದನ್ನು ಈಗ ನಾ ಹೇಳ್ತಿನಿ ಕೇಳ್ರಿ’’ ಎಂದು ಲಚ್ಮಿ ಹೇಳಿದಾಗ “ನೀ ಮುತ್ಯನ ಬಡಿದಿದ್ದನಕ ಖರೆ ಹೌದಲ್ಲ?’’ ಎಂದೊಬ್ಬ ಮುಖಂಡ ಪ್ರಶ್ನಿಸಿದ.

‘‘ಅದು ಖರೆ, ಆದ್ರ ನಾಯಾಕ ಬಡ್ದೀನಿ ಅಂಬೋದನ್ನ ’’ ಆತ ನಡುವೆಯೇ ತಡೆದು ಹೇಳಿದ-“ ನೀ ಬಡದೀ ಅಂಬೋದನ್ನ ಒಪ್ಪಿಕೊಂಡಿದ್ದೀ ಆತು. ಹೆಚ್ಚಿಗಿ ಪುರಾಣ ತಗೊಂಡು ಏನ್ ಮಾಡೋದೈತಿ?”

“ಅಂವ ತನ್ನ ಸೊಸಿಗ...” ಎಂದು ಲಚ್ಮಿ ವಿವರಿಸುವ ಪ್ರಯತ್ನ ನಡೆಸಿದಾಗ “ನೋಡು ಲಚ್ಮವ್ವಾ. ಸೋನಿ ಹರಸಿಂಗ್‌ನ ಸೊಸಿ. ಬೇಕಾಗಿತಂದ್ರ ಅಂವ ತನ್ನ ಸೊಸಿನ ಉಳಿಸ್ಕೊಂತಿದ್ದ. ಬ್ಯಾಡಾಗಿತ್ತಂದ್ರ ಸಾಯಿಬಿಡತಿದ್ದ. ಇದನ್ನ ಕೇಳ್ಲಿಕ್ಕ ನನಗೂ ನಿನಗೂ ಹಕ್ಕೇನದ? ಆದ್ರ ನೀ ನಡುಬರಕ್ಕ ಕಾರುಭಾರ ನಡೆಸಲಿಕ್ಕ ಹೋಗಿದ್ದಿ. ಯಜಮಾನ ಮನ್ಸನ ಮ್ಯಾಲ ಕೈ ಮಾಡಿದ್ದಿ. ಇದು ನಿನ್ನ ತಪ್ಪು ಹೌದಲ್ಲೊ?” ಎಂದು ಪ್ರಶ್ನಿಸಿದ.

ಲಚ್ಮಿ ಮಾತಾಡುವ ಮೊದಲೇ ಮುಖಂಡನೊಬ್ಬ ಅನುಮೋದಿಸಿದ- ಈಕಿ ಕಡಿಂದ ಭಯಂಕರ ತಪ್ಪಾಗೇತಿ!”

“ಅದರ ಸಲುವಾಗಿ ಈ ಹೆಣ್ಣುಮಗಳು ಪಂಚಾಯ್ತಿಗ ನೂರೊಂದು ರೂಪಾಯಿ ದಂಡ ತೆರಬೇಕಾಗ್ತದ! ಇದರಾಗ ದುಸರಾ ಮಾತಿಲ್ಲ!” ಎಂದು ಸಭೆ ಖಡಾ ಖಂಡಿತವಾಗಿ ಆಜ್ಞಾಪಿಸಿದಾಗ, ಲಚ್ಮಿ ಸಿಟ್ಟಿನಿಂದ ಸಿಡಿದೆದ್ದಳು- “ಇದೆಂಥ ಪಂಚಾಯ್ತಿ ನಡೆಸೀರಿ? ನಿಮ್ಮ ನ್ಯಾಯಕ್ಕೆ ಬೆಂಕಿ ಹಚ್ಲಿ! ಈ ನೀಚ ಮುದಿಯ ಬರೆ ಸುಳ್ಳಾಡೇ ಆಡ್ತಾನ. ಅದನ್ನ ನೀವೆಲ್ಲ ಖರೆ ಅನ್ನಲಿಕ್ಕೆ ಹತ್ತೀರಿ; ನನ್ನ ಮಾತನ್ನು ಕುಂಡಿಯಿಂದ ಒರೆಸಿ ಹಾಕಲಿಕ್ಕ ಹತ್ತೀರಿ! ”

ಹೆಂಗಸೊಬ್ಬಳು ಪಂಚಾಯಿತರನ್ನು ಈ ರೀತಿ ಬಹಿರಂಗವಾಗಿ ತರಾಟೆಗೆ ತೆಗೆದುಕೊಂಡಿದ್ದು ಇದೇ ಪ್ರಥಮವಾದ್ದರಿಂದ ಅವರ ಕಣ್ಣುಗಳು ಬೆಂಕಿಯುಗುಳಿದವು. “ಪಂಚರ ನ್ಯಾಯ ಅಂದ್ರ ದೇವರ ನ್ಯಾಯ! ಅದನ್ನ ಈಕೆ ‘ಬೆಂಕಿ ಹಚ್ಲಿ ’ ಅಂಬೋದೇನು?ಪೈಲಿ ಕಟ್ಟಬೇಕೆಂದಿದ್ದ ನೂರೊಂದು ರೂಪಾಯಿ

ಅಲ್ಲ, ಮ್ಯಾಲ ಇಪ್ಪತ್ತೈದು ರೂಪಾಯಿ ದಂಡ ಕೊಟ್ಟು 'ನನ್ನ ತಪ್ಪಾತು' ಅಂತ ಪಂಚಾಯಿತರ ಕಾಲು ಬೀಳಬೇಕು!" ಪಾನಮತ್ತ ಕಂಠಗಳು ಕಟ್ಟಪ್ಪಣೆ ಹೊರಡಿಸಿದವು.

ಕೂಡಲೇ ಲಚ್ಮಿ ಶಾಂತರೀತಿಯಿಂದ ಹೇಳಿದಳು: "ನೋಡ್ರಿ ನಿಮ್ಮ ಕಾಲು ಬೀಳಲಿಕ್ಕ, ದಂಡ ತೆರಲಿಕ್ಕ ನಾಯೇನೂ ಮಂದಿ ಹೆಣ ಬೀಳ್ಸಿಲ್ಲ-ಯಾರ ದ್ದಾರ ಮನಿ ಮುರ್ದಿಲ್ಲ...ನನ್ನದೇನೂ ತಪ್ಪಿಲ್ಲಂದಮ್ಯಾಲ ಒಂದ್ ಪೈಸಾನೂ ದಂಡ ಕೊಡುವಾಕಿಯಲ್ಲ ಅದೇನು ಮಾಡ್ಕೊಂತೀರೊ ಮಾಡ್ಕೋರಿ!" ಎನ್ನುತ್ತ ಆಕೆ ಹೊರ ನಡೆದಾಗ, "ಹಿಡೀರಲೆ. ಆ ಹೆಣ್ಣು ಮಗಳನ್ನ ಬಿಡ ಬ್ಯಾಡ್ರಿ!" ಎಂಬ ಸೊಲ್ಲು ಮಾತು ಕೇಳಿಸಿತು.

ಪಂಚಾಯಿತರನ್ನು ಹಂಗಿಸಿ, ಅಪಮಾನಿಸಿದ ತಪ್ಪಿಗೆ ಅವಳನ್ನು ಕಂಬಕ್ಕೆ ಬಿಗಿದು ಇಪ್ಪತ್ತು ಛಡಿ ಏಟು ಹಾಕುವುದೆಂದು ತೀರ್ಮಾನಿಸಲಾಯಿತು. 'ಹೆಣ್ಣು ಮಗಳಿಗೆ ಅಂಥ ಭಾರಿ ಶಿಕ್ಷೆ ಕೊಡುವುದು ಬೇಡ' ಎಂದು ಕೆಲವರು ಭಿನ್ನಾಭಿಪ್ರಾಯ ವ್ಯಕ್ತಪಡಿಸಿದಾಗ "ಈಕಿನ ನೋಡಿ ಬ್ಯಾರೆ ಹೆಣ್ಣುಮಕ್ಳು ಸಹಿತ ಹಿಂಗೇ ತಿರುಗಿಬಿದ್ದರಂದ್ರ, ನಾಳೆ ಗಂಡು ಮಕ್ಳು ಬಾಳ್ವೆ ಮಾಡೋದ್ ಹ್ಯಾಂಗ? ಅದಕ್ಕ ಊರ ಪಂಚಾಯಿತರ ನ್ಯಾಯಕ್ಕ ಹೆಸರಿಡೋರ ಫಜೀತಿ ಏನಾಗತೈತಿ ಅಂಬೋದನ್ನ ಮಂದಿಗ್ ತಿಳಿಸಬೇಕಾಗೈತಿ! ಕಾರಣ-ಈಕಿಗ ಶಿಕ್ಷಾ ಆಗಲಿಕ್ಕs ಬೇಕು!" ಎಂದು ಪಂಚಾಯಿತರು ವಾದಿಸಿದರು.

ಅಪರಾಧಿನಿಯನ್ನು ಚಾವಡಿ ಎದುರು ಕಲ್ಲುಕಂಬಕ್ಕೆ ಹಗ್ಗದಿಂದ ಬಿಗಿಯಲಾಗಿತ್ತು. ಹಬ್ಬದ ದಿನಗಳಲ್ಲಿ ಬಲಿಪಶುಗಳ ರುಂಡ ಹಾರಿಸುವುದರಲ್ಲಿ ಪ್ರವೀಣನಾದ ಲಾಲು ಕೈಯಲ್ಲಿ ಛಡಿ ಹಿಡಿದು ನಿಂತ. ತಮಾಶೆ ನೋಡಲು ಇಡೀ ಹಳ್ಳಿಯೇ ಅಲ್ಲಿಗೆ ಬಂದು ಜಮಾಯಿಸಿತ್ತು. ಯಾತನೆ ಪಡುತ್ತ ಲಚ್ಮಿಯ ಮನೆಯಲ್ಲಿ ಮುಸುಗಿಕ್ಕಿ ಮಲಗಿದ್ದ ಸೋನಿಯೂ ಎದ್ದು ಬಂದಳು. ಕಲ್ಲುಕಂಬದ ಬಳಿ ಹೋಗಿ ನಿಂತು, ಪಂಚಾಯಿತರನ್ನು ಉದ್ದೇಶಿಸಿ ಕೈ ಮುಗಿದು ಹೇಳಿದಳು.—"ಯಪ್ಪಾ, ಯಣ್ಣಾ, ನಿಮಗ ಬೇಡಿಕೊಳ್ತೀನಿ. ಲಚ್ಮತ್ತಿ ಕಡೆ ಏನೇನೂ ತಪ್ಪಿಲ್ಲ. ಈಗಾಗಿರೋದೆಲ್ಲಾ ನನ್ನ ಸಲುವಾಗೇ-

ಆಗೈತಿ. ನೀವು ಬಡಿಬೇಕಾಗಿರೋದು ನನ್ನನ್ನ. ಅದಕ್ಕ ಆಕಿನ ಬಿಟ್ಟು ನನ್ನ ಕಟ್ಟಿಹಾಕಿ ಬಡೀರಿ!"

ಆದರೆ ಅವಳ ಬೇಡಿಕೆ ತಿರಸ್ಕೃತವಾಯಿತು; "ಯಾರು ತಪ್ಪ ಮಾಡ್ತಾರ ಅವರು ಶಿಕ್ಷೆ ಅನುಭವಿಸಬೇಕಾಗ್ತದ. ಪಂಚಾಯಿತರಿಗ ಪರೆಶಾನ ಮಾಡಿದಾಕಿನ ಬಿಟ್ಟು ನಿನಗ ಹ್ಯಾಂಗ ಶಿಕ್ಷಾ ಕೊಡಲಿಕ್ಕ ಬರ್ತದ?—ಸಾಧ್ಯಿಲ್ಲ ದೂರ ಸರಿ ತಂಗಿ." ಎಂದು ಸಲಹೆ ಮಾಡಿದರು ಮುಖಂಡರು.

ಆದರೆ ಸೋನಿ ಅಲ್ಲಿಂದ ಕದಲಲಿಲ್ಲ. "ಹ್ಞೂಂ ಲಗಾಯಿಸು ಲಾಲು. ಹಿಂದಾಗಡಿ ತಾನs ಸರಿತಾಳ" ಎಂದು ಅನುಮತಿ ಇತ್ತೊಡನೆ, ಸಜ್ಜಾಗಿ ನಿಂತಿದ್ದ ಲಾಲು ಹುರುಪಿನಿಂದ ಛಡಿ ಬೀಸತೊಡಗಿದ. ಲಚ್ಮತ್ತಿಗೆ ಬೀಳ ಬಹುದಾದ ಏಟುಗಳನ್ನು ತಪ್ಪಿಸುವ ಉದ್ದೇಶದಿಂದ ಸೋನಿ ಅವಳೆದುರಿಗೆ ರಕ್ಷಣಾತ್ಮಕವಾಗಿ ನಿಂತಿದ್ದರಿಂದ ಏಟು ಅವಳಿಗೇ ಬೀಳಲಾರಂಭಿಸಿದವು. "ನನ್ನ ಮೈಮ್ಯಾಲ ಕೈಮಾಡಲಿಕ್ಕ ಹಚ್ಚಿರೋರ ಮಂತಾನ ಸತ್ಯಾನಾಶವಾಗಿ ಹೋಗತೈತಿ! ಎಷ್ಟು ಬಡಿತಾನೋ ಬಡೀಲಿ. ನೀ ದೂರ ಸರಿದುಬಿಡು ತಂಗಿ. ತಲಿಗಿಲಿಗ ಬಡೀತಂದ್ರ ನೀ ಸಾಯ್ತಿದೀ!" ಎಂದು ಲಚ್ಮಿ ಕಳಕಳಿಯಿಂದ ಕೂಗಾಡಿದರೂ, ಸೋನಿ ಅಲುಗದೇ ಅಚಲವಾಗಿ ನಿಂತಳು.

"ಎಷ್ಟು ಜಿದ್ದು ಮಾಡ್ತಾಳಲ್ಲ ಈ ಹೆಣಮಗಳು. ಅದಕ್ಕs ಬಿಡು, ಆ ಮಾನ್ಯಾ ಈಕಿಗ ಎಮ್ಮಿಗ ಬಡಿದ್ಹಂಗ ಬಡಿಯೂದು! ಎಳೆದು ದಬ್ರಿ ಆಕಿನ ಅತ್ತಾಗ್ ದೂರ!" ಮುಖಂಡರು ಆಜ್ಞಾಪಿಸಿದೊಡನೆ ಒಂದಿಬ್ಬರು ಹೈದರು ಬಂದು, ಸೋನಿಯ ತೋಳು ಹಿಡಿದು ದರದರನೆ ಎಳೆದೊಯ್ದು ಆಚೆ ದಬ್ಬಿ ದರು: ಮುಖಂಡರಲ್ಲೊಬ್ಬನಾದ ಕಾಶಪ್ಪ ಕೈಸನ್ನೆ ಮಾಡಿದ. ಲಚ್ಮಿಯ ಮೈಮೇಲೆ ಛಡಿಏಟು ಬೀಳಲಾರಂಭಿಸಿದವು. ನೆರೆದವರಲ್ಲಿ ಕೆಲವರು 'ಅಯ್ಯೊ ಪಾಪ!' ಎಂದು ಮರುಗಿದರೆ ಮತ್ತೆ ಕೆಲವರು ಅದೊಂದು ಮನರಂಜನೆಯಾಟ ಎಂಬಂತೆ ವೀಕ್ಷಿಸಿದರು. ಸೋನಿ ಎತ್ತರದ ದನಿಯಲ್ಲಿ ಅಳುತ್ತ ಪಂಚಾಯಿತ ರನ್ನು ಶಾಪಳಿಸುತ್ತಿದ್ದಳು. ಅವಳ ಜೊತೆಯಲ್ಲಿ ಸೀತಾ-ಶಾರದಿ ಹಾಗೂ ಕಾಳಜ್ಜಿ ಸಹ ಅಳತೊಡಗಿದರು.

ಅದೇ ಸಮಯಕ್ಕೆ ಖಾಕಿ ಪ್ಯಾಂಟು, ಅಂತಹದೇ ಅಂಗಿ ಧರಿಸಿದ್ದ ಗಡ್ಡಧಾರಿ ತರುಣನೊಬ್ಬ ಅಲ್ಲಿಗೆ ಧಾವಿಸಿ ಬಂದು "ಏಯ್ ಸಾಕು ನಿಲ್ಸು-ಹೊಡೀಬ್ಯಾಡ ಆ ಅಮ್ಮನ್ನ!" ಎನ್ನುತ್ತ ಲಾಲುವಿನ ಕೈಯಿಂದ ಛಡಿಯನ್ನು ಅನಾಮತ್ತಾಗಿ ಕಸಿದುಕೊಂಡ.

ಆಗಂತುಕನೊಬ್ಬ ಹಠಾತ್ತನೆ ಹಾಜರಾಗಿ ತಡೆಯಾಜ್ಞೆ ಹೊರಡಿಸುತ್ತಿರುವುದನ್ನು ಕಂಡು ನೆರೆದವರೆಲ್ಲ ಕ್ಷಣಕಾಲ ದಿಙ್ಮೂಢರಾದರು. ಪಂಚಾಯಿತನೊಬ್ಬ ಸಾವರಿಸಿಕೊಂಡು ಕೇಳಿದ "ನೀ ಯಾವತ್ನೋ ತಮ್ಮಾ ನಮ್ಮೂರ ನ್ಯಾಯದಾಗ ಕೈ ಹಾಕಂವಾ?"

"ನಾ ಯಾವಾತ್ನಾರ ಆಗಿರುವಲ್ಲನ್ಯಾಕ. ಪೈಲಿ ನೀವೇನು ಮಾಡಲಿಕ್ಕ ಹತ್ತೀರಿ ಅಂಬೋದನ್ನ ವಿಚಾರ ಮಾಡಿ ನೋಡ್ರಿ. ಕಾನೂನು ಪ್ರಕಾರ ಹೆಣ್ಣು ಮಕ್ಕಳನ್ನ ನೀವಲ್ರು ಕೂಡಿ ಈ ರೀತಿ ಕಂಬಕ್ಕ ಕಟ್ಟಿ ಬಡಿತಿರೋದು ಭಾರಿ ಅಪರಾಧ ಆಗ್ತದ. ಇಷ್ಟಕ್ಕs ನೀವು ಹಿಂದ ಸರದ್ರಿ ಅಂದ್ರ ನೆಟ್ಟಗಾತು. ಇಲ್ಲಕ್ಕಂದ್ರ ನಾ ಪೋಲಿಸರಿಗ ದೂರು ಕೊಡ್ತೇನಿ ನಿಮ್ಮನ್ನೆಲ್ಲ ಸಾಲುಹಚ್ಚಿ ಕೋರ್ಟಿಗೆಳಿತೇನಿ! 'ನ್ಯಾಯ ಅಂಬೂದೇನು ಅನ್ನೋದು ನಿಮಗೆಲ್ಲ ಅಲ್ಲಿ ಗೊತ್ತಾಗ್ತದ!' ಎಂದ ತರುಣ.

ಸಭೆಯಲ್ಲಿ ಗುಜುಗುಜು ಪ್ರಾರಂಭವಾಯಿತು. ಪೋಲಿಸರು, ಕೋರ್ಟು, ಕಚೇರಿ ಎಂಬಂತಹ ಶಬ್ದಗಳು ಪಂಚಾಯಿತರನ್ನು ಭೀತಿಗೀಡು ಮಾಡಿದವು. 'ಯಾರೀತ! ಖರೇ ಪೋಲಿಸನೇ ಬಂದುಬಿಟ್ನೋ ಹ್ಯಾಂಗ!....' ಎಲ್ಲರ ಸಂದೇಹಾತ್ಮಕ ದೃಷ್ಟಿ ಆಗುಂತಕನ ಮುಖದಲ್ಲಿ ನೆಟ್ಟಿತು. ತಂತಮ್ಮ ಭಟ್ಟಿ-ಸರಾಯಿಯ ಗಡಿಗ ಮಡಿಕೆಗಳ ಸುರಕ್ಷತೆಯ ಬಗ್ಗ ಕೆಲವರು ಆತಂಕಗೊಂಡರು.

"ಈ ಹೆಣಮಗಳು ಘನ ಸೊಕ್ಕಿನಾಕಿ ಅದಾಳೋ ಯಪ್ಪ! ಗಂಡು ಮಕ್ಕಳನ್ನ ಸುದ್ದ ಬಡಿತಾಳ! ಅದಕ್ಕ ಇಂಥ ಶಿಕ್ಷಾ ಕೊಡಬೇಕಾತು ಅಂದ್ಹಂಗ ನೀ ಯಾರಂಬೋದ ತಿಳೀಲಿಲ್ಲವಲ್ಲ ತಮ್ಮಾ' ಮುಖಂಡನೊಬ್ಬ ಅನುನಯದಿಂದ ಕೇಳಿದ.

"ನಾ ಒಬ್ಬ ಸ್ವಯಂ ಸೇವಕ. ಇದೇ ಊರಾಂವ. ನಿಮ್ಮ ಬಳಗದ ಮನುಷ್ಯಾನೇ ಅದೀನಿ!"

"ಗಮ್ಮತ್ತಿಗ ಹಂಗಂತಾನ!" ಎಂದು ಕೆಲವರು ನಕ್ಕರು.

"ಖರೇವಾ! ಇದೇ ಊರವನಾ! ನಮ್ಮ ಕುಲದವನಾ?!" ನಂಬಿಕೆ ಸಾಲದೆ ಕೆಲವರು ಪುನಃ ಪ್ರಶ್ನಿಸಿದರು.

"ಹೌದು. ನಿಮ್ಮ ಊರವನೇ ನಿಮ್ಮ ಕುಲದವನೆ" ಎಂದು ಪುನರುಚ್ಚರಿಸಿ ಹರಸಿಂಗನತ್ತ ನೋಡಿದ. ಮುದುಕ ತನ ಹಣೆಗೆ ಅಂಗೈ ಹಚ್ಚಿ ಹೊಸಬನ ಅಂತರಾಳವನ್ನು ಬಗೆಯುವವನಂತೆ ದಿಟ್ಟಿಸಿ ನೋಡುತ್ತಿದ್ದ. ತರುಣ ಚಟ್ಟನೆ ಮುಖ ತಿರುವಿಕೊಂಡು ಲಚ್ಮಿಯನ್ನು ಕುರಿತು "ನಡೀ ದೊಡ್ಡವ್ವ. ಮನೆಗೆ ಬಿಟ್ಟು ಬರ್ತೀನಿ ನಿನ್ನನ್ನ " ಎಂದು ಆಕೆಯನ್ನು ಮನೆಗೆ ಕರೆದೊಯ್ಯಲು ಸಿದ್ಧನಾದ.

ಕೂಡಲೆ ಪೂಜಾರಿ ಕಾಶಪ್ಪನ ದೇಹ ಗಡಗಡನೆ ನಡುಗಲಾರಂಭಿಸಿತು. ಬಾಯಿಂದ 'ಅಕ್ಷೆ ಅಕ್ಷಿ...!' ಎಂಬ ವಿಚಿತ್ರ ಧ್ವನಿ ಹೊರಟಿತು. "ನಿಂದ್ರಿ ತಮ್ಮ, ಪೂಜಾರಿ ಮೈಮ್ಯಾಲ ದೇವಿ ಬಂದಾಳ! ಆಕಿ ಏನಪ್ಪಣೆ ಕೊಡ್ತಾಳೋ ನೋಡೂನು " ಎಂದು ತರುಣನನ್ನು ತಡೆಹಿಡಿಯಲಾಯಿತು.

"ಏನ್ ತಾಯಿ, ಇಷ್ಟು ತುರ್ತಾಗಿ ಬಂದುಬಿಟ್ಯಲ್ಲ ನಮ್ಮವ್ವಾ! ನಮ್ಮಿಂದ ಏನ್ ತಪ್ಪಾತವ್ವಾ." ಸಭಿಕರು 'ತಾಯಿ'ಗೆ ಅಡ್ಡಬಿದ್ದು ಆಕೆ ದಯಮಾಡಿಸಿದ ಕಾರಣ ವಿಚಾರಿಸಿದರು.

"ನಿಮ್ಮ ನಿಮ್ಮ ಜಗಳದಾಗ ನನ್ನ ಮರೆತೇ ಬಿಟ್ಟಿರಲ್ರೋ....ನೀವೆಂಥ ಮಕ್ಕಳ್ರೋ...!" ಅಮ್ಮ ವಿಚಿತ್ರ ಶಬ್ದಗಳನ್ನು ಹೊರಡಿಸುತ್ತ, ತನ್ನ ಅಭಿಪ್ರಾಯ ವ್ಯಕ್ತಪಡಿಸಿ, ಸಿಟ್ಟು ಕಾರಿದಳು.

"ತಿಳುವಳಿಕಿ ಇಲ್ಲದ ನರಮನ್ಸರು ತಾಯಿ ನಾವು! ನಿನ್ನ ಮಕ್ಕಳ ತಪ್ಪನ್ನ ಹೊಟ್ಟೆಯಾಗ ಇಟ್ಕೊಂಡು ಮುಂದಿನ ಹಾದಿ ತೋರ್ಸವಾ!" ತಾಯಿ ಎದ್ದು ನಿಂತಳು. ಮೈಯನ್ನು ಅತ್ಯಂತ ಜೋರಾಗಿ ನಡುಗಿಸುತ್ತ, ಕೂಗಾಡುತ್ತ ಸಭೆಯಲ್ಲಿ ಓಡಾಡತೊಡಗಿದಳು. ಜನ ಭೀತರಾಗಿ ದೂರ ದೂರ ಸರಿದು

ನಿಂತರು. "ಈಗ ನ್ಯಾಯ ಮಾಡಿದ ಹೆಣುಮಗಳ ಕಡಿಂದ, ಬರೋ ಮಂಗಳ ವಾರ ದಿನ ನನಗೊಂದು ಟಗರು ಮರಿಯು ಎಡೆಯಾಗಬೇಕು....! ಏನಂತಾಳ್ರೋ ಆಕಿ...?" ತಾಯಿ ಗರ್ಜಿಸಿದಳು.

ನೆರೆದ ಜನ ಲಚ್ಮಿಗಾಗಿ ಹುಡುಕಾಡಿದರು. ಅವಳಾಗಲಿ ಆ ತರುಣನಾಗಲಿ ಅಲ್ಲಿ ಕಾಣಿಸದಾಗ ಎಲ್ಲರಿಗೂ ನಿರಾಶೆಯಾಯಿತು. "ಎಷ್ಟು ಸೊಕ್ಕದ ನೋಡು! ಹೊಂಟು ಹೋಗ್ಯಾಳ... ಮನ್ಸರ ಅಂಜಿಕಿ ಇಲ್ಲಿಕ್ಕಂದ್ರ ಬ್ಯಾಡ; ದೇವರ ಅಂಜಿಕಿಯಾರ ಬ್ಯಾಡೇನು ಆಕಿಗ?!"

ದೇವಿಯು ಕೋಪ ಈಗ ಹರಸಿಂಗನತ್ತ ಹೊರಳಿತು-"ಎಲ್ಲದಾನ ಆತನ ಮಗ...ಕರೀರೋ ಇಲ್ಲಿ....!"

"ಎಲ್ಲಪ್ಪಾ ಮುತ್ಯಾ? ಮಾನ್ಯಾ ಎಲ್ಲದಾನ?" ಮಂದಿ ಕೇಳಿದರು.

"ನಿನ್ನೆ ದಿನ ಊರಿಗ ಹ್ವಾದೋನು ಇನ್ನ ಬಂದಿಲ್ರಪ್ಪ....'ಅಮ್ಮ'ಗ ಗೊತ್ತಿರಲಾರದ ಸುದ್ದಿ ಏನದು?" ಹರಸಿಂಗ್ ತಣ್ಣಗೆ ಉತ್ತರಿಸಿದ.

"ಆತನ ಒಂದ್ ಹರಕಿ ಹಂಗೇ ಬಾಕಿ ಉಳದದ—ಮಂಗ್ಯಾರದ ದಿನ ಅಂದ ನನಗ ಟಗರ ಮರಿ ತಂದೊಪ್ಪಿಸಬೇಕು!" ದೇವಿ ಆಜ್ಞಾಪಿಸಿದಳು.

"ಯಾವ ಬಾಕಿನೂ ಇಲ್ವಲ್ಲಾ ತಾಯಿ! ಎಲ್ಲಾ ತೀರಿಸಿ ಬಿಟ್ಟಾನ!" ಹರಸಿಂಗ್ ಕೈಜೋಡಿಸಿ ವಾದಿಸಿದ.

"ಹರಕಿ ಮಾಡ್ಕೊಳ್ಳೋ ಕಾಲಕ್ಕಷ್ಟೆ ನಿಮಗೆಲ್ಲ ನನ್ನ ನೆನಪಿರ್ತದ್ರೋ! ಹಿಂದಾಗಡಿ ನಾನ್ಯಾರೋ ನೀವ್ಯಾರೋ ಆಗಿಬಿಡ್ತೀರಿ! ಹ್ಞೂಂ!" ದೇವಿ ಹೂಂಕರಿಸಿದಳು.

ಹರಸಿಂಗ್ ಜ್ಞಾಪಿಸಿಕೊಳ್ಳಲು ಪ್ರಯತ್ನಿಸಿದ. ಆದರೆ ನೆನಪಾಗಲಿಲ್ಲ.

"ಏನೋ ತಾಯಿ, ನನಗ ದ್ಯಾಸಾಗೋದಿಲ್ಲ. ಸಿಟ್ಟಾಗಬೇಡ ನಮ್ಮವ್ವ. ಮಾನ್ಯಾ ನಿನ್ಮಗ. ಆತನ ಬೆನ್ನಿಗಿದ್ದು ಕಾಪಾಡ್ಕೊಳ್ಳೋ ಜುಮ್ಮೇದಾರಿ ನಿಂದು. ನಿನ್ನ ದಯ ಇತ್ತಂದ್ರ ಒಂದಲ್ಲ ಎಡ್ಡು ಟಗರು ತಂದು ನಿನ್ನ ಪಾದಕ್ಕ ಒಪ್ಪಿಸ್ತಾನ!"

ದೇವಿ ಪ್ರಸನ್ನಳಾದಳು. ಮಂದಿ ಹರ್ಷಭರಿತರಾದರು.

"ತಾಯಿ, ಒಂದೇ ಒಂದು ಇಚಾರದಾಗೆ ನಿನ್ನ ಮಕ್ಕಳಿಗೆಲ್ಲಾ ನಿನಮ್ಯಾಲ ಭಾಳ ಬೇಜಾರಾಗ್ಯೆತಿ!" ಮುತ್ಯನ ಬಗ್ಗೆ ಗೌರವವುಳ್ಳವನೊಬ್ಬ ಭಾವುಕನಾಗಿ ದೇವಿಯನ್ನು ದೂರಿದ.

"ಏನೋ ಅದು?" ದೇವಿಯ ಸಿಟ್ಟು ಮರುಕಳಿಸಿತು.

"ಅಂಜಿ ಅಂಜಿ ಕೈಮುಗಿಯೋರಿಗೇ, ನೀ ಕೇಳಿದ್ದಂಗೆಲ್ಲ ಕೊಡೋರಿಗೇ ಕಾಡ್ತಿದ್ದಿ! ನಿನಗ 'ಕ್ಯಾರೆ' ಅನ್ನಲಾರದೋರ ಕೂದಲೂ ಕೊಂಕಿಸುವಲ್ಲಿ! ನಿನ್ನ ಕಡೆ ಹೊಳ್ಳಿ ಸಹಿತ ನೋಡಲಾರದ್ದಂಗ ಮನಿಗ ಹೊಂಟು ಹ್ವಾದಳಲ್ಲಾ ಆ ಲಚ್ಮಿ-ಆಕಿಗೇನಾರ ಶಿಕ್ಷಾ ಕೊಡ್ತಿಧಿಯೇನು ನೀನು!'' ಭಕ್ತ ಭಾವಾವೇಶದಿಂದ ಗುಡುಗಿದಾಗ, ದೇವಿ ಅಟ್ಟಹಾಸದ ನಗೆ ಚೆಲ್ಲಿ ನುಡಿದಳು. "ಹುಚ್ಚುಮಗನೇ, ಆಕಿ ಗಂಡನ್ನ ಕಸಗೊಂಡೋರು ಯಾರು ಅಂತ ತಿಳಿದಿ! ಆಕಿ ಮಗನ್ನ ಮಾಯ ಮಾಡಿದವಳುಯಾರಂತ ತಿಳ್ದೀ?! ಆಕಿನ ಒಂಟಿ ಪರದೇಸಿ ಮಾಡಿ ನರಳ್ಯಾಡಿಸ್ತಿರೋಳು ಯಾರಂತ ತಿಳಿದಿ!? ಈವತ್ತು ಆಕಿ ನನ್ನನ್ನ ತಾತ್ಸಾರ ಮಾಡಿ ಹೋಗ್ಯಾಳಲ್ಲ...! ಇನ್ನ ಮೂರಂದ್ರ ಮೂರೇ ತಿಂಗಳದಾಗ ನೋಡೋ ಯಾರ ಹೆಣ ಬೀಳ್ತದಂಬೋದನ್ನ! ಅದನ್ನೆಲ್ಲ ಕಂಡಮ್ಯಾಲಾದೂ ನನ್ನ ಮಾತನ್ನ ನಂಬ್ತಿದಿ ಹೋಗೋ ಮಗನ!..." ದೇವಿ ತುಂಬ ವಿಶ್ವಾಸದಿಂದ ನುಡಿದ ಭವಿಷ್ಯವಾಣಿಯನ್ನು ಕೇಳಿ ನೆರೆದವರೆಲ್ಲ ಭಯ ಭಕ್ತಿಯಿಂದ ಅಡ್ಡ-ಉದ್ದ ಬಿದ್ದರು.

ಲಚ್ಮಿ ಬಗ್ಗೆ ಅನುಕಂಪವುಳ್ಳ ಕೆಲವು ಹೆಂಗಸರು ಈ ಸುದ್ದಿಯನ್ನು ಮುಟ್ಟಿಸಲು ಅವಳ ಮನೆಗೆ ಬಂದರು. ಲಚ್ಮಿ-ಸೋನಿಯರೊಡನೆ ಆ ತರುಣನು ಅಲ್ಲಿರುವುದನ್ನು ಕಂಡು, ತಾವು ತಂದ ಸುದ್ದಿ ಮುಟ್ಟಿಸುವುವನ್ನು ಮರೆತು, ತರುಣನ ಬಗ್ಗೆ ಕುತೂಹಲಗೊಂಡರು.

"ಹೆಸರೇನು ತಮ್ಮಾ ನಿಂದು?" ಒಬ್ಬಾಕೆ ಕೇಳಿದಳು.

"ಚಂದು ಅಂತ."

"ಏನು ದಂಧಾ ಮಾಡ್ತಿದ್ದಿ?"

"ಗಾಡಿ ನಡೆಸತೀನಿ."

"ಊರು?"

"ಇದೇ ಊರು."

"ಏಕಾ ಏಕಿ ಎಲ್ಲಿಂದ್ಲೋ ಬಂದ್ ಇದೇ ಊರಾಂವ ಅಂತಿದ್ಧಿ. ಇದಕ್ಕ ನಾವು ಹ್ಯಾಂಗ ಒಪ್ಪಿಕೊಳ್ತೀವಿ ಹೇಳು !"

"ನೀವು ಒಪ್ಪಲಿಲ್ಲಂದ್ರೂ ನಂದು ಇದೇ ಊರು, ಇಲ್ಲಿಕ್ಕಂದ್ರ ಇಂಥದ್ದೇ ಒಂದೂರು. ನಾನೂ ನಿಮಂಗೇ ಒಬ್ಬ ಮನುಷ್ಯ ..."

"ಇರಲಿ. ಹಂಗಾದ್ರ ನಿಮಪ್ಪನ ಹೆಸರೇನು ಹೇಳು" ಹೆಂಗಸರು ಪಟ್ಟು ಹಿಡಿದು ಪ್ರಶ್ನಿಸಿದರು.

"ಆತ ಯಾವಾಗ್ಲೋ ಸತ್ತುಹೋಗ್ಯಾನ. ಸತ್ತವರ ಸುದ್ದಿ ಕಟಗೊಂಡ್ ಏನ್ ಮಾಡೋವರಿದ್ದೀರಿ ಬಿಡ್ರಿ !"

"ಅಪ್ಪ ಇದ್ದಿದ್ದs ಖರೆ ಇತ್ತಂದ್ರ ಹೆಸರು ಹೇಳಲ ... ಸತ್ತರೇನಾಯಿತು?"

"ಆತನ ಹೆಸರು ಹೇಳೋದರಾಗೂ ಉಪಯೋಗಿಲ್ಲ. ಕೇಳೋದರಾಗೂ ಉಪಯೋಗಿಲ್ಲ. ಆತನ ಸುದ್ದಿ ಬಿಡ್ರಿ. ಇಲ್ಲಿ ಏನು ನಡೀತು ಹೇಳ್ರಿ. ದೇವ್ರು ಬಂದಂಗಿತ್ತಲ್ಲ ಒಬ್ಬನ ಮೈಮ್ಯಾಲ...."

ಹೆಂಗಸರಿಗೆ ತಾವು ಬಂದ ಉದ್ದೇಶದ ನೆನಪಾಯಿತು. "ಅದನ್ನೇ ಹೇಳಿಕ್ಕ ಬಂದೆವು ಲಚ್ಮವ್ವ. ನಿನ್ನ ಮ್ಯಾಲ ದೇವಿ ಭಯಂಕರ ಸಿಟ್ಟಿಗೆದ್ದಿದ್ದು !" ಎಂದು ಅಲ್ಲಿ ನಡೆದುದೆಲ್ಲವನ್ನು ವರ್ಣಿಸಿದರು. ಮೂರು ತಿಂಗಳೊಳಗಾಗಿ ಹೆಣ ಬೀಳಲಿರುವುದೆಂಬ ಭವಿಷ್ಯವಾಣಿ ಕೇಳಿದೊಡನೆ ದೈಹಿಕವಾಗಿ, ಮಾನಸಿಕವಾಗಿ ನೊಂದಿದ್ದ ಸೋನಿ ಹೋ ಎಂದು ಅಳಲಾರಂಭಿಸಿದಳು. "ನಾ ಹೇಳಲಿಲ್ಲೇನು ಅತ್ತಿ-ಸ್ವಲ್ಪ ಹೊತ್ತು ಅಲ್ಲೇ ನಿಂದ್ರಾಮು ಅಂತ : 'ಅದೇನು ದೇವ್ರು ನಡಿಯು' ಅಂತ ತಾಚ್ಚಾರ ಮಾಡಿ ಮನಿಗ ಬಂದುಬಿಟ್ವಿ. ಈಯಪ್ಪನೂ ಹಂಗೇ ಅಂದುಬಿಟ್ಟ...ಈಗ ನೋಡು!"

"ಈಗ ನೀ ಯಾಕ ಅಳ್ತಿದ್ದೀ ಸೋನಿಬಾಯಿ ?", ಚಂದು ಕೇಳಿದ.

"ಹೆಣ ಬೀಳ್ತದಂತಲ್ಲ...!"

"ಯಾರ ಹೆಣ ಬೀಳೋದು?"

ಸೋನಿಗೆ ಗೊತ್ತಿರಲಿಲ್ಲವಾದ್ದರಿಂದ ಹೆಂಗಸರತ್ತ ನೋಡಿದಳು :

ಅವರು ಪರಸ್ಪರ ಮುಖ ನೋಡಿಕೊಂಡರು. "ಇಂಥಾವರ್ದು ಅಂತೇನೂ ಹೇಳಿಲಿಲ್ಲ. ಒಟ್ಟು ಒಂದ್ ಹೆಣ ಬೀಳಸ್ತಾಳಂತ!"

"ಹುಟ್ಟಿದೋರೆಲ್ಲ ಒಂದಿನ ಹೆಣ ಆಗಲಿಕ್ಕೆ ಬೇಕು. ಆಯುಸ್ಸು ಮುಗಿದಾಗ ಹೆಣ ತಾನೇ ಬೀಳತೈತಿ. ಕಾಶ್ಯ ಏನಂಥ ಭಾರಿ ಸುದ್ದಿ ಹೇಳ್ಯಾನಂತ ಅಳಾಕ ಹತ್ತಿದ್ದಿ? ನೀ ಸುಮ್ನಿರು ಇಂಥಾವ್ನೆಲ್ಲ ನಾ ಭಾಳ ಕಂಡೀನಿ!" ಎಂದು ಲಚ್ಮಿ ಸಮಾಧಾನ ಹೇಳಿದಾಗ ಸೋನಿ ಕಣ್ಣೊರೆಸಿಕೊಂಡಳು. ಅವಳ ಮಾತಿನ ಧಾಟಿ ಇಷ್ಟವಾಗದೆ ಹೆಂಗಸರು ಮೋರೆ ತಿರುವಿಕೊಂಡು ಅಲ್ಲಿಂದ ಎದ್ದು ಹೋದರು.

"ದೊಡ್ಡವ್ವಾ, ನಾನಿನ್ನು ಹೋಗಿಬರಲಾ?" ಎಂದು ಅಪ್ಪಣೆ ಕೇಳುತ್ತ ಚಂದು ಎದ್ದು ನಿಂತ.

"ನೀ ಮಾಡಿದ ಉಪಕಾರಕ್ಕ ನಾ ಯೇನೂ ಕೊಟ್ರು ಕಡಿಮಿನೇ, ಲಗೂ ಅಡಿಗಿ ಮಾಡ್ತೇನಿ ತಮ್ಮಾ. ಉಂಡು ಹೋಗುವಂತಿ ಕೂಡು." ಎಂದು ಲಚ್ಮಿ ಅಡಿಗೆಗಿಡಲು ಹೊರಟಾಗ "ಅದೆಲ್ಲ ಏನೂ ಬ್ಯಾಡ ದೊಡ್ಡವ್ವ ; ನೀ ಸುಮ್ನೆ ಆರಾಮ ತಗೊ. ನಿನ್ನ ಮೈಮ್ಯಾಲ ಬಾಸುಂಡೆ ಮೂಡಿರೋದನ್ನ ನೋಡಿ ನನಗೆ ಸಂಕಟ ಆಗಲಿಕ್ಕ ಹತ್ಯದ...!" ಎಂದ ಚಂದು ನೋವಿನಿಂದ.

ಲಚ್ಮಿ ಆತನ ಮುಖವನ್ನೇ ಬಲುಹೊತ್ತು ನಿಟ್ಟಿಸಿದಳು. ಅವಳ ಕಣ್ಣಿಂದ ನಾಲ್ಕಾರು ಹನಿಗಳು ಜಾರಿದವು. "ನನ್ನ ಗಂಡ-ಮಗನ್ನ ನಾ ಕಳಕೊಂಡ ಮ್ಯಾಲ ಒಬ್ಬ ಗಂಡಸು ಮಗನೂ ನನ್ನ ಮ್ಯಾಲ ಇಷ್ಟು ಕಾಳಜಿ ತೋರ್ಸಿದ್ದಿಲ್ಲ...ನೀ ಯಾ ದೇಸದವನೋ ಏನ್ಕತಿಯೋ. ಹಡದ ಮಗನ್ಹಂಗ ಅಕ್ಕರೆ ತೋರ್ಸಿದಿ!''

ಚಂದು ಉತ್ತರಿಸಲಿಲ್ಲ. ಬದಲಾಗಿ ಕಣ್ಣೀರು ತೊಡೆದುಕೊಂಡ. ಜನ್ಮ ಜನ್ಮ ಬಂಧುವಿನಂತೆ ಪ್ರಿಯನೆನಿಸಿದ್ದ ಆತ ಹೊರಟು ನಿಂತಿದ್ದನ್ನು ಕಂಡು ಸೋನಿ ಹಾಗೂ ಅವಳ ಮಕ್ಕಳ ಮುಖ ಬಾಡಿತು. ಲಚ್ಮಿಗಾದರೂ ಸಹ ಆತನನ್ನು ಅಷ್ಟು ಬೇಗ ಬೀಳ್ಕೊಡಲು ಮನ ಒಪ್ಪಲಿಲ್ಲ. ಬೇಗನೆ ಬೆಲ್ಲದ ಚಹ ಮಾಡಿಕೊಟ್ಟು ''ಕಡೀಗ ಇದನ್ನಾರ ಕುಡಿದು ಹೋಗು ಮಗ'' ಎಂದಳು.

ಚಂದು ಲೋಟ ಖಾಲಿ ಮಾಡಿ, ಅವಳಿಗೆ ಕೃತಜ್ಞತೆ ತಿಳಿಸಿ ಸೀತಾ-ಶಾರದಿಯರ ಗಲ್ಲ ಹಿಡಿದು ಮುದ್ದಿಸಿ, ಸೋನಿಗೂ ಹೋಗಿ ಬರುವುದಾಗಿ ಹೇಳಿ ಅಲ್ಲಿಂದ ಹೊರಟುಹೋದ.

ಮರುದಿನ ಚಂದು ಬಂದಾಗ ಹೊತ್ತು ಆಳೆತ್ತರ ಏರಿತ್ತು. ಒಳಗಡೆ ಲಚ್ಮಿ ರೊಟ್ಟಿ ತಟ್ಟುತ್ತಿದ್ದಳು. ಸೋನಿ ತಲೆ ಬೇನೆಯಿಂದ ಮಲಗಿದ್ದಳು. ಹುಡುಗಿಯರಿಬ್ಬರು ಕಸಪರಿಕೆ ಹಿಡಿದು ಅಂಗಳ ಗುಡಿಸುವ ಆಟದಲ್ಲಿ ನಿರತರಾಗಿದ್ದರು.

ಚಂದು ಬಂದುದನ್ನು ಕಂಡೊಡನೆ ಸೀತಾ ಕೈಯ ಕಸಪರಿಕೆಯನ್ನು ನೆಲಕ್ಕೆ ಹಾಕಿ ಸುದ್ದಿ ಮುಟ್ಟಿಸಲು ಒಳಕ್ಕೆ ಓಡುವುದರಲ್ಲಿದ್ದಳು. ಅಷ್ಟರಲ್ಲಿ ಚಂದು ಅವಳ ಕೈಹಿಡಿದುಕೊಂಡು "ಯಾರು ಬಂದಾರು ಅಂತಿದ್ದಿ ಅವ್ವನ ಮುಂದ?" ಎಂದು ಕೇಳಿದ.

"ನೀ ಬಂದಿದ್ದಿ ಅಂತ ಹೇಳ್ತಿನಿ" ಎಂದುತ್ತರಿಸಿದಳು ಸೀತಾ.

"ನಾ ಯಾರು ಗೊತ್ತದೇನು?"

"ಚಂದು"

"ಚಂದಾಕಾಕಾ ನಾನು, ತಿಳಿತಾ ?" ಎನ್ನುತ್ತ ಅವಳ ಗಲ್ಲ ಹಿಡಿದ. ಸೀತಾ ಕೈಬಿಡಿಸಿಕೊಂಡು ಒಳಗೋಡಿದಳು. "ಲಚ್ಮತ್ತಿ, ಅವ್ವಾ, ಚಂದುಕಾಕಾ ಬಂದಾನ!" ಎಂದು ಡಂಗುರ ಸಾರಿದಳು. ಲಚ್ಮಿ ಹಿಟ್ಟುಗೈಯಿಂದಲೇ ಹೊರ ಬಂದಳು. ಸೋನಿ ತನ್ನ ನೋವೆಲ್ಲ ಮರೆತವಳಂತೆ ಚಟ್ಟನೆ ಎದ್ದು ಕುಳಿತಳು.

"ಬಾ ತಮ್ಮಾ ಒಳಗ," ಲಚ್ಮಿ ಚಾಪೆ ಹಾಸಿ ಸ್ವಾಗತಿಸಿದಳು. ಚಂದು ಕ್ಷೇಮ ಸಮಾಚಾರ ವಿಚಾರಿಸಿ, ತನ್ನ ಕೈಚೀಲದಿಂದ ನಾಲ್ಕು ಸೇಬುಹಣ್ಣುಗಳನ್ನು ತೆಗೆದು ಲಚ್ಮಿಗೆ ಕೊಟ್ಟು "ಎಲ್ರು ತಿನ್ರಿ ದೊಡ್ಡವ್ವ," ಎಂದ.

ಲಚ್ಮಿ ಸೋನಿ ಹಾಗೂ ಮಕ್ಕಳಿಗೆಲ್ಲಾ ತಲಾ ಒಂದೊಂದು ಹಣ್ಣು ಕೊಟ್ಟು ಉಳಿದೊಂದನ್ನು "ನೀ ತಿನ್ನು ತಮ್ಮ ಇದನ್ನ" ಎಂದು ಅತನ ಮುಂದಿರಿಸಿದಳು. "ಅವ್ವಾ, ಇದೆಂಥ ಹಣ್ಣು" ಎಂದು ಮಕ್ಕಳು ಕೇಳಿದಾಗ "ನನಗೂ ಗೊತ್ತಿಲ್ಲವ್ವಾ" ಎಂದುತ್ತರಿಸಿದಳು ಸೋನಿ.

"ಇದು ಸೇಬಿನ ಹಣ್ಣು. ಪ್ಯಾಟೆಮಂದಿ ಇಂಥ ಹಣ್ಣು ಜಗ್ಗಿ ತಿಂತಾರ. ಕಡಕಡಕೊಂಡ್ ತಿನ್ನಿ, ಚಲೋ ಸೀಗಿರ್‍ತಾವ." ಎಂದು ಲಚ್ಮಿ ತಿಳಿಹೇಳಿದಳು. ಚಂದು ತನ್ನ ಜೇಬಿನಿಂದ ಪುಟ್ಟದೊಂದು ಚಾಕು ತೆಗೆದು ತನ್ನೆದುರಿನ ಸೇಬನ್ನು ಎರಡು ಹೋಳಾಗಿಸಿ, ಲಚ್ಮಿಗೊಂದು ಕೊಟ್ಟು ತಾನೊಂದು ಹೋಳನ್ನು ತೆಗೆದುಕೊಂಡ. ''ನೀ ಈಗ ದವಾಖಾನಿಗ ಹೋಗಬೇಕಲ್ಲಾ ಸೋನಿಬಾಯಿ?' ಎಂದು ಕೇಳಿದ ಸೇಬು ಕಚ್ಚಿತಿನ್ನುತ್ತ.

''ಹೋಗಬೇಕು.'' ಎಂದಳು ಸೋನಿ.

''ಬಸ್ಸು ಅದ ಏನು ಅಲ್ಲಿಗೆ ಹೋಗಲಿಕ್ಕ?''

''ಅದ'' ಎಂದು ಸೋನಿ ಹೇಳಿದಾಗ ''ಏನೋ ನೋಡಬೇಕಪ್ಪ, ಅದೂ ಖಾಸಗಿ ಬಸ್ಸು. ಆ ಡ್ರೈವರನ ಮರ್ಜಿ ನೋಡು. ಮನ್ಸಿದ್ರ ನಿಂದರಸ್ತಾನ, ಇಲ್ಲಕ್ಕಂದ್ರ ಬಿಡ್ತಾನ. ನಾವು ನಡಕೊಂಡ್ ಹೋಗಬೇಕು.'' ಎಂದು ತಮ್ಮ ತೊಂದರೆಯನ್ನು ವಿವರಿಸಿದಳು ಲಚ್ಮಿ.

''ಅಲ್ಲಾ ದೊಡ್ಡವ್ವಾ. ಈ ಊರಾಗ ಇಷ್ಟೊಂದು ಮಂದಿ ಗೌಡ್ರು, ಬುದ್ವಂತ್ರು ಅದಾರ. ಭಾಳ ಭಾಳ ನ್ಯಾಯ-ಪಂಚಾಯ್ತಿ ಮಾಡ್ತಾರ. ದಂಡ ಹಾಕ್ತಾರ, ಹೆಂಡ ಕುಡಿತಾರ, ದೇವರ ಹೆಸರ್ಲೆ ಮರಿ ಕಡಿದು ತಿಂತಾರ. ಊರಿಗೊಂದು ದಾರಿ ನೆಟ್ಟಗ ಮಾಡ್ಸೊವಲ್ಲರಲ್ಲ!....''

''ಎಲ್ಲಾ ಅಡ್ಡ ಹಾದಿ ಹಿಡಿದ ಅಡ್ನಾಡಿಗಳೇ ತುಂಬ್ಯಾರೋ ಯಪ್ಪಾ ಈ ಊರಾಗ. ಇನ್ನ ಸೀದಾ ದಾರಿ ಯದಕ್ಕ ಬೇಕಾಗ್ಯದ ಅವರಿಗ?'' ಲಚ್ಮಿ ಕಹಿಯಾಗಿ ಹೇಳಿದಳು.

''ಲಗೂ ತಯಾರಾಗ್ರಿ ಮತ್ತ. ಇಬ್ಬರನ್ನ ದವಾಖಾನಿಗ, ಬಿಟ್ಟು ಹೋಗ್ತೀನಿ. ನನ್ನ ಲಾರಿ ರೋಡಿನಾಗ ನಿಂದರ್‍ಸಿ ಬಂದೀನಿ'' ಎಂದ ಚಂದು. ''ನಿನ್ನ ಲಾರಿ ಐತಾ ಚಂದಪ್ಪಾ?'' ಸೋನಿ ಅಚ್ಚರಿಯಿಂದ ಕೇಳಿದಳು. ''ನನ್ನದಲ್ಲ ಮಾಲಿಕನ ಲಾರಿ ಅದು. ನಾ ಅದನ್ನ ನಡೆಸೋ ಡ್ರೈವರ್ ಅಷ್ಟೆ."

''ಹೌದs ಚಂದು....ನಿನ್ನೆ ದಿನ ನಮಗ ಅಷ್ಟೆಲ್ಲ ತ್ರಾಸಾಗತ್ತೈತಿ

ಅಂಬೋದು ನಿನಗ ಹ್ಯಾಂಗ ತಿಳೀತು?" ನೆನ್ನೆಯಿಂದ ಕೇಳಬೇಕೆಂದಿದ್ದನ್ನು ಈಗ ಕುತೂಹಲದಿಂದ ಕೇಳಿದಳು ಲಚ್ಮಿ.

"ನಾ ಮಾನ್ವಿಲಿಂದ ಇದೇ ರೋಡಿನಾಗ ಲಾರಿ ಓಡಿಸ್ತೀನಿ ದೊಡ್ಡವ್ವ. ಈ ಹಳ್ಳಿಯನ್ನ ನೋಡಬೇಕು ಅನ್ನಿಸಿದಾಗೆಲ್ಲ ಲಾರಿನ ಅಲ್ಲೆ ನಿಲ್ಸಿ, ಇಲ್ಲಿಗ ಬಂದು ಒಂದೆರಡು ಸುತ್ತು ತಿರುಗಾಡಿ ಹೋಗ್ತಿನಿ. ಒಂದೆರಡು ಸರ್ತಿ ನಿನ್ನ ಅಂಗಡಿ ಮುಂದಾಸೇ ಹೋಗೀನಿ! ಹಂಗೇ ನೆನ್ನೆ ದಿನಾನೂ ಇಲ್ಲಿಗ ಬರಬೇಕು ಅನ್ನಿಸ್ತು. ಲಾರಿ ಇಳಿದು ಬಂದೆ. ನೋಡಿದ್ರ ಇಲ್ಲಿ ಅಷ್ಟೆಲ್ಲಾ ಗಡ್‌ಬಡ್ ನಡೆದಿತ್ತು..."

ಹೊತ್ತು ಮುಳುಗುತ್ತಿದ್ದಂತೆಯೇ ಹರೆಯದ ಹತ್ತಾರು ಹುಡುಗಿಯರು ಗುಂಪುಗೂಡಿ ಗುಡಿಯ ಆವರಣದಲ್ಲಿಯೋ ಗೌಡನ ಮನೆಯಂಗಳದಲ್ಲೋ ಒಂದೆರಡು ತಾಸು ಹಾಡಿಕೊಂಡು ನರ್ತಿಸುವುದುಂಟು. ಈ ಹುಡುಗನಿಗೆ ಅದೇನಾದರೂ ಆಕರ್ಷಣೆ ಇದ್ದೀತೆ!? ಎಂಬ ಸಂದೇಹ ಹುಟ್ಟಿತು ಲಚ್ಮಿಗೆ. "ಈ ಕೊಂಪೆಯಾಗ ಅಂಥದ್ದೇನು ಕಂಡ್ಯಪ್ಪ? ಅಲ್ಲಿ ಲಾರಿ ನಿಂದರ್ಸಿ ಇಲ್ಲಿಗ ಬಂದು ಹೋಗಲಿಕ್ಕ? ನಿನ್ನ ದೋಸ್ತರೋ, ಬಂಧು ಬಳಗದೋರೋ ಇಲ್ಲದಾರೇನು?" ಎಂದು ಕೇಳಿದಳು.

ಚಂದು ಕ್ಷಣ ಕಾಲ ಮೌನವಹಿಸಿದ. ಆತ ಏನೆಂದು ಉತ್ತರಿಸುವನೋ, ಹೇಗೆ ಸಮರ್ಥಿಸಿಕೊಳ್ಳುವನೋ ಎಂದು ಲಚ್ಮಿ, ಸೋನಿ ಕುತೂಹಲದಿಂದ ಆತನ ಮೋರೆಯನ್ನು ನೋಡತೊಡಗಿದರು.

"ಈ ಊರಾಗ ನಿಮ್ಮನ್ನ ಬಿಟ್ಟರ ನನಗ ಯಾವ ದೋಸ್ತರೂ ಇಲ್ಲ, ಬಳಗದವರೂ ಇಲ್ಲ ದೊಡ್ಡವ್ವ. ಆದ್ರೂ ಇಲ್ಲಿಗ ನಾ ಯಾಕ ಬರತೇನಿ ಅಂದ್ರ-ನಾ ಹುಟ್ಟಿದ ಹಳ್ಳಿನೂ ಇದರ ಹಂಗೇ ಅದ! ಇಲ್ಲಿರುವಂಥ ಮನಿಗಳೇ ಅಲ್ಲೂ ಅದಾವ. ಥೇಟ್ ಇಲ್ಲಿರುವಂಥ ಸೇವಾಲಾಲನ ಗುಡಿ ಅಲ್ಲೂ ಅದ. ಈ ಊರ ಮಂದಿಗೂ, ನಮ್ಮೂರ ಮಂದಿಗೂ ಸ್ವಲ್ಪರೇ ಫರಕಿಲ್ಲನೋಡು! ಎಲ್ಲಾ ಒಂದೇ ನಮೂನ....! ನಮ್ಮವ್ವ ಇದ್ಲು ....ನನ್ನ ಮ್ಯಾಲ ಅಗದಿ ಜೀವ ಇತ್ತು ಆಕಿಗ. ಎಲ್ಲಿ ಹೋದ್ರೂ ಆಕಿನ ಜೋಡಿ ನಾ ಹೋಗ್ತಿದ್ದೆ. ಹೊಲಕ್ಕೂ ಹೋಗತಿದ್ದೆ...!"

ಚಂದು ಯಾವುದೋ ನೆನಪಿನಲ್ಲಿ ಮುಳುಗಿ ಹೋದವನಂತೆ ಮೌನವಾಗಿ ಕುಳಿತುಬಿಟ್ಟಾಗ "ಕಥಿ ಕೇಳ್ತಿರುಹಂಗ ಅನ್ನಿಸತೈತಿ ಬಿಡಪ್ಪ!" ಎಂದಳು ಲಚ್ಮಿ. ಅವನ ಮಾತಿನಲ್ಲಿ ನಂಬಿಕೆ ಸಾಲದೆ.

"ಕಥೆಗಿಂತಲೂ ಕೆಟ್ಟ ವಿಚಿತ್ರ ಇರತದ ದೊಡ್ಡವ್ವ-ಒಮ್ಮೊಮ್ಮೆ ಬದುಕು!" ಚಂದು ಗಂಭೀರವಾಗಿ ಹೇಳಿದಾಗ "ಅದೇನೋ ಖರೇ ಬಿಡು...ನಿಮ್ಮವ್ವನ್ನ ಭಾಳ ನೆನೆಸ್ಕೊಳ್ತಿದ್ದೀ...ಆಕಿ ಈಗ ಎಲ್ಲದಾಳ?" ಎಂದು ಪ್ರಶ್ನಿಸಿದಳು. "ಆಕಿ ಇಲ್ಲ. ಜ್ವಾಳದ ಹೊಲದಾಗ ಆಕಿನ ಸಮಾಧಿ ಮಾಡ್ತಿದ್ದಿದ್ದನ್ನ ನಾ ಕಣ್ಣಾರೆ ಕಂಡೀನಿ!... ಆಕಿ ಇರಲಾರದ್ದಕ್ಕ ನಾ ಪರದೇಸಿಯಾಗಿದ್ದು!"

ಅವನಾಡಿದ 'ಪರದೇಶಿ' ಎಂಬ ಶಬ್ದ, ಆ ಇಬ್ಬರು ಹೆಂಗಸರ ಹೃದಯವನ್ನು ಹಿಡಿದು ಅಲುಗಾಡಿಸಿತು. ಇದುವರೆಗೂ ಲಚ್ಮಿಯ ಧ್ವನಿಯಲ್ಲಿ ವ್ಯಕ್ತವಾಗುತ್ತಿದ್ದ ಸಂದೇಹದ ಜಾಗದಲ್ಲಿ ಅನುಕಂಪ ತುಂಬಿಕೊಂಡಿತು. "ನೀ ಒಬ್ಬಾತ್ನೇ ಅಲ್ಲೇಳೋಯಪ್ಪ, ನಾವೂ ನಿನ್ನ ಹಂಗೇ ದಿಕ್ಕು ದೆಸ ಇಲ್ಲದೋರೆ ಅದೀವಿ!" ಎಂದು ಕಣ್ಣೊರೆಸಿಕೊಂಡ ಲಚ್ಮಿ "ಬಿಸಿರೊಟ್ಟಿ ಮಾಡೀನಿ ಉಣ್ಣೇಳು" ಎಂದಳು.

"ಉಂಡು ಬಂದೀನಿ ಬ್ಯಾಡ ದೊಡ್ಡವ್ವ." ಎಂದರೂ ಕೇಳದೆ ಸೋನಿ ಹಾಗು ಮಕ್ಕಳೊಡನೆ ಅವನಿಗೂ ರೊಟ್ಟಿ ನೀಡಿದಳು. ಎಲ್ಲರೂ ಊಟಕ್ಕೆ ಕುಳಿತಿರುವಾಗ, ಸೀತೆಯ ನಾಲ್ಕಾರು ಗೆಳತಿಯರು ಬಂದು "ಕುಳ್ಳಿಗ ಬರಂಗಿಲ್ಲೇನ ಸೀತಾ" ಎಂದು ಕರೆದರು. "ಈಗ ಬಂದುಬಿಟ್ಟೆ!" ಎಂದು ಆಕೆ ಗಬಗಬನೆ ಊಟ ಮುಗಿಸಿ, ದೊಡ್ಡದೊಂದು ಪುಟ್ಟಿ ಹೊತ್ತು ಕುಳ್ಳು ಆಯುವುದಕ್ಕೆಂದು ಹೊರಟಾಗ, ಚಂದು ತನಗೇ ಎಂಬಂತೆ ಹೇಳಿಕೊಂಡ. "ಶಾಲಿಗ ಹೋಗೋ ವಯಸ್ಸಿನಾಗ ಕುಳ್ಳು ತರಲಿಕ್ಕ ಹೋಗಬೇಕು!..."

"ಆಕಿನ ಅಪ್ಪ ಕಲ್ತು ಉದ್ಧಾರ ಆಗಿದ್ದು ಅಷ್ಟರಾಗೇ ಐತೇಳು!" ಸೋನಿ ಗೊಣಗಿದಳು. "ಶಾಲಿ ಕಲ್ತು ಕೆಡೋರು ಕಡಿಮಿ ಸೋನಿಬಾಯಿ, ಕಲಿಲಾರ್ದ ಕೆಡೋರೆ ಭಾಳ. ಪ್ರತಿಯೊಬ್ಬ ಮನುಷ್ಯಗೂ ವಿದ್ಯೆಯ ಅವಶ್ಯಕತೆ ಅದ...ಈ ಹಳ್ಳಿ ಮಕ್ಕಳಿಗೆ ಮೊದಲು ಒಂದು ಶಾಲೆ ಬೇಕಾಗ್ಯದ

ಇಲ್ಲೇ ಮಂದಿ ಪ್ರಯತ್ನ ಪಟ್ಟರಂದ್ರ ಒಂದು ತಿಂಗಳಂಬೋದ್ರೊಳಗ ಮಂಜೂರು ಮಾಡಿಸಬಹ್ದು,'' ಎಂದು ಚಂದು ಹೇಳಿದಾಗ ''ಈ ಊರ ಮಂದಿಗ ಹೆಂಡ, ಸರಾಯಿ, ಮಾಂಸ-ಈ ಮೂರು ಬಿಟ್ರ ಮತ್ತೊಂದರ ಕಡೆ ಧ್ಯಾಸ ಇಲ್ಲೊ ತಮ್ಮಾ. ಕಲಿಲಾರದವರಿಗೆ ಎರಡು ಕಣ್ಣು ಇದ್ದರ, ಕಲ್ತವರಿಗ ನಾಕು ಕಣ್ಣು ಅಂಬೋದು ಅವರಿಗೇನಾರೆ ಗೊತ್ತದೇನು'' ಎಂದು ಅವನ ಅಭಿಪ್ರಾಯವನ್ನು ಸಮರ್ಥಿಸಿದಳು ಲಚ್ಮಿ.

ಮತ್ತೆ ಮುಂದುವರಿದು ಕೇಳಿದಳು—''ಹೌದಾ ಚಂದು, ಅಪ್ಪ ಇಲ್ಲಂತಿದ್ದಿ. ಮತ್ತ ನಿನಗ ಸಾಲಿ ಯಾರು ಕಲಿಸಿದ್ರು?''

''ಜೇಲಿನಾಗ ಕಲ್ತೆ!'' ಎಂದು ಆತ ಉತ್ತರಿಸಿದಾಗ ಹೆಂಗಸರಿಬ್ಬರೂ ಅಚ್ಚರಿಯಿಂದ ಕಣ್ಣರಳಿಸಿದರು. ''ಹೌದು ದೊಡ್ಡವ್ವ ನಾ ಅಗದಿ ಸಣ್ಣ ಹುಡುಗ ಇದ್ದಾಗ್ಲೇ-ಸುಳ್ಳು ಸುಳ್ಳೆ 'ಕಳ್ಳ' ಅಂತ ಹಿಡಿದು, ಪೋಲಿಸರು ನನ್ನನ್ನ ರಿಮ್ಯಾಂಡ್ ಹೋಂ ಅಂತ ಇರ್ತಾವ ಮಕ್ಕಳ ಜೈಲು-ಅದಕ್ಕ ಹಾಕಿದ್ರು. ಅಲ್ಲಿ ಅಧಿಕಾರಿ ಭಾಳ ಚಲೋ ಮನುಷ್ಯ. ನನ್ನ ವಿದ್ಯಾಭ್ಯಾಸಕ್ಕ ಯಾವ ಅಡ್ಡಿನೂ ಬರಲಾರದಂಗ ನೋಡಿಕೊಂಡ."

''ಜೈಲಿನಾಗೂ ಸಾಲಿ ಕಲಿಸ್ತಾರೇನು!" ಸೋನಿ ಅಚ್ಚರಿಯಿಂದ ಪ್ರಶ್ನಿಸಿದಳು. ಕಲಿಸ್ತಾರ. ಕಳ್ಳಬುದ್ಧಿ ಬಿಟ್ಟು ವಿದ್ಯೆ ಕಡೆ ಗಮನ ಇಟ್ಟು ಕಲ್ತರ, ಕೆಸರಿನೊಳಗಿನ ಕಮಲದ ಹೂ ಹೊರಬರ್ತದಲ್ಲ-ಹಂಗ ಶ್ಯಾಣೇರಾಗಿ ಅಲ್ಲಿಂದ ಹೊರಗ ಬರಬಹ್ದು. ಇಲ್ಲಂದ್ರ ಅವೇ ಬೂಟುಗಾಲಿನ ಸಪ್ಪಳ ಕೇಳಿಕೋಂತ, ಅವೇ ಕಂಬಿ ಎಣಿಸಿಕೋಂತ ಇರಬೇಕಾಗ್ತದ!"

''ಗೊತ್ತಿರಲಿಲ್ಲ ಬಿಡೋಯಪ್ಪ! ಜೇಲಂದ್ರ 'ಕಳ್ರನ್ನ ಕೂಡಿಹಾಕೊ ಮನಿ' ಅಂತ ಅಷ್ಟೇ ನಾವು ತಿಳಿದಿದ್ವಿ. ಅಲ್ಲೂ ಇದ್ಯೆ ಬುದ್ದಿ ಕಲಿಸ್ತಾರಂದ್ರ ಅಗಾಧ ಆಗ್ತದ ನೋಡು!" ಎಂದು ಲಚ್ಮಿ ಅಚ್ಚರಿ ವ್ಯಕ್ತಪಡಿಸಿದಾಗ ''ಬರೇ ವಿದ್ಯೆ ಬುದ್ಧಿ ಅಷ್ಟೇ ಅಲ್ಲ ದೊಡ್ಡವ್ವ. ಬದುಕಲಿಕ್ಕೊಂದು ಕಸಬು ಸಹಿತ ಕಲಿಸಿಕೊಡ್ತಾರ'' ಎಂದು ವಿವರಿಸಿದ ಚಂದು.

''ನೀ ಎಲ್ಲೀತನ ಕಲ್ತೀದಿ ತಮ್ಮಾ."

"ಹತ್ತರ ಠಾನ ಅಲ್ಲೇ ಕಲ್ತೆ. ಹಿಂದಾಗಡಿ ಒಂದು ಹಳ್ಳಿಯಾಗ ದೊಡ್ಡೋರಿಗ ರಾತ್ರಿ ಸಾಲಿ ಕಲಿಸೋ ಕೆಲಸಕ್ಕೆ ಹಚ್ಚಿದ್ರು. ಅದನ್ನು ಮಾಡಿಕೋಂತ, ಬಿ.ಎ. ಖಾಸಗಿಯಾಗಿ ಓದಿ ಪಾಸು ಮಾಡ್ಕೊಂಡೆ. ಅಷ್ಟು ಹೊತ್ತಿಗೆ ಆ ಊರ ಗೌಡನ ಮಗಳು ಯಾರಿಂದ್ಲೋ ಬಸುರಿಯಾಗಿ ಅಪವಾದ ನನ್ನ ಮ್ಯಾಲ ಬಂತು. ಆ ಹಳ್ಳಿ ಮಂದಿಗೆಲ್ಲ ಗೊತ್ತಿತ್ತು-ಮಾಸ್ತರ ಅಂಥೋನಲ್ಲ ಅಂತ. ಆದ್ರೂ ಸತ ಆ ಮಂದಿ ಗೌಡಗ ಅಂಜ್ತಿದ್ರು. ನ್ಯಾಯ-ಪಂಚಾಯ್ತಿ ಮಾಡಿ-ಮಾಸ್ತರಂದು ತಪ್ಪಿರಲಿ ಬಿಡ್ಲಿ, ಆತ್ನೇ ಆ ಹುಡುಗೀನ ಲಗ್ನ ಮಾಡ್ಕೋಬೇಕು. ಗೌಡ ಮಗಳ ಹೆಸರಿಗ ನಾಲ್ಕು ಕೂರಿಗೆ ಜಮೀನು ಮಾಡಿ ಮಾಡಿಕೊಡಬೇಕು." ಅಂತೆಲ್ಲ ತಾವು ತಾವೇ ತೀರ್ಮಾನ ಮಾಡಿಕೊಂಡ್ರು ನನಗ ಮದ್ವಿಗಿದ್ವಿ ಅಷ್ಟು ಲಗೂ ಬೇಕಾಗಿದ್ದಿಲ್ಲ. ನಾ ಪ್ರೀತಿಸಲಾರದ ಹುಡುಗೀನ ಮತ್ತೊಬ್ಬರ ಒತ್ತಾಯಕ್ಕ ಕಟ್ಟಿಕೊಳ್ಳಲಿಕ್ಕ ನನ್ಮನ್ಸು ಬಿಲ್ಕುಲ್ ಒಪ್ಪಲಿಲ್ಲ. ಕೆಲ್ಸಕ್ಕ ರಾಜೀನಾಮೆ ಕೊಟ್ಟು ಅಲ್ಲಿಂದ ಹೋಟೋದೆ.

ನಾ ಬಿ.ಎ, ಮಾಡೀನಂದ್ರು ಕೆಲ್ಸ ಅಷ್ಟು ಲಗೂ ಎಲ್ಲಿ ಸಿಗಲಿಕ್ಕ ಸಾಧ್ಯದ? ನನ್ನ ದೋಸ್ತ ಒಬ್ಬಾಂವ ನಾರಾಯಣಪುರದಾಗ ಇದ್ದ. ಆತನ ಬಲ್ಲಿ ಹೋದೆ. ಕೃಷ್ಣಾನದಿಗೆ ಡ್ಯಾಂ ಕಟ್ಟಿದ್ರಲ್ಲಾ ಅದರೊಳಗ ಆತ ಲಾರಿ ಡ್ರೈವರ್ ಆಗಿದ್ದ. ಆತನ ಸಹಾಯದಿಂದ ಅಲ್ಲಿ ನನಗೊಂದು ಮೇಸ್ತ್ರಿ ಕೆಲ್ಸ ಸಿಗ್ತು. ಅದನ್ನ ಮಾಡ್ಕೊಂತ ಡ್ರೈವಿಂಗ್-ಅಂದ್ರ-ಲಾರಿ ಗೀರಿ ನಡ್ಸೋದನ್ನೂ ಕಲ್ತುಕೊಂಡೆ. ಹಿಂದಾಗಡೆ ಮಾನ್ವಿಯ ಒಬ್ಬ ಮಾಲಿಕ ತನ್ನ ಲಾರಿಗ ಡ್ರೈವರ್ ಅಂತ ನನ್ನನ್ನ ನೇಮಿಸಿಕೊಂಡಾನ ಹಿಂಗೇ ಬದುಕು ನಡದದ...."

"ಭಾಳ ಕಥಿ ಅದ ಬಿಡಪ್ಪ ನಿಂದು!" ಎಂದು ನಿಟ್ಟುಸಿರು ಹಾಕಿದಳು ಲಚ್ಚಿ. ಮೂವರು ಊಟ ಮುಗಿಸಿ, ಮನೆಗೆ ಬೀಗ ಹಾಕಿ ದವಾಖಾನೆಗೆ ಹೊರಟರು. 'ದಿಬ್ಬ'ದಿಂದ ಅರ್ಧ ಕಿಲೋಮೀಟರು ದೂರ ನಡೆದು ಹೆದ್ದಾರಿಯಲ್ಲಿ ನಿಂತಿದ್ದ ಲಾರಿಗೆ ಹತ್ತಿದರು.

ಚಿಕಿತ್ಸೆಯ ನಂತರ ಚಂದು ಅವರನ್ನು ಮತ್ತೆ ಲಾರಿಯಲ್ಲಿ ಕರೆತಂದು ಅದೇ ಹೆದ್ದಾರಿಯಲ್ಲಿ ಇಳಿಸಿದ. ಕೃತಜ್ಞತೆ ತಿಳಿಸಲು ಹೆಂಗಸರಿಬ್ಬರು ಶಬ್ದ

ಗಳಿಗಾಗಿ ಹುಡುಕುತ್ತಿದ್ದಾಗ-ಆತ ಲಾರಿ ಚಾಲುಮಾಡಿ, ಕೈ ಬೀಸುತ್ತ ಹೇಳಿದ- "ನಾಳೆ ಮುಂಜಾನಿ ಇದೇ ಹೊತ್ತಿಗೆ ಮನೆ ಹತ್ತಿರ ಬರ್ತೇನಿ ತಯಾರಾಗಿರ್ರಿ!''

ಹಾಗೆಂದಿದ್ದವನು ಅದೇ ದಿನ ರಾತ್ರಿ ಎಂಟರ ಸುಮಾರಿಗೆ ಮನೆಗೆ ಬಂದಾಗ ಹೆಂಗಸರಿಬ್ಬರಿಗೂ ಒಳಗೊಳಗೇ ಗುಮಾನಿ ಹುಟ್ಟಿತು. "ನಾಳೆ ಮುಂಜಾನಿ ಬರ್ತೀನಿ ಅಂದಿದ್ಧಿ!....'' ಆತ ಒಳಗಡಿ ಇರಿಸುತ್ತಿದ್ದಂತೆಯೇ ಲಚ್ಚಿ ಕೇಳಿದಳು.

"ನಾಳೆ ಮುಂಜಾನೆ ಆ ಹೊತ್ತಿಗೆ ನಾನಾಗ್ಲೆ ಬೆಂಗಳೂರಾಗ ಇರ್ತೀನಿ ದೊಡ್ಡವ್ವ. ಅದನ್ನ ಹೇಳಿ ಹೋಗಬೇಕು ಅಂತ ಬಂದೆ. ಹಂಗೇ ಗೌಡ್ರ ಮನೆಗೂ ಹೋಗಿಬಂದೆ."

"ಗೌಡ್ರ ಮನಿಗ ಯದಕ್ಕ?!''

"ಅದೇ ವಿಷಯ. ಈ ಹಳ್ಳಿಗ ಶಾಲೆ ಬೇಕು ಅಂದಿದ್ವಲ್ಲ. ಅದರ ಬಗ್ಗ ಮಾತಾಡಲಿಕ್ಕ." ಎಂದು ಅವನಂದಾಗ "ಒಪ್ಪಿಕೊಂಡರೇನು?" ಎಂದು ಕೇಳಿದಳು. "ಒಪ್ಪಿಸೀನಿ. ಅರ್ಜಿ ಬರೆದು ಹತ್ತು ಮಂದಿ ಕೂಡ ಸಹಿ ಮಾಡಿಸಿಕೊಂಡು ಬಂದೀನಿ. ಆ ಕೆಲ್ಸ ಮುಗಿಸಿಕೊಂಡೇ ಬೆಂಗಳೂರಿಂದ ಹೊಳ್ಳಿ ಬರೋದು." ಎಂದ ಆತ, ತನ್ನ ಜೇಬಿನಿಂದ ಇಪ್ಪತ್ತು ರೂಪಾಯಿ ಗಳನ್ನು ತೆಗೆದು ಸೋನಿಯ ಮುಂದಿರಿಸಿದ. ಇದು ಯಾಕೆ? ಎಂಬಂತೆ ಸೋನಿ ಅವನ ಮುಖ ನೋಡಿದಳು.

"ದಿನಾ ದವಾಖಾನಿಗ ಹೋಗಿ ಬಾ ಸೋನಿಬಾಯಿ. ಅಂದ್ರ ಗಾಯ ಲಗೂ ಗುಣ ಆಗ್ತದ. ಈ ರೊಕ್ಕ ನಿನ್ನ ಖರ್ಚಿಗ ಇರಲಿ ಇಟ್ಕೊ. ಕೂಲಿಗ ಹೋದಿಂದ ನನಗ ಹೊಳ್ಳಿ ಕೊಡುವಂತಿ" ಎಂದಾಗ ಸೋನಿ ಸಂಕೋಚದಿಂದ ಲಚ್ಚಿಯತ್ತ ನೋಡಿದಳು. "ಬೆಂಗಳೂರು ಪ್ಯಾಟಿಗ ಹೊಂಟಿದಿ. ಆ ಊರಾಗ ಕಂಡಾಪಟಿ ಖರ್ಚು ಇರ್ತದ. ನೀನೆ ಒಯ್ಯಪ್ಪ ಅದನ್ನ. ಇಲ್ಲಿ ನಮ್ಮದು ಹ್ಯಾಂಗಾರ ಒಂದ್ ನಡೀತದ" ಎಂದಳು ಲಚ್ಚಿ.

"ಮಾಲಕ ಈವತ್ತೇ ಪಗಾರ ಕೊಟ್ಟಾನ ದೊಡ್ಡವ್ವ. ರೊಕ್ಕ ಅದಾವ ನನಬಳ್ಳಿ" ಎಂದು ಎದ್ದು ಹೋದ. ಹಳ್ಳಿಗೆ ಶಾಲೆ ತರುವುದು ತನ್ನ ಖರ್ಚಿಗೆ

ರೊಕ್ಕ ಕೊಡುವುದು ಇವೆಲ್ಲವರ ಹಿನ್ನೆಲೆ ಏನು? ಎಂಬುದು ಸೋನಿಗೆ ಹೇಗೆ ಪ್ರಶ್ನೆಯಾಗಿತ್ತೋ ಲಚ್ಮಿಗೂ ಆತನ ಬಗ್ಗೆ ಅವೇ ಪ್ರಶ್ನೆಗಳಾಗಿ ಉಳಿದಿದ್ದವು. 'ಬರ್ತಾ ಬರ್ತಾ ಏನಿದ್ರೂ ಬಯಲಿಗ ಬರತೈತಿ. ಆತ ಅಸಲಿನೋ, ಖೊಟ್ಟಿನೋ ಅಂಬೋದು ನಾಕ್‌ದಿನ ಹ್ವಾದ್ರ ತಾನೇ ಗೊತ್ತಾಗತೈತಿ' ಎಂದುಕೊಂಡಳು.

ಸೋನಿ ಅಂದಿಗೆ ಲಚ್ಮಿಯ ಮನೆಗೆ ಬಂದು ಒಂದು ವಾರವಾಗಿತ್ತು. ಗಂಡನಾಗಲಿ ಮಾವನಾಗಲಿ ಕರೆಯಲು ಬಂದಿರಲಿಲ್ಲ. ಕರೆಯದೆ ಆ ಮನೆಯಲ್ಲಿ ಕಾಲಿಡಲು ಅವಳಿಗೆ ಬಿಲ್‌ಕುಲ್ ಮನಸ್ಸಿರಲಿಲ್ಲ. ಆದರೂ ಲಚ್ಮತ್ತಿಗೆ ಹೊರೆಯಾಗಿ ಇನ್ನೆಷ್ಟು ದಿನ ಇಲ್ಲಿರುವುದು? ಗಂಡನ ದೆಸೆಯಿಂದಾಗಿ ತಾನು ಯಾರ್ಯಾರ ಋಣಕ್ಕೆ ಒಳಗಾಗುತ್ತಿದ್ದೇನಲ್ಲಾ! ಎಂದು ಅವಳಿಗೆ ಚಿಂತೆ-ಬೇಸರ ಉಂಟಾಗುತ್ತಿತ್ತು. ಗಾಯ ಮಾಯುವವರೆಗೂ ಕೂಲಿನಾಲಿಗೆ ಹೊರಡುವಂತಿಲ್ಲ. ತಾವು ಮೂವರಿಗೂ ತನ್ನ ಗಳಿಕೆಯಲ್ಲೇ ಸಂಬಾಳಿಸುತ್ತಿದ್ದಾಳೆ-ಲಚ್ಮತ್ತಿ. ಸ್ವಂತ ತಾಯಿಯಷ್ಟೇ ಕಾಳಜಿಯಿಂದ ತಮ್ಮ ಚಾಕರಿಗೆ ತೊಡಗಿದ್ದಾಳೆ! "ಅತ್ತಿ ನಾನು ಅಲ್ಲಿಗೆ ಹೋಗಬೇಕು ಅಂತ ಮಾಡೀನಿ" ಎಂದು ಹೊರಡುವ ಪ್ರಸ್ತಾಪವೆತ್ತಿದಳು ಸೋನಿ.

"ಯಾರು ಬಂದು ಕರದ್ರು? ನಿನ್ನ ಗಂಡನೋ, ಮಾವನೋ?" ಎಂದು ಕೇಳಿದಳು ಲಚ್ಮಿ.

"ನನ್ನಂಥ ದಿಕ್ಕಿಲ್ದ ಬೇವರ್ಸಿಗ 'ನೀ ಬಾ' ಅಂತ ಯಾರಾರ ಕರೀತಾರೇನವ್ವ? ನಾನೇ ಹೋಗ್ತಿನಿ. ನನಗ ಇಲಾಜ್ ಮಾಡಿಸಲಿಕ್ಕ ನೂರಿನ್ನೂರು ರೂಪ್ಯಾ ಖರ್ಚು ಮಾಡಿದ್ದಿ. ನನ್ನ ಸಲುವಾಗಿ ಪಂಚಾಯ್ತಿರಿಂದ ಅನಬಾರದ್ದೆಲ್ಲ ಅನ್ನಿಸಿಕೊಂಡಿ. ಛಡಿ ಏಟು ತಿಂದಿ!...ಇನ್ನ ಎಷ್ಟಂತ ನಿನ್ನ ಕಡೀಲಿಂದ ಚಾಕರಿ ಮಾಡಿಸಿಕೊಳ್ಳಲವ್ವ?...ನಾ ಬದುಕಿರೊ ತನಕ ನಿನ್ನ ಪಾದಸೇವೆ ಮಾಡಿದ್ರೂ ತೀರಲಾರದಷ್ಟು ಋಣ ಈಗಾಗ್ಲೇ ಹೊತುಕೊಂಡೀನಿ!..." ಗಂಟಲು ಗದ್ಗದಿತವಾಗಿ ಸೋನಿಗೆ ಮುಂದೆ ಮಾತು ಹೊರಡದಾಯಿತು.

"ನನ್ನ ಹಣೇಬರದಾಗ ನಾ ಒಬ್ಬಾಕಿನsss ತಿಂದು, ಒಬ್ಬಾಕಿನsss ಬದುಕಿ

ಕಡೇಕ ಒಬ್ಬಾಕಿನ್ಽ ಸಾಯೋದು ಇದ್ದೇ ಐತಿ. ಈಗಾರ ಒಂದ್ ನಾಕ್‌ದಿನ ನಿಮ್ಮ ಕೂಡ ತುಂಬಿದ ಮನಿಯಾಗ ಬಾಳ್ವೆ ಮಾಡಾಕ ಹತ್ತೀನಿ....ಮಗಳು ಮೊಮ್ಮಕ್ಳು ನನಗಿಲ್ಲ ಅಂಬೊ ಚಿಂತಿ ಮರೆತೀನಿ!....ನಿನ್ನ ಗಂಡ ನನ್ನ ಮನಿ ಬಾಗ್ಲಿಗ ಬಂದು ಕರಿಯೂತಾನ. ನನ್ನದು ತಪ್ಪಾತು ಅನ್ನೋತಾನ ನಾ ನಿನ್ನ ಆ ಮನಿಗ ಕಳಿಸಂಗಿಲ್ಲ. ಇದೇ ಮನಿಯಾಗ ಇರಬೇಕು ನೀನು!" ಎಂದು ಲಚ್ಮಿ ಖಡಾ ಖಂಡಿತವಾಗಿ ಹೇಳಿದಾಗ, ಸೋನಿಗೆ ಮಾತು ಮೂಕವಾಗಿ ಕೃತಜ್ಞತೆಯ ಹನಿ ಉದುರಿತು.

ಮತ್ತೊಂದು ವಾರ ಕಳೆದಿತ್ತು. "ಮಾನ್ಯಾ ಬಂದಾನ!" ಎಂಬ ಸುದ್ದಿ ಸೋನಿಯ ಕಿವಿಗೆ ಬಿದ್ದಿತು. ಈಸ್‌ದಿನ ಎಲ್ಲಿ ಹೋಗಿದ್ನೊ!? ಎಲ್ಲಾರ ಕಳು ಮಾಡಿ ಜೈಲೇ ಸೇರ್‍ಕೊಂಡಿದ್ನೋ, ಏನ್ ಯಾವಾಕ್ಯಾರ ಬಸವಿ ತೆಕ್ಕಿ ಯಾಗ ಬಿದ್ದಿದ್ನೋ?... ಈಗಾರ ತನ್ನನ್ನ ಕರೀಲಿಕ್ಕ ಬರ್‍ತಾನೋ ಇಲ್ಲೋ ತಾ ಬರದಿದ್ರ ಬ್ಯಾಡ; ಬ್ಯಾರೆ ಯಾರ ಕೈಲಾದ್ರು ಹೇಳಿಕಳ್ಸಿದ್ರ ಸಾಕು. ಹೋಗಿ ನನ್ನ ಮನಿಯಾಗ ನಾ ಸೇರ್‍ಕೋಬೇಕು...!ಇನ್ನು ಮ್ಯಾಲ ಅಂವ ಏನಾರ ಅನ್ನುವಲ್ಲನ್ಯಾಕ. ಎಷ್ಟಾರ ಬಡಿಯೂವಲ್ಲನಾಕ ಸೊಲ್ಲೆತ್ತಬಾರ್‍ದು! ಬಡಿಸಿ ಕೊಂಬೇದು, ದವಾಖಾನಿಗ ಹೋಗೋದು ಪಂಚಾಯ್ತಿ ಮಾಡ್ಸೋದೂ ... ಇಂಥಾವೆಲ್ಲ ನನ್ನಂಥ ತಬ್ಲಿ ಹೆಣ್ಣುಮಗಳಿಗೆ ಹೇಳ್ಸಿದ್ದಲ್ಲ ... "

ಹೊರಗಡೆ ಅಂಗಡಿ ಸಾಮಾನು ಕೊಳ್ಳಲು ಬಂದಿದ್ದ ಸಾಕೀಬಾಯಿ ಲಚ್ಮಿಗೆ ಹೇಳುತ್ತಿದ್ದಳು-"ಮಾನ್ಯಾ ಹಾಂಗ ಬಂದು ಹೀಂಗ ಹೋಗಿಬಿಟ್ಟ. ಯಾ ಊರಿಗ ಹೋದ್ನೋ ಏನೋ....ಮುದಿಯ ಬಾಯಿಬಿಡುವಲ್ಲ! ಆ ಹಳೇ ಹಾದರಗಿತ್ತಿ ಅದಾಳಲ್ಲ ರಮಣಿ-ಆಕಿನೇ ಕೂಳು ಕುಚ್ಚಿ ಹಾಕಲಿಕ್ಕ ಹತ್ಯಾಳ ಮುದುಕಗ. 'ಸೊಸಿನ ಕರಸಿಕೊಂಬಂಗಿಲ್ಲೇನು ಮಗಗ?' ಅಂತ ಕೇಳಿದ್ರ — 'ಅವಳಾಗಿ ಬಂದ್ರು ಸತ ಕರಕೊಂಬಂಗಿಲ್ಲ ಒಳಗ. ಅಲ್ಲೆ ಸಾಯ್ಲಿ ಆ ರಂಡಿ. ನನ್ನ ಮಗ್ಗ ಮತ್ತೊಂದು ಲಗ್ನ ಮಾಡಿಸತೇನಿ!' ಅನ್ನಲಾಕ ಹತ್ಯಾನ ಮುದಿಯ—?"

ಕೇಳಿ ಸೋನಿ ಚಿಂತಾಕ್ರಾಂತಳಾದಳು. ಗಂಡನ ಮನೆಯಲ್ಲಿ ಸ್ಥಾನವಿಲ್ಲ,

ತೌರು ಮನೆಯು ಆಶ್ರಯುವಿಲ್ಲ. ಈಗ ತಾನೇನು ಮಾಡಲಿ? ಎರಡು ಮಕ್ಕಳನ್ನು ಬಾವಿಗೆ ಎಸೆದು ತಾನೂ ಸತ್ತುಬಿಟ್ಟರೆ. ಹೌದು ಅದೊಂದೇ ದಾರಿ. ಕಷ್ಟಪಡುವುದೂ ತಪ್ಪುತ್ತದೆ. ಮತ್ತೊಬ್ಬರಿಗೆ ಕಷ್ಟ ಕೊಡುವುದೂ ತಪ್ಪುತ್ತದೆ....!

ಬೆಂಗಳೂರಿನಿಂದ ಮರಳಿಬಂದ ಚಂದು ಕೈಚೀಲದಿಂದ ದ್ರಾಕ್ಷಿ, ಸಪೋಟ ತೆಗೆದು ಎಲ್ಲರಿಗೂ ಹಂಚುತ್ತ ಸೋನಿಯ ತಲೆಗಾಯದ ಬಗ್ಗೆ ವಿಚಾರಿಸಿಕೊಂಡಾಗ, ಸಾಯುವ ವಿಚಾರ ತಲೆಯಿಂದ ದೂರ ಸರಿದಂತಾಗಿ ಗೆಲುವಾದಳು....''ಬಾರೆಹಣ್ಣು, ಕಾರೆಹಣ್ಣು ಬಿಟ್ರ ಇಂಥ ಹಣ್ಣು ನಾವೆಂದೂ ಕಂಡಿಲ್ಲಸೋಡು ಚಂದಪ್ಪ!'' ಎಂದಳು-ಸಪೋಟವನ್ನು ಕಚ್ಚಿ ತಿನ್ನುತ್ತ.

''ನೀವೆಲ್ಲ ಇನ್ನ ನೋಡಬೇಕಾದ್ದು, ತಿನ್ನಬೇಕಾದ್ದು, ಭಾಳ ಅದಾವ.'' ಸೀತಾ-ಶಾರದಿಯರಿಗೆ ಸಪೋಟ ತಿನ್ನುವ ವಿಧಾನ ಕಲಿಸುತ್ತ ಆತ ಸೋನಿಗೆ ಉತ್ತರಿಸಿದ.

''ತಿನ್ನೋದು, ನೋಡೋದು ಅಂಥವೆಲ್ಲ ಮುಂದಿನ ಜಲಮದಾಗೇ ಇನ್ನ....ಇಲ್ಲಿಗನಕ ನನ್ನ ಕಥೆ ಮುಗೀತು!'' ಎಂದು ಸೋನಿ ತಗ್ಗಿದ ದನಿಯಲ್ಲಿ ಹೇಳಿದಾಗ, ಲಚ್ಮಿ-ಚಂದು ಇಬ್ಬರು ಅವಳತ್ತ ಮಿಕಿಮಿಕಿ ನೋಡಿದರು:

''ಯದಕ ಹಿಂಗಂತಿದ್ದೀ?!'' ಲಚ್ಮಿ ವಿಸ್ಮಯದಿಂದ ಕೇಳಿದಳು.

"ಮಧ್ಯಾನದಾಗ ಸಾಕಿಬಾಯಿ ನಿನ್ನ ಮುಂದ ಹೇಳ್ತಿದ್ದಳಲ್ಲ ಅತ್ತಿ-ಅಂವ ನನ್ನ ಕರಕೊಂಬಂಗಿಲ್ಲ. ಬ್ಯಾರೆ ಲಗ್ನಾಗತಾನಂತ. ಅತ್ತ ನೋಡಿದ್ರ ಅವ್ವ-ಅಪ್ಪ ಗುಳೇ ಹೋದೋರು ಅತ್ತಾಗೇ ಹೋಗಿಬಿಟ್ರು-ಹೊಳ್ಳಿ ಬಂದಿಲ್ಲ. ಇನ್ನು ನನಗ ಬಾಳ್ವೆ ಮಾಡಾಕ ಜಾಗ ಎಲ್ಲದ ಹೇಳು! ...'' ಎಂದಳು.

ಲಚ್ಮಿ ಏನೋ ಹೇಳಲು ಬಾಯಿಬಿಡುವಷ್ಟರಲ್ಲಿ ಚಂದು ಕೇಳಿದ-''ಸೋನಿಬಾಯಿ, ಈಗ ನಿನಗ ವಯಸ್ಸ ಎಷ್ಟಿರಬೌದು ಹೇಳು''

ತನ್ನ ಸಮಸ್ಯೆಗೆ ಪರಿಹಾರವಲ್ಲದ ಪ್ರಶ್ನೆ ಎನಿಸಿತು ಆಕೆಗೆ. "ಏಸಿದಾವ್ನೋ ಯಾರಿಗ್ಗೊತ್ತು?'' ಎಂದಳು ಉದಾಸೀನದಿಂದ.

"ಹೋಗ್ಲಿಬಿಡು, ನನಗೀಗ ಸುಮಾರು 24-25 ವರ್ಷ. ಇಷ್ಟು ಸಣ್ಣ ಪುಸ್ಸಿಗೇ ನನಗೂ ಯಾರೂ ದಿಕ್ಕಿಲ್ಲ. ಆದ್ರೂ ನಾ ಹ್ಯಾಂಗ ಖುಷಿಯಿಂದ ಬದುಕೀನಿ ನೋಡು!" ಎಂದ ಆತ.

"ಎಷ್ಟಾಗ್ಲಿ ನೀ ಗಂಡಸುಮಗ. ನಾ ಹೆಣ್ಣು ಹೆಂಗ್ಸು .."

"ಶ್!" ಎಂದು ಬಾಯಿಂದ ಶಬ್ದ ಹೊರಡಿಸಿ ತುಟಿಗೆ ತೋರುಬೆರಳು ಸೋಕಿಸಿದ ಚಂದು. "ನೀ ಹೆಂಗ್ಸಾದ್ರೇನು ಸೋನಿಬಾಯಿ ನನ್ಹಂಗ ನಿನಗೂ ತಲಿ ಅದ-ವಿಚಾರ ಮಾಡಾಕೌದು. ಕೈಕಾಲು ಅದಾವ-ದುಡಿದು ಉಣ್ಣಬೌದು. ಹೌದಲ್ಲೋ?"

"ಇಲ್ಲೀತನಕ ದುಡಿದೇ ಉಂಡೀನಿ ಬಿಡು ಆ ಭಾಡ್ಯಾ ನನಗೆಂದು ಕೂರಿಸಿ ಉಂಬಾಕ ನೀಡ್ಯಾನ!" ಸೋನಿ ಆವೇಶದಿಂದ ಮುಂದುವರಿಸಿದಳು- "ನನ್ನ ಕೈ ದುಡಿಬೇಕು-ಬಾಯಿ ಉಣ್ಣಬೇಕು. ಅಜ್ಜನಾಗ್ಲಿ, ಅಪ್ಪನಾಗ್ಲಿ ಒಮ್ಮೆಯಾರ ಒಂದ್ ಗೇಣು ಅರವಿ ತಂದು ಮಕ್ಕಳ ಮೈಮ್ಯಾಲ ಹಾಕಿಲ್ಲ. ಮತ್ತ ನೋಡಿದ್ರ ಕದ್ದು ಕನ್ನ ಹಾಕಿ ಗಳಸೇ ಗಳಸ್ತಾರ; ಎಲ್ಲಾದ್ನೂ ಒಯ್ದು ಊರ ಸೂಳೆರ ಸೆರಗಿಗ ಸುರ್ದು, ಬರೇ ಕೈಯಾಗ ಮನೀಗ ಬರ್ತಾರ!"

"ಅಷ್ಟೆಲ್ಲ ನೀಚತನ ಮಾಡಿದ್ರೂ ಅವರು ನನ್ನ ಕರೀಲಿಲ್ಲಂತ ಕಣ್ಣೀರಿಡ್ತಿದ್ದಿ!" ಚಂದು ದೂರಿದಾಗ "ಮತ್ತೇನು ಮಾಡಬೇಕಂದಿ ಚಂದಪ್ಪ?" ಎಂದು ಅಸಹಾಯಕಳಾಗಿ ಕೇಳಿದಳು ಸೋನಿ.

"ಇಷ್ಟು ಮಾಡು-ದೊಡ್ಡವ್ವನ ಒಪ್ಪಿಗೆ ತಗೊಂಡು, ಆಕಿನ ಮನಿ ಮಗ್ಗುಲಗಾಗ ಒಂದು ಸಣ್ಣ ಜೋಪಡಿ ಹಾಕ್ಕೊ. ಅಲ್ಲಿ ಅಂದ್ರ ಗಂಡನ ಮನಿಯಾಗ ಏನು ಕೆಲ್ಸ ಮಾಡ್ತಿದ್ದ್ಯೋ, ಅದೇ ಕೆಲ್ಸ ಇಲ್ಲಿ ಮಾಡು. ಬಂದ ರೊಕ್ಕದಾಗ ತಾಯಿ-ಮಕ್ಕಳು ಜೀವ್ನ ಮಾಡ್ರಿ... ಹೌದಲ್ಲಾ ದೊಡ್ಡವ್ವಾ?"

ಲಚ್ಚಿ ಗಳಿಗೆ ಹೊತ್ತು ಮೌನವಹಿಸಿದಾಗ "ಯಾಕ ದೊಡ್ಡವ್ವ ಸುಮ್ಮನಾದಿ?" ಎಂದು ಕೇಳಿದ ಚಂದು.

"ಅಂಥ ಲುಚ್ಚಾ ಗಂಡನ ಕೂಡ ಬಾಳ್ವೆ ಮಾಡೋದಕ್ಕಿಂತಲೂ ಒಂಟಿಯಾಗಿ ಇರೋದೇ ಛೇಪ್ ಬಿಡು. ಆದ್ರ... ಹೆಣ್ಮಮಗಳು ಒಂಟಿಯಾಗಿದಾಳಂತ ಪುಂಡ್ರು ಭಂಡ್ರು ಆಕಿನ ಮ್ಯಾಲ ಕಣ್ಣಾಕಿ ಕಾಡಿದ್ರ... !"

ಸೋನಿ ನಡುವೆಯೇ ಬಾಯಿ ಹಾಕಿದಳು-"ಅಂಥ ಭಂಡ್ರು ಈ ಊರಾಗ ಯಾರೂ ಇಲ್ಲ ಬಿಡತ್ತಿ. ಆ ಭಂಡನೊಬ್ಬನವ್ವ ಅಂಜಿಕಿ ನನಗ. ಮತ್ತ ಯಾರ ಅಂಜಿಕಿನೂ ಇಲ್ಲ!"

"ಹಂಗಾದ್ರ ಒಬ್ಬಾಕಿ ಇರಲಿಕ್ಕ ಅಂಜಿಕಿ ಇಲ್ಲ ಹೌದೋ?" ಚಂದು ಕೇಳಿದ. "ಅತ್ತಿ ಇದ್ದಾಳ, ನೀ ಇದ್ದಿ, ನಾಯೇನೂ ಅಂಜಿಕೆ ಪಡಂಗಿಲ್ಲ ಬಿಡು. ಆದ್ರ ಅಂವ ನನ್ನ ಪಾಡಿಗ ನಾನಿರಲಿಕ್ಕ ಬಿಡ್ತಾನೇನು?..." ಸಂದೇಹ ವ್ಯಕ್ತಪಡಿಸಿದಳು.

"ಏನ್ಮಾಡ್ತಾನಂವ? ನೋಡಾಮು. ನಾವಿದ್ದೇವೆ!" ಚಂದೂ ಧೈರ್ಯ ತುಂಬಿದ.

"ನಿನಗೇನಾರ ಅಂಜಿಕಿ ಗಿಂಜಿಕಿಯಾತಂದ್ರ ನನ್ನ ಮನಿಯಾಗ ಬಂದು ಮಲಗಿಬಿಡು ಆತು." ಎಂದು ಲಚ್ಮಿ ಸಹ ಬೆಂಬಲ ಸೂಚಿಸಿದಳು.

ಸೋನಿಯು ತಲೆಗಾಯು ಸಂಪೂರ್ಣ ವಾಸಿಯಾಗಿ ಅವಳು ತನ್ನ ಜೋಪಡಿಗಾಗಿ ಕಟ್ಟಿಗೆ-ಆಪು ಸಂಗ್ರಹ ಕಾರ್ಯದಲ್ಲಿ ತೊಡಗಿದಳು. "ಯಾಕಬೇ? ಮನಿ ಇದ್ದೂ ಬ್ಯಾರೆ ಗುಡಿಸಲ ಹಾಕೊಳ್ಳಿಕ್ಕ ಓಡಾಡ್ತಿದ್ದೀಯಲ್ಲ? ಗಂಡನ ಮನಿಗ ಹೋಗಂಗಿಲ್ಲೇನು?" ಎಂದು ಕೇಳತೊಡಗಿದರು ಜನ.

"ನಾ ಸತ್ರ ಸಾಕಂತ ಗಂಡ ಕಾದು ಕುಂತಾನ; ಮಗನಿಗೆ ಇನ್ನೊಂದು ಲಗ್ನ ಮಾಡಲಿಕ್ಕ ಮುದುಕ ತಯಾರಾಗ್ಯಾನ. ಅಂಥದ್ದರೊಳಗ ನಾ ಅಲ್ಲಿಗ ಹೋದೆನಂದ್ರ ಬಾಳ್ವೆ ಮಾಡಸ್ತಾರೇನು?" ಎಂದು ಮರು ಪ್ರಶ್ನೆ ಹಾಕಿದಳು.

"ಗಂಡಸುಮಗ ಅಧಾನ. ಮತ್ತೊಂದು ಲಗ್ನ ಮಾಡ್ಕೊಂಡ್ರು ಸತ ತಪ್ಪೇನದ? 'ಆಳೋನಿಗ ಏಳು ಮಂದಿ' ಆದ್ರ ನೀ ಇನ್ನ ಎಳೆ ಹರೆದಾಕಿ ಇದ್ದಿ. ಗಂಡನ್ನ ಬಿಟ್ಟು ಹ್ಯಾಂಗ ಇರ್ತಿದಿ? ಇದೆಲ್ಲ ಛೇಷಲ್ಲ. ಸುಮ್ನ ನಿನ್ನ ಮನಿಗ ನೀ ಹೋಗಿಬಿಡು." ಎಂದು ಕಳಕಳಿಯ ಸೂಚನೆ ಕೊಟ್ಟರು.

ಆದರೆ ಸೋನಿ ಆ ಮಾತುಗಳೆಲ್ಲವನ್ನು ತಳ್ಳಿಹಾಕಿ ತನ್ನ ಕೆಲಸವನ್ನು ಮುಂದುವರಿಸಿದಳು. ಚಂದು-ಲಚ್ಮಿಯರ ಸಹಕಾರದಿಂದ ಅವಳ ಪುಟ್ಟ ಜೋಪಡಿ ಸಿದ್ಧವಾಯಿತು. ಚಂದು ಅದರ ಬಾಗಿಲಿಗೆ ಒಳ್ಳೆಯದೊಂದು

ಹಲಗೆಯ ಚೌಕಟ್ಟನ್ನು ಸಂಪಾದಿಸಿತಂದು, ಮೊಳೆ ಹೊಡೆದು, ತಂತಿಯಿಂದ ಬಿಗಿದು ಗಟ್ಟಿಯಾದ ಕದ ಕೂರಿಸಿಕೊಟ್ಟನು. ತನ್ನದೇ ಮನೆ ಎನ್ನುವಷ್ಟು ಆತ ಕಾಳಜಿ ವಹಿಸಿದ್ದನ್ನು ಕಂಡು ಜನ ಅವನೊಡನೆ ಸೋನಿಯ 'ದೋಸ್ತಿ' ಬೆಳೆದಿರಬಹುದೆಂದು ಶಂಕಿಸಿದರು.

ಇದಾವುದನ್ನು ಲೆಕ್ಕಿಸದೇ ಸೋನಿ ತನ್ನ ಹೊಸ ಮನೆಯಲ್ಲಿ ಒಲೆ ಹೊತ್ತಿಸಿದಳು. ಸದ್ಯಕ್ಕೆ ಲಚ್ಮತ್ತಿ ಮನೆಯಿಂದ ನಾಲ್ಕು ಕುಡಿಕೆ ಮಡಿಕೆ ತಂದು ಕೊಂಡಳು. ಮಗಳನ್ನು ಕಳುಹಿಸಿ ತನ್ನ ಹಾಗೂ ಮಕ್ಕಳ ಒಂದೆರಡು ಬಟ್ಟೆಗಳನ್ನು ಮಾವನ ಮನೆಯಿಂದ ತರಿಸಿಕೊಂಡಳು. ಮನೆಗೆ ಬೇಕಾಗುವ ನಿತ್ಯೋಪಯೋಗಿ ವಸ್ತುಗಳನ್ನು ಒಂದೊಂದಾಗಿ ಹೊಂದಿಸಿಕೊಳ್ಳುವ ಪ್ರಯತ್ನ ನಡೆಸಿದ್ದಳು.

ರಾತ್ರಿಯ ಊಟ ಮುಗಿಸಿ ಲಚ್ಮತ್ತಿಯ ಮನೆಗೆ ಬರುತ್ತಿದ್ದಳು. ಅವಳೊಡನೆ ಸ್ವಲ್ಪ ಹೊತ್ತು ಮಾತುಕತೆಯಾಡಿ ತನ್ನ ಮನೆಗೆ ಬಂದು ದಣಿದ ದೇಹವನ್ನು ಹಾಸಿಗೆಗೆ ಚೆಲ್ಲುತ್ತಿದ್ದಳು. ಪಕ್ಕೆಗೆ ಒತ್ತುವ ಹರಿದ ಚಾಪೆಯಾದರೂ, ತಾಯಿಯ ಮಡಿಲಲ್ಲಿ ಮಲಗಿದ ಮಕ್ಕಳ ಸುಖ ನಿದ್ರೆಯಲ್ಲಿ ಮುಳುಗುತ್ತಿದ್ದರು. ಆದರೆ ಸೋನಿಗೆ ಅಷ್ಟು ನಿಶ್ಚಿಂತೆಯಿಂದ ನಿದ್ದೆಮಾಡಲು ಸಾಧ್ಯವಾಗುತ್ತಿರಲಿಲ್ಲ.

ಹತ್ತಾರು ಯೋಚನೆಗಳು ತಲೆ ತುಂಬಿ ನಿದ್ದೆಯನ್ನು ದೂರ ಓಡಿಸುತ್ತಿದ್ದವು. ನಾಯಿ ಬೊಗಳಿದರೆ, ಆಚೀಚೆ ಏನಾದರೂ ಸದ್ದು ಸಪ್ಪಳ ಕೇಳಿ ಬಂದರೆ ತನ್ನನ್ನು ಎಳೆದೊಯ್ಯಲು ಗಂಡನೇ ಬಂದುಬಿಟ್ಟನೇನೋ ಎಂದು ಅವಳ ಎದೆ ನಗಾರಿಯಂತೆ ಬಾರಿಸತೊಡಗುತ್ತಿತ್ತು. ಆತ ಸೌಮ್ಯವಾಗಿ, ಪ್ರೀತಿಯಿಂದ ತನ್ನನ್ನು ಎಂದಿಗೂ ಕರೆದೊಯ್ಯಲಾರ. ಹಿಂಸಿಸಲೆಂದೇ ಎಳೆದೊಯ್ಯುತ್ತಾನೆ ಎಂಬ ಭಯ ಅವಳನ್ನು ಹಗಲಿರುಳು ಭೂತದಂತೆ ಕಾಡುತ್ತಿತ್ತು. ಚಂದು ಇದ್ದಾನೆ, ಅತ್ತಿ ಇದ್ದಾಳೆ. ಇವರಿಬ್ಬರೂ ಕೂಡಿ ಹೇಗಾದರೂ ಮಾಡಿ ತನ್ನನ್ನು ರಕ್ಷಿಸುತ್ತಾರೆ! ಎಂದು ಧೈರ್ಯ ವಹಿಸಿದಾಗ ಮಾತ್ರ ಅವಳ ಕಣ್ಣಿಗೊಂದಿಷ್ಟು ನಿದ್ರೆ ಹತ್ತಲು ಸಾಧ್ಯವಾಗುತ್ತಿತ್ತು.

ಅವಳು ಒಂಟಿಯಾಗಿ ವಾಸ ಮಾಡಲಾರಂಭಿಸಿದ ಮೇಲೆ ಪೂಜಾರಿ ಕಾಶಪ್ಪ ಅವಳ ಬಗ್ಗೆ ಸಾಕಷ್ಟು ಕಾಳಜಿ ತೋರಲಾರಂಭಿಸಿದ. ಅದೊಂದು ದಿನ ಅವಳು ನೀರು ತರಲೆಂದು ಬಾವಿಗೆ ಹೊರಟಾಗ ಮಣ್ಣಿನ ಗಡಿಗೆ ಹಿಡಿದು ಅವನೂ ಹಿಂಬಾಲಿಸಿದ. ಸುತ್ತ ಮುತ್ತ ಜನಗಳಿಲ್ಲದ್ದನ್ನು ಗಮನಿಸಿ, "ಸೋನಿ ನಿನಗೊಂದ್ ಮಾತಃ ತಿಳಿಸಬೇಕಾಗ್ಯೆತಿ!" ಎಂದ. ಸೋನಿ ನಡಿಗೆ ನಿಧಾನಗೊಳಿಸಿ "ಏನ್ ಕಾಶಣ್ಣ ಅದು?" ಎಂದು ಕೇಳಿದಳು.

"ಮೊನ್ನೆ ನೀ ಕಾರೇಕಾಯಿ ಮಾರಲಿಕ್ಕಂತ ಊರೊಳಗ ಹೋಗಿದ್ಯಂತಲ್ಲ?"

"ಹೌದು. ಮಂದಿ 'ವಲ್ಲೆ ವಲ್ಲೆ' ಅಂದುಬಿಟ್ರು. ಹಗಲೆಲ್ಲಾ ಸುತ್ತಾಡಿದ್ರೂ ಮೂರು ರೂಪೈ ಸುದ್ಧ ಜಮಾಸಲಿಲ್ಲ..."

"ನೀ ಪ್ರಟ್ಟಿ ಹೊತಗೊಂಡು ಖಾಲಿ 2-3 ರೂಪ್ಯಾಗ ಈಟೊಂದು ತ್ರಾಸು ಪಡೋದು ಯದಕ್ಕ ಸೋನಿಬಾಯಿ? ಸುಮ್ನ ನಾ ಹೇಳಿದ್ಹಂಗ ಕೇಳು-ಕುಂತ ಜಾಗದಾಗ 20-30 ರೂಪ್ಯಾ ಸಿಗತಾವ!''

''ಅದ್ ಹ್ಯಾಂಗ?'' ಸೋನಿ ಅಚ್ಚರಿಯಿಂದ ಕೇಳಿದಳು.

"ಊರ ಚೇರ್ಮನ್-ದೊಣ್ಣೆಯವರು ನಿನಗೊತ್ತಲ್ಲ?...'' ಆತ ಕೇಳಿದ.

''ನಾನೆಂದು ಕಂಡೀನೋಯಪ್ಪ?''

''ನೀ ಆತನ್ನ ಕಂಡಿಲ್ಲ, ಆದ್ರ ಆತ ನಿನ್ನನ್ನ ಕಂಡು ಭಾಳ ಮೆಚ್ಚಿಕೊಂಡಾನ! 'ಆಕಿ ಬೇಡಿದಷ್ಟು ರೊಕ್ಕ ಕೊಡಲಿಕ್ಕ ತಯಾರದೀನಿ' ಅನ್ನಾಕ್ಹತ್ತಾನ?...'' ಕಾಶಪ್ಪ ಹಲ್ಲುಗಿಂಜಿ ಪಿಸುಗುಟ್ಟಿದಾಗ ಸೋನಿಗೆ ಅವನ ಇರಾದೆ ಏನೆಂಬುದು ಸ್ಪಷ್ಟವಾಯಿತು.

"ಗುಡಿ ಪೂಜಾರ್ಕಿ ಮಾಡೋ ಮನ್ಸ ಆಗಿ ಇಂಥ ಲುಚ್ಚಾ ದಂಧೆಗ ಇಳಿದೀಯಲ್ಲಣ್ಣಾ! ನಾಚ್ಕಿ ಬರಂಗಿಲ್ಲೇನು ನಿನ್ಗ?" ಎಂದು ಮೂದಲಿಸಿ ನಡಿಗೆಯ ವೇಗವನ್ನು ಹೆಚ್ಚಿಸಿದಳು.

"ಹಿಂಗೆಲ್ಲಾ ನಾಚಿಗಿ ಪಟ್ಟುಕೊಂಡು ಕುಂತ್ವಂದ್ರ ನಮ್ಮಂಥ ಬಡವರ ಹೊಟ್ಟೆ ಹ್ಯಾಂಗ್ ತುಂಬೇಕ್ ಹೇಳು."

"ಬಡವ್ರ ಹೊಟ್ಟೆಗಿಲ್ಲಂತ ಯಾರರ ಹೇಲು ತಿಂತಾರೇನು?...ಹಂಗಾದ್ರ ನಿನ್ನ ಹೆಂಡ್ತಿನ ಕಳ್ಸು ಆತನ ಬಲ್ಲಿ..."

"ಆ ಖೋಡಿ ಮೆಚ್ಚಿರೋದು ನಿನ್ನ ಬೇ. ನನ್ನ ಹೆಂಡ್ತಿನ ತಗೊಂಡ್ ಏನ್ ಮಾಡ್ತಾನ-ಎಂಟು ಮಕ್ಕಳು ಹಡ್ದ ಮುದಿಯಾಕಿನ? ನಿನ್ನ ಪ್ರಾಯದ ಮಗಳನ್ನ ಕಳುಸ್ತಿನಂದ್ರ ವಲ್ಯಂತಾನ ಮಗ!"

ಸೋನಿ ಮಾತಾಡಲಿಚ್ಛಿಸದೆ ನೀರು ಸೇದಿಕೊಂಡು ಹಿಂತಿರುಗಿದಳು. ಕಾಶಪ್ಪನೂ ಅವಳ ಹೆಜ್ಜೆಗೆ ಹೆಜ್ಜೆ ಕೂಡಿಸಿಯೇ ನಡೆದ. "ನೋಡು ಸೋನಿ, ನೀನೂ ಬಡವಿ, ನಾನೂ ಬಡವ. ನಿನ್ನಿಂದ ನನ್ಗೂ ನಾಲ್ಕು ಕಾಸು ಸಿಗತಾವ. ದೊಡ್ಡ ಮನ್ಸು ಮಾಡಿ ಒಪ್ಕೊ...ಹೆಂಗೂ ಮನಿಯಾಗ ನೀ ಒಬ್ಬಾಕಿನ್ಽ ಇದ್ದಿ...ತಾಸು ಹೊತ್ತು ಸಂಬಾಳಿಸಿ ಕಳ್ಸಿಬಿಡು!...ಈತ ಒಬ್ಬಾತ್ನೇ ಅಲ್ಲ! ಈ ಊರಾಗ ನಿನ್ನ ಮೆಚ್ಚಿಕೊಂಡು, ಅಗದಿ ನಿನ್ನ ಚಿಂತಿಯಾಗ್ಽ ಇರೋರು ಇನ್ನಾ ಮೂವರು ಅದಾರ!...ನೀ 'ಕರಿ' ಅಂದಾಗ ನಾ ಅವರನ್ನ ಕರ ಕೊಂಡು ಬರತೇನಿ. ನೀ ಬೇಡಿದಷ್ಟು ಕೊಡಿಸತೇನಿ!..."

ಉತ್ತರವಾಗಿ ಒಮ್ಮೆ ಕ್ಯಾಕರಿಸಿ ಉಗುಳಿ ತನ್ನ ಮನೆಯತ್ತ ತಿರುಗಿ ಕೊಂಡಳು ಸೋನಿ. ಈ ಪ್ರಕರಣದ ನಂತರ ಆಕೆ ಕಾಶಪ್ಪನ ನೆರಳು ಕಂಡರೂ ದೂರ ಸರಿಯುತ್ತಿದ್ದಳು. ಆದರೆ ಆತ-ತಾನು ಆ ದಿನ ಅವಳನ್ನು ಕೇಳಿದ್ದು ಆಕೆ ನಿರಾಕರಿಸಿದ್ದು ಎಲ್ಲವನ್ನೂ ಮರೆತುಬಿಟ್ಟವನಂತೆ ಬಲು ವಿಶ್ವಾಸದಿಂದ ಮಾತಾಡಿಸುತ್ತಿದ್ದ. ಕಷ್ಟ-ಸುಖ ವಿಚಾರಿಸುತ್ತಿದ್ದ. "ಸಂಕದ ಕೆಲ್ಸ ಚಾಲು ಆಗೇತಿ ನೋಡು ಸೋನಿಬಾಯಿ. ಮೇಸ್ತ್ರಿಗ ಹೇಳಿ ನಿನ್ನ ಹೆಸರೂ ಹಚ್ಚಿ ಸೀನಿ!" ಎಂದು ಆತ ಒಂದು ದಿನ ಹೇಳಿದಾಗ, ಸೋನಿ ಹಿಂದಿನದೆಲ್ಲವನ್ನೂ ಮರೆತು ಅವನ ಬಗ್ಗೆ ಕೃತಜ್ಞತಾ ಭಾವನೆ ತಳೆದಳು.

ಅಂದು ಸಾಯಂಕಾಲ ದುಡಿಮೆ ಮುಗಿಸಿಕೊಂಡು ಗುಡಿಯ ಮುಂದಲ

ಹಾದಿಯಿಂದ ಮನೆಗೆ ಸಾಗಿದ್ದವಳನ್ನು, ಪಡಸಾಲೆಯತ್ತ ನಿಂತ ಕಾಶಪ್ಪ ಮೆಲು ದನಿಯಲ್ಲಿ ಕೂಗಿದ. "ಏನು" ಎಂದು ತಿರುಗಿ ಕೇಳಿದಳು ಸೋನಿ.

"ಈವತ್ತು ಸೇವಾಭಾಯನಿಗೆ ಪರಮಾನ್ನದ ಪರಸಾದ ಮಾಡಿದ್ವೆ. ನೀನೊಂದು ತಟುಕು ಒಯ್ಯುವಂತಿ ಬಾ." ಎಂದು ಆತ ಆಹ್ವಾನಿಸಿದಾಗ, ಸೋನಿ ಗೊಂದಲಕ್ಕೊಳಗಾದಳು. ಹೋಗುವುದೋ, ಬೇಡವೋ ಎಂದು ಮನಸ್ಸು ಉಯ್ಯಾಲೆಯಾಡಿತು. 'ಅಂತಹ ಕತ್ತಲೇನೂ ಕವಿದಿಲ್ಲ...ಹೋದರ ಪರಮಾನ್ನ ಸಿಗುತ್ತೆ. ತನ್ನ ಮಕ್ಕಳ ಕೈಗಿಡಬಹುದು...'

"ದೇವ್ರ ಪರಸಾದ ತಗೊಂಬಾಕೂ ಇಷ್ಟು ಅನ್ಮಾನ ಪಡೋದಾ!" ಕೂಡಲೇ ಆಕೆ ಗುಡಿಯತ್ತ ತಿರುಗಿದಳು. ಪಾವಟಿಗೆ ಏರಿ, ಪಡಸಾಲೆ ದಾಟಿ ಒಳಗಿನ ಗರ್ಭಗುಡಿಗೆ ನಡೆದಳು. ಸಾಕಷ್ಟು ವಿಶಾಲವಾದ ಒಂದಂಕಣದ ಗರ್ಭಗುಡಿಯಲ್ಲಿ ಸೇವಾಲಾಲ್ ಹಾಗೂ ಸದಾ ಆತನ ಜೊತೆಯಲ್ಲಿರುವ ದೇವತೆಯೆಂದು ನಂಬಲಾಗುವ-ಮರಿಯಮ್ಮನ ಸಾಂಕೇತಿಕ ಮೂರ್ತಿಗಳಿಗೆ ಭಕ್ತಿಯಿಂದ ಕೈಮುಗಿದು ಅಡ್ಡಬಿದ್ದಳು.

ಆ ಸಮಯ ಸಾಧಿಸಿ ಕಾಶಪ್ಪ ಹೊರಗಡೆಯಿಂದ ಗುಡಿಯ ಬಾಗಿಲು ಮುಚ್ಚಿಕೊಂಡಾಗ ಅವಳು ಗಾಬರಿ, ಸಂಶಯದಿಂದ ಎದ್ದು ನಿಂತು ಅತ್ತಿತ್ತ ನೋಡಿದಳು. ಮೂಲೆಯೊಂದರಲ್ಲಿ ಅಡಗಿ ಕುಳಿತಿದ್ದ ಗಲ್ಲಿ ಮೀಸೆಯ ದಪ್ಪನೆಯ ವ್ಯಕ್ತಿಯೊಂದು ಚಟ್ಟನೆ ಆಕೆಯ ಬಳಿ ಎದ್ದು ಬಂದು "ಗದ್ಲ ಹಾಕಬ್ಯಾಡಬೇ ಮತ್ತ!...ಈ ಊರ ಮಂದಿ ಓಡಿಬಂದು ನಿನ್ನ, ನನ್ನ ಕೂಡೇ ಬಡಿದು ಹಾಕ್ತಾರು!" ಎಂದು ಪಿಸುನುಡಿಯಲ್ಲಿ ಎಚ್ಚರಿಸಿತು.

ಊರಿಂದೂರಿಗೆ ಬಂದು, ಈ ರೀತಿ ತನ್ನನ್ನು ಬಲೆಗೆ ಕೆಡವಿ ಅನುಭೋಗಿಸುವಷ್ಟು ಧೈರ್ಯ ತಳೆದಿರುವ ಈತ ಬಹುಶಃ ಚೇರ್ಮನ್ ದೊಣ್ಣೆಯೇ ಆಗಿದ್ದಾನು...ಎಂದು ಊಹಿಸಿ ಆತನ ಮುಖವನ್ನು ದುರುಗುಟ್ಟಿ ನೋಡಿದಳು.

"ಹಿಡಿ ಇದ್ನ ಬಾ!" ಎನ್ನುತ್ತ ದೊಣ್ಣೆ ಅವಳ ಕೈಗೆ ನೋಟುಗಳನ್ನು ಇಡಲು ಬಂದಾಗ, ಸೋನಿ ಅದನ್ನು ಮುಟ್ಟದೆ ದೂರ ಸರಿದು ನಿಂತಳು. "ಬಾಗ್ಲಾ ತಗೀತೀಯೋ ಏನ್ ಜೋರಾಗಿ ಹೊಯ್ಕೊಳ್ಳಲೋ

ಕಾಶಣ್ಣಾ !?" ಎಂದು ಕೂಗಿ ಕೇಳಿದಳು. ಕೂಡಲೆ ಕಾಶಪ್ಪ ಬಾಗಿಲು ತೆಗೆದು, ಅದಕ್ಕೆ ಅಡ್ಡಲಾಗಿ ನಿಂತ- "ಯದಕ್ಯ ಗಂಟ್ಲಾ ಹರಕೋಳ್ಳಾಕ ಹತ್ತಿದ್ದಿ ಬೇ? ಸಾಹೇಬ್ರು ನೋಟು ಹಿಡಿದು ನಿಂತಿರೋದು ಕಾಣ್ಸುವಲ್ಲದೇನು ನಿನ್ಗ ?" ಎಂದು ದಬಾಯಿಸಿದ.

"ಆ ಡ್ರೈವರ್ ನನ್ಮಗ ಎಷ್ಟು ಕೊಡ್ತಾನ ಹೇಳು. ಆತನಿಗಿಂತ್ಲೂ ಇಪ್ಪತ್ತು ರೂಪಾಯಿ ಹೆಚ್ಚಿಗಿ ಕೊಡ್ತೇನಿ!" ಎಂದ ದೊಣ್ಣೆ.

ಸೋನಿಗೆ ಸಿಟ್ಟು-ವ್ಯಥೆ ಒಟ್ಟಿಗೇ ನುಗ್ಗಿ ಬಂತು. "ಸುಳ್ಳು ಸುಳ್ಳೆ! ಯಾಕ ಒದರಾಡಕ ಹತ್ತೀರ ನಾಯಿ ಹಂಗ! ಅತ್ತಾಗ ಸರಿಯೋ ಕಾಶ್ಯ!" ಎನ್ನುತ್ತ ಆಕೆ ಕಾಶಪ್ಪನನ್ನು ದಬ್ಬಿಕೊಂಡು ಹೊರಬಂದಳು. ನೋಡಿದವರು ತನ್ನ ಬಗ್ಗೆ ತಪ್ಪು ಭಾವಿಸುವರೇನೋ ಎಂಬ ಭಯದಿಂದ ಮೈ ಹಿಡಿಯಾಗಿಸಿ ಅಲ್ಲಿಂದ ಸರಸರನೆ ಹೊರಟಳು.

"ನಾಗರಹಾವನ್ನು ಕೆಣಕಿ ಬಿಟ್ಟಿದೀ! ಹೋಗಲೆ ಲೌಡಿ ನಿನ್ನ ಒಂದ್ ಕೈ ನೋಡ್ಕೊಳ್ತೀನಿ.'' ಎಂಬ ಧ್ವನಿ ಹಿಂದಿನಿಂದ ಕೇಳಿಬಂದಿದ್ದು ದೊಣ್ಣೆಯದೇ ಇರಬಹುದೆನ್ನಿಸಿತು. ಮನೆಗೆ ಬಂದಾಗ ಖಿನ್ನತೆ ಅವಳ ಮನವನ್ನು ಆವರಿಸಿತ್ತು. ತನ್ನ ಗಂಡನ ಹೊರತು ಬೇರೆ ಯಾರ ಅಂಜಿಕೆಯೂ ತನಗಿಲ್ಲ. ಆತನೊಬ್ಬನೇ ಭಂಡ! ಎಂದು ಆ ದಿನ ತಾನು ಲಚ್ಮತ್ತಿಗೆ ಹೇಳಿದ್ದು ಪೂರ ತಪ್ಪು. ತನ್ನನ್ನು ಕಾಡಿಸುವ ಗಂಡಸರು ಸಾಕಷ್ಟು ಜನ ಇದ್ದಾರೆ...ಎಷ್ಟೇ ಆಗಲಿ ಲಚ್ಮತ್ತಿ ಅನುಭವಸ್ತೆ...ಈ ಮಾತನ್ನು ಆಕೆ ಅಂದೇ ಹೇಳಿದ್ದಳು...

ಅಂದು ಸಾಯಂಕಾಲ ಚಂದು ಅತ್ತಲಿಂದ ಬರುತ್ತಿದ್ದಂತೆಯೇ "ದೊಡ್ಡವ್ವಾ!'' ಎಂದು ಭಾರಿ ಉತ್ಸಾಹದಿಂದ ಕೂಗಿಕೊಳ್ಳುತ್ತಲೇ ಬಂದ.

"ಏನಪ್ಪ? ಅಗದಿ ಉಮೇದಿನಾಗ ಇದ್ದೀ! ಎಲ್ಲಾರ ಹೆಣ್ಣು ಗಿಣ್ಣು ನೋಡಿ ಬಂದಿ ಏನು ಮತ್ತ? ಹಂಗಿತ್ತಂದ್ರ ಲಗ್ನ ಮಾಡಿಸಿಬಿಡ್ತೇವಿ-ಹೇಳು!'' ಎಂದು ತಮಾಷೆ ಮಾಡಿದಳು.

"ಹೆಣ್ಣು ನೋಡಿದ್ದಾಯ್ತು. ತಾಳೀನೂ ಮಾಡಿಸಿಕೊಂಡೇ ಬಂದೀನಿ! ನೀ ಇಲ್ಲೇ ಒಂದು ಹಂದರ ಹಾಕಿಸಿದಿ ಅಂದ್ರ ನಾ ತಾಳಿ ಕಟ್ಟಿಬಿಡ್ತೇನಿ!''

ಅಪರಿಬ್ಬರ ಗಲಾಟೆ ಕೇಳಿ ಅಲ್ಲಿಗೆ ಬಂದ ಸೋನಿ "ಲಗ್ನ ಯಾರ್ದು?" ಎಂದು ಕೇಳಿದಳು.

"ನನ್ದು. ಅದಕ್ಕೇ ಸಿಹಿ ತಂದೀನಿ!" ಎನ್ನುತ್ತ ಚಂದು ಕೈಚೀಲದಿಂದ ಪೇಡ ತೆಗೆದು ಎಲ್ಲರಿಗೂ ಹಂಚಿದ.

"ನಾ ಅವತ್ತು ಬೆಂಗಳೂರಿಗ ಹೋಗೋ ಮುಂದ ಹೇಳಿದ್ದಿಲ್ಲ-ಶಾಲಿ ವಿಚಾರ? ಅದು ಮಂಜೂರಾಯ್ತು!"

"ಈಗಿನ್ನ ಲಗ್ನ ಅಂದ್ಯಲ್ಲ ಚಂದಪ್ಪ..." ಎಂದು ಕೇಳಿದಳು ಸೋನಿ.

"ಇದೊಂದು ರೀತಿ ಲಗ್ನಾನೇ. ಶಾಲಿಗ ಮಾಸ್ತರ ಆದ್ರ-ತಾಳಿಕಟ್ಟಿ ಮದುವಿ ಆದಂಗs ಅಲ್ಲಾ?"

"ಈಗ ನೀ ಮಾಸ್ತರ ಏನು? ಲಾರಿ ಕೆಲ್ಸ?"

"ಬಿಟ್ಟೆ. ಆ ಕೆಲ್ಸ ಮಾಡಲಿಕ್ಕ ನನಗ ಮನ್ಸೂ ಇದ್ದಿಲ್ಲ ಬಿಡು. ನಿರ್ವಾಯಿಲ್ದ ಮಾಡಾಕಹತ್ತಿದ್ದೆ..." ಎಂದು ಚಂದು ಹೇಳಿದಾಗ "ಭೇಷಾತು ಬಿಡಪ್ಪ. ನಿನ್ನ ಕಾಲದಾಗಾರ ಈ ಹಳ್ಳಿ ಹುಡ್ರು ಒಂದ್ ಸಾಕಕ್ಷರ ಕಲ್ತು ನಿನ್ನಂಗ ಶ್ಯಾಣೇರಾಗ್ಲಿ!" ಎಂದು ಹಾರೈಸಿದಳು ಲಚ್ಮಿ.

"ಬರೇ ಹುಡ್ರು-ಹುಡುಗಿಯರಿಗಷ್ಟೇ ಅಲ್ಲ ದೊಡ್ಡವ್ವ, ನಿನ್ನಂಥ ದೊಡ್ಡೋರಿಗೂ ಇಷ್ಟರಾಗೇ ಶ್ಯಾಲೆ ಶುರುವಾಗ್ತದ!"

"ಹುಡ್ರು ಬರೋದೇ ತ್ರಾಸಯ್ತಿ ತಮ್ಮಾ...ಕುರಿ ಮ್ಯಾಕೆ ಕಾಯೋರಿಲ್ಲಂತ ಅವರ್ನೇ ಕಳುಸ್ತಾರೋ ಇಲ್ವೋ-ಅಂಥಾದ್ರಾಗ ದೊಡ್ಡೋರು ಬಂದು ಕೂಡ್ತಾರೇನು ನಿನ್ನ ಸಾಲಿಯೊಳಗ?" ಎಂದಳು ಲಚ್ಮಿ.

"ಈವತ್ತಲ್ಲ ನಾಳೆ ಬಂದಾರು. ನಾಳೆ ಅಲ್ಲ ನಾಡದ್ದು ಬಂದಾರು... ಒಟ್ಟು ನಾ ಬಿಡಲಾರದ್ಹಂಗ ಪ್ರಯತ್ನ ಪಟ್ನಂದ್ರ ದೊಡ್ಡೋರು ಕೂಡ ಶಾಲಿಗ ಬಂದೇ ಬರ್ತಾರ ಕಲ್ತೇ ಕಲಿತಾರ...ನೀ ಒಬ್ಬಾಕಿ ಮೊದ್ಲು ಬಂದ್ರ ಸಾಕು ದೊಡ್ಡವ್ವ! ಹಿಂದಾಗಡಿ ಸೋನಿಬಾಯಿ ಬರ್ತಾಳ. ಆಕಿನ ಹಿಂದ ಊರ ಮಂದಿ ಎಲ್ಲಾ ಬರಾಕ ಮನಸ್ಸು ಮಾಡ್ತಾರ!"

ಎಂದು ಮಗನಿಗೆ ಎಚ್ಚರಿಕೆ ಕೊಟ್ಟು, ಗುಡಿಯಲ್ಲಿ ನುಗ್ಗಿದ. ಆತನ ಕೈಯಲ್ಲಿದ್ದ ಪಾಟಿಯನ್ನು ಕಿತ್ತೆಸೆದು ಹುಡುಗನ ತೋಳು ಹಿಡಿದು ದರದರನೆ ಹೊರಗೆಳೆದೊಯ್ದ. ಚಂದು ಹತಾಶಭಾವದಿಂದ ಆ ದೃಶ್ಯವನ್ನು ವೀಕ್ಷಿಸಿದ. ಆ ತಂದೆ-ತಾಯಿಗಳಿಗೆ ಈಗ ತಾನೇನಾದರೂ ಉಪದೇಶ ಕೊಡ ಹೊರಟರೆ, ಅವರು ಮುರಿಯಬೇಕೆಂದಿರುವ ಟೊಂಕ, ಕೈ ಕಾಲುಗಳು ತಮ್ಮ ಮಕ್ಕಳದ್ದಾಗಿರದೆ, ತನ್ನದೇ ಆಗಿರುತ್ತವೆ ಎನ್ನುವುದು ಅವನಿಗೆ ಮನವರಿಕೆಯಾಗಿತ್ತು.

ರಾತ್ರಿ ವಯಸ್ಕರ ಶಿಕ್ಷಣ ಶಾಲೆಗೆ ಪೂಜಾರಿ ಕಾಳಪ್ಪ, ಲಚ್ಮಿ, ಸೋನಿ ಮೂವರೂ ಹಾಜರಾದರು. ಚಂದು ಅವರಿಗೆ ಅಕ್ಷರ ತೀಡಲು ಹಾಕಿ ಕೊಟ್ಟು ಇನ್ನೂ ಕೆಲವರು 'ಬರ್ತೀವಿ' ಎಂದಿದ್ದವರು ಕೈ ಕೊಟ್ಟಿದ್ದರಿಂದ ಅವರನ್ನು ಕರೆ ತರಲೆಂದು ಹೋದ.

ಒಂದೆರಡು ಸುತ್ತ ಅಕ್ಷರ ತಿದ್ದುವಷ್ಟರಲ್ಲಿ ಸೋನಿಗೆ ಆ ದಿನ ಕಾಳ್ಯ ತನಗೆ ಮೋಸ ಮಾಡಿದ್ದು ನೆನಪಾಗಿ ಹೊಟ್ಟೆಯಲ್ಲಿ ತಳಮಳ ಸುರುವಾಯಿತು. ಯಾರಿಗೂ ಹೇಳುವುದು ಬೇಡವೆಂದು ಮನಸ್ಸಿನಲ್ಲೇ ಇಟ್ಟುಕೊಂಡಿದ್ದವಳಿಗೆ ಈಗ ಲಚ್ಮತ್ತಿಯೊಡನೆ ಹೇಳದೇ ಇರುವುದು ಸಾಧ್ಯವಾಗಲಿಲ್ಲ.

ಲಚ್ಮಿ 'ಕಂದೀಲಿನ ಮೊಬ್ಬು ಬೆಳಕಿನಾಗ ಅಕ್ಷಾರ ಚಲೋ ಕಾಣ್ಸಂಗಿಲ್ಲ' ಎಂಬ ಕಾರಣಕ್ಕಾಗಿ ಆಗಲೇ ಪಾಟಿಯನ್ನು ಕೆಳಗಿಟ್ಟು ಎಲೆಯಡಿಕೆ ಹಾಕಿಕೊಳ್ಳುವ ಸಿದ್ಧತೆ ನಡೆಸಿದ್ದಳು. ಅದರೊಳಗಿಂದಲೇ ತಾನೊಂದು ತುಣುಕು ಪಡೆದುಕೊಂಡು ಬಾಯಿಗೆ ಹಾಕಿಕೊಂಡ ಸೋನಿ, ಸಾವಕಾಶವಾಗಿ ಜಗಿಯುತ್ತ, ಲಚ್ಮತ್ತಿಯ ಕಿವಿಗೆ ಬಾಯಿಯಿಟ್ಟು ಕಾಳ್ಯನಿಂದ ತನಗಾದ ವಂಚನೆಯನ್ನೆಲ್ಲ ಪಿಸು ಮಾತಿನಲ್ಲಿ ವರ್ಣಿಸಿದಳು.

ಎಲ್ಲವನ್ನೂ ಕೇಳಿ ಲಚ್ಮಿಯ ರಕ್ತ ಕುದಿಯಿತು. "ಅವತ್ತೇ ಹೇಳಬಾರದಿತ್ತೇನೇ ಖೋಡಿ! ಆ ಕಚ್ಚೆ ಹರ‍್ಕ ನನ್ಮಗನ್ನೂ, ಈ ಶಿರಪಗಡು ನನ್ಮಗನ್ನೂ ಕೂಡೇ ಕಂಬಕ್ಕೆ ಕಟ್ಸಿ, ಊರಾನ ಮುಂದಿ ಕಡಿಂದ ಮಾರಿ ತುಂಬ ಉಗಿಸಿ, ಮೈ ಮೆತ್ತಗ ಆಗುಹಂಗ ಬಡಿಸ್ತಿದ್ದೆನಲ್ಲ! ನೀ ಎಂಥಾಕಿ ಅದಿ ಬಿಡು!" ಎಂದು ಕಾಳ್ಯಾನತ್ತ ತಿರುಗಿದಳು.

"ಏನ್ಲಾ, ಏಸ್ ಮಂದಿ ಹೆಣುಮಕ್ಕಳ ಮಾನ ಮಾರಿದಿಯಲಾ, ಇಲ್ಲೇ ತಾನ? ಏಸ್ ದಿನದಿಂದ ಈ ದಂಧಾ ಮಾಡಾಕ ಹತ್ತಿದಿ?" ಇದ್ದಕ್ಕಿದ್ದಂತೆ ಅವಳು ತರಾಟೆಗೆ ತೆಗೆದುಕೊಂಡಾಗ ಕಾಶಪ್ಪ ಅಧೀರನಾದ. ಚಂದು ನಾಕೈದು ಜನ ತರುಣರೊಡನೆ ಒಳಗೆ ಬಂದು, ಇಲ್ಲಿ ಆಗಲೇ ಗಲಾಟೆ ಶುರುವಾಗಿರುವುದನ್ನು ಕಂಡು "ಏನಾಯ್ತು ದೊಡ್ಡವ್ವ? ಯಾಕೆ ಗಲಾಟೆ" ಎಂದು ಕೇಳಿದ.

"ಹೇತ ಕುಂಡಿ ನೆಟ್ಟಗೆ ತೊಳಿಲಾರ್ದ ಈ ನನ್ಮಗ 'ನಾ ಪೂಜಾರಿ ಅದೀನಿ. ನನ ಮೈಮ್ಯಾಲ ದೇವರು ಬರತೈತಿ, ನನ ನ್ಯಾಲಿಗಿಲಿಂದ ದೇವಿ ನುಡಿತಾಳ!' ಅಂತೆಲ್ಲ ದೊಡ್ಡ ದೊಡ್ಡ ನಾಟ್ಕದ ಮಾತಾಡ್ತಾನ. ಮತ್ತ ನೋಡಿದ್ರ ಶಿರ ಪಗಡು ದಂಧಾ ಮಾಡ್ತಾನ! ಅದ್ಕ ಇವಗ ಕೇಳ್ಬಿಕ್ಕ ಹತ್ತೀನಿ-'ಇಲ್ಲೇ ತಾನ ಏಸುಮಂದಿ ಹೆಣ್ಣುಮಕ್ಕಳ ಬಾಳು ಮುರಿದೀಯೋ ಭಾಡ್ ಖೌವ್?' ಅಂದ್ ಕೇಸಿ!" ಎಂದು ಲಚ್ಮಿ ಬೈಯಲು ಶುರುಮಾಡಿದಳು.

ಕಾಶಪ್ಪ ಸ್ಲೇಟು ಬಳಪವನ್ನು ಕೆಳಗಿಟ್ಟು "ನಾ ಹೋಕ್ಕಿನಪ್ಪ-ಚಂದು ಮಾಸ್ತರ ಈ ಹೆಣುಮಕ್ಕಳ ಕೂಡ ಯಾರು ಕಲಿತಾರ ಬಿಡು. ಯಾವ ಯಾವ ತ್ತಿಂದೋ ಸುದ್ದಿ ಎತ್ತಿಕೊಂಡು ಸುಳ್ಳೇ ಗದ್ಲ ಎಬ್ಬಿಸ್ತಾರ...!" ಎನ್ನುತ್ತ ಆತ ಹೊರಟುನಿಂತಾಗ "ದೊಡ್ಡವ್ವ, ನಿಮ್ಮ ನಿಮ್ಮ ಜಗಳ ಏನಿದ್ರೂ ಶಾಲೆಯಿಂದ ಹೊರಗs. ಇಲ್ಲಿ ಮಾತ್ರ ನೀವೆಲ್ಲ ಬರೇ ವಿದ್ಯಾರ್ಥಿಗಳು. ಓದು-ಬರಹದ ವಿಷಯ ಬಿಟ್ಟು ಇಲ್ಲಿ ಬ್ಯಾರೆ ಯಾವ ಸುದ್ದಿನೂ ಎತ್ತಬಾರ್ದು." ಎಂದು ಮನವಿ ಮಾಡಿ, ಕಾಶಪ್ಪನಿಗೂ ಸಮಾಧಾನ ಹೇಳಿ ಎಲ್ಲರಿಗೂ ಬರೆಯಲು ತೊಡಗಿಸಿದ.

ಬೆರಳೆಣಿಕೆಯಷ್ಟೇ ವಿದ್ಯಾರ್ಥಿಗಳಿದ್ದರೂ ಹಗಲು ಮಕ್ಕಳಶಾಲೆ, ರಾತ್ರಿ ವಯಸ್ಕರ ಶಾಲೆ-ಅಡೆತಡೆಗಳನ್ನು ನಿವಾರಿಸಿಕೊಳ್ಳುತ್ತ ಕ್ರಮವಾಗಿ ನಡೆಯಲಾರಂಭಿಸಿತು. ಚಂದು ಮಾಸ್ತರನ ನಂಜಿಲ್ಲದ ನಯವಾದ ಮಾತುಗಾರಿಕೆಗೆ ಮಕ್ಕಳು, ಹೆಂಗಸರು ಅಷ್ಟೇ ಅಲ್ಲ, ಊರ ಹಿರಿಯರೂ ಮನಸೋತಿದ್ದರು. ಅವನ ಯಾವುದೇ ಮನವಿಯನ್ನು ತಳ್ಳಿಹಾಕಲು ಅಷ್ಟು ಸುಲಭವಾಗಿ ಯಾರೂ ಮುಂದಾಗುತ್ತಿರಲಿಲ್ಲ.

ಊರ ಮುಂದಿನ ಬಯಲಿನಲ್ಲಿ ಶಾಲಾ ಕಟ್ಟಡ ಕಟ್ಟುವ ಕೆಲಸ ಭರದಿಂದ ನಡೆದಿತ್ತು. ಜೊತೆಯಲ್ಲೇ ಮಾಸ್ತರರಿಗಾಗಿಯೂ ಒಂದಂಕಣದ ಕೋಣೆ ಸಿದ್ಧವಾಗುತ್ತಿತ್ತು. ಅದುವರೆಗೂ ಚಂದುವಿನ ವಾಸಕ್ಕೆಂದು ಗುಡಿಯ ಪಕ್ಕದಲ್ಲಿ ಒಂದು ತಾತ್ಕಾಲಿಕ ಜೋಪಡಿಯನ್ನು ಹಳ್ಳಿಯ ಹುಡುಗರೇ ಹಾಕಿಕೊಟ್ಟರು.

ಚಂದು ಅದರಲ್ಲಿ ತನ್ನ ಬಟ್ಟೆ ಬರೆ ಜೊತೆಗೆ ಹಲವಾರು ಪುಸ್ತಕಗಳನ್ನು ಇರಿಸಿಕೊಂಡಿದ್ದ. ಸೀಮೆಎಣ್ಣೆ ಒಲೆ ಹಾಗೂ ಒಂದೆರಡು ಬೋಗುಣಿಗಳೂ ಅವನಲ್ಲಿದ್ದವು. ಚಾಟುವಿನ ಮಗ ದೇವಲ್ಯಾ ನಸುಕಿನಲ್ಲೇ 'ಮಾಸ್ತರ'ನಿಗೆ ಒಂದು ವಾಟಕ ಆಡಿನ ಹಾಲನ್ನು ತಂದು ಕೊಡುತ್ತಿದ್ದರಿಂದ, ಚಂದು ಮುಖ ತೊಳೆದ ಕೂಡಲೇ ಒಂದು ಕಪ್ ಚಹ ಮಾಡಿಕೊಂಡು ಕುಡಿಯುತ್ತಿದ್ದ. ಆದರೆ ಅಡಿಗೆ ಮಾಡಿಕೊಳ್ಳುವ ಪ್ರಸಂಗವೇನೂ ಅವನಿಗೆ ಬಂದಿರಲಿಲ್ಲ.

ಕಾರಣ ಊರ ಮುಖಂಡರಲ್ಲೊಬ್ಬನಾದ ಮೋತಿ ಪವಾರ್- "ದಿನಾ ನಮ್ಮನಿಗ ಬಂದು ಊಟ ಮಾಡ್ಕೊಂಡ್ ಹೋಗಿಬಿಡು ಮಾಸ್ತರ. ಕೈಬಾಯಿ ಸುಟಗೋ ಬ್ಯಾಡ!" ಎಂದು ಸಲಹೆ ಮಾಡಿದ್ದ. ಪ್ರಾಯಕ್ಕೆ ಬಂದ ಆತನ ಮಗಳು 'ಸಾವಿತ್ರಿಯನ್ನು ಚಂದು ಮಾಸ್ತರಗ ಕೊಡ್ತಾರ' ಎಂಬ ಸುದ್ದಿ ಊರ ತುಂಬ ಹರಡಿತ್ತು. ಏಕೆಂದರೆ ಮೊದಲ ದಿನ ಭೇಟಿಯಾದಾಗಲೇ ಪವಾರ ಚಂದುವಿನ ಗೋತ್ರ ಕೇಳಿ ತಿಳಿದು "ಹಂಗಾದ್ರ ನಮ್ಮ ನಮ್ಮೊಳಗ ಬೀಗಸ್ತಾನಕ್ಕ ಅಡ್ಡಿ ಇಲ್ಲಬಿಡು!" ಎಂದು ಸಂತಸ ಸೂಚಿಸಿದ್ದನಂತೆ.

ಲಚ್ಮಿಗೂ ಇದು ಗೊತ್ತಾಗಿ "ಹೌದಪ್ಪಾ ಚಂದು, ಪವಾರನ ಮಗಳನ್ನು ನೀ ಮೆಚ್ಚಿಕೊಂಡಿಯಂತ ಲಗ್ನವಾಗು." "ಆಕಿ ಒಬ್ಬಳನ್ನೇ ಅಲ್ಲ ದೊಡ್ಡವ್ವ; ಈ ಹಳ್ಳಿಯನ್ನೇ ನಾನು ಮೆಚ್ಚಿಕೊಂಡೀನಿ! ಅದಕ್ಕೇ ಇಲ್ಲಿಗ ಬಂದು ನನ್ನ ಮನಸ್ಸಿಗ ಖುಷಿ ಕೊಡೋ ಅಂಥ ಕೆಲ್ಸ ಚಾಲೂ ಮಾಡೀನಿ. ಇನ್ನ ಐದು ವರ್ಷದೊಳಗ ಈ ಹಳ್ಳಿಯನ್ನ ಒಂದು ಹಂತಕ್ಕೆ ತರಲಿಕ್ಕೆ ಹೋರಾಡಬೇಕಂತ ನಿರ್ಧಾರ ಮಾಡೀನಿ. ಅಲ್ಲೀತಾನ 'ಲಗ್ನ' ಅನ್ನೊ ಸೊಲ್ಲು ಈ ಕಿವಿಯಿಂದ ಕೇಳ್ಳಿಕ ಸಹಿತ ನಾ ಇಷ್ಟಪಡೋದಿಲ್ಲ' ಎಂದ ಚಂದು.

ಚಂದುವಿನ ಈ ಶಪಥ ಬಾಯಿಂದ ಬಾಯಿಗೆ ಹರಡಿ ಹಲವು ರೂಪ ಧಾರಣ ಮಾಡಿತು. 'ಸೋನಿ ಸೋಮಾಸದಾಗ ಇರೋನಿಗ ಇನ್ನ ಐದು ವರ್ಷ

ಲಗ್ನ ಯುದಕ ಬೇಕಾಗತ್ತೈತಿ!?' ಎಂದು ಕಾಶಪ್ಪ ಸಮಯ ಸಾಧಿಸಿ ಪವಾರನ ಕಿವಿ ಊದಿದ್ದೂ ಆಗಿತ್ತು.

"ಆಕಿ ಅಂಥ ಕೆಲ್ಸಕ್ಕೆ 'ವಲ್ಲೆನೇ ವಲ್ಲೆ' ಅಮ್ತಾಳ ಅಂದಿದ್ಯಲ್ಲೋ ಕಾಶ್ಯ! ಈಗ ಹ್ಯಾಂಗ ಅವಗ ಸೆರಗ ಹಾಸ್ತಾಳ ಮತ್ತ?" ಎಂದು ಕೇಳಿದ ಪವಾರ.

"ಸಾಲಿ ಕಲ್ತಾನ, ಪ್ಯಾಂಟು-ಗಿಯಿಂಟು ತೊಟುಕೊಂಡಾನ, ನೋಡಲಿಕ್ಕೂ ಚಂದ್ ಅದಾನ-ಅದ್ಕೇ ಮೆಚ್ಚಿಕೊಂಡಿರ್ತಾಳ ಸೊಕ್ಕಿನ ರಂಡಿ!" ಎಂದು ತನ್ನ ಮನದ ಅಸಮಾಧಾನವನ್ನು ಕಾರಿಕೊಂಡ ಕಾಶಪ್ಪ.

"ಕೆಮ್ಮು, ಹಾದರ ಮುಚ್ಚಿಡಲಿಕ್ಕ ಬರಂಗಿಲ್ಲ. ಇಬ್ರೂ ಒಳಗ ಸೇರ್ಕೊಂಡಿರೋ ಹೊತ್ತಿನಾಗ ಹೋಗಿ ಹಿಡಿದುಬಿಡು ಮತ್ತ. ಉಟ್ಟ ಚೊಣ್ಣ ಉದುರ ಹಂಗ ಬಡಿದು ಊರಿಂದ ಓಡ್ಸಾಮಂತ-ಆ ನನ್ಮಗನ್ನ! ಆ ಸೂಳಿನ್ನೂ ಹಿಡ್ದು ಕಂಬಕ್ಕ ಕಟ್ಟಿ ಒದಿಯಾಮಂತ!"

"ಯಾಕಾಗುವಲ್ದು. ಹಿಡ್ದೆಬಿಡ್ತೀನಿ ನೋಡು, ಇನ್ನೊಂದು ವಾರ ಒಪ್ಪತ್ತಿನಾಗ!" ಎಂದು ಭರವಸೆ ನೀಡಿದ ಕಾಶಪ್ಪ. ಆದರೆ ಅವನ ಒಳ ಮನಸ್ಸಿಗೆ, ಚಂದು-ಸೋನಿಯರ ನಡುವೆ ಅಂತಹ ಅನೈತಿಕ ಸಂಬಂಧ ಖಂಡಿತ ವಾಗಿಯೂ ಇಲ್ಲ ಅನ್ನಿಸುತ್ತಿತ್ತು. ಆದರೂ ಜನಗಳ ಮುಂದೆ ಅಂತಹ 'ಸಪ್ಪೆ' ಅಭಿಪ್ರಾಯವನ್ನು ಮಂಡಿಸಲು ಅವನೆಂದಿಗೂ ಸಿದ್ಧನಿರಲಿಲ್ಲ.

ದಿಬ್ಬದಿಂದ ಗುದ್ದ್ಯಮ್ಮನ ಜಾತ್ರೆಗೆ ಹೋಗಿ ಬಂದ ಕೆಲವರು, ಸೀರೆ ಯುಟ್ಟು ಬಳೆತೊಟ್ಟು 'ಬಸವಿ'ಯಂತಿದ್ದ ಬೇರೆ ಜಾತಿಯ ಹೆಂಗಸಿನೊಂದಿಗೆ ಮಾನ್ಯಾ ಜಾತ್ರೆಯಲ್ಲಿ ಅಡ್ಡಾಡುತ್ತಿದ್ದುದಾಗಿ ಸುದ್ದಿ ಮುಟ್ಟಿಸಿದರು. ಮುಂದೆ ಕೆಲವೇ ದಿನಗಳಲ್ಲಿ 'ಮಾನ್ಯಾ ಸೀರೆಯುಟ್ಟಾಕಿಯನ್ನು ಮನೆಗೆ ಕರೆದುಕೊಂಡೇ ಬಂದುಬಿಟ್ಟಿದ್ದಾನೆ!' ಎಂದು ಹೊಸಬಳನ್ನು ನೋಡಲು ಹೆಂಗಸರು ಗುಂಪು ಕಟ್ಟಿಕೊಂಡು ಹೋದರು.

ಸೋನಿಯ ಬಳಿ ಕೆಲವರು ಪ್ರತ್ಯಕ್ಷ ವಿವರಣೆಯನ್ನೂ ಇತ್ತರು. 'ನಿನ ಪಾಲಿನ ರಂಗು ಆಕಿನ ಮಾರಿಮ್ಯಾಗಿಲ್ಲ ಬೇ ಸೋನಿ! ಎಮ್ಮಿಗ ಬಂದಂಗ ಮೈ

ಬಂದದ! ಮಾಸ್ತ್ಯಾ ಅದೇನ್ ಕಂಡು ಮೆಚ್ಚಿ ಕರಕಂಬುದಾನೋ ಯಾರಿಗೊತ್ತು?...ಏನಂದ್ರ ಆಕಿ ಸಾಲಿ ಕಲ್ತಾಳಂತ! ಚಂದಾಗಿ ಅರಿವಿ ಹೊಲಿತಾಳಂತ! ಗಿರಣಿನೂ ತಂದಾಳಬೇ. ಒಂದ್ ನಾಕಾಣೆ, ಎಳ್ಡಾಣೆ ಕಮ್ಮಿ ಕೂಲಿತಗೊಂಡಳಂದ್ರ ನಾವೂ ಆಕಿನ ಕಡೀನೆ ಅರಿವಿ ಹೊಲಿಸಬೇಕಂತ ಮಾಡೀವಿ!"

ಹರಸಿಂಗ್ ತನ್ನ 'ಮೇಲುಜಾತಿ'ಯ ಸೊಸೆಯನ್ನು ಶಾಸ್ತ್ರದ ಪ್ರಕಾರ ತಮ್ಮ ಕುಲಕ್ಕೆ ಸೇರಿಸಿಕೊಳ್ಳುವುದಕ್ಕಾಗಿ ಗೌಡರು, ಹಿರಿಯರನ್ನೆಲ್ಲ ಕರೆಯಿಸಿದ. ಆಳೆತ್ತರದ ಹೋತ ಕಡಿದು ಊರಿಗೆಲ್ಲ ಅದ್ಧೂರಿಯ ಊಟ ಹಾಕಿಸಿದ. ಬಹುಶಃ ಊಟಕ್ಕೆ ಹೋಗದೆ ಉಳಿದವರೆಂದರೆ ಚಂದು, ಲಚ್ಮಿ, ಸೋನಿ ಹಾಗು ಮಕ್ಕಳು ಮಾತ್ರ.

ಗಂಡ ತನ್ನನ್ನು ಕರೆಯಿಸಿಕೊಳ್ಳುವ ಕೊನೆಯದೊಂದು ಆಶೆಯೂ ನಂದಿ ಹೋದಾಗ, ಸೋನಿ ಜೋಪಡಿಯ ಬಾಗಿಲು ಮುಚ್ಚಿಕೊಂಡು ಮನಸಾರೆ ಅತ್ತು ಎದೆ ಹಗುರ ಮಾಡಿಕೊಂಡಳು. ಈಗೇನಾದರೂ ಆತ ತನ್ನನ್ನು ಕರೆಯುವದೇ ಆದರೆ ಬಂದಿರುವ ಸವತಿಯ ಕಾಲು ತೊಳೆಯಲಿಕ್ಕಷ್ಟೇ, ಪ್ರೀತಿಯಿಂದ ಸಂಸಾರ ಮಾಡುವುದಕ್ಕಂತೂ ಅಲ್ಲ. ಸದ್ಯ... ಅಂವ ಕರೆಯದಿರುವುದೇ ಮೇಲು....ತಾನಿನ್ನು ಜೀವನ ಪೂರ್ತಿ ಒಬ್ಬಂಟಿಗಳು. ಗಂಡ ಸತ್ತ ವಿಧವೆಯಂತೆ ಬರಡು ಬದುಕು ತನ್ನದು. ಇಬ್ಬರು ಮಕ್ಕಳನ್ನು ಸಾಕಿ ಸಲುಹಿ ಮದುವೆ ಮಾಡಿಕೊಡುವುದರ ಹೊರತು ತನ್ನ ಜೀವಿತಕ್ಕೆ ಬೇರೆ ಉದ್ದೇಶವಿಲ್ಲ.

ಪದೇ ಪದೇ ಕಾಡಿಸುವ ಇಂತಹ ಚಿಂತೆಯಿಂದ ಪಾರಾಗಲು ಚಿತ್ರವನ್ನು, ಆದಷ್ಟು ಅಕ್ಷರ ಕಲಿಯುವುದರಲ್ಲಿ ತೊಡಗಿಸುತ್ತಿದ್ದಳು. ಈಗ ರಾತ್ರಿ ಶಾಲೆಗೆ, ಐದು ಮಂದಿ ಹೆಂಗಸರು ಹತ್ತಕ್ಕೂ ಮೀರಿ ಗಂಡಸರು ಬರುತ್ತಿದ್ದರು. ಅವರಲ್ಲಿ ಹೆಂಗಸರ ಪೈಕಿ ಶ್ರದ್ಧೆಯಿಂದ ಕಲಿಯುತ್ತಿದ್ದವಳು ಸೋನಿಯೊಬ್ಬಳೆ. ಲಚ್ಮಿಗಂತು ಕೈಯಲ್ಲಿ ಪಾಟಿ ಹಿಡಿಯುತ್ತಿದ್ದಂತೆಯೇ ಭಯಂಕರ ತೂಕಡಿಕೆ ಸುರುವಾಗಿ ಬಿಡುತ್ತಿತ್ತು. ಮತ್ತೆ ಕೆಲವರಿಗೆ ಆಕಳಿಕೆಯ ಮೇಲೆ ಆಕಳಿಕೆ.

ಒಳಗಡೆ ಕುಳಿತು ಬೀಡಿ ಸೇದುವುದು, ಎಲೆಯಡಿಕೆ ಹಾಕಿಕೊಳ್ಳುವುದು ಇವುಗಳನ್ನು ನಿಷೇಧಿಸಲಾಗಿದ್ದರಿಂದ ಬೀಡಿ ಸೇದುವ, ಎಲೆ ಹಾಕುವ ನೆಪ

ಮಾಡಿಕೊಂಡು ಹೊರಗೆದ್ದು ಹೋಗಿ ಕಾಲಹರಣ ಮಾಡಿ ಬರುವವರೂ ಇದ್ದರು. ಇಂತಹ ಬೇಸರವನ್ನು ಕಳೆಯಲು ಚಂದು, ತಾನು ಗ್ರಾಮಕ್ಕೆ ಹೋಗಿ ಕೊಂಡುತರುತ್ತಿದ್ದ ದಿನಪತ್ರಿಕೆಯಿಂದ ಸುದ್ದಿಗಳನ್ನು ಓದಿ ಹೇಳುತ್ತಿದ್ದ. ಅದೂ ಬೇಸರವಾದರೆ ಯಾವುದೇ ಒಂದು ಸಾಮಾಜಿಕ, ರಾಜಕೀಯ ವಿಷಯವನ್ನೆತ್ತಿಕೊಂಡು ಸ್ವಾರಸ್ಯವಾಗಿ ನಿರೂಪಿಸುತ್ತಿದ್ದ.

ಹಿಂದಿನ ಸಾಮ್ರಾಜ್ಯಶಾಹಿ ಆಳ್ವಿಕೆ, ಭಾರತಕ್ಕೆ ಆಂಗ್ಲರ ಆಗಮನ, ಸ್ವಾತಂತ್ರ್ಯದ ಹೋರಾಟ, ನಂತರದ ಪ್ರಜಾಪ್ರಭುತ್ವ, ಪ್ರಜೆಗಳ ಹಕ್ಕುಗಳು, ಚುನಾವಣೆಯ ಉದ್ದೇಶ ಅದರ ಮಹತ್ವ ಇತ್ಯಾದಿಗಳನ್ನು ಸರಳವಾಗಿ ವಿವರಿಸುತ್ತಿರುವಾಗ, ಆಸಕ್ತಿಯಿಂದ ಆಲಿಸುವ "ವಿದ್ಯಾರ್ಥಿ"ಗಳ ಸಂಖ್ಯೆ ಲೆಕ್ಕಕ್ಕೆ ಸಿಗದಂತೆ ವೃದ್ಧಿಸಿಬಿಡುತ್ತಿತ್ತು! ಶಾಲೆಗೆ ಸೇರಲು ತಮಗಿರುವ ಹಲವು ಹತ್ತು ಅಡ್ಡಿ ಆತಂಕಗಳನ್ನು ಮುಂದೊಡ್ಡಿ ಹೊರಗುಳಿದವರೆಲ್ಲರೂ ಆಗ ಪೂರ್ತಿ ಒಳಸೇರಿಕೊಳ್ಳುತ್ತಿದ್ದರು.

ಆ ದಿನ ಚಂದು ಭಾರತದ ರಾಜರು ರಾಜ್ಯವಾಳುತ್ತಿದ್ದ ವೈಖರಿಯನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸುತ್ತಿದ್ದ. "ಥತ್, ಹಿಂದಿನ ಜಮಾನ ಅಗದಿ ಭಿಕನಾಸಿ ಜಮಾನ ಮಾಸ್ತ್ರೆ. ಈಗಿಂದೇ ಎಷ್ಟೋ ಗುಣ ಅನ್ನಬೌದು!" ಎಂದು ಉದ್ಗರಿಸಿದ-'ಜಾಣ ವಿದ್ಯಾರ್ಥಿ' ಎನ್ನಿಸಿಕೊಂಡಿದ್ದ ಹದಿ ಹರಯದ ರೂಪ್ಲಾ ಚವ್ಹಾಣ್.

"ಈವತ್ನಾಳೆ ದಿನ ಮಾನ ಕೆಟ್ಟು ಹೋದ್ವು ಅಂತ ನಾವು ಹೊಯಿಕೊಳ್ಳಲಿಕ್ಕ ಹತ್ತೇವಿ!...ನೀಯಾದ್ರ ಅಗದಿ ಭೇಷದ ಅನ್ನುತ್ತಿದ್ದಿ! ಅದೇನ್ ಕಂಡೀಲೇ ಈಗಿನ ಜಮಾನದಾಗ ಅಂಥ ಸುಕಾನ? ಕಳ್ಳ ಸುಳ್ಳ ಮಂದಿ ರಾಜರಂಗ ಮಂತ್ರಿ ಹಂಗ ಆರಾಮ ಅದಾರ: ಬಡ ಮಂದಿ ಹೊಟ್ಟೆಗಿಲ್ದ ಸಾಯಾಕ ಹತ್ಯಾರ!..." ಚಂದೂನ ಶಿಷ್ಯಗ ಪೈಕಿ ಮತ್ತೊಬ್ಬ ವಯಸ್ಕ ತಿರುಗಿಬಿದ್ದ.

ತನ್ನ ಶಿಷ್ಯರ ವಾದ-ವಿವಾದವನ್ನು ಆಲಿಸುತ್ತ ಚಂದು ತುಟಿ ಬಿಚ್ಚದೆ ಕುಳಿತ.

"ಏನಾರ ತ್ರಾಸಿರೊವಲ್ಲದ್ಯಾಕ ಬಿಡು. ಈಗಿನ ಜಮಾನದಾಗ ನಮ್ಮಂಥ ಬಡ ಮಂದಿಗೂ ಸ್ವಲ್ಪ ಥ್ವಾಡೆ ಅಲ್ಲ ಥ್ವಾಡೆ ಕಿಮ್ಮತ್ತು ಐತಿ. 'ಆಳೋನು ಇಂವ

ನೀಚ ನಮ್ಮಗ ಅದಾನ' ಅಂತ ನಮಗ ಅನ್ನಿಸಿದ್ರ, ಓಟು ಕೊಡಲಾರದಂಗ ಮನಿಗ ಕಳಿಸೊ ಅಷ್ಟು ಶಕ್ತಿಯಾರ ನಮಗೈತಿ! ಹಿಂದ್ಕ ಹಂಗಿತ್ತೇನು? ಸಾಯೋ ಮಟ ರಾಜ ಇದ್ದೋನು ರಾಜನೆ ! ಅಷ್ಟೇ ಅಲ್ಲ ಮಕ್ಕಳಿಗ ಲಡಾಯಿ ಮಾಡೋ ದೊಂದು ಚಟಾನೇ ಬಿದ್ದಿತ್ತು ನೋಡು. ಎಲ್ಲಾರ್ದೂ ಕೊಂದು ತನ್ನ ರಾಜ್ಯ ಬಡಾಯಿಸ್ಕೊಬೇಕು ಅಂಬೋದೊಂದೇ ಗೀಳು. ಅಪ್ಪಗ ಅಪ್ಪ ಅನ್ನು ಹಂಗಿಲ್ಲ. ಅಣ್ಣಗ ಅಣ್ಣ ಅನ್ನು ಹಂಗಿಲ್ಲ. ಮಕ್ಳು ಒಬ್ಬರ ಮ್ಯಾಲೊಬ್ರು ಕತ್ತಿ ಬೀಸೂದ, ಬೀಸೂದು. ರಗತದ ಹೊಳೆಯಾಗ ಈಜಾಡೂದs ರಾಜ್ಯ ಆಳೋದು..."

ಅಂಗೈ ಮೇಲೆ ತಂಬಾಕು ಹಾಕಿ ತೀಡುತ್ತ ರೂಪ್ಲಾನ ವಾದಕ್ಕೆ ಕಿವಿ ಗೊಟ್ಟಿದ್ದ ತಾರಾಬ್ಯಾಯಿಯೂ ಆತನ ಮಾತನ್ನು ಸಮರ್ಥಿಸಿದಳು. "ಖರೆನೇ ಅದ. ಬದುಕಿರೊಮಟ ಬರೇ ಕಡಿ, ಕೊಲ್ಲು ಅಂದಕೇಸಿ ಬಡಿದಾಡ್ತಾನೆ ಇದ್ರ ಬದುಕಿನಾಗ ಸುಖ ಕಾಣೊದಾರ ಯಾವಾಗ? ಅಂಥ ರಾಜಕೀ ಆಳೋದ ಕ್ಕಿನ್ನ ನಮ್ಮಂಗ ಕೂಲಿ ಮಾಡ್ಕೊಂಡ್ ಬದುಕೋದೇ ಛೇಷ್ ನೋಡು!"

"ತಾರಾಬಾಯಿ ಪಾಯಿಂಟೇ ಪಾಯಿಂಟು ನೋಡ್ರೆಪ್ಪ! ಹತ್ತಕೊಂದ್ ಮುತ್ತು ಕಟ್ಟೊ ಹಂಗ ಒಡ್ತಿದಾಳ ಒಂದೊಂದೇ ಮಾತ್ನ!" ಎಂದು ಹೋಗ ಳುತ್ತ ಕಾಶ್ಯ ತಂಬಾಕಿಗಾಗಿ ಅವಳತ್ತ ಕೈ ಚಾಚಿದ.

"ಯಪ್ಪಾ, ರಾಜಾ ರಾಜಾ ಅಮ್ತಾರಲ್ಲಾ ಅಂದ ಹೆಂಗಿರ್ತಾನ? ಸಿನೆ ಮಾದ ರಾಜಕುಮಾರಸ್ಹಂಗಾ.!" ಗದ್ದಕ್ಕೆ ಕೈ ಹಚ್ಚಿ ಕುಳಿತು ಎಲ್ಲರ ಮಾತನ್ನು ಆಲಿಸುತ್ತಿದ್ದ ಕಾಶಪ್ಪನ ಮಗ ಒಮ್ಮೆಲೆ ಪ್ರಶ್ನೆ ಮಾಡಿದಾಗ ಕುಳಿತ ಮಂದಿ ಕಿಸಿಕಿಸಿ ನಕ್ಕರು.

"ನಾ ಎಂದು ಕಂಡೀನೋಯಪ್ಪ ರಾಜನ್ನ? ನಮ್ಮ ಲಚಮವ್ವ ಒಬ್ಬಾ ಕಿನೇ ನೋಡು ಮೈಸೂರು ಸೀಮಿಗ ಹೋಗಿ ಮಾರಾಜನ್ನ ನೋಡಿಬಂದಿರು ವಾಕಿ!" ಎಂದು ವ್ಯಂಗ್ಯವಾಗಿ ಹೇಳಿ, ತಾರಾಬಾಯಿ ಕೊಟ್ಟ ತಂಬಾಕನ್ನು ದವಡೆಗೆ ಸೇರಿಸಿ ಕಾಶಪ್ಪ ಎದ್ದು ಮನೆಗೆ ನಡೆದ.

ಲಚ್ಮಿ ಏನನ್ನೋ ನೆನಸಿಕೊಂಡು ಚಿಂತಿತಳಾಗಿ ಕುಳಿತುಬಿಟ್ಟಳು. ಅದನ್ನು ಲಕ್ಷ್ಯಕ್ಕೆ ತೆಗದುಕೊಳ್ಳದ ಹುಡುಗ ಈ ಬಾರಿ ಲಚ್ಮಿಯನ್ನೇ ಕೇಳಿದ-"ಅವ್ವಾ ರಾಜಾ ಅಂದ್ರ ಹ್ಯಾಂಗಿರ್ತಾನ?"

ಲಚ್ಮಿಯ ಮನದಬೇಗೆಯನ್ನರಿತ ಹೇಮ್ಲಾನಾಯ್ಕ ಹುಡುಗನನ್ನು ಜಬರಿಸಿದ—"ಎಷ್ಟು ಸರ್ತಿ ಕೇಳಾಕ ಹತ್ತೀಲೆ ಮಗನ. ರಾಜ ಈಗಿಲ್ಲ ಸುಮ್ನು ಕೂಡು. ಹಿಂದಿನ ಕಾಲಕ್ಕ ಇರ್ತಿದ್ದ!''

"ಹಿಂದಿನ ಕಾಲದಾಗೇ ಇರ್ತಿದ್ದ ಬಿಡು. ಆತ ಹೆಂಗಿರ್ತಿದ್ದ? ಅಂತ ನಾ ಕೇಳಾಕ ಹತ್ತೀನಿ" ಹುಡುಗ ಪಟ್ಟು ಬಿಡದೆ ಕೇಳಿದಾಗ "ನನ್ನಂಗ ನಿನ್ನಂಗ ಮನ್ಸಾನೇ ಇರ್ತಿದ್ದ ತಿಂತಿದ್ದ-ಹೇಲ್ತಿದ್ದ! ನಡಿ ಮನಿಗ. ಉಂಡು ಮಕ್ಕೊ ಹೋಗು" ಎನ್ನುತ್ತ ಆತ ಎದ್ದು ನಿಂತ. ಎಲ್ಲರೂ ಮಾಸ್ತರಿಗೆ ಹೋಗಿ ಬರುವುದಾಗಿ ಹೇಳಿ-ಹೊರಟುಹೋದರು.

ಲಚ್ಮಿ ಮನೆಗೆ ಹೊರಟಾಗಲೂ ಮಂಕಾಗಿಯೇ ಇದ್ದುದನ್ನು ಗಮನಿಸಿದ ಚಂದುವಿಗೆ ಆ ಬಗ್ಗೆ ಕುತೂಹಲ ಹುಟ್ಟಿತು. ಗುಡಿಯ ಬಾಗಿಲು ಹಾಕಿಕೊಂಡು ಅವಳ ಮನೆಗೆ ಹೋದ. ಕಟ್ಟೆಯ ಮೇಲೆ ಲಚ್ಮಿ, ಸೋನಿ ಇಬ್ಬರೂ ಶೋಕತಪ್ತ ಪ್ರತಿಮೆಗಳಂತೆ ಕುಳಿತಿದ್ದರು.

"ದೊಡ್ಡವ್ವಾ, ಹಿಂಗ್ ಯಾಕ್ ಮಂಕಾಗಿ ಕುಂತಿದ್ದಿ?..." ಎಂದು ಮೆದುವಾಗಿ ಕೇಳುತ್ತ ಆಕೆಗೆ ಎದುರಾಗಿ ಕುಳಿತ.

ಉತ್ತರವಾಗಿ ಲಚ್ಮಿ ನಿಟ್ಟುಸಿರು ಹಾಕಿದ್ದಷ್ಟೆ.

''ನೀ ಮಹರಾಜನ್ನ ನೋಡಿದೀಯ ಅಂತ ಕಾಶಪ್ಪ ಹೇಳಿದನಲ್ಲ ಖರೆನಾ ದೊಡ್ಡವ್ವಾ? ಯಾವಾಗ ನೋಡಿದ್ದಿ? ಮೈಸೂರಿಗೆ ಹೋಗಿದ್ಯಾ? ಕುತೂಹಲದಿಂದ ಪ್ರಶ್ನಿಸಿದ.

''ಅಯ್ಯೋ ಅದನ್ನೇನು ಕೇಳ್ತಿದ್ದಿ ಬಿಡ್ಮಗ. ಆ ಕೆಟ್ಟ ಕಥೀನ!" ಎಂದು ಕಣ್ಣಿಗೆ ಸೆರಗು ಹಚ್ಚಿದಳು ಲಚ್ಮಿ.

ಚಂದು ಮತ್ತಷ್ಟು ಸಮೀಪಕ್ಕೆ ಸರಿದು "ನಿನ್ನ ಕಾಡಿಸ್ತಿರೋದಕ್ಕೆ ಸಿಟ್ಟು ಮಾಡ್ಕೋಬ್ಯಾಡ ಅದೇನು ಕಥಿ ಹೇಳು ದೊಡ್ಡವ್ವಾ!" ಎಂದು ಗೋಗರೆದಾಗ, ಅವನ ಬೇಡಿಕೆಯನ್ನು ತಳ್ಳಿಹಾಕುವುದು ಲಚ್ಮಿಯಿಂದ ಸಾಧ್ಯವಾಗಲಿಲ್ಲ. ಅವಳು ಕೆಲವು ಕ್ಷಣಗಳ ನಂತರ ಕಣ್ಣೀರು ತೊಡೆದುಹಾಕಿ, ಗಂಟಲು ಸರಿಪಡಿಸಿಕೊಂಡು ಹೇಳಲಾರಂಭಿಸಿದಳು:—

"ನನ್ನ ಹಿರಿಯಾ ಹೀರಾಪವಾರ್ ಅಗದಿ ಚಲೋ ಮನ್ಸ. ನೋಡಲಿಕ್ಕೂ ಛೇಪ್ ಇದ್ದ. ಭಟ್ಟಿ ಸರಾಯಿ ಇಳ್ಸಿ ಮಾರಾಟ ಮಾಡ್ತಿದ್ದ. ನನಗೊಂದು ಡಬ್ಬಿ ಅಂಗ್ಡಿ ಹಚ್ಚಿಕೊಟ್ಟಿದ್ದ."

"ಇದೇ ಅಂಗಡಿ ಹೌದಲ್ಲ ದೊಡ್ಡವ್ವ?" ಚಂದು ನಡುವೆ ಕೇಳಿದಾಗ "ಇದಲ್ಲಪ್ಪ..." ಎಂದು ತಲೆಯಾಡಿಸಿದಳು.

"ನಿನಗ ಅತ್ತಿ-ಮಾವ ಇರಲಿಲ್ಲೇನತ್ತಿ?" ಎಂದು ಸೋನಿಯೂ ಒಂದು ಪ್ರಶ್ನೆ ಹಾಕಿದಳು.

"ಇದ್ರು. ಮಾವ ಚಲೋ ಮನ್ಸ. ಅತ್ತಿ ಮಹಾ ಕಟಕಿ. ನನ್ನಕೂಡ ಸೇರ್ತಿದ್ದಿಲ್ಲ. ನನ್ನ ಮೈದುನನ ಮನಿಯಾಗ ಇರ್ತಿದ್ಲು. ನಮ್ಮ ಐದು ಕೂರಿಗೆ ಜಮೀನನ್ನ ಇದರ ಸಲುವಾಗೇ ನಾವು ಮೈದುನನ್ಗೆ ಬಿಟ್ಟುಕೊಟ್ಟಿದ್ವಿ...." ಎಂದುತ್ತರಿಸಿದ ಲಚ್ಮಿ ತನ್ನ ಕಥೆಯನ್ನು ಮುಂದುವರೆಸಿದಳು.

"ನಾ ಬಸುರಿ ಇದ್ದಾಗ ಮೈಸೂರು ಸೀಮೆಗ ಹೋಗಬೇಕು. ಅಲ್ಲೇ ಚಾಮುಂಡೇಸ್ವರಿ ಗುಡಿ ನೋಡ್ಬೇಕು. ಮೈಸಾಸುರನ ಗೊಂಬಿ ನೋಡಬೇಕು ಅಂತ ಬಯಸಿದೆ....!"

"ಯವ್ವಾ! ಎಂಥ ಬಯಕೆ! ನಮ್ಮಾವ ಒಪ್ಪಿಕೊಂಡನೇನತ್ತಿ!"

"ಸಂತೋಷದಿಂದ ಒಪ್ಪಿಕೊಂಡ. ನನ್ನ ಕರಕೊಂಡ್ ಹೋಗಲಿಕ್ಕ ತಯಾರೂ ಆಗ್ಬಿಟ್ಟ! ದಸರಿ ಹಬ್ಬ ಚಾಲು ಆಗಲಿಕ್ಕ ಇನ್ನಾ ಒಂದಿನ ಉಳಿದಿರುವಾಗ ಹೊಂಡಬೇಕು ಅಂದುಕೊಂಡ್ವಿ. ಆದ್ರ ಮಂದಿ ಎಲ್ಲ 'ನೂರಾರು ಹರ್ದಾರಿ ದೂರದ ಸೀಮಿಗ, ಬಸುರಿ ಹೆಣ್ಣು ಮಗಳನ್ನ ಬಸ್ಸಿನಾಗ ಕೂರಿಸಿಕೊಂಡು ಹ್ವಾದಿ ಅಂದ್ರ ಆಕೆನ ಹೊಟ್ಟೆ ಇಳಿಯೂದs ಖರೆ ನೋಡು!' ಅಂತ ಅಂಜಿಸಿಬಿಟ್ರು. ಬ್ಯಾಡೇ ಬ್ಯಾಡಂತ ಸುಮ್ಮನಾದ್ವಿ.

ದಿನಾ ತುಂಬಿಂದ ನನ ಮಗ ಹುಟ್ದ. ತೇಜು ಅಂತ ಅವನ ಹೆಸರಿಟ್ವಿ. ಎಲ್ಲಾ ಅವರಪ್ಪನಂಗೇ ಇದ್ದ!..." ಲಚ್ಮಿ ಕಂಠದ ದೃಢತೆ ತಪ್ಪಿ ಕ್ಷಣಕಾಲ ಮೌನವಹಿಸಿದಳು.

"ನೀವು ಮೈಸೂರು ನೋಡಲಿಕ್ಕ ಹೊಂಟಿದ್ರಲ್ಲಾ, ಅಷ್ಟೊಂದು

ರೊಕ್ಕ ನಿಂಬಲ್ಲಿ ಇದ್ವೇನು ದೊಡ್ಡವ್ವ?" ಆಕೆಯ ಮೌನಮುರಿಯಲೆಂದೇ ಚಂದು ಪ್ರಶ್ನಿಸಿದ.

"ಇದ್ವು. ಇಬ್ರು ಕೈತುಂಬ ಗಳಿಸ್ತಿದ್ವಿ. ಉಂಬಾಕ ಉಡಾಕ ತ್ರಾಸಿದ್ದಿಲ್ಲ. ನನ್ನ ಹಿರಿಯ ಆಗದಿ ಶ್ಯಾಣಾತ. ಬೇಂಕಿನೊಳಗೆ ಸಾವ್ರ ರೂಪ್ಯಾ ರೊಕ್ಕ ಜಮ ಮಾಡಿದ್ವ. ಉಳುಕಿದ್ದ ನಾಲ್ಕುನೂರು ರೂಪಾಯಿ ಕೈಗ ತಗೊಂಡು ನಾವು ದಸರಿ ನೋಡಲಿಕ್ಕ ಹೊಂಟ್ವಿ..."

"ನಿಮ್ಮಗನ್ನ ಕರಕೊಂಡ್ಹೋಗಲಿಲ್ಲಾ?" ಚಂದು ಕೇಳಿದ.

"ಹ್ಯಾಂಗ ಬಿಟ್ಟು ಹ್ವಾದೇವೋ ಯಪ್ಪಾ! ಆತ ನಮಗ ಕಣ್ಣಿನಂಗಿದ್ದ! ಹೊಸ ಅಂಗಿ ಚಣ್ಣ ತೊಡಿಸಿ, ಬಣ್ಣದ ಟೊಪ್ಪಿಗೆ ಹಾಕಿ ಸಿಂಗಾರ ಮಾಡ್ಕೊಂಡ್ ಕರಕೊಂಡ್ಹೋದ್ವಿ...ಮೈಸೂರು ಪ್ಯಾಟಿಯಾಗ ಆನಿ ಅಂಬಾರಿ ಮ್ಯಾಲ ಕುಂತ್ಕಂಡಿದ್ದ ಮಾರಾಜರನ್ನ ನೋಡಿದ್ವಿ. ಅರಮನಿ ಆಜುಬಾಜು ಅಡ್ಡಾಡಿ ನೋಡಿದ್ವಿ. ಬೆಟ್ಟ ಏರಿ ಚಾಮುಂಡವ್ವನ ದರಸ್ನ ಪಡದ್ವಿ. ಮೈಸಾಸುರನ ಗೊಂಬಿ ನೋಡಿದ್ವಿ. ಖರೇ ಅಂದ್ರ ನಾನು ತೇಜು ಅದನ್ನ ನೋಡಿ ಅಂಜಿ ಬಿಟ್ವಿ!...ಮೂವರು ಕುಂತು ಒಂದ್ ಫೋಟ ಹಿಡಿಸಿಕೊಂಡ್ವಿ...ಹಿಂದಾಗಡಿ ಮೈಸೂರಪಾಕ, ಬೂಂದಿ ಉಂಡಿ ತಿಂದು ಊರಿನ ಮಂದಿಗೆಲ್ಲ ಹಂಚಲಿಕ್ಕಂತ ಒಂದ್ ಕೈಚೀಲದ ತುಂಬ ಹಣ್ಣು-ಹಂಪ್ಲ, ಉಂಡಿ, ಸಕ್ರಿ ಮಿಠಾಯಿ ಎಲ್ಲಾ ಕಟ್ಟಿಸ್ಕಂಡು, ಹೊಳ್ಳಿ ರೈಲುಗಾಡಿಯಾಗ ಹತ್ತಬೇಕಂತ ಹೊಂಡೋ ಹೊತ್ತಿನಾಗ ನನ್ನ ಹಿರಿಯಗ ವಾಂತಿ-ಬೇದಿ ಸುರುವಾಗಿಬಿಡ್ತು!

'ಅದು ಕಾಲ್ರಾ ಬ್ಯಾನಿ. ಲಗೂ ದವಾಖಾನಿಗ ಒಯ್ಯಿ!' ಅಂತ ಯಾರೋ ಅಂದಾಗ ನಾ ಎದಿ ಒಡಕೊಂಡ್ನಿ. ನಾ ಸಣ್ಣಾಕಿ ಇದ್ದಾಗ ನಮ್ಮೂರಾಗ ಒಮ್ಮೆ ಕಾಲ್ರಾ ಬ್ಯಾನಿ ಬಂದಿತ್ತು. ಒಂದೇ ದಿನಕ್ಕ ನಮ್ಮಜ್ಜಿನೂ ನಮ್ಮಣ್ಣ ಇಬ್ರೂ ತೀರಿಕೊಂಡ್ರು. ಒಂದ್ ಮನಿಯಾಗ ಒಬ್ಬ ಮನ್ಸ ಸತ್ತನಂದ್ರ ಆತನ ಸಮಾದಿ ಮಾಡಿ ಬರೂದರೊಳಗ ಮತ್ತ ಒಂದೋ ಎರಡೋ ಹೆಣ ಬಿದ್ದಿರ್ತಿದ್ವು! ಕಡ್‌ಕಡೀಗ ಹೆಣಾನ ಸಮಾದಿ ಮಾಡಲಿಕ್ಕ ಕೂಡ ಆಗಲಿಲ್ಲ. ಗುಡ್ಡಕ್ಕ ಒಯ್ದು ಒಕಟ್ ಬರಾಕ ಸುರು ಮಾಡಿದ್ರು. ಎಷ್ಟೋ ಸರ್ತಿ ಹೆಣ ಒಯ್ಯೋ ಮಂದಿನೇ ನಡು ಹಾದ್ಯಾಗ ಜಡ್ಡಾಗಿ ಬೀಳ್ತಿದ್ರು.

ಯಾರಾರ ಜೀವಂತ ಇರೋ ಮಂದಿ ಆ ಹೆಣನ ಒಯ್ದು ಒಕಟ್ ಬರಬೇಕಾಗ್ತಿತ್ತು! ಸತ್ತ ಸುದ್ದಿ ಕೇಳ್ಳಿಕ್ಕ ಸಹಿತ ಉಳಿಲಾರದಂಗ ಎಷ್ಟೊ ಮನಿಗುಳ ಬಾಗ್ಲಾ ಮುಚ್ಚಿ ಹೋಗಿತ್ತು!

ಇದ್ನೆಲ್ಲ ನೆನಸ್ಕಂಡು ನನ್ನ ಕೈಕಾಲು ನಡುಗಲಿಕ್ಕ ಹತ್ತ್ಯು...ಆಗ ನಾ ಇನ್ನs ಎಳೀ ಹರೇದಾಕಿ ಇದ್ದೆ. ನಮ್ಮೂರು ಬಿಟ್ಟು ಬ್ಯಾರೆ ಯಾ ಊರ್ನೂ ಕಂಡಾಕ್ಯಲ್ಲ! ಖೂನಾ, ಗುರ್ತಾ ಇಲ್ದ ಊರಿಗ ಬಂದು ಹಿಂಗಾತಲ್ಲ ದೇವ್ರೇ ಅಂತ ಜಡ್ಡಾದ ಹಿರಿಯನ ಮುಂದ ಕುಂತು ಅಳಾಕ ಸುರುಮಾಡ್ದೆ. ದವಾಖಾನಿ ಎಲ್ಲದ? ಈತನ್ನ ಯದರಾಗ ಒಯ್ಯಬೇಕು? ಏನ್ಮಾಡಬೇಕು ಅಂಬೋದೂ ನನಗ ತಿಳಿಯಲಿಲ್ಲ. ಬೋರಾಡಿ ಅಳಾಕ ಹತ್ದೆ.

ಅಷ್ಟರಾಗ ಒಬ್ಬ ಮಠದಯ್ಯ ನನ್ನ ನೆರವಿಗ ಬಂದ. ಕುದರಿಗಾಡಿ ಕಿರಾಯಕ್ಕ ಹಿಡ್ದು ಅದರಾಗ ನನ್ನ ಹಿರಿಯನ್ನೂ ನಮ್ಮನ್ನೂ ಕೂಡೇ ದವಾಖಾನಿಗ ಒಯ್ದ. ಹಿರಿಯನ್ನ ಒಳಗ ಹಾಕಿ ಬರಾಕ ಪುರಸತ್ತಿಲ್ಲ, ನನಗೂ ಜಡ್ಡು ಕಾಣಿಸಿಕೊಳ್ತು! ಹಿಂದ್ಕ ಮುಂದ್ಕ ಚಾಲು ಆದಿಂದ ನಾ ಎಲ್ಲೊ, ನನ ಕೂಸೆಲ್ಲೋ, ನನ ಗಂಡೆಲ್ಲೋ ಅಂತ ಬೇವರ್ಸಿಯಾಗಿಬಿಟ್ಟೆ!...' ಲಚ್ಮಿ ಅಳತೊಡಗಿದಳು. ಸೋನಿ ಅವಳನ್ನು ಮೀರಿಸುವಂತೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಚಂದು ದುಃಖಿಸುತ್ತ ಕುಳಿತ.

ಸ್ವಲ್ಪ ಹೊತ್ತಿನ ಬಳಿಕ ಲಚ್ಮಿ ಮನಸನ್ನು ಸ್ತಿಮಿತಕ್ಕೆ ತಂದುಕೊಂಡು ಮುಂದಿನ ಕತೆಯನ್ನು ಹೇಳತೊಡಗಿದಳು: "ಆ ಊರಾಗ ಭಾಳ ಮಂದಿಗ ಜಡ್ಡು ಹತ್ತೈತಂತ ದವಾಖಾನಿ ಮಂಚಹಿಡಿಸಲಾರಧಂಗ ಮಂದಿನ ತಂದು ಹಾಕಿದ್ರು. ನಾ ದ್ಯಾಸ ಕಳಕೊಂಡ್ ಏಸ್ಹೊತ್ತಾಗಿತ್ತೋ, ಏಸ್ ಒಂದೆರ್ಡು ದಿನಾನೇ ಆಗಿತ್ತೋ ಯಾರಿಗ್ಗೊತ್ತು? ತೋಳಿಗ ಚೂಜಿ ಚುಚ್ಚಿದಂಗಾಗಿ, ಬ್ಯಾನೆ ಆದಾಗ ಕಣ್ಣು ತೆರ್ದು ನೋಡಿದ್ನಿ...ದವಾಖಾನಿಯ ಒಂದು ಮೂಲಿಯಾಗ ನೆಲದ ಮ್ಯಾಲ ಹಾಸ್ಗಿ ಹಾಸಿ ನನ್ನ ಮಲಗ್ಸಿದ್ರು. ಕೆಂಪನೆದೊಂದು ಕಂಬ್ಳಿ ಹೊಚ್ಚಿದ್ರು. ಅದನ್ನ ಸರಿಸಿ ನನ್ನ ಮೈ ನೋಡ್ಕೊಂಡೆ-ನಾ ಉಟ್ಕೊಂಬಂದಿದ್ದ ನೂರಾರು ರೂಪಾಯ್ ಕಿಮ್ಮತ್ತಿನ ಕಸೂತಿ ಹಾಕಿದ ಲಂಗ-ದಾವಣಿ ಏನೇನೂ ಇರಲಿಲ್ಲ. ತೆಳ್ಳನೆದೊಂದು ಬಿಳಿ ಸೀರೆ ಉಡ್ಸಿದ್ರು...

ಜೋರಾಗಿ ಅಳಬೇಕನ್ನಸ್ತು. ಆದ್ರ ಮೈಯಾಗ ಕಸುವಿದ್ದಿಲ್ಲ. "ನನ ಗಂಡ ಎಲ್ಲಿ? ನನ ಮಗ ಎಲ್ಲಿ?" ಅಂತ ಒಬ್ಬಾಕಿ ನರ್ಸಮ್ಮಗ ಕೇಳ್ದೆ.

"ಅದೇನೂ ನನಗ ಗೊತ್ತಿಲ್ಲ. ನಿನಗ ಇನ್ನ ಪೂರ ಆರಾಮ ಆಗಿಲ್ಲ. ಮಾತಾಡಲಾರಥಂಗ ಮನಿಕ್ಕೊ. ಮಾತಾಡಿದ್ರ ಆಯಾಸ ಆಗ್ತದ..." ಅಂದ್ಲು. ಆದ್ರ ನನ ಗಂಡ-ಮಗನ ಸುದ್ದಿ ತಿಳಿಲಾರ್ದ ಬಿದ್ಕೊಂಡಿರೋದು ನನ್ನಿಂದಾಗಲಿಲ್ಲ. 'ತೇಜೂ ತೇಜೂ' ಅಂತ ಒಂದೇ ಸಮನೆ ಚೀರಾಕ ಸುರು ಮಾಡ್ದೆ. ಡಾಕಟ್ರ ಸಾಹೇಬ ನನ್ನ ಬಲ್ಲಿ ಬಂದ. ಆತ್ನೂ ಮೊದಲು ನರ್ಸಮ್ಮ ಹೇಳಿದ ಮಾತ್ನೇ ಹೇಳ್ದ. ಆದ್ರ ನನ್ನ ತೇಜೂ ಬೇಕಾಗಿತ್ತು...ಜೀವಕಿಂತ್ಲೂ ಹೆಚ್ಚಿನ ಪಿರೀತಿ ಮಾಡ್ತಾ ಇದ್ದ ನನ್ನ ಹಿರಿಯ ಬೇಕಾಗಿತ್ತು...ನಾ ಒಂದೇ ಸಮನೆ ಕೂಗಾಕ ಸುರು ಮಾಡ್ದೆ. ಎದ್ದು ಹೋಗಿ ದವಾಖಾನಿ ತುಂಬಾ ಅಡ್ಡಾಡಿ ಅವರಿಬ್ಬರ್ನೂ ಹುಡುಕಾಡಬೇಕು ಅನ್ನಿಸಿತ್ತು. ಆದ್ರ ಏಳೂದ್ ಆಗ್ತಿದ್ದಿಲ್ಲ. ನಾ ಬರೆ ಚೀರೋದೇ ಮಾಡ್ದಾಗ ನರ್ಸಮ್ಮ ಬಂದು ಸೂಜಿ ಮಾಡ್ತಿದ್ಲು ನನಗ ನಿದ್ದಿ ಬಂದ್ಹಂಗ ಆಗತ್ತಿತ್ತು.

ಮುಂಪರು ಹರ್ದಾಗ-ನಮ್ಮನ್ನೆಲ್ಲ ದವಾಖಾನಿಗ ಒಯ್ದಿದ್ದ ಅಯ್ಯ ನನ್ನ ಮುಂದ ಬಂದು ನಿಂತಿದ್ದ. "ಅಯ್ಯಾ ನನ್ನ ಗಂಡಾನು, ನನ್ಮಗ ಎಲ್ಲಿ?" ಅಂತ ಅಗದಿ ಆಸಿಲಿಂದ ಕೇಳ್ದೆ.

"ಮನ್ಸು ಗಟ್ಟಿ ಮಾಡ್ಕೊ ಮಗಳೇ-ಅವರಿಬ್ರೂ ಕಾಲ್ರಾ ಬ್ಯಾನೆಯಾಗ ತೀರಿಕೊಂಡ್ರು. ಶಿವನ ದಯದಿಂದ ನೀ ಒಬ್ಬಾಕಿ ಬದುಕಿ ಉಳಿದಿದ್ದಿ...! ಭಯಪಡಬ್ಯಾಡ. ನಾ ನಿನ್ನನ್ನ ಮಠಕ್ಕ ಕರಕೊಂಡ್ಹೋಗ್ತೀನಿ!" ಅಂದ. "ಇಲ್ಲ ಅಯ್ಯಾ. ನನಮಗ ಆರಾಮಿದ್ದ. ಆತ ಸತ್ತಿಲ್ಲ. ನನ್ನ ಗಂಡನೂ ಸತ್ತಿಲ್ಲ. ನಾ ಉಳ್ದೀನಿ ಅಂದಮ್ಯಾಲ ಅವರಿಬ್ಬರೂ ಹ್ಯಾಂಗ ಸಾಯ್ತಾರ? ನೀ ಸುಳ್ಳಾಡ್ತಿದ್ದೀ!" ಅಂದೆ.

"ಶಿವನಾಣೆಗೂ ನಾ ಸುಳ್ಳಾಡಿಲ್ಲ ಮಗಳೇ, ಸಹಿಸ್ಕೊ!" ಅಂತ ಸಮಾಧಾನ ಮಾಡಲಿಕ್ಕ ಬಂದ.

"ಹಂಗಾದ್ರ ಅವರ ಹೆಣಾನ ಲಗೂ ತೋರ್ಸು. ಅವರಿಬ್ಬರ ಜೋಡಿ

ನಾನು ಸಾಯ್ತೀನಿ. ನನಗಿನ್ನ ಬದುಕಿರೊ ಇಚ್ಛಾ ಇಲ್ಲ!" ಅಂತ ಎದ್ದು ಕೂತೆ. "ದಿಕ್ಕಿಲ್ದ ಹೆಣಗಳನ್ನ ಮೂರು ಮೂರು ದಿನಗಳವರೆಗೂ ಇಡಲಿಕ್ಕ ಬರಂಗಿಲ್ಲ ಮಗಳೇ. ಅವನ್ನ ಆಗ್ಲೇ ದಫನ್ ಮಾಡಿ ಆಯ್ತು. ನೀನಾದ್ರು ಬದುಕ್ತಿದ್ದಿ ಅಂಬೋ ಭರವಸೆ ನಮಗಿದ್ದಿಲ್ಲ ..! ಶಿವನ ದಯೆ...!"

"ನನಗ ಬೇಕಾಗಿಲ್ಲೋ ಆ ಶಿವನ ದಯಾ:" ಅಂತ ಕೂಗಾಡ್ದೆ ನನ್ನ ಎದೆ ಒಡ್ಚ್ಹೋಗಲಿಲ್ಲ. ಇನ್ನಾದ್ರೂ ಬದುಕೇ ಇದ್ದೆ! ಅವರಿಬ್ಬರನ್ನೂ ಕೂಗಿ ಕೂಗಿ ಕರಿಯೋದೆ ನನ ದಂಧಾ ಆತು. ಅಯ್ಯ ದವಾಖಾನಿಲಿಂದ ನನ್ನನ್ನ ತನ್ನ ಮಠಕ್ಕೆ ಒಯ್ದ. ನಾ ಗದ್ಲ ಮಾಡೋದಕ್ಕ ಬ್ಯಾಸ್ರಪಟ್ಕೊಂಡು ಒಂದು ಖೋಲಿಯಾಗ ಹಾಕಿ ಕೀಲಿ ಹಾಕಿಬಿಟ್ರು. ತಿಂಗಳ ಕಾಲ ನಾ ಅದರೊಳಗಿಂದ್ಲೇ ನನ್ನ ಮಗನ್ನ ಕೂಗಿ ಕರೀತಾ ಇದ್ದೆ. ಅಂವ ಎಂದೂ 'ಓ' ಅನ್ನಲೇ ಇಲ್ಲ!

ಅಯ್ಯ ದಿನಾ ಒಂದೊಂದು ತಾಸು ನನ್ನ ಖೋಲಿ ಕೀಲಿ ತೆಗಸಿ, ಹತ್ರ ಬಂದು ಕೂಡ್ತಿದ್ದ. ಏನೇನೋ ಸಮಾಧಾನದ ಮಾತು ಹೇಳ್ತಿದ್ದ. ಬಲವಂತ ಮಾಡಿ ಒಂದೆರಡು ತುತ್ತು ಅನ್ನ ಉಣಿಸಿ ಹೋಗ್ತಿದ್ದ. ಆ ಮಠ ದೊಡ್ಡ ದೊಂದು ಸಂಸಾರದಂಗೇ ಇತ್ತು. ಎಮ್ಮಿ-ಆಕ್ಳಾ ಕಟ್ಟಿದ್ರು, ಹತ್ತಿಪ್ಪತ್ತು ಮಂದಿ ಆಳು ಕಾಳಿದ್ರು. ಕುಟ್ಟೋದು, ಬೀಸೋದು, ಕೇರೋದು, ಅಡಗಿ ಮಾಡೋದು, ಹಾಲು ಹಿಂಡೋದು, ಎಲ್ಲಾನ್ನೂ ಹೆಣ್ಣುಮಕ್ಳೇ ಮಾಡ್ತಿದ್ರು. ಮತ್ತ 'ವಚನ ಪದ' ಅಂತ ಹಾಡೋ ಹೆಣ್ಣುಮಕ್ಳು ಬ್ಯಾರೆ ಅಲ್ಲಿದ್ರು. ಏಕನಾದ ತಂಬೂರಿ ನುಡಿಸಿಕೊಂಡು ಭಜನೆ ಮಾಡೊ ಗಂಡು ಮಕ್ಕಳದ್ದು ಒಂದು ಗುಂಪಿತ್ತು

ಅವರೆಲ್ರು ಮಠದಾಗೇ ಉಣ್ತಿದ್ರು. 'ಅಯ್ಯ'ನ್ನ 'ಸ್ವಾಮಿಗೋಳು' ಅಂತಿದ್ರು. ಜಂಜಿ-ಮುಂಜಾಲಿ ಓಸುಮಂದಿ ಸಾಲು ಹಿಡ್ದು ಅಯ್ಯನ ಕಾಲಿಗ ಅಡ್ಡ ಉದ್ದ ಬೀಳ್ತಿದ್ರು. ಅಯ್ಯ ಅವರಿಗಲ್ಲ ಕೈ ಎತ್ತಿ ಆಸೀರ್ವಾದ ಮಾಡ್ತಿದ್ದ. ಆಸೀರ್ವಾದ ಬೇಡಲಿಕ್ಕಂತ ದೂರದೂರದ ಊರಿಂದ ಸೈತ ಮಂದಿ ಬರ್ತಿದ್ರು. ಅಯ್ಯನ ಕಾಲ ತೊಳೆದು ನೀರು ಕುಡಿತಿದ್ರು. ನೂರ್ನೂರು ರೂಪಾಯಿ ದಕ್ಷಿಣೆ ಇಡೋರೂ ಇದ್ರು!

ಇಷ್ಟೆಲ್ಲಾ ಗದ್ಲ ಇದ್ರು ಸೈತ ಅಯ್ಯ ನನ್ನ ಮರೀತಿರಲಿಲ್ಲ, ದಿನ ಕ್ಕೊಮ್ಮೆ ಬಂದೇ ಬರ್ತಿದ್ದ. 'ನೀನೂ ಶಿವನಾಮ ಕಲ್ತುಕೊಂಡು ಆ ಹೆಣು ಮಕ್ಕಳ ಜೋಡಿ ಹಾಡು. ಇದರಿಂದ ನಿನ್ನ ದುಃಖ ದೂರಾಗಿ ಮನಸ್ಸಿಗ ಆನಂದ ಸಿಗ್ತದ!' ಅಂತ ಉಪದೇಶ ಮಾಡ್ತಿದ್ದ.

ಆತನ ಮಾತು ಕೇಳಿ ಅಲ್ಲೇ ಹೆಣುಮಕ್ಳು ನಸುಕಿನಲ್ಲೇ ನನಗ ಜಳಕ ಮಾಡಿಸ್ತಿದ್ರು, ತಮ್ಮಂಥದ್ದೇ ಕಾವಿಬಣ್ಣದ ಸೀರಿ ಉಡುಸ್ತಿದ್ರು, ಕೊಳ್ಳಿಗ ರುದ್ರಾಕ್ಷಿ ಸರ ಹಾಕಿದ್ರು. ಅವರ ಜೋಡಿ ಕುಂತು ನಾನೂ ಪದ ಹಾಡ್ತಿದ್ದೆ. ಭಜನಿ ಮಾಡ್ತಿದ್ದೆ. ಆದ್ರ ಹಂಗ್ ಹಾಡೋ ಹೊತ್ತು ಮಾತ್ರ ಎಲ್ಲಾದನ್ನೂ ಮರ್ತಂಗ ಆಗತ್ತಿತ್ತು. ಆಮ್ಯಾಲ ಮತ್ತ ನನ್ನ ಮಗನ್ನ, ನನ್ನ ಗಂಡನ್ನ ಹುಡುಕಬೇಕು ಅನ್ನಿಸ್ತಿತ್ತು.

ಎಲ್ಲೆಲ್ಲೋ ಹೋಗಿ ಹುಡುಕ್ತಿದ್ದೆ; ಕರೀತಿದ್ದೆ. ಅದೆಷ್ಟೋ ತಿಂಗಳಾ ದಿಂದ ನಾ ಹಿಂಗ್ ಮಾಡೋದ್ರಿಂದ ಯಾವ ಫಾಯ್ದಾನೂ ಇಲ್ಲಂಬೋದು ಗೊತ್ತಾತು. ಖೋಲಿಯಾಗ ಗಪ್ ಕುಂದರತಿದ್ದೆ. ಯಾರ ಕೂಡಾನೂ ಮಾತಾಡಲಿಕ್ಕ ಮನ್ಸಾಗ್ತಿರಲಿಲ್ಲ. ಭಜನಿ ಪದ ಹಾಡೋದನ್ನ ಪೂರಾ ಬಿಟ್ಟುಬಿಟ್ಟೆ. ಶೀರಿಕೊಂಡಿರೊ ನನ್ನ ಗಂಡ-ಮಗನ್ನ ಕೂಗಿ ಕರಿಯೂದು, ಶಿವನ ಭಜನಿ ಮಾಡಿ ಆತನ್ನ ಒಲಿಸಿಕೊಂಬೋದು-ಎರಡೂ ಒಂದೇ-ಅನ್ನಿ ಸಾಕಹತ್ತ್ಯ. ಊರಿಗ ಹೋಗಬೇಕು ಅಂದುಕೊಳ್ತಿದ್ದೆ. ಆದ್ರ ಅಂಜಿಕಿ ಬರ್ತಿತ್ತು.

ಮೊದಮೊದಲು ದಿನಕ್ಕೊಮ್ಮೆ ಬರ್ತಿದ್ದ ಅಯ್ಯ, ಬರಬರ್ತಾ ಎರಡು ಮೂರು ಸರ್ತಿ ನನ್ನ ಖೋಲಿಗ ಬರಾಕ ಸುರುಮಾಡ್ದ. ತಾಸು ಹೊತ್ತು ಕುಂತುಬಿಡ್ತಿದ್ದ. 'ಕೈಲಾಸದಿಂದ ಪಾರ್ವತಿ ದೇವೀನೇ ಇಳಿದುಬಂದು ಇಲ್ಲಿ ಕುಂತಾಳ ಅಂಬೋಹಂಗ ಕಾಣಿಸ್ತಿದ್ದಿ!' ಹಾಂಗ ಹೀಂಗ ಅಂತ ಅನ್ನಾಕ ಸುರು ಮಾಡ್ದಾಗ "ಅಯ್ಯಾ, ನಾ ಇನ್ನ ಊರಿಗ ಹೊಂಟೋಗ್ತೀನಿ. ಕಳಿಸಿಕೊಡು" ಅಂತ ಕೇಳ್ಕೊಂಡೆ.

"ಅಲ್ಲಿ ಯಾರ್ಯಾರು ಅದಾರ?" ಅಂತ ಕೇಳಿದಾಗ, "ಅತ್ತಿ-ಮಾವ, ಮೈದ್ನಾ ಎಲ್ರು ಅದಾರ" ಅಂದೆ.

"ಅವರೆಲ್ಲಾ ಅದಾರ ಅಂದ ಬಳಿಕ, ಈಗ ಹೋಗ್ತೀನಿ ಅಂತಿಯಲ್ಲಾ ನೀ ಎಂಥ ಹುಚ್ಚಿ ಅದಿ!" ಅಂತ ಅಯ್ಯ ನಕ್ಕುಬಿಟ್ಟ. "ನಿನ್ನ ಗಂಡ-ಮಗನ್ನ ನೀನೇ ಕೊಂದು ಹಾಕಿದೀ ಅಂತ ಅವರು ಪೊಲೀಸರಿಗೆ ದೂರು ಕೊಡ್ತಾರ. ನಿನ್ನ ಜೈಲಿಗ ಹಾಕಸ್ತಾರ. ನಿನ್ನ ಗಂಡನ ಆಸ್ತಿ ಏನೇನು ಅದೋ-ಅವನ್ನೆಲ್ಲ ನಿನ್ನ ಮೈದ್ನ ವಹಿಸ್ಕಂಬಿಡ್ತಾನ. ಅದಕ್ಕೇ ನಿನ್ನ ಜೈಲಿಗ ಹಾಕಸ್ತಾರ!..." ಅಂತ ಅಂಜಿಸ್ದ.

"ನಾ ಎಲ್ಲಿ ಕೊಂದೀನಿ? ಸುಳ್ಳು ಸುಳ್ಳೇ ಅವರ್‍ಯಾಕ ಅಂತಾರ?"

"ನಿನಗಿನ್ನು ಪರಪಂಚದ ವೆವಾರಗ್ಯಾನ ಇಲ್ಲ. ಗಂಡ ತೀರ್‍ಕೊಂಡ ಮೂರು ತಿಂಗಳ ಮ್ಯಾಲ ಹೋಗಿ ಹಿಂಗಿಂಗಾಯ್ತು ಅಂತ ನೀ ಹೇಳಿದ್ರ ಅವರ್‍ಯಾಕ ನಂಬ್ತಾರ? ಸುಳ್ಳು ಕತಿ ಕಟ್ಟಿ ಹೇಳ್ತಿದಿ ಅಮ್ತಾರ. ಸಾಕ್ಷಿ ಏನಂತ ಕೇಳ್ತಾರ. ಇಲ್ಲಿ ಯಾರದಾರ ನಿನಗ ಸಾಕ್ಷಿ ಹೇಳಲಿಕ್ಕ? ನಾ ಒಬ್ಬಾತ ಹೌದಲ್ಲೋ?" ಅಂತ ಅಯ್ಯ ಬಿಡಿಸಿ ಹೇಳಿದಾಗ, ಆತನ ಮಾತು ಪೂರ ಖರೆ ಅಂತ ನನಗ ಅನ್ನಿಸ್ತು. ಆತನ ಕಾಲು ಹಿಡ್ಕೊಂಡೆ. "ಅಯ್ಯಾ, ನೀನೆ ನಮ್ಮೂರಿಗ ಬಂದು ನಡಿದುದ್ದೆಲ್ಲಾ ಹೇಳಿ, ನನ್ನ ಮನಿಯಾಗ ನಾ ಇರುಹಂಗ ವ್ಯವಸ್ಥಾ ಮಾಡಿ ಬಂದುಬಿಡು!" ಅಂತ ಬೇಡಿಕೊಂಡೆ.

"ನಾ ಒಬ್ಬ ಮಾಮೂಲಿ ಜಂಗಮಯ್ಯ ಆಗಿದ್ನಂದ್ರ ಅಷ್ಟು ಸೋವಿಯಾಗ ನಿಮ್ಮೂರಿಗ ಬಂದು, ನಿನ್ನಂತ ಒಬ್ಬ ಹೆಣ್ಣುಮಗಳ ವಿಚಾರವನ್ನ ನಿಮ್ಮಂದಿ ಕೂಡ ಮಾತಾಡಿ ಬರಬೌದಿತ್ತು...ಆದ್ರ ನಾ ಅಡ್ಡಾಡೋ ಹಾದಿಯೊಳಗ ಮಂದಿ ಪುಟ್ಟಿಗಟ್ಲೆ ಹೂವ ಚಲ್ಲಾಡ್ತಾರ, ನೋಟಿನ ಚಾಪೆ ಹಾಸ್ತಾರ! ಹೆಜ್ಜಿಗೊಮ್ಮೆ ಆರತಿ ಬೆಳಗ್ತಾರ!..."

"ಹಂಗಾದ್ರ ನೀ ಬರಂಗಿಲ್ಲೇನು ಅಯ್ಯಾ?" ಅಂತ ನಾ ಸಂಕಟದಿಂದ ಕೇಳ್ದೆ. "ಇನ್ನೊಂದು ತಿಂಗ್ಳು, ಎರಡು ತಿಂಗ್ಳು ತಡ್ಕೊ. ನನ್ನ ಬದಲು ನಮ್ಮ ಒಬ್ಬ ಮನ್ಸ್ಯನ ಜೊತಿಮಾಡಿ ನಿನ್ನ ಕಳಿಸಿಕೊಡ್ತೀನಿ. ಆತ ನಿನ್ನ ಪರವಾಗಿ ಅಲ್ಲಿ ಹೇಳಬೇಕಾದ್ದನ್ನೆಲ್ಲ ಹೇಳಿ, ನಿನಗ ಯಾವ ತೊಂದ್ರೆ ಇಲ್ಲದಂಗ ವ್ಯವಸ್ಥೆ ಮಾಡಿ ಬರ್ತಾನ!" ಅಂದ.

"ಹ್ಯಾಂಗಾರ ಮಾಡು ಅಯ್ಯ...ಒಟ್ಟು ನನಮ್ಯಾಲ ಯಾವ ಯಾವ ಬಡನಾಮಿನೂ ಬರಲಾರದಂಗ ಮಾಡೋದು ನಿನ್ನ ಕೈಯಾಗ ಐತಿ!" ಅಂತ ಕಣ್ಣೀರಿಟ್ಟೆ.

ಅಂವ ತನ್ನ ಕೈಲಿಂದ ನನ್ನ ಕಣ್ಣೀರು ಒರೆಸ್ದ. ಮೈ ಕೈ ಮುಟ್ಟಿ ಸಮಾಧಾನ ಮಾಡಾಕ ಬಂದ. ನಾ ಅಂಜಿ ದೂರ ಸರ್ದಾಗ "ಅಂಜಿಕೋ ಬ್ಯಾಡ. ನಮ್ಮಿಬ್ಬರಿಂದ ಶಿವಾ ತನ್ನ ಪೂಜಾ ಆಗಬೇಕಂತ ಬಯಸ್ತಾನ! ನಾನು- ನೀನು ಪ್ರೀತಿಲಿಂದ ಕೂಡಿದರ ಅದೇ-ಶಿವಪೂಜಾ! ನೀ ದಸರಾ ನೋಡಲಿಕ್ಕಂತ ಬಂದಿದ್ದು, ಹಿಂದಾಗಡಿ ಇಲ್ಲಿ ನನ್ನ ವಾಸಕ್ಕ ಬಂದು ಸೇರಿದ್ದು ಇವೆಲ್ಲಾ ಶಿವಲೀಲೆಗಳೇ. ಅವನಾಟದ ಮುಂದ ನಮ್ಮಂಥ ಮನ್ಸರ ಆಟ ಏನೇನೂ ನಡಿಯುಂಗಿಲ್ಲ ನೋಡು!" ಅಂತ ಮೈ ಮ್ಯಾಲೇರಿ ಬಂದ.

"ಅಯ್ಯಾ, ಇದೊಂದು ದಂಧಾ ಮಾತ್ರ ಬ್ಯಾಡ! ನಮ್ಮಂದಿ ನನಗ ಜೈಲಿಗ ಹಾಕ್ಸಿದ್ರೂ ಚಿಂತಿಲ್ಲ ನಾ ಈಗ್ಲೆ ಹೊಂಟು ಬಿಡ್ತೀನಿ!" ಅಂದೆ.

"ನಿಮ್ಮೂರೇನು ಇಲ್ಲೇ ಸಮೀಪದಾಗ ಅದ ಅಂತ ತಿಳ್ದಿ ಏನು ಹುಚ್ಚಿ? 40-50 ರೂಪಾಯಿ ರೊಕ್ಕ ಬೇಕಾಗ್ತಾವ ನೀ ಊರು ಮುಟ್ಟಲಿಕ್ಕ... ಮತ್ತ ನೀ ಉಟ್ಟಿರೋ ಸೀರಿ ಮಠದ್ದು ಐತಿ! ನಮ್ಮ ಮಠದ 'ಶರಣಿ' ಅನ್ನೋ ಪಿರೀತಿಗ ನಾವು ಇದನ್ನ ನಿನಗ ಕೊಡಿಸೀವಿ. ಇದನ್ನ ಬಿಚ್ಚಿಕೊಟ್ಟು ಎತ್ಲಾಗಾರ ಹಾಳಾಗಿ ಹೋಗು. ಚೆಂದುಳ್ಳ ಹೆಣ್ಣುಮಗಳನ್ನ ಬೀದಿಪಾಲು, ಹಾದಿ ಪಾಲು ಮಾಡಬಾರ್ದು ಅಂತ ನಾವು ಇಚ್ಛಾಪಟ್ವಿ! ಆದ್ರ ಶಿವನ ಇಚ್ಛಾಬ್ಯಾರೆನೇ ಇದ್ದಂಗ ಕಾಣತೈತಿ!" ಅಂದು, ಅಯ್ಯ ಸರಸರ ಅಲ್ಲಿಂದ ಹೊಂಟೋದ.

ನಾ ಖರೇ ಹುಚ್ಚಿ ಹಂಗಾದೆ. ನನ್ನ ದುಕ್ಕ ಯಾರ ಮುಂದೂ ಹೇಳಿ ಕೊಳ್ಳೋ ಹಂಗಿರಲಿಲ್ಲ. ಕೈಯಾಗ ಕಾಸಿಲ್ಲ. ಉಟ್ಟ ಸೀರಿನೂ ಬಿಚ್ಚಿ ಕೊಟ್ಟು ಹೋಗಂತಾನ...! ಈ ಜೈಲಿಂದ ನನ್ಗ ಬಿಡುಗಡಿ ಇಲ್ಲಂಬೋದು ಖಾತ್ರಿನೇ ಆತು...

ಅಯ್ಯ ಹೊಳ್ಳಿ ರಾತ್ರಿನಾಗ ಬಂದ. "ಏನ್ ವಿಚಾರ ಮಾಡ್ದಿ?"

ಅಂತ ಕೇಳ್ದ. ನಾ ಒಂದೆ ಸಮನೆ ಅಳಾಕ ಸುರುಮಾಡ್ದೆ. ಆತ ಹತ್ರಕ್ಕ ಬಂದ. ಮೈ-ಮಾರಿಗ ಮುಕ್ತಿಕ್ದ...ತನಗ ಹ್ಯಾಂಗಬೇಕು ಹಾಂಗ ನನ್ನನ್ನ ಬಳಸ್ಕೊಂಡ ..!

ಎರಡು ಮೂರು ತಿಂಗಳಾದಿಂದ ನನಗ ಒಂದ್ ನಮೂನಿ ಹೊಟ್ಟಿ ತೊಳಸೂ ಹಂಗ ಆಗಲಾಕ ಹತ್ತ್ಯು. ನನ್ನ ತೇಜು ಹೊಟ್ಟೀಲಿದ್ದಾಗ ವಾಂತಿ ಬರಂತ್ತಲ್ಲ ಅದೇ ನಮೂನಿ ಬರುತ್ತಿತ್ತು. ಏಸು ಭಾವ್ಯಾಗ ಮುಣಿಗಿ ಎದ್ದಿದ್ನೋ ಆ ಅಯ್ಯ-ನನಗ ಬಂದಿರೂ ಜಡ್ಡು ಇಂತಾದ ಅಂತ ಸಟ್ನ ಗುರ್ತು ಹಿಡ್ಕೊಂಡ! ಯಾರೋ ಒಬ್ಬಾಕಿ ಹೆಣ್ಣು ಮಗಳನ್ನ ನನ್ನ ಖೋಲಿಗ ಕರಕೊಂಬಂದ. ಆಕೆ ನನ್ನ ಹೊಟ್ಟೆನ ಒತ್ತಿ ಮುಟ್ಟಿ ತಪಾಸು ಮಾಡಿದ್ಲು. ಹಿಂದಾಗಡಿ ಅವರಿಬ್ರು ಕಿವಿಯಾಗ ಬಾಯಿಟ್ಟು ಗುಸುಗುಸು ಮಾತಾಡ್ಕೊಂಡ್ರು. ಆತ ಆಕಿನ ಕೈಯಾಗ ಅದೆಷ್ಟೋ ನೋಟು ಹಿಡಿಸ್ದ. ಹೊರಗ ಹೊಂಟೋದ.

ಆ ಹೆಣ್ಣು ಮಗಳು ನನ್ನ ರಮಿಸಿ, ಒಂದು ವಾಟ್ಕ ಹಚ್ಚನೆ ರಸ ಕುಡ್ಸಿ "ಶಿವನ ದಯದಿಂದ ನಿನ್ನ ಜಡ್ಡೆಲ್ಲ ಹೊಂಟೋಗ್ತದ, ಕಾಳಜಿ ಮಾಡಬ್ಯಾಡ, ಸುಮ್ನೆ ಮಕ್ಕೊ!" ಅಂತ ಹೇಳಿ ಹೊಂಟೋದ್ಲು. ಥ್ವಾಡೆ ಹೊತ್ತಿನ್ಯಾಗ ನನಗೆ ಹೊಟ್ಟೆ ಬ್ಯಾನೆ, ನಡು ಬ್ಯಾನೆ ಕಾಣಿಸಿಕೊಳ್ತು! ನನ್ನ ತೇಜೂಗ ಹಡಿಯೂ ಮುಂದ ಸತ ನನಗಷ್ಟು ಟೊಂಕ ಬ್ಯಾನಿ ಬಂದಿದ್ದಿಲ್ಲ! ಅಂಥ ಭಯಂಕರ ಬ್ಯಾನೆ ಸುರುವಾಗಿ ನಾ ಚೀರಾಡಾಕ ಸುರು ಮಾಡ್ದೆ...

ಮಠದ ಹೆಣ್ಣುಮಕ್ಕಳು ಬಂದು "ಹಿಂಗ್ಯಾಕ ಒದರಾಡ್ತಿದ್ದಿ? ನೋವು ಬಂದಾಗೆಲ್ಲ ಶಿವನ ಜಪಮಾಡು, ತಾನೇ ಕಮ್ಮಿ ಆಕ್ಕತಿ. ಹೆಣ್ಣುಮಕ್ಕು ಗದ್ಲ ಮಾಡದ್ಹಂಗ ನೋವುಣ್ಣೋದು ಕಲಿಬೇಕು. ಹಿಂಗೆಲ್ಲಾ ಚೀರಾಡಿ ಮಠದ ಮಾನ ಕಳೀಬಾರ್ದು!" ಅಂತ ನನಗ ತಿಳ್ವಳಿಕೆ ಹೇಳಿಹೋದ್ರು.

ಮೂರಾನ ಮೂರ್ರಿನ ಪಡಬಾರ್ದ ಪಾಡು ಪಟ್ಟೆ. ಮೈಯಾನ ರಗತ ಹೋಗಿ ಸುಣ್ಣದ ಗ್ವಾಡಿ ಹಂಗ ಬಿಳಚಿಕೊಂಡೆ. ತಿಂಗಳಾಗ್ತಾ ಬಂದ್ರು ಸೂತಕ ನಿಲ್ಲಿಲ್ಲ. ಅದನ್ನ ಕಂಡು ಅಯ್ಯ ನನ್ನ ಕೈಗೆ ನೂರರೂಪ್ಯಾ ಕೊಟ್ಟ. "ನೀ ನಿಮ್ಮೂರಿಗ ಹೋಗಬೇಕಂತ ಶಿವನ ಅಪ್ಪಣೆ ಆಗ್ಯದ. ನಮ್ಮ ಆಳು ಮುನ್ಸ ಬಂದು ನಿನಗ ಬಸ್ಸು ಹತ್ತಿಸ್ತಾನ. ಕುಂತು ಹೋಗಿಬಿಡು, ಶಿವ ನಿನಗ

ಚಲೋ ಮಾಡ್ತಾನ!" ಅಂದಾಗ ನಾ ಗಾಭರಿಯಾದೆ. "ಅಯ್ಯಾ, ನೀ ಮೊದಲು ಏನಂದಿದ್ದೀ? ಆಗ್ಲೆ ಮರ್ತು ಬಿಟ್ಟಿ ಏನು?!..." ಅಂತ ನಾ ಹೇಳ್ತಿದ್ದಂಗೇ-ಸ್ವಾಮಿಗೋಳ ಪಾದ ಪೂಜಿ ಮಾಡಲಿಕ್ಕಂತ ಬಾಗಲದಾಗ ಕಾದ್ಕೊಂಡು ನಿಂತಿದ್ದ ಮಂದೀಗ, ಆಸೀರ್ವಾದ ಮಾಡುದಕ್ಕ ಆತ ಹೊಂಟೋದ!

ಒಬ್ಬಾಕಿ ಹೆಣ್ಣುಮಗಳು ಬಂದು ನನ್ನ ಕೊಳ್ಳಾನ ರುದ್ರಾಕ್ಷಿ ಸರ ತಕ್ಕೊಂಡ್ಲು. ಕಾವಿ ಸೀರೆ ಬಿಡಿಸಿ, ಕರೇದೊಂದು ಸೀರಿ ಉಡ್ಸಿ "ಇನ್ನ ನಡಿ" ಅಂದ್ಲು. ಆಳು ಮಗ ಕರಕೊಂಬಂದು ಬಸ್ಸಿನಾಗ ಕುಂದರ್ಸಿ "ಈ ಗಾಡಿ ರಾಯಚೂರಿಗ ಹೋಗ್ತದ. ಅಲ್ಲಿಂದ ನಿಮ್ಮೂರ ಬಸ್ಸು ಹಿಡಿದು ಹೋಗು" ಅಂತ್ಹೇಳಿ ಹೊಂಟೋದ...."

ಕಥೆ ಕೇಳಿ ಧಾರಾಕಾರವಾಗಿ ಕಣ್ಣೀರು ಸುರಿಸುತ್ತಿದ್ದ ಸೋನಿ ನಡು ಮಯೋ ಕೇಳಿದಳು: "ನೀ ಸೀದಾ ಇದೇ ಊರಿಗ ಬಂದೇನತ್ತಿ? ನಿಮ್ಮತ್ತಿ-ಮಾವ ಏನಂದ್ರು?"

"ಇಲ್ಲಿ ಬರಲಿಲ್ಲವ್ವ. ನನ್ನ ತೌರುಮನಿಗ ಹೋದೆ. ನಡೆದಿದ್ನೆಲ್ಲ ಹೇಳ್ದೆ. ·ಆ ಸನ್ನೇಸಿ ಮಾತು ಕೇಳಿ ನೀ ಅಂಜಿಕೊಂಡೇನು? ನಿನ್ನ ಅಪ್ಪ-ಅವ್ವ ಸತ್ತು ಹೋಗ್ಯಾರಂತ ತಿಳ್ಕೊಂಡೇನು? ಯಾ ನನ್ಮಗ ಹಾಕಸ್ತಾನ್ ಜೈಲಿಗ? ಅಷ್ಟು ಛಾತಿ ಇತ್ತಂದ್ರ ಹಾಕಿಸ್ಲಿ ಮತ್ತ ನೋಡಾಮು!' ಅಂತ ನಮ್ಮಪ್ಪ ಒದರಾಡ್ದ."

"ನನ್ಮಗಳಿಗ ಏಟಿಲ್ಲಾ ತಾಸು ಕೊಟ್ಟಾನವ್ವಾ ಆ ಸನ್ನೇಸಿ! ಅವನ ಮನಿ-ಮಠ ಹಾಳಾಗ್ಲಿ! ಅವನ ಹೆಣ ಎತ್ಲೀ!" ಅಂತ ಅವ್ವ ಅಯ್ಯನ್ನ ಸಾಪಳಿಸಿದ್ಲು. "ಜಾತಿಗೆಟ್ಟೋಳು ಅಂತಾರ ಮಂದಿ! ಮೊದ್ಲು ಇದ್ನ ಬಿಚ್ಚಿ ತಿಪ್ಪಿಗ ಒಕಟ್‌ಬಿಡು!" ಅಂತ್ಹೇಳಿ ನಾ ಉಟ್ಟಿದ್ದ ಸೀರಿ ಬಿಡ್ಸಿ ತನ್ನ ಲಂಗ-ದಾವಣಿ ಉಡಿಸಿದ್ಲು.

"ಆದಿದ್ದಾತು ಹೋಗಿದ್ದೋತು.. ಚಲೋದೊಂದು ಗಂಡು ನೋಡಿ ಉಡುಕಿ ಮಾಡಿಸ್ತೀವಿ!" ಅಂತ ಅಪ್ಪ-ಅವ್ವ ಕಲೆಬಿದ್ರು. ಆದ್ರ ನನಗ ಗಂಡ

ಬೇಕಿ ಆಗಿದ್ದಿಲ್ಲ. "ಈಸು ದಿನ ಅನ್ಭೋಗ್ಸಿದ ಕಷ್ಟ-ಸುಕ ಎರಡೂ ಸಾಕು. ಉಡ್ಕಿಗಿಡ್ಕಿ ನಾನೊಲ್ಲೆ. ನನಗಂಡ-ಮಗನ ನೆನಪಿನೊಳಗs ಈ ಜೀವ್ನ ಕಳೀತೀನಿ. ನನ್ಮನಿಗ ನನ್ನ ಕಳ್ಸಿ ಬಂದುಬಿಡ್ರಿ. ನಿಮಗ ಬದನಾಮಿ ತರಲಾರದ್ಹಾಂಗ ನಾ ಬಾಳ್ವೆ ಮಾಡ್ತೀನಿ!" ಅಂತ ಆಣೆ ಪರಮಾಣ ಮಾಡ್ದೆ.

ಇಲ್ಲಿ ಬಂದ್ ನೋಡಿದ್ರ-ನನ್ನ ಮೈದ್ನ ನಮ್ಮ ಹೊಲ ಮನಿ ಎಲ್ಲಾ ಕಬ್ಜ ಮಾಡ್ಕೊಂಡಿದ್ದ. ಎಷ್ಟೆಲ್ಲ ಪಂಚಾಯ್ತಿ ಆದಿಂದ ಮನಿ ಒಂದ್ ಬಿಟ್ಟುಕೊಟ್ಟ ಹೊಲ ತಾನೇ ದಕ್ಕಿಸ್ಕೊಂಡ. ಬೇಂಕಿನಾಗ ರೊಕ್ಕ ಇದ್ದಿದ್ದು ತಗ್ದು ನಾ ಹೊಸದಾಗಿ ಅಂಗ್ಡಿ ಹಚಿಗೊಂಡೆ...ನಮ್ಮಪ್ಪ-ಅಪ್ಪ ಬದುಕಿರೊ ತಾನ ನನ್ನ ಮನಿಗ ಬರ್ತಿದ್ರು-ಹೋಗ್ತಿದ್ರು, ಹಬ್ಬ ಹುಣ್ಣಿವಿಗ ನನ್ನನ್ನು ಕರಿಯೋದು-ಕಳ್ಸೋದು ಮಾಡ್ತಿದ್ರು...ಈಗ ಹೆಚ್ಚು ಕಮ್ಮಿ ಹತ್ತೊರ್ಸ ಆಯ್ತು ಅವ್ರು ತೀರ್ಕೊಂಡು...!"

ಅವರುಗಳ ನಡುವೆ ಕೆಲ ನಿಮಿಷಗಳ ಕಾಲ ಮೌನ ನೆಲೆಸಿತು.

"ದೊಡ್ಡವ್ವ, ನಿನ್ನ ಮಗ-ತೇಜು ಈಗ್ಲೂ ಯಾಕ ಬದುಕಿರಬಾರ್ದು?" ಎಂದು ಕೇಳಿದ ಚಂದು.

"ನಾನೂ ಒಮ್ಮೊಮ್ಮೆ ಹೀಂಗs ವಿಚಾರ ಮಾಡತಿರ್ತೀನಿ! ಬದುಕಿದ್ದ ನಂದ್ರ ಇಲ್ಲಿಗ ಬರ್ತಿದ್ದ...!"

"ಬಂದ್ರೂ ನೀ ಖೂನ ಹಿಡಿತಿಯೋ ಇಲ್ಲೊ!...ಈಗಾಗ್ಲೆ ಅಂವ ನಿನಗಿಂತ್ಲೂ ಎತ್ತರಕ್ಕ ಬೆಳೆದಿರ್ತಾನ..ಮಾರಿಮ್ಯಾಲ ಮೀಸಿ ಮೂಡಿರ್ತಾವ. ಬಹುತೇಕ ಗಡ್ಡಾನೂ ಬಿಟ್ಟಿರತಾನ!..."

ಅವನು ಹಾಗೆನ್ನುತ್ತಿರುವಂತೆಯೇ ಲಚ್ಮಿ-ಸೋನಿ ಇಬ್ಬರೂ ಅವನ ಕಣ್ಣಲ್ಲಿ ಕಣ್ಣಿಟ್ಟು ನೋಡಲಾರಂಭಿಸಿದರು.

"ದೊಡ್ಡವ್ವ, ಎಷ್ಟೊಂದು ಸಂಕಟ ಅನುಭವಿಸಿದ್ದೀ ನೀನು! ಅವನ್ನೆಲ್ಲ ಮತ್ತೆ ನೆನಪು ಮಾಡ್ಸಿ ನಿನ್ನ ಮನ್ಸಿಗೆ ಇನ್ನಷ್ಟು ನೋವು ಕೊಟ್ಟೆ ನಾನು!... ನನ್ನ ಕ್ಷಮಾ ಮಾಡ್ತಿಯಲ್ಲಾ?" ಚಂದು ಅವಳ ಕೈ ಹಿಡಿದು ಕೇಳಿದ.

"ನೀ ಏನಂಥ ತಪ್ಪು ಮಾಡ್ದಿ ಅಂತ ಕ್ಷಮಾ ಕೇಳ್ತಿದಿ ಮಗ? ಸರೊತ್ತಾತು ಮಕ್ಕೊ ಹೋಗು...ಏಳವ್ವ ಸೋನಿ...ಖೋಡಿ ಎಷ್ಟು ಅತ್ತುಬಿಟ್ಯಲ್ಲs!

ಹೋಗಿ ಸಾಕ್ಕೊ ಹೋಗು ನೀನೂ" ಎಂದು ಲಚ್ಮಿ ಇಬ್ಬರನ್ನೂ ಬೀಳ್ಕೊಟ್ಟು, ತನಗಾಗಿ ಚಾಪೆ ಬಿಡಿಸಿದಳು.

0 0 0 0

ಸೋನಿಯ ಒಂಟಿ ಬದುಕು ಪ್ರಾರಂಭವಾಗಿ ಎರಡು ತಿಂಗಳಾಗುತ್ತ ಬಂದಿತು. ಅವಳು ಹೆದರಿಕೊಂಡಂತೆ ಗಂಡನಿಂದ ಯಾವುದೇ ರೀತಿಯ ಕಿರುಕುಳ ಉಂಟಾಗದಾಗ ನಿರ್ಭೀತಳಾದಳು.

"ಆತ ಊರಾಗ ಇರೋದೇ ಅಪರೂಪಂತ! ಎಂದಾರ ಒಮ್ಮೆ ಮನೀಗ ಬರ್ತಾನಂತ! ಅಪ್ಪ ಮಗ, ಆ ಬಂದಿರೋ ಚಿನಾಲಿ—ಮೂವರೂ ಕೂಡಿ ಒಳಗೊಳಗೇ ಜಗ್ಗಿ ಬಾಡುಗೀಡು ಕುಚ್ಚಿ ತಿಂತಾರಂತ!" ಎಂದು ಅವರಿವರು ಹೇಳಿದ್ದನ್ನು ಲಚ್ಮಿ, ಸೋನಿಯ ಮುಂದೆ ಹೇಳಿದಳು.

"ಆತ ಎಂದು ಮೈ ಬೆವರು ಸುರ್ಸಿ ಗಳಿಸಿ ತರ್ತಾನ ಬಿಡು. ಅದೇ ಕಳ್ಳ ದಂಧಾ ನಡ್ಸಿ ತಂದು ತಿನ್ಸಿದ್ದಾನು!" ಎಂದಳು ಸೋನಿ. ಅದೊಂದು ದಿನ ಅವಳು ಬಾವಿ ನೀರಿಗೆಂದು ಹೋದಾಗ ತನ್ನ ಸವತಿಯನ್ನು ನೋಡುವ ಅವಕಾಶ ದೊರಕಿತು. ನಸುಗಪ್ಪು ಬಣ್ಣವಿದ್ದರೂ ಮಾಟವಾದ ಮೈಕಟ್ಟನ್ನು ಹೊಂದಿದ್ದಳು. ಬೆಲೆಬಾಳುವ ಸೀರೆ-ರವಿಕೆ ತೊಟ್ಟಿದ್ದಳು. ಕಿವಿ, ಮೂಗು ಕೈ ಬೆರಳುಗಳಲ್ಲಿ ಬಂಗಾರದ ಒಡವೆಗಳು ಥಳಗುಡುತ್ತಿದ್ದವು. ಕೊರಳಲ್ಲಿ ಹಾಕಿದ ಕಾಸಿನ ಸರ ನೋಡುವವರ ಕಣ್ಣು ಕುಕ್ಕುವಂತೆ ಎದ್ದು ಕಾಣುತ್ತಿತ್ತು.

ಸೋನಿ ತನ್ನನ್ನೊಮ್ಮೆ ನೋಡಿಕೊಂಡಳು. ಅವಳ ಸಿರಿತನದ ಮುಂದೆ ತನ್ನ ಬಡತನ ಎದ್ದು ಕಾಣಿಸಿತು. ಎಂದೋ ಹಚ್ಚಿದ್ದ ಕಾಜು ಒಡೆದು, ಕಸೂತಿ ಕಿತ್ತು, ಅಲ್ಲಲ್ಲಿ ಹರಿದು ಜೋತಾಡುತ್ತಿರುವ ಲಂಗ, ಅಂಥದೇ ಹರಕು ಜಾಕೀಟು, ಹತ್ತಾರು ಕಡೆ ತೂತು ಬಿದ್ದಿರುವ ತುಂಡು ದಾವಣಿ! ಚಿನ್ನದ ಒಡವೆಯಂತೂ ತಾನು ಕಂಡಿದ್ದೇ ಇಲ್ಲ. ಕಾಲಲ್ಲಿ ಒಂದು ಜೊತೆ ಕೃತಕ ಬೆಳ್ಳಿಯ ಅಂದುಗೆಗಳು, ಕಿವಿ ಮೂಗಿನಲ್ಲಿ ಹಿತ್ತಾಳೆಯ ಒಡವೆಗಳು, ಮುಂಗೈ-ಮೊಣಕೈಗಳ ತುಂಬ ಪಿಡಪಿಡಗುಟ್ಟುವ ಪ್ಲಾಸ್ಟಿಕ್ಕಿನ ಬಿಳಿಯ ಬಳೆಗಳು, ಕೊರಳಲ್ಲಿ ಕೆಂಪು, ಹಸಿರು ಮಣಿಗಳ ಒಂದೆರಡು ಸರ___! ಸೋನಿಯ ಎದೆಯಲ್ಲಿ ಮಾತ್ಸರ್ಯದ ಅಲೆಯೊಂದು ರಭಸವಾಗಿ ಅಪ್ಪಳಿಸಿ ಮರೆಯಾಯಿತು.

ತಾನೂ ಹೆಚ್ಚು ಬೆಲೆ ಬಾಳುವ ಬಟ್ಟೆಗಳನ್ನು ಖರೀದಿಸಬೇಕು. ಕಾಜು ರಂಗುರಂಗಿನ ದಾರ, ಕಿರುಗೆಜ್ಜೆ-ಗೊಂಡೆಗಳೆಲ್ಲವನ್ನು ತಂದು ಸುಂದರವಾಗಿ ಕಸೂತಿ ಹಾಕಿ, ಅಚ್ಚುಕಟ್ಟಾಗಿ ಹೊಲಿದು ಉಟ್ಟುಕೊಳ್ಳಬೇಕು...ಈ ಬಾರಿಯ ಗುಡ್ಡಮ್ಮನ ಜಾತ್ರೆಯಲ್ಲಿ ರತ್ನೀಬಾಯಿ, ಗೌರಿ ಎಲ್ಲರೂ ನೂರುರೂಪಾಯಿಗಳ ಖರ್ಚು ಮಾಡಿ ಅವೆಲ್ಲವನ್ನೂ ತಂದುಕೊಂಡಿದ್ದಾರೆ. ತಿಂಗಳ ಕಾಲ ಕುಳಿತು ಕಸೂತಿ ಹಾಕಿ ಹೊಲಿದು, ಹೋಳಿ ಹಬ್ಬದ ಹೊತ್ತಿಗೆ ಒಂದೊಂದು ಜೊತೆ ಸುಂದರ ಉಡುಪು ತಯಾರಿಸಿಕೊಳ್ಳುತ್ತಾರೆ...

ತಾನೋ ತೀರ ಅಗ್ಗದ್ದಾದರೂ ಕೊಂಡು ಮೈ ಮುಚ್ಚಿಕೊಳ್ಳಬೇಕೆಂದರೆ ಅದೂ ಸಾಧ್ಯವಾಗುತ್ತಿಲ್ಲ. ಆ ದಿನ ಕಟ್ಟಿಗೆ ಕೊಂಡ ಹೆಂಗಸು ತನ್ನ ಮಕ್ಕಳ ಹಳೆಯ ಲಂಗಗಳನ್ನು ಕೊಟ್ಟಿದ್ದನ್ನೇ ಈಗಲೂ ತನ್ನ ಮಕ್ಕಳು ಉಡುತ್ತಿದ್ದಾರೆ...ಕೂಲಿಯ ರೊಕ್ಕ ಅಂದಂದಿನ ಕಾಳು ಕಡ್ಡಿ, ಉಪ್ಪು ಮೆಣಸಿಗೇ ಸರಿ ಹೋಗುತ್ತದೆ. ಏನು ಮಾಡಲಿ? ಹೇಗೆ ಗಳಿಸಲಿ?...ಸುಮ್ಮನೆ ಆ ದಿನ ಕಾಶ್ಯ ಹೇಳಿದಂತೆ ಕೇಳಿದ್ದರೆ ಪಾಡಾಗುತ್ತಿತ್ತೇನೋ...ನಾಲಿಗೆಗೆ ರುಚಿಯಾದ ಊಟ ಮೈಗೆ ಚಂದದ ಅರಿವೆ ತೊಟ್ಟು ಆರಾಮವಾಗಿರಬಹುದು...

ಇವಳ ಮೈಮೇಲೆ ಇಷ್ಟೊಂದು ಒಡವೆ ಹೇರಿಕೊಂಡಿದ್ದಾಳಲ್ಲಾ... ಎಲ್ಲಿಂದ ಬಂದವೋ...? ಇಂಥ ಹಾದರತನದಿಂದಲೇ ಗಳಿಸಿದ್ದಾಳು. ಇಲ್ಲವಾದರೆ ಮಾನ್ಯಾ ಎಲ್ಲಿಂದ ತಂದು ಕೊಡ್ತಾನೆ? ತಾನು ಕಾಣದ-ಕೇಳದ ಮಾನ್ಯಾ ಏನಲ್ಲ ಆತ...ಊರೂರಿಂದ ಕುರಿ ಕೋಳಿ ಕದ್ದು ತಂದು ತಿನ್ನುವುದು. ಸರಾಯಿ ಕುಡಿದು ಮೋಜು ಮಾಡುವಷ್ಟಕ್ಕೇ ಅವನ ಗಳಿಕೆ ಸೀಮಿತ...

ಕತ್ತಲಾದರೂ ದೀಪ ಹೊತ್ತಿಸದೆ ಸೋನಿ ಯೋಚಿಸುತ್ತಾ ಕುಳಿತಿದ್ದಾಗ ಸೀತಾ-ಶಾರದಿಯರು ಕಿಲಕಿಲನೆ ನಗುತ್ತ ಒಳಗೋಡಿ ಬಂದರು. ತಮ್ಮ ಕೈಯಲ್ಲಿದ್ದ ಬಟ್ಟೆಯನ್ನು ತಾಯಿಗೆ ತೋರಿಸುತ್ತ "ಅವ್ವಾ ಇಲ್ನೋಡು! ಚಂದು ಕಾಕ ನಮಗೆಲ್ಲಾ ಏನ್ ಕೊಟ್ಟಾನ!" ಎಂದರು.

ಸೋನಿ ಕತ್ತಲೆಯಲ್ಲೇ ಅದನ್ನು ದಿಟ್ಟಿಸಿದಳು. ಬಣ್ಣ, ಆಕಾರ ಸ್ಪಷ್ಟವಾಗಿ ಕಾಣಿಸದಾಗ, ಚಿಮಣಿ ಹೊಚ್ಚಿಟ್ಟು ಅದರ ಬೆಳಕಿನಲ್ಲಿ ಹಿಡಿದು ನೋಡಿದಳು-ತಿಳಿ ನೀಲಿ ಬಣ್ಣದ ಒಂದು ಜೊತೆ ತುಂಡು ಲಂಗಗಳಿದ್ದವು. ಎರಡನ್ನು

ಮಕ್ಕಳ ಭುಜಕ್ಕೆ ಹಿಡಿದು ಅಳತೆ ನೋಡಿದಳು. ಹೆಚ್ಚು ಕಡಿಮೆ ಮೊಳಕಾಲು ಮುಟ್ಟುತ್ತಿದ್ದವು.

"ಭೇಷ್ ಅದಾವ." ಎಂದು ಆಕೆ ಪರಿಳಿತವಿಲ್ಲದ ಸಪ್ಪೆ ದನಿಯಲ್ಲಿ ನುಡಿದಾಗ, ಸೀತಾಗೆ ಕೊಂಚ ನಿರಾಶೆಯಾದಂತಾಯಿತು.

ಆಕೆ ತಾಯಿಯನ್ನು ಸಂತಸಗೊಳಿಸಲು ಮತ್ತೊಂದು ಸುದ್ದಿಯನ್ನು ನೆನಪು ಮಾಡಿ ಹೇಳಿದಳು-"ಅವ್ವಾ, ನಾಳೆ ನಿನಗ ಸೀರಿ ತಂದುಕೊಡ್ತಾನಂತ ಕಾಕ!" ಅಪ್ಪನ ಮೋರೆ ಈಗಲೂ ಅರಳದಾಗ ಸೀತೆಗೆ ಅಳುವಂತಾಯಿತು.

'ಅಂವ ಯಾಕ ತಂದು ಕೊಡ್ತಾನ ನನಗ ಸೀರೀನ...' ಎಂದು ಗೊಣಗುತ್ತ ಆಕೆ, ಮಕ್ಕಳು ತಂದಿದ್ದ ಬಟ್ಟೆಯನ್ನು ಕೈಯಲ್ಲಿ ಹಿಡಿದುಕೊಂಡೇ ಲಚ್ಮಿಯ ಮನೆಗೆ ಬಂದಳು. ಲಚ್ಮಿ-ಚಂದು ಚಹ ಕುಡಿಯುತ್ತಿದ್ದರು. "ಒಳ್ಳೆ ಕೆಂಡದ ಪ್ಯಾಲ ನಿನಗೊಂದು ವಾಟ್ಕ ಚಹ ಇಟ್ಟೇನಿ ಹೋಗು ತಗೊಂಬ" ಎಂದು ಲಚ್ಮಿ ಹೇಳಿದಾಗ, ಸೋನಿ ಅಡಿಗೆ ಕೋಣೆಯಿಂದ ಚಹದ ಕಪ್ ತಂದಳು. ತಾನೊಂದು ನಾಲ್ಕು ಗುಟುಕು ಕುಡಿದು ನಂತರ ಲೋಟವನ್ನು ಸೀತೆಯ ಕೈಗಿತ್ತಳು. ಅದೇ ಪ್ರಕಾರ ಸೀತಾ ಮಿಗಿಸಿ ತನಗೂ ಕೊಡುವಳೆಂಬುದು ಖಾತ್ರಿ ಇದ್ದ ಕಾರಣ, ಶಾರದಿ ಅಕ್ಕನ ಕೈ-ಬಾಯಿ ಕಾಯುತ್ತ ಶಾಂತವಾಗಿ ಕುಳಿತಳು.

ಸೋನಿ ಆ ಬಟ್ಟೆಗಳನ್ನು ತೋರಿಸುತ್ತ "ಇದನ್ನ ಎಲ್ಲಿಂದ ತಂದಿ ಚಂದಪ್ಪ?" ಎಂದು ವಿಚಾರಿಸಿದಳು. "ನಾ ತಂದಿಲ್ಲವ್ವಾ, ಈ ಹಳ್ಳಿಯ ಶಾಲಿ ಮಕ್ಕಳಿಗ ಮೈಸೂರಿನ ಒಂದು ಸಂಘದವರು ಪುಕ್ಕಟೆಯಾಗಿ ಕೊಟ್ಟು ಕಳಿಸ್ಯಾರ."

"ಯಾಕ?"

"ಇದು ಹಿಂದುಳಿದ ಹಳ್ಳಿ. ಇಲ್ಲೀ ಮಂದಿ ಅಗದಿ ಬಡವರು,ಕೂಲಿಕಾರ್ರು. ಈಗ ಇಲ್ಲೊಂದು ಸಾಲಿ ಸುರುವಾಗೈತಿ. ಇದನ್ನ ಮುಂದ ತರಲಿಕ್ಕ ಸರಕಾರದ ಜೋಡಿ ನಾಗರಿಕರು, ಸಂಘ-ಸಂಸ್ಥೆಗಳು ಮುಂದಬರಬೇಕು." ಅಂತ ನಾ ಪತ್ರಿಕೆ ಯೊಳಗ ಬರ್ದು ಮನವಿ ಮಾಡ್ಕೊಂಡಿದ್ದೆ. ಮತ್ತ ಬೆಂಗಳೂರಾಗ ನನ್ನ ಗೆಳೆಯಾರು ಇಬ್ಬರು-ಮೂವರು ಅದಾರ. ಅವರಿಗೂ ಪತ್ರ ಬರೆದಿದ್ದೆ. ಅದಕ್ಕ ಎರಡು ಸಂಘಗಳು ಸಹಾಯ ಮಾಡಲಿಕ್ಕ ಮುಂದಾಗ್ಯಾವ. ಮತ್ತೊಂದು

ಸಂಘದವ್ರು ರಾತ್ರಿ ಸಾಲಿ ಕಲೀತಿರೊ ಮಂದಿಗ ಅರಿವಿ ಕಳಿಸಿಕೊಡ್ತೇವಂತ ಪತ್ರ ಹಾಕ್ಯಾರ!" ಚಂದು ಎಲ್ಲವನ್ನೂ ವಿವರಿಸಿದಾಗ "ಈ ಬೆಂಗಾಡಿನಂಥ ಸುಡುಗಾಡು ಊರಿಗ, ತಂಗಾಳಿ ಹಂಗ ಬಂದೀಯಪ್ಪ ತಂಪುಕೊಡಲಿಕ್ಕ! ಗಾಂಧಿ ಮಾತ್ಮಾನಂಗ ಚಲೋ ಕೆಲ್ಸಕ್ಕ ಕೈ ಹಚ್ಚಿದ್ದಿ. ಆತನ್ನ ನೆನಸ್ಕಳೋ ಹಂಗ, ಮುಂದ ಈ ಊರ ಮಂದಿನೂ ನಿನ್ನ ನೆನಸ್ಕೊಂಡಾರು!" ಲಚ್ಮಿ ಭಾವಪೂರ್ಣವಾಗಿ ಹೇಳಿದಳು.

"ಅವ್ವವ್ವಾ! ಹೊಗಳಾಕ ನಿಂತಳಂದ್ರ ದೊಡ್ಡವ್ವನ್ನ ಹಿಡಿಯೋರೇ ಇಲ್ಲ ನೋಡು!...ಗಾಂಧಿ ಮಹಾತ್ಮನ ಗತಿ ಕಡೇಕ ಏನಾತು ಗೊತ್ತೇನು ದೊಡ್ಡವ್ವ" ಚಂದು ನೋವು-ತಮಾಶೆ ಬೆರೆತ ದನಿಯಲ್ಲಿ ಕೇಳಿದ.

"ಗುಂಡಿಕ್ಕಿ ಸಾಯಿಬಡಿದರಂತಲ್ಲಪ್ಪಾ ನನ್ನ ಹಾಟುಗಳ್ರು!...ಚಲೋ ಮಂದಿಗ ಕಾಲ ಇಲ್ಲೋ ತಮ್ಮಾ...ಆದ್ರು ನಾಕ್ ಮಂದಿಗ ಉಪಕಾರ ಆಗೊ ಕೆಲ್ಸ ಮಾಡೇ ಸಾಯಿಬೇಕು ನೋಡು ಮನ್ಸ!"

"ಅಗದಿ ಕರೆಕ್ಟ್ ಹೇಳ್ದಿ ದೊಡ್ಡವ್ವ" ಎಂದು ಚಂದು ತಲೆದೂಗಿದ.

"ಅದ್ಯಾರೋ ಅರಿವಿ ಕೊಡ್ತಾರ ಅಂದ್ಯಲ್ಲ ಚಂದಪ್ಪ. ನಮ್ಮಂದಿ ಉಡುಪೇ ಕೊಡ್ತಾರೇನು" ಸೋನಿ ಕುತೂಹಲದಿಂದ ಕೇಳಿದಳು.

"ಇಲ್ಲ. ಸೀರಿ-ಧೋತ್ರ ಅದಾವು. ಕೊಡ್ತಾರ"

"ಕೊಡ್ಲಿ ಬಿಡು. ಸೀರಿ ಹರ್ದು ಲಂಗ ಹೊಲ್ಕೊಂಡ್ರಾತು" ಎಂದು ಸೋನಿ ಹೇಳಿದಾಗ "ಹರಿಯಾದ್ಯಾಕ? ಅದೇ ಸೀರಿನ ಸುತ್ತಿಕೊಂಡ್ರ ಆತು..." ಸಲಹೆ ಮಾಡಿದ ಚಂದು.

"ಅನ್ನೇ ಉಟ್ಕೊಂಬಿಡೋದಾ! ನನಗ ನಾಚಿಗಿ ಬರ್ತದಪ್ಪ!...ಅತ್ತಿ ನೀ ಉಡತಿದ್ದೀಯೇನು ಸೀರೀನಾ?" ಎಂದು ಕೇಳಿದಳು.

"ಉಟ್ಕೊಂಡ್ರಾತು ಬಿಡು. ನಮ್ಮ ಅರವಿ ಹೊಲಕೊಂಡ್ ಕೊಡಲಿಕ್ಕ ಎಲ್ಲಿ ಸವುಡದ? ನನ್ನ ಕಣ್ಣು ಮಂಜುಮಂಜಾಗ್ಯಾವ. ಈಗೀಗ ಚೂಜಿ ಕಣ್ಣಾಗ ದಾರ ಪೋಣಿಸಲಿಕ್ಕ ಬರೂವಲ್ದು..." ಎಂದು ಲಚ್ಮಿ ವಿಚಿತವಾಗಿ ಹೇಳಿದಾಗ, ತಾನೂ ಸೀರೆ ಉಡುವುದೆಂದು ಸೋನಿ ನಿರ್ಧರಿಸಿದಳು.

ಅಂದು ರಾತ್ರಿ ಅವಳಿಗೆ ಬರೀ ಸೀರೆಯದೇ ಕನಸು. ತನ್ನ ಸವತಿ ಉಟ್ಟಿದ್ದಕ್ಕಿಂತಲೂ ಹೆಚ್ಚಿನ ಬೆಲೆಬಾಳುವ ಸೀರೆಯನ್ನು ತಾನುಟ್ಟುಕೊಂಡಂತೆ ಬಂಗಾರದ ವಡವೆ-ವಸ್ತ್ರ ಇಟ್ಟುಕೊಂಡು ಗಂಡನೊಡನೆ ಪೇಟೆ ತುಂಬ ಸುತ್ತಾಡಿದಂತೆ! ..

'ದಿಬ್ಬ'ದಲ್ಲಿ ಶಾಲೆ ಶುರುವಾದ ಮೇಲೆ-ಅಲ್ಲಿಯ ವಾತಾವರಣದಲ್ಲಿ ಗಮನಾರ್ಹ ಬದಲಾವಣೆ ಕಂಡುಬರತೊಡಗಿತು. ನಿದ್ರೆಯಲ್ಲಿದ್ದವರು ಒಬ್ಬೊಬ್ಬರಾಗಿ ಕೊಡವಿಕೊಂಡು ಮೇಲೇಳುವಂತೆ ಅಲ್ಲಿಯ ಕೆಲವು ಜನ ಸಾಮಾಜಿಕ ಸೌಲತ್ತುಗಳ ಬಗ್ಗೆ ಧ್ವನಿ ಎತ್ತಲಾರಂಭಿಸಿದ್ದರು. ಅದರ ಫಲ ವಾಗಿ ಈಗ ಅಲ್ಲಿ ಕೊಳವೆ ಬಾವಿ ತೋಡಿಸಲಾಗಿತ್ತು. ಜನ ಬಟ್ಟೆ ಒಗೆಯಲು, ಮೈ ತೊಳೆಯಲು ಹಿಂದಿನಂತೆ ದೂರದ ಹಳ್ಳ-ಕೊಳ್ಳ ಹುಡುಕಿಕೊಂಡು ಹೋಗಬೇಕಿರಲಿಲ್ಲ. ಲಚ್ಮಿಯೂ ಸೇರಿದಂತೆ ಹಳ್ಳಿಯ ಹಲವಾರು ಜನ ವೃದ್ಧ-ವೃದ್ಧೆಯರಿಗೆ ಚಂದು ಮಾಸಾಶನ ಮಂಜೂರು ಮಾಡಿಸಿದ್ದ.

ವಾರ ಎರಡು ವಾರಕ್ಕೊಮ್ಮೆ ಅವನು ಹಳ್ಳಿಯ ಪ್ರಮುಖರನ್ನು ಒಂದೆಡೆ ಸೇರಿಸಿ, ಹಳ್ಳಿಯ ಸಮಸ್ಯೆಗಳ ಬಗ್ಗೆ ಚರ್ಚೆಗೆ ತೊಡಗಿಸುತ್ತಿದ್ದ. ತಮ್ಮ ಹಳ್ಳಿಗೆ ವಿದ್ಯುತ್ ಬೇಕೆಂದು ಕೆಲವರು ಬಯಸಿದರೆ "ನಮ್ಮಪ್ಪ-ಅಜ್ಜೋರೆಲ್ಲ ಲೇಟ್ ಬೆಳಕಿನಾಗೇ ರಾತ್ರಿ ಕಲೀತಿದ್ರಾ? ಅದ್ರಿಂದ ಲಗೂ ಕಣ್ಣು ಹೊಂಟೋಗ್ತಾವ! ಅಂಥವೆಲ್ಲ ನಮ್ಮಳ್ಳಿಗ ಬ್ಯಾಡ!" ಎಂದು ವಿರೋಧಿಸುವ ವರೂ ಇದ್ದರು.

ಹಿಟ್ಟಿನ ಗಿರಣಿಯ ಪ್ರಸ್ತಾಪ ಬಂದಾಗಲಂತೂ "ಹೆಣುಮಕ್ಳು ಕೆಲ್ಸ ಇಲ್ದ ಕೆಟ್ಟುಹೋಗ್ತಾರ! ನಮ್ಮಳ್ಳಿಯಾಗ ಗಿರಣಿ ಮಾತ್ರ ಹಾಕಿಸಬಾರ್ದು!" ಎಂದು ವಿರೋಧಿಸಿದವರೇ ಹೆಚ್ಚು. ಚಂದು ಇವರೆಲ್ಲರಿಗೂ ನಯವಾಗಿ ತಿಳಿ ಹೇಳಬೇಕಾಗುತ್ತಿತ್ತು—"ನಮ್ಮಳ್ಳಿಯಲ್ಲಿ ಒಂದು ಮಹಿಳಾ ಸಂಘ ಚಾಲೂ ಮಾಡೋಣಂತ. ಅದರಲ್ಲಿ ಹೊಲಿಗಿ, ಬುಟ್ಟಿ ಹೆಣೆಯೋದು, ಚರಕಾ ನೂಲೂದು ಇಂಥವ್ನೆಲ್ಲ ಕಲಿಸುವ ಏರ್ಪಾಡು ಮಾಡೋಣು. ಆಗ ನಮ್ಮ ಹೆಣ್ಣುಮಕ್ಕು ಬೀಸುತ್ತಾ ಕೂಡ್ತಿದಷ್ಟು ಹೊತ್ತಿನೊಳಗ ಈ ಕಸಬನ್ನ ಕಲಿತಾರೆ ನಾಲ್ಕು ದುಡ್ಡು ಗಳಿಸ್ತಾರ-ಕುಂತ ಜಾಗದೊಳಗ..."

"ಖರೆ ಬಿಡಪ್ಪ. ನೀ ಹೇಳೋದೂ ಒಂದು ರೀತಿಲಿಂದ ಬರೋಬ್ಬರಿನs ಅದ!" ಎಂದು ಕೆಲವರಾದರೂ ಆತನ ಮಾತಿಗೆ ಒಪ್ಪಿಕೊಳ್ಳುವರು. ಲಚ್ಮಿ-ಸೋನಿಯರೂ ಸೇರಿದಂತೆ ನಾಕೈದು ಜನ ಹೆಂಗಸರು ಸೀರೆ ಉಡಲಾರಂಭಿಸಿದಾಗ, ಸಂಪ್ರದಾಯ ಪ್ರಿಯರು ಅಪಸ್ವರವೆತ್ತಿದರು. "ಈ ಚಂದು ಮಾಸ್ತರ ಬಂದು ನಮ್ಮ ಮಂದಿ ಕುಲ ಕೆಡಿಸಲಿಕ್ಕ ಹತ್ಯಾನ. ಹೆಣ್ಣುಮಕ್ಕೆಲ್ಲ ಸೂಳೀರಂಗ ಸೀರಿ ಉಡಲ್ಯಾಕ ಹತ್ಯಾರ!" ಚಂದು ಅಂತಹವರ ಮನವನ್ನೂ ಒಲಿಸಿಕೊಳ್ಳಬೇಕಾಯಿತು.

"ನಮ್ಮ ಕುಲದ ಉಡುಪು ನೋಡಲಿಕ್ಕ ಅಗದಿ ಚಲೋ ಇರ್ತಾವ. ಚಂದಿರ್ತಾವ ಖರೆ. ಹಬ್ಬ-ಹುಣ್ಣಿವಿಯಾಗ ನಮ್ಮ ಹೆಣ್ಣುಮಕ್ಕಳು ಅವನ್ನೇ ಉಟ್ಟುಕೊಳ್ಳಲಿ. ಆದ್ರ ದಿನಬಳಕಿಗೂ ಅವನ್ನೇ ಉಡಬೇಕಂದ್ರ ಭಾಳ ದುಬಾರಿಯಾಗ್ತಾವ. ತಿಂಗಳಾನುಗಟ್ಲೆ ಕುಂತು ಕಣ್ಣಾಗಕಣ್ಣಿಟ್ಟು ಹೊಲಿಬೇಕು; ಮತ್ತ ಅದರ ಮ್ಯಾಲ ಕನಡಿ, ಗೆಜ್ಜಿ, ಗೊಂಡಿ ಅಂತ ಎಂತಾವ ಹಚ್ಚಿ ವಜ್ಜಿಯಾಗಿರ್ತಾವ. ಹಿಂಗಾಗಿ ದಿನಾದಿನಾ ಒಗಿಯೂದೂ ಆಗೂದಿಲ್ಲ. ಅದರ ಸಲುವಾಗಿ ದಿನ ಬಳಕಿಗ ಅನುಕೂಲ ಆಗೂ ಅಂತ ಸೀರಿ-ಪತ್ತಲ ಉಟ್ರ ತಪ್ಪೇನಿಲ್ಲ. ಭಾಳಷ್ಟು ಹಳ್ಳಿಯಾಗ ನಮ್ಮಂದಿ ಹೆಣ್ಣುಮಕ್ಳು ಈಗಾಗ್ಲೆ ಸೀರಿ ಉಡಲಿಕ್ಕ ಹತ್ಯಾರ. ವಿದ್ಯಾವಂತ್ರು ಬುದ್ಧಿವಂತ್ರು ಆಗಲಿಕ್ಕ ಹತ್ಯಾರ. ಅವರನ್ನೆಲ್ಲ ಕುಲಗೆಟ್ಟವರು ಅನ್ನಲಿಕ್ಕ ಬರ್ತದೇನು?"

ಕೆಲವರು ಮುದುಕ-ಮುದುಕಿಯರ ಹೊರತು ಉಳಿದವರೆಲ್ಲ ಚಂದುವಿನ ಮಾತಿಗೆ ಸೈ ಎಂದರು. ಹಳ್ಳಿಯಲ್ಲಿ ಸೀರೆಯುಡಲು ನಾಚುತ್ತಿದ್ದವರು ಧೈರ್ಯವಾಗಿ ಉಡಲಾರಂಭಿಸಿದರು. ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ, ತಾವು ಹೋಗುವುದಕ್ಕೆ ಹಿಂಜರಿಯುತ್ತಿದ್ದವರು ಬರುಬರುತ್ತ ಕಲಿಯುವುದರಲ್ಲಿ ಹೆಚ್ಚಿನ ಉತ್ಸಾಹ ತೋರತೊಡಗಿದರು.

ಹೆದ್ದಾರಿಯ ಬಳಿ 'ದಿಬ್ಬ'ದ ಅಸ್ತಿತ್ವವನ್ನು ಸಾರುವ ಫಲಕವೊಂದು ಮಾರ್ಗದರ್ಶಿಯಾಗಿ ನಿಂತುಕೊಂಡಾಗ ಗ್ರಾಮದ ದೊಣ್ಣೆಯೂ ಸೇರಿದಂತೆ ಕೆಲವರಿಗೆ ಒಂದು ರೀತಿಯ ಇರಿಸು ಮುರಿಸಾಗತೊಡಗಿತು. ಅದೊಂದು ದಿನ ಅಕಸ್ಮಾತ್ತಾಗಿ ಮಾನ್ಯಾ ಭೇಟಿಯಾದಾಗ, ದೊಣ್ಣೆ ಹಳ್ಳಿಯ ಪ್ರಸ್ತಾಪವೆತ್ತಿದ-

"ದಿನ ಬರ್ತಾಸಂತಲ್ಲ ನಿಮ್ಹಳ್ಳಿ ನೋಡಲಿಕ್ಕ!"

ಆ ವಿಷಯು ತನಗೆ ಗೊತ್ತಿರಲಿಲ್ಲವಾದ್ದರಿಂದ ಮಾನ್ಯಾ ಸುಮ್ಮನಾದ.

"ಯಾರ ಬಾಯಾಗ ನೋಡಿದ್ರೂ ನಿಮ್ಮ 'ದಿಬ್ಬ'ದ್ದೇ ಸುದ್ದಿಯೇನಪ್ಪ. ನಿಮ್ಮ ಚಂದಪ್ಪ ಮಾಸ್ತರ 'ದಿಬ್ಬ'ವನ್ನ ದಿಲ್ಲಿ ಮಾಡಲಿಕ್ಕ ಹೊಂಟಾನಂತ! ಊರ ಹೆಣ್ಣುಮಕ್ಕು ತಂತಮ್ಮ ಗಂಡರನ್ನ ಮರತೇ ಬಿಟ್ಟಾರಂತ!?"

ತನ್ನದೇ ಆದ ಗುಂಗಿನಲ್ಲಿ ಮುಳುಗಿದ್ದ ಮಾನ್ಯಾನಿಗೆ ಒಮ್ಮೆಲೆ ಕೊಡಲಿ ಪ್ರಹಾರವಾದಂತಾಗಿ ಬೆಚ್ಚಿದ—"ಏನ್ಹೇಳ್ತಿದ್ದೀಯಣ್ಣಾ? ನಿನ್ಮಾತಿನ ಅರ್ಥಾನೇ ನನಗ ತಿಳೀವಲ್ಲು!"

"ಅದೇ ನಿಮ್ಮೂರ 'ಕೃಷ್ಣ'ನಿಗೆ 'ಗೋಪಿಕೆ'ಯರ ದಂಡು ಮುಗಿಬಿದ್ದಾವಂತ! ಹೆಣಮಕ್ಕಿಗ ಸಾಲಿ ಕಲ್ಸೋ ನೆಪದಾಗ ಹರೇದ ಹೆಣುಮಕ್ಕಳ ಕೂಡ ರಾತ್ರಿಯೆಲ್ಲ 'ಕೃಷ್ಣಲೀಲಾ' ನಡಸ್ತಾರಂತ...! ಅದ್ಯಾವಾಕಿನೋ ತನ್ನ ಗಂಡನ್ನೇ ಬಿಟ್ಟುಬಂದು ಬ್ಯಾರೆ ಮನಿ ಕಟ್ಟಿಕೊಂಡಾಳಂತಲ್ಲಾ-ಆತನ ಸಲುವಾಗಿ...!"

ಮಾನ್ಯಾ ಬಿಟ್ಟಬಾಯಿ, ನೆಟ್ಟ ಕಣ್ಣುಗಳಿಂದ ತನ್ನ ಮಾತನ್ನಾಲಿಸುತ್ತಿರುವುದನ್ನು ಕಂಡು, ದೊಣ್ಣೆಗೆ ಮತ್ತಷ್ಟು ಉಮೇದು ಉಕ್ಕಿ ಬಂತು; "ಯಾಕs ಮಾನ್ಸಿಂಗಪ್ಪ, ಊರಿಗೆಲ್ಲ ಗೊತ್ತಿರೋ ಸುದ್ದಿ ನಿನಗ ಗೊತ್ತಿಲ್ಲೇನು? ಗೊತ್ತಿರತೈತಿ...ಅಂದ್ರೂ ಸುಮ್ಮನಿದ್ದಿ!...ಅದೂ ಬರೋಬ್ಬರಿ ಬಿಡು. ಅದ್ನೆಲ್ಲಾ ಕಟಗೊಂಡ್ ನಮುಗೇನಾಗಬೇಕಾಗೈತಿ? ನಂನಮ್ಮ ಹೆಂಡ್ರು ಮಕ್ಕು ನಂನಮ್ಮ ಹಿಡಿತದಾಗ ಇದ್ರ ಮುಗೀತಪ್ಪ. ಉಳ್ಳೋರ ಚಿಂತಿ ನಮುಗಾರ ಯಾಕ ಬೇಕು? ಹೌದಲ್ಲೋ?"

ಉಂಗುಷ್ಠದಿಂದ ನೆತ್ತಿಯವರೆಗೂ ಉರಿ ಹೊತ್ತಿಕೊಂಡಂತಾಗಿ ಮಾನ್ಯಾ ನಿಂತಲ್ಲೇ ಕರಕರ ಹಲ್ಲು ಮಸೆದ. ಆ ದಿನ ಕಾಶಪ್ಪನೂ ಇದೇ ಧಾಟಿಯ ಮಾತಾಡಿದ್ದನ್ನು ತಾನು ಕಿವಿಗೆ ಹಾಕಿಕೊಂಡಿರಲಿಲ್ಲ. ತನ್ನ ಮೆಚ್ಚಿನ ಸಂಗಿ ತನ್ನ ಜೊತೆಗಿದ್ದಾಳೆ-ಸಾಕು. ಆ ಹಾಳು ಸೋನಿ ಅಲ್ಲ ಅದು ಶನಿ-ಒಬ್ಬಂಟಿಗಳಾಗಿ ಬಿದ್ದಿರುವಲ್ಲಳ್ಯಾಕ...ಎಂದು ಆಕೆಯ ಸುದ್ದಿಯನ್ನು ತಲೆಯಿಂದ ತೆಗೆದು ಹಾಕಿ ತನ್ನ ದಂಧೆಯಲ್ಲಿ ತಾನು ಮಗ್ನನಾಗಿದ್ದ.

ಸಂಗಿ ಸಕಲ ವಿಷಯದಲ್ಲಿಯೂ ತನಗೆ ಅನುಕೂಲೆಯಾದವಳು. ಮುನಿಸ್ವಾಮಿ, ಥಾಮಸ್, ಪಾಷಾನ ಪರಿಚಯು ತನಗಾಗಿದ್ದೇ ಆಕೆಯಿಂದ! ಕಡಿಮೆಯೆಂದರೂ ಸಾವಿರ-ಎರಡು ಸಾವಿರ ರೂಪಾಯಿ ಗಂಟು ಆಕೆ ಬಳಿ ಇದ್ದಾವು! ಒಗ್ಗ ವಡವೆ-ವಸ್ತ್ರಾನೂ ಮಾಡಿಕೊಂಡಾಳ. ಇತ್ತೀಚೆಗೆ ತಾನು ತಂದುಕೊಟ್ಟಿದ್ದನ್ನೂ ಒತ್ತಿ ಕಿಯಿಂದ ಇಟುಗೊಂಡಾಳ.. ಆ ದಿನ ತಾವಿಬ್ಬರೂ ಕೂಡಿ ಗುದ್ಯಮ್ಮನ ಜಾತ್ರಿಗ ಹೋದಾಗ 'ಗೌಡ್ರ ಗದ್ಲ' ನಾಟ್ಕ ನೋಡಿದು ಚಾದಂಗಡಿಯಾಗ ಒಗ್ಗರಣೆ-ಮಸಾಲಿದ್ದಾಸಿ ತಿಂದಿದ್ದು, ಗಡಂಗಿನಾಗ ಕುಂತು ಸೊರೆ ಹೆಂಡ ಕುಡಿದು ಮಜಾ ಮಾಡಿದ್ದಕ್ಕೆಲ್ಲಾ ಸಂಗಿಯೇ ಹೆಚ್ಚು ಖರ್ಚು ಮಾಡಿದ್ದಳು...

ಆ ದಿನ ಹೊರಟು ಬರುವಾಗ "ನಿನ ಬಿಟ್ಟು ಹೋಗೂದಂದ್ರ ನನ್ನ ಜೀವ ಕುತ್ತಿಗಿಗಿ ಬಂದ್ಹಂಗ ಆಗ್ತದ ನೋಡು ಸಂಗಿ!' ಅಂತ ತಾನು ಪ್ರಲಾಪಿಸಿದಾಗ, "ನಿನ್ನ ಬಿಟ್ಟಿರೂದು ಅಂದ್ರ-ನನ್ನ ಜೀವಾನೂ ಜುಂ ಜುರು ಅಂತೈತಿ; ನಿನ ಜೋಡಿ ನನ್ನೂ ಕರಕೊಂಡು ಹೋಗ್ಬಿಡು ಮತ್ತ!' ಎಂದು ತಮಾಷೆಗೆಂಬಂತೆ ಹೇಳಿದ್ದಳು.

"ಏರೇ ನನಜೋಡಿ ಬರ್ತಿದ್ದೀಯೇನು?! ಕರಕೊಂಡ್ಹೋಗ್ತೀನಿ," ಎಂದು ತಾನು ಗಂಭೀರವಾಗಿ ಕೇಳಿದಾಗ—"ಮನಿಯಾಗ ನಿನ ಹೆಂಡ್ತಿ ಇದ್ದಾಳಂತಿ, ಅಪ್ಪ ಅವ್ವಾನ ಅಂತಿ. ಅವರೆಲ್ಲ ನನ್ನ-ಮನಿಯೊಳಗ ಕರಕೊಂಡಾರೇನು....? ಸುಳ್ಳೇ ಕರಿಯೂ ನಾಟ್ಕ ಮಾಡಬ್ಯಾಡ ಬಿಡು!" ಎಂದು ಛೇಡಿಸಿದ್ದಳು.

"ಸಂಗೀ ನನ ಮುದ್ದಿನ ಸಂಗೀ, ನೀ ತಪ್ಪು ತಿಳ್ಕೊಂಡಿದ್ದಿ! ನನ ಹೆಂಡ್ತಿ ನನಗ ಹೆಂಡ್ತಿನೇ ಅಲ್ಲ! ಖರೇ ಹೇಳ್ಳಿಕ್ಕ ಹತ್ತೀನಿ-ಅದೊಂದು ನಾಯಿ! ನಿನ ಕಾಲದೆಸಿ ಬಿದ್ದಿರ್ತದ....ನಮ್ಮಪ್ಪಗ ಆ ನಾಯಿನ ಕಂಡ್ರ ಆಗೂದಿಲ್ಲ. ನನ್ನಂಗs ಅದನ್ನ ಕಂಡ್ರ ಆತಗೂ ಮೈ ಉರಿತದ! 'ಇನ್ನೊಂದ್ ಲಗ್ನ ಮಾಡ್ಕೊಳೋ ಮಾರಾಯ' ಅಂತ ದಿನಸರ್ತಿ ನಿನ್ನ ಹತ್ರ ಬಂದಾಗೆಲ್ಲ ಹೇಳs ಹೇಳತಿರತಾನ...ಆದ್ರ ಯಾವಾಕಿನೂ ನನಗ ಬೇಕಾಗಿಲ್ಲ, ನೀನೊಬ್ಬಾಕಿ

ಸನಜೋಡಿ ಬಂದು ಇದ್ದುಬಿಟ್ಟೆ ಅಪ್ಪ ನಾನೇ ಮಹರಾಜ ನೋಡು! ನಮ್ಮಪ್ಪನೂ ಅಗದಿ ಕುಶಿಯಾಗಿಬಿಟ್ಟಾನ ' ಎಂದೆಲ್ಲಾ ಸಮಜಾಯಿಸಿ ಹೇಳಿ, ಆಕೆಯ ಮೋರೆತುಂಬ ಮುತ್ತಿನ ಮಳೆಗರೆದಿದ್ದ.

ಅದರ ಪ್ರಕಾರವೇ ಮುಮಂತ ಹೊಸ ಸೊಸೆಯನ್ನು ಆದರದಿಂದಲೇ ಸ್ವಾಗತಿಸಿದ್ದ. ಸೋನಿ ಬೇರೆ ಮನೆ ಮಾಡಿಕೊಂಡಿರುವುದು ಈ ಸಂದರ್ಭದಲ್ಲಿ ಒಳ್ಳೆಯದೇ ಆಯಿತೆಂದು 'ನವದಂಪತಿ'ಗಳು ಸಂತಸ ಪಟ್ಟಿದ್ದರು ..

ಆದರೆ ..ಈ ರಂಡೆ ಆ ಮಾಸ್ತರಗ ಸೆರಗು ಹಾಸಿ ಮೋಜು ನಡೆಸ್ಯಾಳಂತಲ್ಲಾ... ಈ ಕೂಡ್ಲೇ ಹೋಗಿ ಆಕಿನ ಜುಟ್ಟು ಹಿಡ್ದು ಎಳಕೊಂಡ್ ಬರ್ತೇನಿ ನನ್ನ ಮನಿ ಬಾಗ್ಲಾ ಕಾಯಿಕೊಂಡ್ ಬಿದ್ದಿರುವಲ್ಲಳ್ಯಾಕ...!

ಬಸ್ಸಿಗೆಂದು ಕಾಯುನಿಂತಿದ್ದ ಮಾನ್ಯಾ ಪ್ರಯಾಣವನ್ನು ರದ್ದುಗೊಳಿಸಿ ರೋಷಾವೇಶದಿಂದ ಹಿಂದಿರುಗಿದ. ನೇರವಾಗಿ ಸೋನಿಯ ಮನೆ ಬಾಗಿಲಿಗೆ ಬಂದು ನಿಂತ. ಕದ ಮುಚ್ಚಿದೆ-ಬೀಗ ಹಾಕಿಲ್ಲ! ತನ್ನ ಸಂದೇಹ ಸುಳ್ಳಲ್ಲವೆಂಬುದು ಖಾತ್ರಿಯಾಯಿತು. ಸೋನಿ ಮಾಸ್ತರನ ತೋಳತೆಕ್ಕೆಯಲ್ಲಿರಬಹುದಾದ ಚಿತ್ರ ತಲೆಯಲ್ಲಿ ಚಕ್ರದಂತೆ ಸುತ್ತತೊಡಗಿತು.

ಅತ್ತಿತ್ತ ನೋಡಿದ. ಮಧ್ಯಾಹ್ನದ ಸಮಯವಾದ್ದರಿಂದ ಕೂಲಿ ಕಟ್ಟಿಗೆಗೆ ಜನ ಹೊರಟುಹೋಗಿ ಓಣಿ ನಿರ್ಜನವಾಗಿತ್ತು. ಪಕ್ಕದ ಮನೆಯ ಮಾಡಿನಲ್ಲಿ ಚಿಕ್ಕಪುಟ್ಟ ಮಕ್ಕಳು ಗೋಲಿಯಾಡುವುದರಲ್ಲಿ ಮಗ್ನವಾಗಿದ್ದವು.

ಮಾಸ್ತರನ ಕೂಡ ಚಕ್ಕಂದ ಆಡಿಕೊಂಡಿರುವವಳಿಗ, ಈ ರಣಬಿಸಿಲಾಗ ಕೆಲಸಕ್ಕ ಹೋಗೋ ಅಗತ್ಯ ಏನದ ...ಮಾನ್ಯಾನ ದೇಹದಲ್ಲಿ ದೈತ್ಯ ಸಂಚಾರವಾದಂತಾಗಿ, ತನ್ನೆಲ್ಲಾ ಶಕ್ತಿಯನ್ನು ಒಗ್ಗೂಡಿಸಿ ಜೋಪಡಿಯ ಬಾಗಿಲನ್ನು ರ್ಝಾಡಿಸಿ ಒದ್ದ. ಕಟ್ಟಿದ್ದ ತಂತಿ ಮುರಿದು, ಬಡಿದಿದ್ದ ಮೊಳೆಗಳು ಕಿತ್ತುಕೊಂಡು ಬಾಗಿಲು ಕಳಚಿ ದಢಾರನೆ ಒಳಭಾಗಕ್ಕೆ ಬಿದ್ದಿತು.

“ಯವ್ವಾ ” ಎಂದು ನರಳಿದ ಎಳೆಯ ಕಂಠದ ಕ್ಷೀಣ ಸ್ವರವೊಂದು ಮಾನ್ಯಾನ ಕಿವಿಯನ್ನು ತಲುಪಲೇ ಇಲ್ಲ. ಒಳಗಡೆ ಯಾರೂ ಇಲ್ಲದ್ದನ್ನ

ಗಮನಿಸಿ 'ಎತ್ತಾಗ ಹೋಗ್ಯಾಳೋ ಸಾಯ್ಲಿ ಕ್ಕ!' ಎಂದು ಕಾಲು ಅಪ್ಪಳಿಸುತ್ತ, ಆತ ಬಂದ ವೇಗದಲ್ಲಿ ಹಿಂದಿರುಗಿದ.

ಲಚ್ಮಿಯ ಮನೆ ಬಾಗಿಲಲ್ಲಿ ಕುಳಿತಿದ್ದ ಕುರುಡು ಕಾಳಜ್ಜಿಯ ಕಿವಿಗೂ ಆ ಭಾರಿ ಶಬ್ದ ಕೇಳಿಬಂತು. "ಯಾರದು? ಏನದು?" ಎಂದು ಕೂಗಿ ಕೇಳಿದಳು. ಆಡುತ್ತಿದ್ದ ಹುಡುಗರಲ್ಲೊಬ್ಬ ತನ್ನ ಎಳಸು ದನಿಯಲ್ಲಿ ಏನೋ ಹೇಳಿದ್ದು ಮುದುಕಿಗೆ ಕೇಳಿಸದಾಗ ಆಕೆ ಮೌನವಹಿಸಿದಳು.

ಆ ದಿನ ಲಚ್ಮಿ-ಸೋನಿ ಇಬ್ಬರೂ ಕಟ್ಟಿಗೆ ತರಲೆಂದು ಗುಡ್ಡಕ್ಕೆ ಹೋಗಿದ್ದವರು ಒಂದೆರಡು ತಾಸಿಗೆ ಹಿಂದಿರುಗಿದಾಗ, ಜೋಪಡಿಯ ಬಾಗಿಲು ಕಳಚಿ ಬಿದ್ದಿರುವುದನ್ನು ಕಂಡು ಗಾಬರಿಗೊಂಡರು. ಶಾರದಿಗೆ ಜ್ವರ ಬಂದಿದ್ದರಿಂದ ಸೀತೆಯೊಡನೆ ಶಾಲೆಗೆ ಹೋಗದೆ ಅವಳು ಮನೆಯಲ್ಲೇ ಮಲಗಿಬಿಟ್ಟಿದ್ದಳು. ಆದ್ದರಿಂದ ಸೋನಿ ಚಿಲುಕ ಹಾಕದೆ ಹಾಗೆಯೇ ಬಾಗಿಲು ಮುಚ್ಚಿಕೊಂಡು ಸೌದೆಗೆ ಹೊಗಿದ್ದಳು. ಈಗ ನೋಡಿದರೆ ಬಾಗಿಲು ಕಳಚಿಕೊಂಡು ಬಿದ್ದಿದೆ.

ತಲೆಯ ಹೊರೆಯನ್ನು ಧೊಪ್ಪನೆ ನೆಲಕ್ಕೆ ಒಗೆದು ಸೋನಿ ಬಾಗಿಲ ಬಳಿ ಓಡಿದಳು. ಭಾರವಾದ ಕದವನ್ನು ಎರಡೂ ಕೈಗಳಿಂದ ಮೇಲೆತ್ತಿ ಹಿಡಿದಾಗ ಕಂಡುಬಂದ ದೃಶ್ಯ ಅವಳೆದೆಯನ್ನು ನಡುಗಿಸಿತು! "ಅಯ್ಯೋ ನನ್ನ ಬಂಗಾರದ ಮಗಳೇ! ಶಾರದೀ!!..." ಎಂದು ಕರುಳು ಕತ್ತರಿಸುವಂತೆ ಕೂಗಿಕೊಂಡಳು.

ಕಣ್ಣು-ಕಟವಾಯಿಗಳಿಂದ ರಕ್ತ ಬಸಿದು ತುಳಿತಕ್ಕೊಳಗಾದ ಎಳೆಯ ಮಲ್ಲಿಗೆ ಮೊಗ್ಗಿನಂತೆ ಮುದುಡಿ ಹೋಗಿದ್ದ ಮಗಳ ನಿರ್ಜೀವ ದೇಹದ ಮೇಲೆ ಬಿದ್ದು ಗಟ್ಟಿಯಾಗಿ ರೋದಿಸತೊಡಗಿದಳು. ಕ್ಷಣಾರ್ಧದಲ್ಲಿ ಜನ ಕೂಡಿದರು. ಶಾಲೆಯಲ್ಲಿದ್ದ ಚಂದು ತನ್ನ ವಿದ್ಯಾರ್ಥಿ ವೃಂದದ ಸಮೇತವಾಗಿ ಅಲ್ಲಿಗೆ ಓಡಿಬಂದ.

ಎಲ್ಲರೂ ಮರುಗುವವರೇ. 'ಇದು ಹ್ಯಾಂಗಾಯ್ತು? ಬಾಗ್ಲ ಬೀಳಿಸಿದವರ್ಯಾರು?' ಎಂದು ಪರಸ್ಪರ ಪ್ರಶ್ನಿಸುವವರೇ. ಉತ್ತರ ಮಾತ್ರ ಯಾರಿಗೂ ಹೊಳೆಯದಾಗಿತ್ತು. ಶಬ್ದ ಕೇಳಿ ಬಂದಿತೆಂದು ಕಾಳಜ್ಜಿ ಹೇಳಿದ್ದರ ಹೊರತು ಬೇರೆ ಯಾವ ಸುಳಿವೂ ದೊರಕಲಿಲ್ಲ. ಸೋನಿಗೆ ಗಂಡನ ಮೇಲೆ ಸಂದೇಹ

ವಿದ್ದರೂ, ಆತನೇ ಅಪರಾಧವೆಸಗಿದ್ದಾನೆ ಎನ್ನುವುದಕ್ಕೆ ಆಧಾರವೇನೂ ಇರಲಿಲ್ಲ.

ಆ ದಿನ ದೇವಿ ಹೇಳಿದ್ದ ಮಾತಿನ ಪ್ರಕಾರ "ಹೆಣ ಬಿದ್ದದ!" ಎಂಬ ಕಾಶ್ಯಾನ ಊಹೆಯನ್ನು ನೆರೆದವರು ಅನುಮೋದಿಸಿದರು. "ಮೈಯ್ಯಾಗ ಗಾಳಿ ಸೇರ್ಕೊಂಡಿರಬೇಕು.... ಅದ್ಕೇ ಜೋರಾಗಿ ಬಾಗ್ಲಾ ಜಗ್ಗಾ ಹೊಡ್ದಿರ್ತಾಳ ಅದು ಹೊತ್ಕೊಂಡ್ ಬಿದ್ದು ಬಿಟ್ಟೈತೆ! ವಜ್ಜಿ ತಡಿಲಾರ್ದ ಹುಡುಗಿ ಜೀವ ಬಿಟ್ಟದ ಪಾಪ!" ಎಂದು ವಿಶ್ಲೇಷಿಸುತ್ತ ಗುಂಪು ಚದುರಿತು.

ಊರಿಗೆ ಹೋಗುವುದಾಗಿ ಹೇಳಿ ಹೋಗಿದ್ದ ಮಾನ್ಯಾ ಉಬ್ಬಸಬಿಡುತ್ತ ತಿರುಗಿಬಂದು, ತಾನು ಸೋನಿಯನ್ನು ಎಳೆದುತರಲು ಹೋಗಿದ್ದನ್ನೂ 'ಆದರೆ ಆಕೆ ಅಲ್ಲಿಲ್ಲ. ಜೋಪಡಿಯ ಬಾಗ್ಲಾ ಮುರಿದು ಬಂದೀನಿ. ಆ ಲೌಡೀನ ಮತ್ತೊಮ್ಮೆ ವಿಚಾರಿಸಿಕೊಳ್ತೀನಿ!' ಎಂದು ಹೇಳಿ ಆತುರಾತುರವಾಗಿ ಹೊರಟು ನಿಂತಾಗ, ಸಂಗಿ ಅವನ ತೋಳು ಹಿಡಿದು ನಿಲ್ಲಿಸಿದಳು.

"ಅದ್ಯಾಕ ಈಸ್‌ದಿನ ಇಲ್ಲದ್ದು ಈಗ ಆಕಿನ ತಂಟಿಗ ಹೋಗಿದ್ದು? ಆಗ್ಲೆ ನನ್ ಸವಾಸ ಬ್ಯಾಡಾತೇನು ನಿನ್ಗ?" ಎಂದು ಕೇಳಿದಳು.

"ಹುಚ್ಚಿ, ಆ ನಾಯಿ ಯಾರಿಗ ಬೇಕಾಗ್ಯದ? ಎಷ್ಟೊತ್ತಾಗ್ಲಿ ಈ ಮನಿಗ ನೀನೇ ಯಜಮಾನ್ತಿ. ಆಕಿದೇನಿದ್ರೂ ನಿನ್ನ ಸೇವಾ ಮಾಡ್ಕೊಂಡ್ ಬಿದ್ದಿರೋದಷ್ಟ!" ಎಂದು ಮಾನ್ಯಾ ಸಮಾಧಾನಪಡಿಸಿದ.

ಅದೂ ಸಹ ಸಂಗಿಗೆ ಬೇಕಾಗಿರಲಿಲ್ಲ. "ಹೆಂಗೂ ಅಲಾದಿ ಮನಿ ಕಟ್ಟಿಕೊಂಡು ಇದ್ದು ಬಿಟ್ಟಾಳ. ಇನ್ನ ಇಲ್ಲಿ ಕರಕಂಬದ್ರ ಒಣ ಕಿರಿಕಿರಿ ಸುರುವಾಗ್ತದ. ಮನಿಗುಟ್ಟು ಮನಿಯಾಗ ಉಳಿತದಂಬೊ ಖಾತ್ರಿನೂ ಇಲ್ಲ! ಅದೂ ಅಲ್ದ ಆಕಿನ ಜೋಡಿ ಇಬ್ರು ಹುಡುಗೀರು ಬ್ಯಾರೆ ಬರ್ತಾರ!—"

ಅಲ್ಲೇ ಇದ್ದು ಎಲ್ಲವನ್ನು ಆಲಿಸುತ್ತಿದ್ದ ಹರಸಿಂಗ್ ಸೊಸೆಯ ವಾದವನ್ನು ಸಮರ್ಥಿಸಿದ- "ಖರೆ. ಆ ಪೀಡಾನ ತಂದು ಮನಿಯಾಗ ಇಟಗೊಂಬಂದುದು, ಬೀದಿ ಮಾರಿನ ಮನಿಗ ತಂದು ಇಟಗೊಂಡ್ಹಂಗ ನೋಡು!—"

ಮಾನ್ಯಾ ತಂದೆಯ ಮೇಲೇ ತಿರುಗಿಬಿದ್ದ-"ಹೌದೇಳು. ನಿನ್ನ ಹೆಂಡ್ತಿ

ಕಂಡೋರಿಗ ಕಾಲೆತ್ತಾಳಂತ ನಿನ್ಗ ಅಪ್ಪ್ಮನ ಬಾದಾಗ ಆಕಿನ ಗೋಣುಮುರ್ದು ಕುತೆಗಿಟ್ಟೆ! ಈಗ ನನ್ನ ಹೆಂಡ್ತಿ ಊರ ಸೂಳಿಯಾಗಿ ಮೆರೆತಿದ್ರೂ, ಆಕಿನ ಸುಮ್ನೆ ಬಿಟ್‌ಬಿಡಂತಿದ್ದಿ! ನೀ ಎಂಥ ಅಪ್ಪಲೇ ನೀನು! ಥೂ!" ಎಂದು ಉಗುಳಿ ಭರಭರನೆ ಅಲ್ಲಿಂದ ಹೊರಟುಹೋದ.

ಮಾವ-ಸೊಸೆ ಆತ ಹೋದ ದಿಕ್ಕನ್ನೇ ನೋಡುತ್ತ ನಿಂತಿರುವಾಗ, ಸೋನಿಯ ಮನೆಯಲ್ಲಿ ಅಳು-ಚೀರಾಟ ಕೇಳಿಬಂತು. ಬಾಗಿಲಡಿಯಲ್ಲಿ ಸಿಕ್ಕಿ ಹುಡುಗಿ ಸತ್ತಿರುವ ಸುದ್ದಿ ಕೇಳಿ ಇಬ್ಬರೂ ಚಿಂತಿತರಾದರು. ಪೋಲೀಸರು ಬಂದು ಆತನ ಕೈಗೆ ಬೇಡಿ ಹಾಕುವ ಹೊತ್ತು ಸಮೀಪಿಸಿತೆಂದು ಭೀತಿ ಪಡುತ್ತಿರುವಾಗಲೇ, ಜನ ಇದೆಲ್ಲಕ್ಕೂ 'ಗಾಳಿ'ಯನ್ನು ಹೊಣೆಯಾಗಿಸಿ ಬಿಟ್ಟಾಗ, ಇಬ್ಬರೂ ಸಮಾಧಾನದ ಉಸಿರು ಹಾಕಿದರು.

'ದಿಬ್ಬ'ದ ಪ್ರಾಥಮಿಕ ಶಾಲೆಯ ಕಟ್ಟಡ ಸಂಪೂರ್ಣವಾಗಿ ತಯಾರಾಯಿತು. ಪ್ರಾರಂಭೋತ್ಸವಕ್ಕೆ ಛೇರ್ಮನ್ ದೊಡ್ಡಪ್ಪನನ್ನು ಕರೆಸಿದರೆ ಸಾಕೆಂದು ಊರ ಪ್ರಮುಖರು ಅಭಿಪ್ರಾಯ ಪಟ್ಟಾಗ ಚಂದು ಒಪ್ಪಿಕೊಂಡ. ಮಗಳನ್ನು ಕಳೆದುಕೊಂಡು ತಿಂಗಳಿಂದಲೂ ಮಂಕಾಗಿ, ಯಾಂತ್ರಿಕವಾಗಿ ಕೆಲಸ ಮಾಡಿಕೊಂಡಿರುತ್ತಿದ್ದ ಸೋನಿಯನ್ನು ಚಂದು-ಲಚ್ಮಿ ಧೈರ್ಯದ ಮಾತುಗಳಿಂದ ಹುರಿದುಂಬಿಸಿ, ಶಾಲಾ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಿದ್ದರು.

ಸೀತಾ ತಾಯಿಗಿಂತಲೂ ಹೆಚ್ಚಿನ ಅಕ್ಷರ ಕಲಿತು, ಪಾಠ ಓದುವುದರಲ್ಲಿ ಮಗ್ಗಿ ಹೇಳುವುದರಲ್ಲಿ ಜಾಣೆಯಾಗಿದ್ದರಿಂದ, ಚಂದು ಸಂತೋಷಾರ್ಥವಾಗಿ ಅವಳಿಗೊಂದು ಸುಂದರವಾದ ಫ್ರಾಕನ್ನು ತಂದುಕೊಟ್ಟಿದ್ದ. ಸೀತಾ ಅದನ್ನುಟ್ಟು ಶಾಲೆಯಿಂದ ಮನೆಗೆ, ಮನೆಯಿಂದ ಶಾಲೆಗೆ ಸಂಭ್ರಮದಿಂದ ಓಡಾಡುತ್ತಿದ್ದಳು.

ಸಾಯಂಕಾಲದ ಕಾರ್ಯಕ್ರಮಕ್ಕೆ ಪ್ರತಿಯೊಂದು ಮನೆಯ ಹೆಂಗಸರನ್ನೂ-ಗಂಡಸರನ್ನು ಆಹ್ವಾನಿಸಿ ಬರಲು ಚಂದು, ಮೂವರು ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ನೇಮಿಸಿದ್ದ. ಅವರಲ್ಲಿ ಸೀತೆಯೂ ಒಬ್ಬಳು. ಸಾಲು

ಓಡಿದು ಮನೆಮನೆಗೂ ಹೇಳುತ್ತಾ ಹೊರಟವರು ಮಾನ್ಯಾನ ಮನೆಗೂ ಬಂದರು.

ಕಟ್ಟೆಯ ಮೇಲೆ ಕುಳಿತು ಕೋಳಿಗೆ ಕಾಳು ಎಸೆಯುತ್ತಿದ್ದ ಮಾನ್ಯಾ ಮಗಳನ್ನು ಅಡಿಯಿಂದ ಮುಡಿಯವರೆಗೂ ನೋಡಿದ. ಸೀತಾ ಭಯ, ಸಂಕೋಚ ದಿಂದ ಮುಂದಿನ ಮನೆಗೆ ಹೊರಡುವಷ್ಟರಲ್ಲಿ "ನಿಂದ್ರು" ಎಂದು ಸೂಚಿಸಿ "ಈ ಲಂಗ ಯಾರು ಕೊಡಿಸಿದ್ದು?" ಎಂದು ಪ್ರಶ್ನಿಸಿದ.

"ನಮ್ಮ ಚಂದೂಕಾಕಾ ತಂದುಕೊಟ್ಟಾನ" ಎಂದಳು ಸೀತೆ.-

"ನಿಮ್ಮವ್ವಗ ಏನೇನು ತಂದುಕೊಟ್ಟಾನ?"

"ಸೀರಿ"

"ಏಸು"

"ಒಂದೇ."

"ಸಾಲಿ ಬಲ್ಲಿ ಬರ್‍ತಾಳೇನು ನಿಮ್ಮವ್ವ?"

"ಹೂಂ."

"ಏನ್ಮಾಡ್ತಾಳ ಬಂದು?"

"ಬರಿತಾಳ," ಎಂದುತ್ತರಿಸಿ, ಸೀತಾ ಜೋತೆಯುವರೊಡನೆ ಮುಂದಿನ ಮನೆಗೆ ನಡೆದಳು. "ಚಂದುಮಾಸ್ತರ-ನಿಮ್ಮವ್ವ ಒಬ್ಬಕಿಗs ಸೀರಿ ತಂದ್ಕೊಟ್ಟಾನೇನು, ನಮ್ಮವ್ವಗೂ ಕೊಡಿಸ್ಯಾನ. ರಾಮನ ಅವ್ವಗೂ ಕೊಡಿಸ್ಯಾನ... ಹೌದಲ್ಲಪ್ಪಾ ರಾಮು?" ಜೊತೆಯ ಹುಡುಗಿ ಸೀತೆಯನ್ನು ಛೇಡಿಸಿದಳು.

"ನಮ್ಮವ್ವಗ ಕೊಡಿಸ್ಯಾನಂತ ನೀನೂ ಹೇಳಬೇಕಿತ್ತು,"

"ಅಂವ ಕೇಳಲಿಲ್ಲ; ನಾ ಹೇಳಲಿಲ್ಲ" ಎಂದಳು ಹುಡುಗಿ.

ಸಾಯಂಕಾಲದ ಕಾರ್ಯಕ್ರಮಕ್ಕೆ ಹಳ್ಳಿಯ ಹೆಚ್ಚು ಕಡಿಮೆ ಎಲ್ಲಾ ಜನರೂ ಬಂದು ಸೇರಿದ್ದರು. ಕೆಲವರಿಗೆ ಅಂದು ಹಂಚಲಾಗುವ ಸಿಹಿಯ ಮೇಲೆ ಗಮನ. ಇನ್ನು ಕೆಲವರಿಗೆ ಶಾಲೆ ಕಲಿಯುತ್ತಿರುವ ವಯಸ್ಕ ಹೆಣ್ಣುಮಕ್ಕಳು ಸೀರೆಯುಟ್ಟು ವೇದಿಕೆಗೆ ಬರುವ ಚಂದವನ್ನು ವೀಕ್ಷಿಸುವ ಹಂಬಲ!

ಶಾಲಾ ಅಂಗಳವನ್ನ ಸ್ವಚ್ಛಗೊಳಿಸಿ, ತಗ್ಗು-ತಿಟ್ಟು ಸಮಗೊಳಿಸಿ ಜನ

ಗಳಿಗೆ ಕೂರಲು ಅನುಕೂಲ ಮಾಡಲಾಗಿತ್ತು. ಚಂದುವನ್ನು ಬಹಳವಾಗಿ ಹಚ್ಚಿಕೊಂಡಿದ್ದ ಅವನ ಐದಾರು ಮಂದಿ ಹದಿವಯಸ್ಸಿನ ಶಿಷ್ಯರು, ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಕಟ್ಟೆಗೆ ಹತ್ತಿದಂತೆ ವಿಶಾಲವಾದ ವೇದಿಕೆಯನ್ನು ರಚಿಸಿ ಅದರ ನಾಲ್ಕು ಮೂಲೆಗೂ ಕಂದೀಲುಗಳನ್ನು ಕಟ್ಟಲಾಗಿತ್ತು. ನಡುಭಾಗದಲ್ಲಿರಿಸಿದ್ದ ಮೂರು ಕುರ್ಚಿಗಳಲ್ಲಿ ನಡುವೆ ಅಧ್ಯಕ್ಷ, ಎಡ-ಬಲಕ್ಕೆ ಗೌಡ ಹಾಗೂ ಚಂದು ಕುಳಿತರು.

ಪ್ರೇಕ್ಷಕರ ಸ್ಥಾನದಲ್ಲಿ ಮೊದಲಿಗರಾಗಿ ಊರ ಮುಖಂಡರು-ಹಿರಿಯರು ಕುಳಿತಿದ್ದರು. ಅವರಲ್ಲಿ ಹರಸಿಂಗ್, ಮಾನ್ಯಾ, ಪವಾರ್, ಕಾಶಪ್ಪ ಸಹ ಇದ್ದರು. ಎಡಕ್ಕೆ ಕುಳಿತ ಹೆಣ್ಣುಮಕ್ಕಳ ಗುಂಪಿನಲ್ಲಿ ಲಚ್ಮಿ-ಸೋನಿ ಇದ್ದರು. ಸಂಗಿಯೂ ಸಹ ಬಂದು ಕೊನೆಯಲ್ಲಿ ಕುಳಿತಿದ್ದಳು.

ಮಾಸ್ತರು ಕಲಿಸಿದ್ದ ನಾಡದೇವಿಯ ಪ್ರಾರ್ಥನೆಯನ್ನು ಅವೇ ಮೂರು ಮಕ್ಕಳು ಹಾಡುವುದರೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಮೊದಲಿಗೆ ಚಂದು ಬಂದವರಿಗೆಲ್ಲರಿಗೂ ಸ್ವಾಗತ ಕೋರಿ, ಶಿಕ್ಷಣದ ಮಹತ್ವ ಕುರಿತು ನಾಲ್ಕು ಮಾತಾಡಿದ. ಹಳ್ಳಿಗಳ ಅಭಿವೃದ್ಧಿ ಕಾರ್ಯದಲ್ಲಿ ಅಲ್ಲಿಯ ಜನಗಳ ಸಹಕಾರ ಎಷ್ಟು ಮುಖ್ಯವಾದುದು ಎಂಬುದನ್ನು ಪ್ರಸ್ತಾಪಿಸಿದ.

ನಂತರ ಅತಿಥಿ-ಗೌಡನಿಗೂ, ಅಧ್ಯಕ್ಷ-ದೊಣ್ಣೆಗೂ ವಿದ್ಯಾರ್ಥಿಗಳಿಂದ ಒಂದೊಂದು ಹಿಡಿ "ಹೂಗಳ ಸಮರ್ಪಣೆ" ಕಾರ್ಯ. ಆಗಲೆ ಅಧ್ಯಕ್ಷ ಎದ್ದು ನಿಂತು ಚಂದು ಮಾಸ್ತರನ ಕಾರ್ಯದಕ್ಷತೆಯನ್ನು ಒಂದೆರಡು ಮಾತುಗಳಲ್ಲಿ ಹೊಗಳುವುದರ ಮೂಲಕ "ಶಾಲಾ ಉದ್ಘಾಟನೆ"ಯನ್ನು ಮುಗಿಸಿ ಕುಳಿತುಕೊಂಡ. ರೂಪ್ಲಾ, ಕಾಳು, ಹೇಮ್ಲಾ ಮುಂತಾದ ಕಾರ್ಯಕರ್ತರು ಕೊಬರಿ-ಬೆಲ್ಲ ಬೆರೆಸಿದ ಮಂಡಾಳು-ಪುಟಾಣಿಯ 'ಸಿಹಿ'ಯನ್ನು ಎಲ್ಲರಿಗೂ ಹಂಚಿದರು. ನನಗೆ-ನಿನಗೆ ಎಂದು ಮುಗಿಬಿದ್ದು ಕೈಯೊಡ್ಡಿದ ಸಣ್ಣಪುಟ್ಟ ಹುಡುಗರು ಸಿಹಿಯ ಪುಟ್ಟಿಯನ್ನು ಕಸಿದು ನೆಲಕ್ಕೆ ಕೆಡವಿಸಿ, ಸಭಾಂಗಣದಲ್ಲಿ ಪುಟ್ಟದೊಂದು ಹಗರಣಕ್ಕೆ ಕಾರಣರಾದರು. ಕೆಲವು ಜನ ಅಜ್ಜ-ಅಜ್ಜಿಯರು ತೊಟ್ಟಿಲಲ್ಲಿ, ಚಾಪೆ-ಕೌದಿಗಳಲ್ಲಿ ಮಲಗಿ ನಿದ್ದೆ ಹೋಗಿದ್ದ ತಮ್ಮ ಮೊಮ್ಮಕ್ಕಳು ಮರಿಗಳನ್ನು ಎತ್ತಿಕೊಂಡು-ಎಳೆದುಕೊಂಡು ಬಂದು 'ಸಿಹಿ'ಗೆ ಕೈಯೊಡ್ಡಿಸಿದರು. "ಪುಟಾಣಿ-

ಮುಂಡಾಳಿನ ಮಾರಿ ಎಂದೂ ಕಂಡಿಲ್ಲೇನು ನೀವು?" ಎಂದು ಒಬ್ಬ ಕಾರ್ಯ ಕರ್ತ ಬಿರುಸಾಗಿ ನುಡಿದು 'ಮರ್ಯಾದಿ' ತೆಗೆದನೆಂಬ ಕಾರಣಕ್ಕಾಗಿ ಗೌಡನ ಹೆಂಡತಿಯೂ ಸೇರಿದಂತೆ ಒಂದಿಬ್ಬರು ಅಜ್ಜಿಯರು ಝಟಾಪಟಿ ಜಗಳಕ್ಕೆ ನಿಂತರು. ಚಂದು ಬಂದು, ಮತ್ತೂ ಒಂದೊಂದು ಹಿಡಿ ಹೆಚ್ಚಿನ ಸಿಹಿ ಕೊಡಿಸು ವುದರ ಮೂಲಕ ಕ್ಷಮೆ ಕೇಳಿಕೊಂಡು ಗದ್ದಲ ಅಡಗಿಸಬೇಕಾಯಿತು.

ಮುಂದಿನ ಕಾರ್ಯಕ್ರಮ-ವೇದಿಕೆಯ ಮೇಲೆ ಕಂದೀಲು ಬೆಳಕಿನಲ್ಲಿ ಇರಿಸಲಾಗಿದ್ದ ಕಪ್ಪು ಹಲಗೆಯ ಮೇಲೆ ವಯಸ್ಕ ವಿದ್ಯಾರ್ಥಿಗಳು-ತಾವು ಇದು ವರೆಗೂ ಕಲಿತಿದ್ದನ್ನು ಸಾಂಕೇತಿಕವಾಗಿ ಬರೆದುತೋರಿಸುವ "ಪ್ರತಿಭಾ ಪ್ರದ ರ್ಶನ."

"ನಾನೀಗ ಒಂದೊಂದಾಗಿ ಹೆಸರು ಕರೀತೇನೆ. ಅವರು ಎದ್ದು ಬಂದು ಈ ಕರಿ ಹಲಗೆ ಮ್ಯಾಲ ಚಂದಾಗಿ ತಮ್ಮ ಹೆಸರು ಬರ್ದು ಹೋಗಬೇಕು. ಮೊದಲು ಗಂಡುಮಕ್ಕಳ ಹೆಸರು ಕರೀತೇನೆ. ಆ ಹತ್ತು ಮಂದಿದ ಆದಿಂದ ಹೆಣ್ಣು ಮಕ್ಕಳು ಬರೀಬೇಕು" ಎಂದು ಚಂದು ಸೂಚನೆ ನೀಡುತ್ತಿದ್ದಂತೆಯೇ- "ಪೈಲಿನೇ ಹೆಣುಮಕ್ಕಳ ಕಡಿಂದ ಬರಿಸಿಬಿಡು ಮಾಸ್ತರಪ್ಪ. ಅದನ್ನ ನೋಡ್ಕೊಂಡ್ ನಾವು ಹೋತಿವಿ ಮನೀಗ" ಎಂದು ಹೆಂಗಸರ ಗುಂಪಿನಿಂದ ಕೆಲವರು ಸಲಹೆ ಮಾಡಿದರು.

"ಹೌದೇಳು ಮಾಸ್ತರೆ, ಈ ಹೆಣುಮಕ್ಕಳಿಗಿ ಮಕ್ಳುಮರಿ ಕಾಡತಾವ, ಮನಿಯಾಗ ಅಡಿಗಿ ಪಡಗಿ ಮಾಡೋದು ಇರತೈತಿ, ಅವರದ್ದೇ ಪೈಲಿ ಮುಗಿಸು ಅತ್ಲಾಗ ಹೋಗ್ಲಿ" ಎಂದು ಮುಖಂಡರೂ ಸೂಚಿಸಿದಾಗ, ಚಂದು ಮೊದಲ ನೆಯದಾಗಿ 'ಲಚ್ಮಿ ಬಾಯಿ' ಎಂದು ಹೆಸರು ಕೂಗಿದ.

ಹೆಚ್ಚು ಅಧೈರ್ಯ ಪಡದೆ ಆಕೆ ತಲೆ ತುಂಬ ಸೆರಗು ಹೊದ್ದು ವೇದಿಕೆಗೆ ಬಂದಳು. ಸೀಮೆಸುಣ್ಣವನ್ನು ಬಲಗೈಯ್ಯ ಐದೂ ಬೆರಳಿನಿಂದ ಬಲವಾಗಿ ಹಿಡಿದು, ತನ್ನ ಹೆಸರಿನ ಮೂರು ಅಕ್ಷರಗಳನ್ನು ಅತ್ಯಂತ ಪ್ರಯಾಸದಿಂದ ಬರೆದು ಕೊನೆಯದೊಂದು ನೆನಪಿಗೆ ಬಾರದಾಗ, ವೇದಿಕೆಯ ಸಮೀಪದಲ್ಲೆ ಬಂದು ನಿಂತಿದ್ದ ಸೀತೆಯತ್ತ ನೋಡಿದಳು. "ಈಗ ಹಿಂಗ್ ಬರಿಯುತ್ತಿ"-

ಎಂದು ಆಕೆ ತೋರಿಸಿದಾಗ, ಲಚ್ಮಿಗೆ ನೆನಪಾದಂತಾಗಿ ಒಂದು ಸೊನ್ನೆ ಹಾಕಿದಳು. ಮುಂದೇನು ಮಾಡಬೇಕೆಂಬುದು ತೋಚದೆ 'ಮುಂದಿದ್ ಮರ್ತ್ಂಗ್ ಆತಪ್ಪ...ಇಷ್ಟು ಸಾಕ್ ಬಿಡು!' ಎಂದುಕೊಳ್ಳುತ್ತ ವೇದಿಕೆ ಇಳಿದು ತನ್ನ ಜಾಗಕ್ಕೆ ಬಂದು ಕುಳಿತಳು.

ಆಕೆ 'ಲಚ್ಮಿಬಾಂ' ಎಂದು ಬರೆದು ಬಂದಿದ್ದನ್ನು ಕಂಡ ಹೆಂಗಸರು "ಅದು ನಿನ್ನ ಹೆಸರೇನೇ ಲಚ್ಮಪ್ಪಾ? ಆಟಕೊಂದ್ ಅಕ್ಸಾರ ಬರಿಯೂದ್ ಅದ್ಹ್ಂಗ್ ಕಲ್ತಿದ್ದೀಯೇ ನಮ್ಮವ್ವ!" ಎಂದು ವಿಸ್ಮಯದ ಉದ್ಗಾರವೆತ್ತಿದರು.

ಎರಡನೆಯ ಬಾರಿ-ಸುಮಾರು 30ರ ಹರಯದ ರತ್ನೀಬಾಯಿಯ ಹೆಸರನ್ನು ಕೂಗಿದ ಚಂದು. ಆಕೆ ಎದ್ದು ಬರುವ ಸೂಚನೆ ಕಾಣಿಸದಾಗ ಮತ್ತೆರಡು ಬಾರಿ ಕೂಗಿದ. ಆಕೆ ಎದ್ದು ನಿಂತು ಮದುಮಗಳಂತೆ ಸೀರೆಯ ಸೆರಗಿನಲ್ಲಿ ಮುಖ ಮರೆಸಿಕೊಂಡು ನಾಚುತ್ತ ನಿಂತಾಗ, "ಅಷ್ಟೊಂದು ನಾಚಿಕೆ ಪಟ್ಟುಕೊಳ್ಳಲಿಕ್ಕ ಇಲ್ಲಿ ಬ್ಯಾರೆಯೋರು ಯಾರಿದ್ದಾರೆ ರತ್ನೀಬಾಯಿ? ಎಲ್ಲಾ ನಮ್ಮವರೇ ಅಲ್ಲಾ? ಬಂದು ಬರೆದುಬಿಡು." ಎಂದು ಪುಸಲಾಯಿಸಿದ್ದೂ ಉಪಯೋಗವಾಗಲಿಲ್ಲ.

ಮೂರನೆಯ ಹೆಸರು ಗೌರೀಬಾಯಿಯದು. ಒಂದೆರಡು ಬಾರಿ ಒತ್ತಾಯಿಸಿದ ನಂತರ ಆಕೆ ಮಂದಗಮನೆಯಂತೆ ಬಂದು, ಹತ್ತು ನಿಮಿಷಗಳಷ್ಟು ಕಾಲ ತಿಣುಕಾಡಿ 'ಗರಿಬಯ' ಎಂದು ಬರೆದಳು. ಅವಳ ಹಣೆ-ಮುಖದ ಮೇಲೆ ಮೂಡಿದ ಬೆವರ ಹನಿಗಳನ್ನು ಕಂಡು ಕನಿಕರಿಸಿದ ಚಂದು "ಶಭಾಸ್! ಸ್ವಲ್ಪ ಸ್ವಲ್ಪ ತಪ್ಪಾಗ್ಯದ ಬಾಯಿ-ನಾಳೆ ಶಾಲಿಯಾಗ ತಿಳಿಸಿಕೊಡ್ತೇನಿ, ಹೋಗಿ ಕೂತ್ಕೊ." ಎಂದೊಡನೆ ಗೌರಿ-ಭಾರಿ ಸಾಧನೆಗೈದ ವಿಜಯೋತ್ಸಾಹವನ್ನು ಮುಖದಲ್ಲಿ ಹೊಮ್ಮಿಸುತ್ತ ಬಂದು ಕುಳಿತಳು.

ನಂತರ ಬಂದ ಕಮಲೀಬಾಯಿಯ ಕೈ ಒಂದೇಸಮನೆ ನಡುಗುತ್ತಿದ್ದರಿಂದ ಯಾರಿಂದಲೂ ಗುರುತಿಸಲಾಗದ ಆಕಾರದ ಒಂದಕ್ಷರ ಬರೆಯುವಷ್ಟರಲ್ಲಿ ಸೀಮೆ ಸುಣ್ಣವನ್ನು ಹತ್ತಾರು ಬಾರಿ ನೆಲಕ್ಕೆ ಕೆಡವಿ, ಕೊನೆಗೂ ಹಿಡಿತಕ್ಕೆ ತಂದುಕೊಳ್ಳಲಾಗದೆ ಹೊರಟು ಹೋಗಬೇಕಾಯಿತು!

ಕೊನೆಯದಾಗಿ "ಸೋನಿಬಾಯಿ ಬಂದು ಬರೀಬೇಕು" ಎಂದು ಚಂದು

ಹೇಳಿದೊಡನೆ, ಕಾಶಪ್ಪ ಮತ್ತು ಪವಾರ್ ಇಬ್ಬರೂ ಮಾನ್ಯಾನ ಬೆನ್ನು ಚಪ್ಪರಿಸಿ, ಕಿವಿಯಲ್ಲೇನೋ ಉಸುರಿ ನಕ್ಕರು. ಇದೆಲ್ಲವನ್ನೂ ಗಮನಿಸಿದ ಸೋನಿಗೆ ವೇದಿಕೆ ಏರಲು ಕೊಂಚ ಮನ ಅಳುಕಿತು. ಆದರೂ ತಾನೂ ಲಚ್ಮಿಯಂತೆ ಧೈರ್ಯವಾಗಿ ಬದುಕುವುದನ್ನು ಕಲಿಯಬೇಕು ಎಂದು ಪದೇ ಪದೇ ಅಂದುಕೊಳ್ಳುತ್ತಿದ್ದರಿಂದ, ಬಡಿದುಕೊಳ್ಳುತ್ತಿದ್ದ ಹೃದಯವನ್ನು ಸ್ತಿಮಿತಕ್ಕೆ ತಂದುಕೊಳ್ಳುತ್ತ ವೇದಿಕೆ ಏರಿದಳು.

ಈಕೆ ತನ್ನ ಹೆಂಡತಿ ಸೋನಿಯೇ! ಎನ್ನಿಸಿತು ಮಾನ್ಯಾನಿಗೆ. ಹೊಸಬಳನ್ನು ನೋಡುವಂತೆ ಮತ್ತೆ ಮತ್ತೆ ನೋಡಿದ. ಯಾವುದೇ ಒಡವೆ ವಸ್ತ್ರ ತೊಡದೆ, ಕೇವಲ ಒಂದು ನೂಲಿನ ಸೀರೆಯಲ್ಲಿ ಒಬ್ಬ ಹೆಂಗಸು ಇಷ್ಟು ಸುಂದರಳಾಗಿ ಕಾಣಬಹುದೆನ್ನುವ ಕಲ್ಪನೆ ಅವನಲ್ಲಿ ಇದುವರೆಗೂ ಮೂಡಿರಲಿಲ್ಲ. ಇಂಥವಳು ತಾನಾಗಿಯೇ ಮೇಲೆ ಬಿದ್ದು ಬಂದಾಗ ಯಾವ ಗಂಡಸು ತಾನೆ ಸುಮ್ಮನಾದಾನು. ಮಾನ್ಯಾನ ಆಲೋಚನಾ ಲಹರಿ ಲಂಗು ಲಗಾಮಿಲ್ಲದೆ ಓಡುತ್ತಿತ್ತು.

ಎಷ್ಟೇ ಧೈರ್ಯವಹಿಸಿದರೂ ಸೋನಿಯ ಕೈ ನಡುಕ ನಿಲ್ಲಲಿಲ್ಲ. ತುಸು ಅಂಕುಡೊಂಕಾದರೂ ಆಕೆ 'ಸೊನಿಬಾಯಿ' ಎಂದು ಬರೆದಾಗ "ಒಂದೇ ಒಂದು ದೀರ್ಘ ಮಾತ್ರ ಕಡಿಮೆಯಾಗ್ಯದ ಸೋನಿ ಬಾಯಿ, ಉಳಿದಿದ್ದೆಲ್ಲ ರೈಟ್." ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಚಂದು, ಅವಳ ಕೈಯಿಂದ ಸೀಮೆಸುಣ್ಣ ಇಸಿದುಕೊಂಡು "ಸೊ" ಪಕ್ಕದಲ್ಲಿ ದೀರ್ಘ ಎಳೆದು ತೋರಿಸಿದ.

ಇನ್ನೇನು ಅವಳು ವೇದಿಕೆಯಿಂದ ಇಳಿಯಬೇಕೆನ್ನುವಷ್ಟರಲ್ಲಿ "ಏಯ್ ಹಾದರಗಿತ್ತಿ ರಂಡೇ! ಈಸೊಂದು ಮಂದಿ ಕಲ್ತಾರ...ಅವರ ಮುಂದೆಲ್ಲ ಸೀರಿಯುಟಕೊಂಡ್ ಬಂದು ಮಿಂಡಗಾರನ ಕೂಡ ಚಕ್ಕಂದ ಆಡ್ತಿದ್ದಿಯೇನಲೆ!" ಎಂದು ಅಬ್ಬರಿಸುತ್ತ ಮಾನ್ಯಾ ವೇದಿಕೆಗೆ ಓಡಿ ಬಂದ. ಎಡಗೈಯಿಂದ ಅವಳ ಕುತ್ತಿಗೆ ಹಿಡಿದು ಬಗ್ಗಿಸಿ ಬಲಗೈಯಿಂದ ಬೆನ್ನಿಗೆ ಗುದ್ದಲಾರಂಭಿಸಿದ.

ಅನಿರೀಕ್ಷಿತವಾಗಿ ಈ ಘಟನೆ ಎಲ್ಲರನ್ನೂ ಕ್ಷಣಕಾಲ ದಿಙ್ಮೂಢರನ್ನಾಗಿಸಿತು. "ಏಯ್ ಮಾನಗೆಟ್ಟ ಭಾಡಖಾವ್, ಯದಕ್ಕೋ ಆಕಿನ ಬಡೀತಿ?" ಎಂದು ಬೈಯುತ್ತ ಲಚ್ಮಿ ವೇದಿಕೆಯತ್ತ ನುಗ್ಗಿ ಬಂದಳು. ಕೂಡಲೆ ಜಾಗೃತರಾದ ಚಂದುವಿನ ಶಿಷ್ಯರು ವೇದಿಕೆಗೆ ನುಗ್ಗಿ, ಮಾನ್ಯಾನ ಹಿಡಿತದಿಂದ ಸೋನಿಯನ್ನು ಬಿಡಿಸಿಕೊಂಡು, ಅವನನ್ನು ಒಂದು ಪಕ್ಕಕ್ಕೆ ತಳ್ಳಿದರು.

ಸೋನಿ ಅಳು-ಚೀರಾಟವಿಲ್ಲದೆ ಮೌನವಾಗಿ ಅಪಮಾನ ನುಂಗಿ, ವೇದಿಕೆ ಇಳಿದು ಮನೆಯತ್ತ ನಡೆದಾಗ 'ಒಬ್ಬಾಕಿ ಎಲ್ಲೂ ಹೋಗಬ್ಯಾಡ ಬಾ' ಎಂದು ಲಚ್ಮಿ ಅವಳ ಕೈಹಿಡಿದು ತನ್ನ ಬಳಿಯೇ ಉಳಿಸಿಕೊಂಡಳು.

ಚಂದು ಸಭಿಕರಿಗೆ ಕುಳಿತುಕೊಳ್ಳುವಂತೆ ಮತ್ತೆ ಮತ್ತೆ ವಿನಂತಿಸಿ ಕೊಂಡಿದ್ದು ವಿಫಲವಾಯಿತು. ಕ್ಷಣಾರ್ಧದಲ್ಲಿ ಸಭೆಯ ಶಿಸ್ತು ಮುರಿದು ಎಲ್ಲರೂ ಮಾತು-ಚರ್ಚೆಯಲ್ಲಿ ಮುಳುಗಿದರು.

ಆ ಗದ್ದಲದ ನಡುವೆಯೂ ಚಂದು ವಿರುಧ್ವನಿಯಲ್ಲಿ ಸಭಿಕರನ್ನು ಕುರಿತು ಮಾತಾಡತೊಡಗಿದಾಗ, ಗಲಾಟೆ ಕೊಂಚ ತಗ್ಗಿತು-"ದಿಬ್ಬದ ಬಂಧು ಗಳೇ, ಎಷ್ಟು ಸಿಟ್ಟು ಬಂದರೂ ಸಹ ನಾಗರಿಕನಾದ ವ್ಯಕ್ತಿ, ತುಂಬಿದ ಸಭೆ ಯಲ್ಲಿ ಮತ್ತೊಬ್ಬ ವ್ಯಕ್ತಿಯನ್ನ ಹೊಡಿದೂ ಬಡಿದೂ ಅಪಮಾನ ಪಡಿಸೋ ದಕ್ಕೆ ಮುಂದಾಗೋದಿಲ್ಲ. ಆದ್ರ ಈ ಮಾನಸಿಂಗ್ ತನ್ನ ಕೆಳಮಟ್ಟ ಗುಣ ತೋರಿಸಿಕೊಂಡಾನ. ಒಂದು ಕಾಡು ಪ್ರಾಣಿಗಿಂತ್ಲೂ ಕಡೆಯಾಗಿ ನಡ ಕೊಂಡು, ಇಲ್ಲಿ ನೆರೆದಿರುವಂಥ ಸಭಿಕರ ಮನಸ್ಸಿನೊಳಗ ತನ್ನ ಬಗ್ಗೆ ಅಸಹ್ಯ ಭಾವನೆ ಹುಟ್ಟಿಕೊಳ್ಳುವ ಹಂಗ ಮಾಡಿದಾನ. ಈತನಿಂದ ಅಪಮಾನ ಹೊಂದಿದ ಸೋನಿಬಾಯಿಗೆ ನಾನು ಸಭೆಯ ಪರವಾಗಿ ಕ್ಷಮೆ ಬೇಡುತ್ತೇನೆ!...."

ಮಾನ್ಯಾ ಕೆರಳಿ ಅಂಗಿಯ ತೋಳೇರಿಸಿದ-"ಏನಂದ್ಯಲೇ ಬಿಕನಾಸಿ ನನ ಮಗನ! ಕೂಳಿಗ ಗತಿ ಇಲ್ದ ನಮ್ಮೂರಿಗ ಬಂದು ಬಿದ್ದಿರೊ ಭಿಕಾರಿ ನನ್ಮಗ ನೀನು! ನನ್ನ ಕಾಡ್‌ಪ್ರಾಣಿಗಿಂತ ಕಡೆ ಅಂತಿದಿಯೇನಲೇ?...ಲೇ ಮಗನ, ಈವತ್ತು ನಾನರ ಬದುಕಿರಬೇಕು. ಇಲ್ಲ ನೀನಾರ ಬದುಕಿರಬೇಕು!...ನಾ ಜೇಲಿಗ ಹ್ವಾದ್ರೂ ಚಿಂತಿಲ್ಲಲೇ, ನಿನ್ನ ಖಲಾಸ್ ಮಾಡೇ ಮುಗಿಸ್ತೀನಿ! ಅಪ್ಪಗ ಹುಟ್ಟಿದ ಮಗನಾಗಿದ್ಯಂದ್ರ ಈವತ್ತು ನನ್ನಿಂದ ಬಚಾವ್ ಆಗಲೇ!" ಎಂದು ಮೊದಲೇ ಸಿದ್ಧಪಡಿಸಿಕೊಂಡಂತಿದ್ದ ಭಾರಿ ದೊಣ್ಣೆಯೊಂದನ್ನು ಹಿಡಿದು ಚಂದುವಿನ ಮೇಲೆ ಹಲ್ಲೆಗೆ ತೊಡಗಿದ. ಮೈಮೇಲೆ ಬೀಳುವ ಏಟು ಗಳಿಂದ ತಪ್ಪಿಸಿಕೊಳ್ಳಲು ಚಂದು ಹೆಣಗಾಡಿದ.

"ರೂಪ್ಲಾ, ರಾಮ್ಲಾ, ಕಾಳು ಓಡ್ಬರ್ರೋ, ಬಿಡಿಸಿಕೊಳ್ರೋ-ಮಾಸ್ತ ರನ್ನ...ಆ ರಾಕ್ಷಸ ಸಾಯಿಬಡಿತಾನ ಓಡಿಬರ್ರೋ! ಎಂದು ಲಚ್ಮಿ ಕೂಗಿ

ಕೊಂಡಳು. ಅವರೆಲ್ಲ ಒಗ್ಗಟ್ಟಾಗಿ ಮಾನ್ಯಾನ ಮೇಲೆ ಬಿದ್ದು ಕೈಯಿಂದ ಬಡಿಗೆ ಕಸಿದುಕೊಂಡು, ವೇದಿಕೆಯಿಂದ ಕೆಳಗಡೆ ದಬ್ಬಿದರು.

ಮಾನ್ಯಾ ಅಲ್ಲಿಂದ ಸೋನಿ ಇದ್ದಲ್ಲಿಗೆ ಹೋಗಿ, ಅವಳ ಕೈಹಿಡಿದು ಜಗ್ಗುತ್ತ "ಏಯ್ ನಡಿಯಲೆ ಮನಿಗ!" ಆಜ್ಞಾಪಿಸಿದ.

"ಯಾರ ಮನಿಗ?" ಸೋನಿ ಸಿಡಿದು ಕೇಳಿದಳು.

"ನನ್ಮನಿಗ ನಡಿ!" ಅಧಿಕಾರವಾಣಿಯಲ್ಲಿ ನುಡಿದ.

"ಅಂಥ ಪರಿ ನನ್ನ ದರದು ಏನದ ನಿನ್ಗ? ನಿನಗ್ಹೊಳೆ ಇಲ್ಲೇನು ಮನಿಯಾಗ?"

"ಆಕಿನ ಕಾಲು ತೊಳ್ಕೊಂಡ್ ಬಿದ್ದಿರೋದಕ್ಕs ನಿನ್ನ ಒಯ್ತಿರೋದು, ಸುಮ್ನ ಮುಚಕೊಂಡ್ ಮನಿಗ ನಡಿ!"

"ಹಂಗ್ಯಾಕ ಆಡ್ತಿದ್ದೀ ಬಿಡೋ ಮಾನ್ಯಾ. ಈಗಂದ್ರ ಈಗೇ ಏನು? ನಾಳೆ ಬರ್ತಾಳ ಹೋಗು" ಎಂದು ಕೆಲವು ಹಿರಿಯ ಹೆಂಗಸರು ಮಧ್ಯಸ್ಥಿಕೆ ವಹಿಸಿದರು.

ಆದರೆ ಮಾನ್ಯಾ ಪಟ್ಟುಬಿಡಲಿಲ್ಲ. "ನಾಳೆಗೀಳೆ ಅಂಬೋ ಮಾತಿಲ್ಲ. ಈಗಂದ್ರ ಈಗೇ ಬರಬೇಕಿವಳು!"

"ಇಲ್ಲೇ ಜೀವ ಬಿಟ್ರೂ ಬಿಟ್ಟೇನು; ನಿನ್ನ ಮನಿಗ ಮಾತ್ರ ನಾ ಬರಂಗಿಲ್ಲ!"

"ನಿನ್ನ ಹೆಣನಾರ ಒಯ್ದೇನು ಖರೆ! ನಿನ್ನ ಮಾತ್ರ ಇಲ್ಲಿ ಬಿಟ್ಟು ನಾ ಹೋಗಂಗಿಲ್ಲಲೇ ಹಾದರಗಿತ್ತಿ!" ಎಂದು ಮಾನ್ಯಾ ಅರಚಿದ.

ಹಗರಣ ಅತಿ ರಂಪಕ್ಕಿಟ್ಟುಕೊಂಡಾಗ ಊರ ಪ್ರಮುಖರು ಬಂದು ಪಂಚಾಯ್ತಿ ಮೂಲಕ ಸಮಸ್ಯೆ ಬಗೆಹರಿಸುವುದಾಗಿ ಹೇಳಿ ಇಬ್ಬರನ್ನೂ ಅವರವರ ಮನೆಗೆ ಸಾಗು ಹಾಕಿದರು.

ಚಂದುವಿಗೆ ಭ್ರಮನಿರಸನವಾದಂತಾಗಿತ್ತು. ತಾನು ಸಾಗಬೇಕಾಗಿರುವ ಹಾದಿ ಎಷ್ಟೊಂದು ದುರ್ಗಮವಾದದ್ದು! ಎಂಬುದರ ಪರಿಚಯವಾಗಿತ್ತು.

ಮಾನ್ಯಾನ ಹಲ್ಲೆಯಿಂದ ಮೈ ನೋಯುವುದಕ್ಕಿಂತಲೂ ಹೆಚ್ಚಾಗಿ ಮನಸ್ಸು ನೊಂದು ನಲುಗಿತ್ತು. ಎದೆಯಳಲನ್ನು ಯಾರಲ್ಲಾದರೂ ತೋಡಿಕೊಳ್ಳದ ಹೊರತು ನಿದ್ದೆ ಬರುವಂತಿರಲಿಲ್ಲವಾದ್ದರಿಂದ ದೊಡ್ಡವ್ವನಲ್ಲಿಗೆ ಬಂದ.

ಚಿಂತೆಯಿಂದ ಬಳಲಿದವಳಂತೆ ನೆಲದ ಮೇಲೆ ಅಡ್ಡಾಗಿದ್ದ ಲಚ್ಮಿ, ಆತ ಬಂದೊಡನೆ ಎದ್ದು ಕುಳಿತು ಸ್ವಾಗತಿಸಿದಳು. "ನನ್ನ ಪ್ರೀತಿಯ ವಿದ್ಯಾರ್ಥಿಗಳೆಲ್ಲ ಎಷ್ಟು ನಗನಗ್ತಾ ಸಂತೋಷವಾಗಿ ಕಾರ್ಯಕ್ರಮದೊಳಗ ಭಾಗವಹಿಸಿದ್ರು ದೊಡ್ಡವ್ವ! ಈತನ ಕಾಲಾಗ ಎಲ್ಲಾ ಹಾಳಾಗಿ ಹೋಯ್ತು. ಮೊದಲ ದಿನಾನೆ ಎಳೀಮಕ್ಕಳ ಮನಸ್ಸಿಗೆ ಪೆಟ್ಟು ಬಿದ್ಹಂಗಾತು!" ಎಂದು ಚಂದು ನೊಂದು ನುಡಿವಾಗ "ಇನಮ್ಯಾಲ ಇಂತಾವೆಲ್ಲ ಆಗೂದಿಲ್ಲ ಬಿಡುಮಗ ನೀ ಏನೂ ಕಾಳಜಿ ಮಾಡಬ್ಯಾಡ!" ಎಂದಳು ಲಚ್ಮಿ.

ಅವಳ ಮಾತಿನ ಧಾಟಿ ಎಂದಿನಂತೆ ಸಹಜವಾಗಿಲ್ಲದ್ದನ್ನು ಗಮನಿಸಿದ ಚಂದು, ಆಕೆಯತ್ತ ಪ್ರಶ್ನಾರ್ಥಕವಾಗಿ ನೋಡಿದ-ಕುಡಿದಿದ್ದಾಳೆಂಬುದು ತಿಳಿಯಿತು. "ಇನಮ್ಯಾಲ ನಡಿಯೂದಿಲ್ಲಂತ ಹೆಂಗಂತಿದ್ದೀ ದೊಡ್ಡವ್ವ?"

"ಹೇಳತೀನಿ ಕೂಡು," ಎಂದ ಲಚ್ಮಿ-ಕುಳಿತಲ್ಲಿಂದಲೇ ಸೋನಿಯನ್ನು ಕೂಗಿ ಕರೆದಳು. ಆಕೆ ಬಂದು ಕುಳಿತಾಗ "ನಾ ಒಂದು ಚಲೋ ಕೆಲ್ಸಕ್ಕ ಕೈ ಹಚ್ಚಬೇಕಂತ ಮಾಡೀನಿ, ಇದಕ್ಕ ನೀ ಒಪ್ಪಿಗಿ ಕೊಡಬೇಕು." ಎಂದಳು. ಅತ್ತೆ ಕೆಲವೊಮ್ಮೆ ಕುಡಿದು ಹೀಗೆ ಮಾತಾಡುವುದನ್ನು ಬಲ್ಲ ಸೋನಿ "ಅದೇನು ಕೆಲ್ಸ ಹೇಳವ್ವ-ನಾನೇ ಮಾಡ್ತೀನಿ" ಎಂದಳು ಮೆಲುದನಿಯಲ್ಲಿ.

"ಮುಂದ ಬದುಕಿ ಬಾಳಬೇಕಾದೋಳು ನೀನು. ಆ ಕೆಲ್ಸ ನೀ ಮಾಡಬಾರ್ದು. ನಾ ಮಾಡಬೇಕು ಅದ್ನ!" ಎಂದಳು. ಮೂಲೆಯಲ್ಲಿದ್ದ ಹರಿತವಾದ ಮಚ್ಚನ್ನು ಕೈಗೆತ್ತಿಕೊಂಡು "ನಾಳಿ ಪಂಚಾಯ್ತಿ ನಡಿಯುವಾಗ ಇದರಿಂದ ಮಾನ್ಯಾನ ತಲಿ ಕಡಿದು ಹಾಕ್ತೀನಿ! ಏನಂತೀದಿ ಹೇಳು!"

ಚಂದು-ಸೋನಿ ಬೆಚ್ಚಿದರು. "ಪಂಚಾಯ್ತಿ ತೀರ್ಮಾನ ಏನಂಬೋದು ತಿಳಿದ ಮ್ಯಾಲ ಮುಂದಿನ ಮಾತು. ಈಗ್ಲೇ ಯಾಕಿಷ್ಟು ರಾಂಗಾಗ್ತೀ ದೊಡ್ಡವ್ವ?" ಚಂದು ಆತಂಕದಿಂದ ನುಡಿದ.

"ಬಿಡ್‌ಬಿಡೋ ಹುಚ್ಚಪ್ಪ! ಪಂಚಾಯ್ತಿ ಏನ್ ತೀರ್ಮಾನ ಕೊಡ ಬಹುದು ನಮಗೊತ್ತಿಲ್ಲೇನು? ಆ ಸೂಳೇಮಕ್ಳು ಎಂದಾರ ಈ ಹುಡುಗಿಗೆ ನ್ಯಾಯ ಕೊಡ್ತಾರಂತ ನಂಬಿಯೇನು?! ನ್ಯಾಯವನ್ನ ನಾವು ಕಸಗೋಬೇಕು!"

"ಅವನ್ನ ಕೊಲಿ ಮಾಡೋದ್ರಿಂದ ನ್ಯಾಯ ಸಿಗತೈತೇನು? ನೀ ಜೈಲಿಗ ಹೋಗ್ತಿದಿ, ನಾ ಮೂಲಿ ಸೇರ್ತಿನಿ. ಸೋನಿಬಾಯಿ ಏನಾಗ್ತಾಳೋ ಗೊತ್ತಿಲ್ಲ.. ನೀ ಸುಳ್ಳೇ ದುಡುಕ್ತಿದ್ದೀ ದೊಡ್ಡಪ್ಪ!"

"ದುಡುಕೂ ಅಲ್ಲ ಪಡುಕೂ ಅಲ್ಲ. ನಾಯೆಲ್ಲ ವಿಚಾರ ಮಾಡೇ ಈ ಕೆಲ್ಸಕ್ಕ ಕೈ ಹಚ್ಚೀನಿ. ನೀವ್ಯಾರು ಅಡ್ಡಿ ಮಾಡಿದ್ರೂ ನಾ ಏನು ಬಿಡಾಕಿಯಲ್ಲ. ಅವತ್ತು ನಮ್ಮ ಹುಡುಗಿ ಮ್ಯಾಲ ಬಾಗ್ಲಾ ಕೆಡವಿ ಸಾಯಿಬಡಿದಾತ ಬ್ಯಾರೆ ಯಾವ ನೀಚನೂ ಅಲ್ಲ. ಈತ್ನೇ. ಸಾಕ್ಷಿ ಹೇಳಸ್ತೀನಿ ಬಾ. ಆ ಸಕ್ರ್ಯಾನ ಮಗನ ಹತ್ರ. ಕಣ್ಣಾರೆ ಕಂಡದ ಆ ಹುಡುಗ ಇದ್ನಲ್ಲ!..."

"ಏನೇ ಏನು?" ಚಂದು ವಿಸ್ಮಯದಿಂದ ಕೇಳಿದ.

"ಹೂ, ಮಗಳ ಜೀವ ತಗೊಂಡಾನ! ಮತ್ತ ಈವತ್ತು ಜನ ಜಾತ್ರಿ ಮುಂದ ಈ ಹುಡುಗಿಯ ಮಾನ ತಗದಾನ! ಎಲ್ಲರ ಎದುರಿಗೆ ಈಕಿನ ಮಿಂಡಗಾರಂತ ನಿನಗ ಹೆಸರಿಟ್ಟಾನ! ..ಅದ್ಕ ಹೇಳ್ತೀನಿ ಚಂದು-ನೀ ಬ್ಯಾರೆ ಅಲ್ಲ. ನನ್ನಗ ತೇಟು ಬ್ಯಾರೆ ಅಂತ ನಾ ತಿಳ್ದಿಲ್ಲ...ಈ ಸೋನಿ ನನ್ನ ಮನಿ ಸೊಸಿಯಾಗಬೇಕು. ನೀ ಮಿಂಡ ಅಲ್ಲ. ಆಕಿನ ಕೈಹಿಡಿದು ಗಂಡ ಆಗಬೇಕು! ನಾ 'ಅತ'ನ ಸಿರ ಹಿಡಿದು ಜೈಲಿಗ ಸಂತೋಷದಿಂದ ಹೋಗಬೇಕು! ಇದ್ ನನ್ನ ವಿಚಾರ ನೋಡು...ಏನಮ್ತಿದ್ದೀ ಪಟಪಟ ಜವಾಬ್‌ಕೊಡು!"

ಚಂದುವಿಗೆ ಸೋನಿಯ ಮುಖ ನೋಡಲು ಸಂಕೋಚವೆನಿಸಿತು. ದೊಡ್ಡಪ್ಪನತ್ತ ನೋಡಲು ಭಯವೆನಿಸಿತು. ಸೋನಿ ತಲೆ ಬಾಗಿಸಿ ತನ್ನ ಮುಖಭಾವವನ್ನು ಮರೆಮಾಚಿಕೊಂಡಳು.

ಇಬ್ಬರೂ ಮೌನ ವಹಿಸಿದಾಗ ಲಚ್ಮಿಯೇ ಮುಂದುವರೆಸಿದಳು. "ಅತ ರಾಕ್ಷಸ ಅದಾನ ಮೈಸಾಸುರನ್ಹಂಗ! ಆ ಚಾಮುಂಡೇಶ್ವರಿ ಹೆಂಗ ಕಡಿದು ಹಾಕಿದ್ಲು ನೋಡು, ಹಂಗ ನಾ ಇವನ ಗೋಣು ಕಡಿದು ಹಾಕ್ತೇನ!"

"ದೊಡ್ಡವ್ವಾ, ಆ ಮಚ್ಚು ತಾ ಇಲ್ಲಿ" ಎಂದು ಚಂದು ಅವಳ ಕೈಯಿಂದ ಅದನ್ನು ಇಸಿದುಕೊಂಡ. "ಆ ಚಾಮುಂಡೇಶ್ವರಿ ಕೊಲೆ ಮಾಡಿದ ಕಾಲಕ್ಕ ಬಹುತೇಕ ಪೋಲಿಸ್ ಮಂದಿ ಇದ್ದಿಲ್ಲ ಕಾಣ್ತದ. ಅದೂ ಅಲ್ದ ಆಕಿಗ ದೊಡ್ಡ ದೊಡ್ಡೋರ ಬೆಂಬಲ ಜಗ್ಗಿ ಇತ್ತು. ಕ್ರಿಮಿನಲ್ ಆರೋಪ ಹೊರಿಸೋ ಬದಲು ಹೂವಿನ ಮಾಲಿ ಹಾಕಿ, ಅಕಿಗ ಮರ್ಯಾದಿ ಮಾಡಿದ್ರು!...ಈಗಿನ ಕಾಲದಾಗ ಆಕಿಲಿಂದ ಸ್ಫೂರ್ತಿ ಪಡೆದೇವಂದ್ರ ನಾವು ಕೆಡ್ತೇವಿ!..."

ಅವನು ವಿನೋದವಾಗಿ ಆದರೂ ಗಂಭೀರವಾಗಿ ಹೇಳತೊಡಗಿದಾಗ ಲಚ್ಮಿಯೂ ಅಷ್ಟೇ ಗಂಭೀರಭಾವದಿಂದ ಅವನನ್ನು ನೋಡತೊಡಗಿದಳು. "ದೊಡ್ಡವ್ವ ನಿನಗ ಭಾಳ ಸಿಟ್ಟು ಬಂದಂಗ ಕಾಣ್ತದ; ನನ ಕಪಾಳಕ್ಕ ಎರಡೇಟು ಹಾಕು. ಹಂಗಾದ್ರ ನಿನ್ನ ಸಿಟ್ಟು ಸ್ವಲ್ಪಾರ ಇಳೀತದ! ಹಿಂದಾಗಡಿ ನಾ ಏನ್ ಹೇಳ್ಳಿಕ್ಕ ಹತ್ತೀನಿ, ಯದಕ್ಕ ಹೇಳಿಕ್ಕ ಹತ್ತೇನಿ ಅನ್ನೊದೆಲ್ಲಾ ನಿನ್ನ ಮೆದುಳಿಗ ಬರೋಬ್ಬರಿ ಮುಟ್ತಾವ!" ಎನ್ನುತ್ತ ಚಂದು ಆಕೆಯ ಮುಂದೆ ಬಾಗಿದ.

"ಅದೇನು ಹೇಳಬೇಕಂತಿದ್ದೀ ಪೂರ ಹೇಳ್ಬಿಡು. ಹಿಂದಾಗಡಿ ಬಡಿ ಯೋದು, ಬಡಿಸಿಕೊಂಬೋದು ಎಲ್ಲಾ ಆಗ್ತಾವ!..." ಎಂದಳು ಲಚ್ಮಿ.

"ಹೇಳಿದ್ನಲ್ಲ-ಕೊಲೆ ಗಿಲೆ ಮಾಡೋದ್ರಿಂದ ಸುಖ ಇಲ್ಲಂತ...ನೀ ಏನಾರ ಹಂಗ ಮಾಡಾಕ ಹೊಂಟ್ಯೋ, ನಾ ಈಗ್ಲೇ ಈ ಊರು ಬಿಟ್ಟು ಹೊಂಟೋಗ್ತೇನಿ. ಹಿಂದಾಗಡಿ ನೀವು ನೀವು ಏನಾರ ಮಾಡಿಕೊಳ್ಳೋವಲ್ಲರ್ಯಾಕೆ!—"

ತಾನು ಬಿಟ್ಟಬಾಣ ದೊಡ್ಡವ್ವನ ಎದೆಯನ್ನು ಥಕ್ಕನೆ ನಾಟುವುದೆಂದು ಚಂದು ಭಾವಿಸಿದ್ದು ಸುಳ್ಳಾಯಿತು.

"ಅಷ್ಟೇ ಮಾಡು. ನೀ ಊರುಬಿಟ್ಟೇ ಹೋಗ್ಬಿಡು ಅಂದ್ರ ಎಲ್ಲಾ ನೆಟ್ಟಗಾಗ್ತದ!"

ದೊಡ್ಡವ್ವ ಈಗ ನಿಜಕ್ಕೂ ತನ್ನ ಕಪಾಳಕ್ಕೆ ಹೊಡೆದಿದ್ದಳು! "ಖರೇ ಹೇಳ್ಳಿಕ್ಕ ಹತ್ತಿಯೇನು ದೊಡ್ಡವ್ವಾ? ನಾನಿನ್ನು ಹೊರಡಲಾ?!"

"ಹೂಂ ಹೊರಡು. ಆದ್ರ ನೀ ಒಬ್ಬಾತ್ನೆ ಅಲ್ಲ. ಸೋನಿನ್ನೂ ಆಕಿನ

ಮಗಳನ್ನೂ ಕರಕೊಂಡು ಹೋಗ್ಬಿಡು ಈ ಮನಿ ಮಾರಿ ನಿನ್ನ ಸಂಸಾರಕ್ಕ ರೊಕ್ಕ ಕೊಟ್ಟುಕಳಿಸ್ತೀನಿ"

ಸೋನಿ ಅವಳ ಮಾತಿಗೆ ಆತಂಕಗೊಂಡಳು. "ಅತ್ತಿ ನೀ ಹಿಂಗೆಲ್ಲಾ ಯಾಕ ಮಾತಾಡಾಕ ಹತ್ತೀದಿ ಈವತ್ತು?!"

"ದೊಡ್ಡವ್ವನ ಮನ್ಸಿಗ ಭಾರಿ ಪೆಟ್ಟಾಗ್ಯದ ಸೋನಿಬಾಯಿ. ಅದಕ್ಕs ಹಿಂಗೆಲ್ಲಾ ಮಾತಾಡಾಕ ಹತ್ಯಾಳ" ಎಂದು ಸೋನಿಗೆ ಸಮಾಧಾನ ಹೇಳಿದ ಚಂದು, ಲಚ್ಮಿಯನ್ನು ಕುರಿತು ಹೇಳಿದ; "ದೊಡ್ಡವ್ವ, ನಿನ್ನ ಮನಸ್ಸಿನ ಹಂಬಲ ಏನಂಬೋದನ್ನ ನಾ ಅರ್ಥ ಮಾಡ್ಕೊಂಡೆ! ಸೋನಿಬಾಯಿಯ ಬದುಕು ಹಸನಾಗಬೇಕಂಬೋದೇ ನಿನ್ನ ಗುರಿ. ನನ್ನಾಸೆನೂ ಅದೇ ಹೌದು. ಆದ್ರ ಇದಕ್ಕಾಗಿ ಆಕಿನ ಕರಕೊಂಡ್ ಎಲ್ಲಿಗಾರ ಓಡಿಹೋಗೋದು ಬೇಕಾಗಿಲ್ಲ. ಅದೊಂದೇ ಪರಿಹಾರವಲ್ಲ. ಬ್ಯಾರೆ ಹಾದಿನೂ ಅದಾವ. ನನ್ನ ಕೈಲಾದಷ್ಟು ಈ ಹಳ್ಳಿನ ಸುಧಾರಿಸಬೇಕಂತ ಬಂದಿರೋನು ನಾನು. ಅವರ ಜೊತೆಗೆ ಮಾನ್ಯಾ-ಸೋನಿಬಾಯಿಯ ಬದುಕು ಸುಧಾರಿಸಲಿಕ್ಕ ಸೈತ ಪ್ರಯತ್ನ ಪಡ್ತೀನಿ. ನಿನ್ನ ಕೂಡ ಸಹಕರಿಸ್ತೀನಿ!...ಏನಂತಿದಿ ದೊಡ್ಡವ್ವ?"

"ಸಣ್ಣಾತ ಆದ್ರೂ ಶ್ಯಾಣಾತ ಅದಿ. ನಿನ ಮಾತು 'ಅಲ್ಲ' ಅಂತ ಯಾವ ನ್ಯಾಲಿಗಿಲಿಂದ ನುಡಿಲೋ ಮಗ? ಹೋಗ್ಲಿ ಇಷ್ಟುಮಾಡು. "ನಮ್ಮ ಹುಡುಗಿ ಜೀವ ತಗೊಂಡಾತ ಆತ್ನೇ ಅಂಬೋದು ಹೆಂಗೂ ಗೊತ್ತಾಗ್ಯದಲ್ಲ. ಇನ್ನ ಆತನ್ನ ಸುಮ್ನೆ ಬಿಡಬಾರ್ದು...'ಜೇಲಿಗ ಹೋಕ್ಕೀನಿ, ಜೇಲಿಗೆ ಹೋಕ್ಕೀನಿ' ಅಂತಿರ್ತಾನ ಒಳಗ ಹಾಕಿಸಿ ಬಿಡಬೇಕು ಅವನ್ನ!..."

"ಅಷ್ಟು ಮಾಡಬೇಕಾತಂದ್ರ ನಾವು ಸಾಕಷ್ಟು ಕಷ್ಟ ಪಡಬೇಕಾಗತೈತಿ ದೊಡ್ಡವ್ವ" ಎಂದು ಆತ ಅನುಮಾನಿಸಿದಾಗ "ನಾವೇನು ಸುಳ್ಳನ್ನ ಖರೆ ಅಂತ ಸಾಧಿಸಲಿಕ್ಕೆ ಹೊಂಟೇವೇನು? ಆ ಸಣ್ಣ ಹುಡುಗ ಸುಳ್ಳು ಯಾಕ ಹೇಳ್ತಾನ" ಎಂದು ಕೇಳಿದಳು.

"ಇದಕ್ಕೆಲ್ಲ ರೊಕ್ಕ ಬೇಕಾಗ್ತವ. ನಾವೆಲ್ಲ ಒಪ್ಪತ್ತಿನ ಊಟಕ್ಕ ದುಡಿಯೋ ಮಂದಿ...ಪೋಲೀಸರ ಹಿಂದ ಓಡಾಡಬೇಕು. ವಿಚಾರಣೆ ನಡೆ

ಯುವಾಗ ಕೋರ್ಟಿಗ ಹಾಜರಾಗಬೇಕು ..ಇಂಥ ಖರ್ಚೆಲ್ಲ ತಪ್ಕೊಳ್ಳಿಕ್ಕ ನಮಗ ಸಾಧ್ಯ ಆಗೂದಿಲ್ಲ ದೊಡ್ಡವ್ವ...ಅದೇ ಹುಡುಗನ ಬಾಯಿಲಿಂದ ಸುಳ್ಳು ಸಾಕ್ಷ್ಯ ಸೈತ ಹೇಳಿಸಬೌದು ಅವರು! . ಕೋರ್ಟು-ಕಚೇರಿಯಿಂದ ನ್ಯಾಯ ಪಡಿಯೋದು ಅಷ್ಟು ಸೋವಿಯಾಗಿತ್ತಂದ್ರ, ಸೋನಿಬಾಯಿ ವ್ಯಾಜ್ಯ ವನ್ನ ಈ ಹಳ್ಳಿ ಪಂಚಾಯ್ತಿಗ ಯಾಕ ಒಪ್ಪಿಸ್ತಿದ್ದಿ! ಹೇಳು; ಒಬ್ಬಾತ ಶ್ಯಾಣೆ ವಕೀಲನ್ನ ಹಿಡಿದು ಸಮಸ್ಯೆ ಬಗೆಹರಿಸಿಕೊಳ್ತಿದ್ದಿ! ಹೌದಲ್ಲ?" ಚಂದು ವಿವರಣೆ ನೀಡಿದಾಗ ಲಚ್ಮಿ ಸುಮ್ಮನಾಗಬೇಕಾಯಿತು.

ಸ್ನೇಹಿತೆಯ ಮನೆಯಲ್ಲಿ ಹೊತ್ತು ಕಳೆದ ಸೀತೆ "ಅಪ್ಪಾ" ಎಂದು ಕೂಗುತ್ತ ಅಲ್ಲಿಗೆ ಬಂದಳು. "ಇನ್ನೂ ಮಲಗಿಲ್ಲೇನು ಸೀತಾ? ಬಾ ಇಲ್ಲಿ" ಎಂದು ಚಂದು ಅಕ್ಕರೆಯಿಂದ ಕರೆದೊಡನೆ-ಬಳಿಗೋಡಿ ಹೋಗಿ ಅವನ ಕೊರ ಳಲ್ಲಿ ತಬ್ಬಿಕೊಂಡು "ಚಂದುಕಾಕಾ, ಆತ ನಿನಗ ಎಷ್ಟು ಬಡಿದುಬಿಟ್ಟನಲ್ಲಾ! ಅವ್ವನಿಗೂ ಬಡ್ದ!...ಅವನನ್ನ ಪೋಲಿಸರಿಗ ಹಿಡಿದುಕೊಡು ಕಾಕಾ. ಆತ ಭಾಳ ಕೆಟ್ಟೋನಿದ್ದಾನ!" ಎನ್ನುತ್ತ ಅಳತೊಡಗಿದಳು.

"ನೀ ಶ್ಯಾಣಾಕಿಯಾಗಿ ಹಿಂಗೆಲ್ಲಾ ಅಳೋದಾ? ಧೈರ್ಯವಾಗಿರೋ ದನ್ನ ಕಲೀಬೇಕು!" ಚಂದು ಅವಳನ್ನ ತನ್ನ ತೊಡೆಯ ಮೇಲೆ ಕೂರಿಸಿಕೊಂಡು ಸಮಾಧಾನಪಡಿಸಿದ. "ತಪ್ಪು ಮಾಡಿದವರಿಗೆ ಶಿಕ್ಷಾ ಆಗೇ ಆಗ್ತದ. ನೀ ಅದ್ನೆಲ್ಲಾ ಮನ್ಸಿಗ ಹಚ್ಕೋಬಾರ್ದು, ದಿನಾ ಬರೂಹಂಗ ನಾಳಿ ಮುಂಜಾ ಲಿಗೂ ಶಾಲಿಗ ಬರಬೇಕು. ಬರ್ತೀ ಹೌದಲ್ಲಾ?"

"ಬರ್ತೀನಿ" ಎಂದಳು ಸೀತೆ.

"ಹಾಂ ಬರಬೇಕು. ಚಲೋತ್ನಾನಾಗಿ ಓದು ಬರಹ ಕಲ್ತು ದೊಡ್ಡ ಡಾಕ್ಟರ್ ಆಗಬೇಕು ನೀನು! ಹೌದಲ್ಲಾ?"

"ಹೂಂ ಆಗ್ತೀನಿ...ಆಗ ಆತನ್ನ ನಾನು ಪೋಲೀಸರಿಗೆ ಹಿಡಿದು ಕೊಡ ಲಿಕ್ಕ ಬರ್ತದೇನು ಕಾಕಾ?" ಎಂದು ಆಕೆ ಪ್ರಶ್ನಿಸಿದಾಗ, ಅಲ್ಲಿಯ ವಿಷಾದ ಮಯ ವಾತಾವರಣದಲ್ಲಿಯೂ ನಗೆಹನಿಯೊಂದು ತೊಟ್ಟಿಕ್ಕಿದಂತಾಯಿತು.

ಮರುದಿನ ಪಂಚಾಯ್ತಿ ಕೂರಿಸಲು ಮಾನ್ಯಾ ಸಾಕಷ್ಟು ಖರ್ಚು ಮಾಡ

ಬೇಕಾಯಿತು. ಕಡಿತ, ಕುಡಿತ, ಎಲೆಯಡಿಕೆ, ತಂಬಾಕು, ಚುಟ್ಟ ವಗೈರೆ ಹೊಂದಿಸಿಕೊಟ್ಟ ನಂತರವೇ 'ಸಮಸ್ತರು' ಚಾವಡಿಗೆ ಆಗಮಿಸಿದ್ದು.

ಸಭೆಗೆ ಸೋನಿಯನ್ನು ಕರೆಸಲಾಯಿತು. ಅವಳೊಡನೆ ಲಚ್ಮಿ-ಚಂದು ಸಹ ಬಂದರು. ಮಾನ್ಯಾನೊಡನೆ ಆತನ ತಂದೆ ಬಂದ. ಸಂಗಿ ಯಾರ ಕಣ್ಣಿಗೂ ಬೀಳದಂತೆ ಮರೆಯಲ್ಲಡಗಿ ನಿಂತಳು.

"ಗಂಡನ ಮನಿಗ ಹೋಗಲಾರದ್ಹಂಗ ಬ್ಯಾರೆದೊಂದು ಗುಡಸ್ಲ ಹಾಕ್ಕೊಂಡಿದ್ದೀಯಂತಲ್ಲಾ ತಂಗಿ ಯದಕ?" ಪ್ರಶ್ನೆ ಕೇಳಲಾಯಿತು.

"ಅಂವ ನನ್ನ ಹೊಡ್ದು ಬಡ್ದು ಜೀವ ತಗೀಲಿಕ್ಕ ತಯಾರಾಗಿದ್ದನ್ರೀ ಯಪ್ಪ. ನನ್ನ ತಲಿ ಒಡ್ದು ರಗತದ ಹೊಳಿ ಹರಿಸಿದ್ದನ್ನ ನೀವೆಲ್ಲಾ ಕಂಡೀರಿ. ಯಾರ್ಯಾರೋ ಪುಣ್ಯಾತ್ಮರ ಉಪಕಾರದಿಂದ ನಾ ಈವತ್ತಿನ ತಾನ ಜೀವ ಸಹಿತ ಉಳ್ಕೊಂಡೀನಿ; ನನ್ನ ಕೂಸಿಗೆ ತಾಯಿಯಾಗಿ ಸಲುತಿದ್ದೀನಿ..."

"ಈಗ ನಿನ ಗಂಡ ಮನಿಗೆ ಕರಿಸಲಿಕ್ಕ ಹತ್ಯಾನ. ನೀ ಅಲ್ಲಿಗ ಹೋಗಿ ಬಾಳ್ವೆ ಮಾಡಿಕೊಂಡಿರಬೇಕು. ಇದಕ್ಕೇನು ಅನ್ನುತ್ತಿ?"

"ಅಂವ ನನ್ನೆಂದೂ ಬಾಳ್ವೆ ಮಾಡಗೊಡಿಸುದಿಲ್ರಿ. ಇನ್ನ ನಾ ಸತ್ರು ಸೈತ ಆತನ ಬಲ್ಲಿ ಹೋಗಂಗಿಲ್ಲ!"

"ಈ ಮಾತಿಗ ನೀ ಏನು ಅಂತಿದ್ದೀಯಪ್ಪ ಮಾನ್ಸಿಂಗ್?"

"ಈಕಿ ನನ್ನ ಹೆಂಡ್ತಿ ಅದಾಳ-ಸುಮ್ಮ ಬಾಯಿ ಮುಚಗೊಂಡ್ ನನ್ನ ಬಲ್ಲಿ ಬರಬೇಕು. ನನ್ಮನಿ ಬಾಗ್ಲಾ ಕಾಯಿಕೊಂಡ್ ಬಿದ್ದಿರಬೇಕು! ಇಷ್ಟಂತೀನಿ!"

"ಯಾವುದಾರೆ ಒಂದ್‌ನಾಯಿ ತಂದು ಹಚ್ಚು ಮನಿ ಬಾಗ್ಲಾ ಕಾಯು ಲಿಕ್ಕ!" ಸೋನಿ ಕೆರಳಿ ನುಡಿದಾಗ-ಪಂಚರು ಎಚ್ಚರಿಕೆ ನೀಡಿರು-ಏ ತಂಗಿ, ನಾವು ಕೇಳಿದ್ದಕ್ಕಷ್ಟೇ ಜವಾಬ್ ಕೊಡು. ನಡಬರಕ್ಕ ಸೊಲ್ಲೆತ್ತಬ್ಯಾಡ!... ಅಂವ ಇನ್ನು ಮ್ಯಾಲ ಬಡಿಯೂದಿಲ್ಲ ಅಂತ ಒಪ್ಪಿಕೊಂಡನಂದ್ರ ನೀ ಆತನ ಬಲ್ಲಿ ಹೋಗಿ ಸಂಸಾರ ಮಾಡಲಿಕ್ಕ ತಯಾರಿದ್ದೀಯೇನು?"

"ಅಂವ ಯಾವತ್ತಿಗೂ ಬಡಿಲಾರ್ದ ಬಿಡೋನಲ್ರಿ...ಮತ್ತ ನನಮ್ಯಾಲ

ಬಸವೀನ ಬ್ಯಾರೆ ತಂದಿಟ್ಕೊಂಡಾನ. ಅದಕ್ಕ ಅವನಲ್ಲಿ ನಾ ಹೋಗಾಕಿಯಲ್ರಿ!"

"ನಿನ್ನ ಮ್ಯಾಲಿನ್ನ ಹತ್ತು ಮಂದಿನ ತಂದಿಟ್ಟುಕೊಳ್ತೀನಲೇ ಭೋಸುಡಿ! ಅದನ್ನ ಕಟ್ಟಿಗೊಂಡು ನೀ ಏನ ಮಾಡಾಕಿ?" ಎನ್ನುತ್ತ ಮಾನ್ಯಾ ಅವಳ ಮೇಲೇರಿ ಹೋದಾಗ ಪಂಚಾಯಿತರು ಅಸಮಾಧಾನಗೊಂಡರು- "ನೀವು ನೀವೇ ಗುದ್ದಾಡಿ ವ್ಯಾಜ್ಯ ಬಗೆಹರಿಸಿಕೊಳ್ಳುಹಂಗಿತ್ತಂದ್ರ ನಮ್ಮನ್ನ ತಂದು ಇಲ್ಲಿ ಕುಂದರ್ಸೋ ಪ್ರಸಂಗವೇನಿತ್ತು?.. ಹಿಂಗೆಲ್ಲ ನಡುನಡುವೆ ಗದ್ಲ ಎಬ್ಬಿಸಿದ್ರಿ ಅಂದ್ರ ನಾವು ಎದ್ದು ಹೊಂಟೇಬಿಡೋರು ನೋಡ್ರಪ್ಪ!"

ಕೂಡಲೆ ಮಾನ್ಯಾ ಹಿಂದಕ್ಕೆ ಸರಿದುನಿಂತ.

"ನೀ ಇನ್ನು ಮ್ಯಾಲ ಈಕಿನ ಹೊಡಿ ಬಡಿ ಮಾಡಂಗಿಲ್ಲಂತ ಈ ಸಭಾದಾಗ ಆಣಿ ಮಾಡು. ಅಂದ್ರ ನಿನ್ನ ಮನಿಗ ಆಕಿ ಬಂದು ಬಾಳ್ವೆ ಮಾಡ್ತಾಳ." ಪಂಚರು ಮಾನ್ಯಾನಿಗೆ ಆದೇಶ ನೀಡಿದಾಗ-ಆತ ಅದನ್ನು ಖಂಡ ತುಂಡವಾಗಿ ನಿರಾಕರಿಸಿದ-"ಅದ್ಹೆಂಗ್ ಆಣೆ ಪ್ರಮಾಣ ಮಾಡಲಿಕ್ಕ ಬರ್ತದ್ರಿ!? ನೀವೂ ಹೆಂಡ್ರನ್ನ ಆಳೋರೇ ಅದೀರಿ, ನನ್ನಂಥ ಗಂಡಸರೇ ಅದೀರಿ-ತಿಳಿದು ಮಾತಾಡ್ರಿ-ಆಕೆ ಅಸಬಾರದ್ದಂದ್ರ ಎದುರಾ ಬದುರಾ ಜವಾಬ್ ಕೊಡಾಕ ನಿಂತ್ರ-ನೀವಾರೆ ಬಡಿಲಾರ್ದ ಮುದ್ದಾಡ್ತೀರೇನು?"

ಪಂಚರು ತಂತಮ್ಮಲ್ಲೆ ಸಮಾಲೋಚನೆ ನಡೆಸಿ ಹೇಳಿದರು. "ನೋಡವ್ವಾ ತಂಗಿ, ನೀಯೇನೋ ಬ್ಯಾರೆ ಮನಿಯಾಗ ಇರಬೇಕಂತ ಇಚ್ಛಾಪಡ್ತಿದ್ದಿ ಖರೆ. ಆದ್ರ ನಿನ್ಗಂಡ ಒಪ್ಪವಲ್ಲ. ಅಂವ ಒಪ್ಪಿದ್ದನಂದ್ರ ಬ್ಯಾರೆ ಮನಿಯಾಗ ಇರೋದಷ್ಟೆ ಅಲ್ಲ, ಬ್ಯಾರೆ ಗಂಡನ್ನ ಉಡುಕಿ ಮಾಡ್ಕೋತೀಸಂದ್ರೂ ಸತ ನಾವು ಬ್ಯಾಡಂತಿದ್ದಿಲ್ಲ...ಆದ್ರ ಅವನಿಗ ನೀ ಬೇಕಾಗಿದ್ದಿ. ಅದರ ಸಲುವಾಗಿ ನೀ ಅವನ ಬಲ್ಲಿ ಹೋಗಲಿಕ್ಕೇ ಬೇಕಾಗ್ತದ!"

"ಅವನಿಗ ನಾ ಬೇಕಾಗಿರಬಹುದ್ರಿ. ಆದ್ರ ನನಗ ಅಂವ ಬೇಕಿಲ್ರಿಯಪ್ಪ!" ಸೋನಿ ಖಚಿತವಾಗಿ ಹೇಳಿದಾಗ, ಮಾನ್ಯಾ ಕರಕರ ಹಲ್ಲು ಮಸೆಯುತ್ತ ಚಂದು-ಲಚ್ಮಿಯರತ್ತ ನೋಡಿದ.

"ನೀ ಹೆಣ್ಣುಮಗಳು ಅದೀ ತಂಗಿ. ಆತ ಗಂಡಸು ಮಗ ಅದಾನ. ನೀ ಆತನ್ನ ಲಗ್ನ ಮಾಡ್ಕೊಂಬಂದಿಲ್ಲ. ಅಂವ ತೆರಕೊಟ್ಟು ನಿನ್ನ ಮಾಡ್ಕೊಂಡ್ ಬಂದಾನ." ಕೂಡಲೇ ಸೋನಿ ಅಂದಳು-"ಅಂವ ನಮ್ಮಪ್ಪಗ ಒಂದು ದುಡ್ಡಿನ ತೆರ ಕೊಟ್ಟಿಲ್ರಿ. ನಮ್ಮಪ್ಪಾನೇ ತನಗ ತೆರ ಕೊಡಲಿಲ್ಲ ಅನ್ನೊ ಹಠಕ್ಕ ನನ್ನ ಬಾಳು ಹಾಳು ಮಾಡ್ಯಾನ..."

ಮುತ್ತೈದೆಯ ಚಿಹ್ನೆಯಾಗಿ ತನ್ನ ತೋಳಲ್ಲಿ ತೊಟ್ಟಿದ್ದ ಐದಾರು ಬಿಳಿಯ ಬಳೆಗಳನ್ನೂ, ಮುಂಗೂದಲಲ್ಲಿ ಹೆಣೆದಿದ್ದ ನಕಲಿ ಬೆಳ್ಳಿಯ ಒಂದು ಜೊತೆ ಆಭರಣವನ್ನು ಬಿಚ್ಚಿ, ರಪ್ಪನೆ ಮಾನ್ಯಾನ ಕಾಲಿನ ಬಳಿ ಎಸೆದು ಹೇಳಿದಳು-"ಇವನ್ನೂ ತಾನೇ ತಗೊಂಬಿಡುವಲ್ಲನ್ಯಾಕ; ಇವಕ್ಕಿಂದ ನಾ ಅವನ ಹೆಂಡ್ತಿಯಲ್ಲ. ಆತ ನನ್ನ ಗಂಡನಲ್ಲ!"

"ಸಾದ್ದಿಲ್ಲ ತಂಗಿ. ನೀ ಎಷ್ಟು ಹಜಾರು ಸರ್ತಿ ಹೇಳಿದ್ರೂ ನಿನ ಮಾತು ನಡಿಯೂದಿಲ್ಲ. ಆತ ಒಂದೇ ಒಂದ್ ಸರ್ತಿ 'ಈಕಿ ನನ್ನ ಹೆಂಡ್ತಿಯಲ್ಲ' ಅಂದು ಬಿಟ್ಟಿದ್ರ ಖಲಾಸ್ ಆಗತ್ತಿತ್ತು. ಆದ್ರ ಅಂವ ಅಂದಿಲ್ಲ!"

ಸೋನಿ ಅಸಹಾಯಕಳಾಗಿ ಲಚ್ಮಿ-ಚಂದೂರತ್ತ ನೋಡಿದಳು. ತನಗೆಷ್ಟೇ ಸಿಟ್ಟು ಬಂದರೂ ಸಭೆಯಲ್ಲಿ ತುಟಿ ಬಿಚ್ಚುವುದಿಲ್ಲವೆಂದು, ಲಚ್ಮಿ ಹಿಂದಿನ ರಾತ್ರಿ ಚಂದುವಿಗೆ ವಚನಕೊಟ್ಟಿದ್ದರಿಂದ ಎಲ್ಲವನ್ನೂ ಸಹಿಸಿಕೊಳ್ಳುತ್ತಿದ್ದಳು. ಈಗ ಚಂದು ಮಾತಾಡಬೇಕಾದುದು ಅನಿವಾರ್ಯವಾಯಿತು. ಆತ ಎದ್ದು ನಿಂತು ಪಂಚರನ್ನು ಉದ್ದೇಶಿಸಿ ಕೇಳಿದ.

"ಇಲ್ಲಿ ನನ್ನದೂ ಒಂದ್ ಅಭಿಪ್ರಾಯ ಹೇಳಬೇಕಂತ ಮಾಡೀನಿ. ಅವಕಾಶ ಕೊಡ್ತಿರೇನು ನಾಯಕರೆ?"

ಪಂಚರು ಸಮಾಲೋಚಿಸಿದ ನಂತರ ಹೇಳಿದರು. "ನೋಡಪ್ಪ ಮಾಸ್ತರ. ವಯಸ್ಸಿನಾಗ ನೀ ನಮಗಿಂತ ಸಣ್ಣಾವನಿದ್ರೂ ಸಹಿತ ಸಾಲಿ ಕಲ್ತವನಿದ್ದಿ. ಶ್ಯಾಣಾತನಿದ್ದಿ. ಈ ಊರಿನ ಬಗ್ಗೆ ಅಗದಿ ಕಾಳಜಿ ವಹಿಸಿ ದುಡೀಲಿಕ್ಕ ಹತ್ತಿದಿ. ಅದರ ಸಲುವಾಗಿ ಈ ಸಭಾದಾಗ ನಿನ್ನ ಮಾತಿಗೂ ಅವಕಾಶ ಐತಿ....ಆದ್ರ ಮೊದಲಿಗೆ-ಖರೆ ನಿನ್ನ ಊರು ಯಾವುದು? ನಿಮ

ಪ್ಪನ ಹೆಸರೇನು? ಇಲ್ಲಿಗ ಯದಕ ಬಂದಿ?" ಈ ಮೂರು ಪ್ರಶ್ನೆಗಳಿಗೆ ಜವಾಬ್ ಹೇಳಿ, ಆಮ್ಯಾಲ ನಿನ್ನ ಮಾತೇನದ ಅದನ್ನ ಸಭಾದ ಮುಂದಿಡು."

"ಕ್ಷಮಿಸ್ರಿ. ನಾ ಎಲ್ಲಾದನ್ನೂ ಹೇಳತೇನಿ, ಆದ್ರ ನಮ್ಮಪ್ಪನ ಹೆಸರು ಮಾತ್ರ ಹೇಳೋದಿಲ್ಲ! ಆತಗ 'ಅಪ್ಪ' ಅನ್ನಲಿಕ್ಕ ನಾ ತಯಾರಿಲ್ಲ."

"ಯದಕ್ಕ?" ಒಮ್ಮೆಲೆ ಹಲವು ಕಂಠಗಳಿಂದ ಚಿಮ್ಮಿ ಬಂದಿತು ಪ್ರಶ್ನೆ.

ಆ ದಿನ ತಾವು ಇದೇ ಪ್ರಶ್ನೆ ಹಾಕಿದಾಗ ಬರೀ ಹಾರಿಕೆಯ ಉತ್ತರ ಕೊಟ್ಟು ಜಾರಿಕೊಂಡಿದ್ದ. ಈ ದಿನ ಏನು ಹೇಳುತ್ತಾನೋ ನೋಡುವ ಎಂದು ಲಚ್ಮಿ-ಸೋನಿಯರು ಸಹ ಅವನ ಹೇಳಿಕೆಯ ಬಗ್ಗೆ ಕುತೂಹಲ ಗೊಂಡರು.

"ಯದಕ್ಕಂದ್ರ, ಈ ಸೋನಿಬಾಯಿಗ ಒಬ್ಬ ಮಗಳಿದ್ದಾಳ-ಸೀತಾ ಅಂತ. ಆಕಿಗ ತನ್ನಪ್ಪ ಯಾರಂಬೋದು ಗೊತ್ತದ-ಆದ್ರ ಆಕಿ ಆತನ್ನ 'ಅಪ್ಪ' ಅನ್ನಲಿಕ್ಕ ಇಷ್ಟಪಡೋದಿಲ್ಲ. ಬ್ಯಾರೆದೋರ ಮುಂದು ಸೈತ 'ನಮ್ಮಪ್ಪ' ಅಂತ ಹೇಳಿಕೊಳ್ಳೂದಿಲ್ಲ "ಹಂಗ್ ಹೇಳಬ್ಯಾಡ" ಅಂತ ಆಕಿಗ ಬ್ಯಾರೆದೋರು ಯಾರೂ ಹೇಳಿಕೊಟ್ಟಿಲ್ಲ. ತನ್ನಪ್ಪನ ರಾಕ್ಷಸ ಬುದ್ಧಿ ನೋಡಿ ತಿರಸ್ಕಾರ ಹುಟ್ಟಿ "ಅಪ್ಪಾ" ಅನ್ನೊ ಸೊಲ್ಲು ಎತ್ತೋದನ್ನೇ ಕೈಬಿಟ್ಟಾಳ! ನನ್ನೂದು ಇದೇ ಕಥಿ!"

"ಹಂಗಾದ್ರ ನಾವೂ ಸಿಟ್ಟು ಬಂದಾಗ ನಂನಮ್ಮ ಹೆಂಡ್ರನ್ನ ಬಡೀತೀವೇ ನಪ್ಪ—ಅಷ್ಟಕ್ಕೆಲ್ಲ ಮಕ್ಕಳು ಸೆಟಗೊಂಡು ಅಪ್ಪಗ 'ಅಪ್ಪ' ಅನ್ನಲಿಕ್ಕ ಹೇಸಿ ಕೊಂಡ್ರ ನಡಿತದೇನು?" ಮುಖಂಡನೊಬ್ಬ ಪ್ರಶ್ನೆ ಮಾಡಿದ.

"ಹೊಡಿ ಬಡಿಯೂದು ಬರೇ ಒರಟುತನ ಆತು. ಅಂಥವ್ನನ್ನ ಮಕ್ಕಳು ಕ್ಷಮಾ ಮಾಡ್ತಾರ. ಆದ್ರ ಮನುಷ್ಯನ್ನ ಕೊಲ್ಲೋ ಅಂಥ ರಾಕ್ಷಸ ಗುಣ ಏನಿರ್ತದ-ಅದನ್ನ ಯಾರೂ ಕ್ಷಮೆ ಮಾಡಂಗಿಲ್ಲ."

"ಏಯ್ ಮಗನ, ನ್ಯಾಲಿಗಿ ಬಿಗಿ ಹಿಡಿದು ಮಾತಾಡ್ಲೆ! ನಾ ಯಾರನ್ನ ಕೊಂದೀನಿ ತೋರಿಸಿಕೊಟ್ಟೇ ಬದುಕಿದಿ! ಇಲ್ಲಂದ್ರ..." ಎಂದು ಮಾನ್ಯಾ ಹೂಂಕರಿಸುತ್ತಿದ್ದಂತೆಯೇ ಚಂದು ವಿನೋದವಾಗಿ ವಾಕ್ಯವನ್ನು ಪೂರ್ಣಗೊಳಿ

ಸಿದ. "ಇಲ್ಲಾಂದ್ರ ನೀ ಜೈಲಿಗ ಹ್ವಾದ್ರೂ ಚಿಂತಿಲ್ಲ-ನನ್ನ ಕೊಲ್ತಿದ್ದಿ! ಹೌದಲ್ಲ?"

"ಗಮ್ಮತ್ತು ಮಾಡ್ಬೀ ಅಂದ್ರ ಖರೇನೇ ಜೀವ ತೆಗೆದೇನು! ನಾ ಯಾರನ್ನ ಕೊಂದೀನಿ ಮೊದ್ಲು ಹೇಳು!"

"ಇಲ್ಲಿಂದ ಬರೋಬ್ಬರಿ ತಿಂಗಳ ಹಿಂದೆ, ಸೋನಿಬಾಯಿ ತನ್ನ ಸಣ್ಣ ಮಗಳು ಶಾರದಿಯನ್ನು ತನ್ನ ಜೋಪಡಿಯಾಗ ಮಲಗಿಸಿ ಕಟಿಗಿ ತರಲಿಕ್ಕ ಗುಡ್ಡಕ್ಕ ಹೋಗಿದ್ಲು. ಆ ಹೊತ್ತಿನಾಗ ನೀ ಜೋಪಡಿ ಬಲ್ಲಿ ಬಂದು, ಏನೇನೋ ಸಂಶಯ ತಲಿಯಾಗಿಟ್ಕೊಂಡು, ಹಿಂದ ಮುಂದ ಆಲೋಚ್ನೆ ಮಾಡ ಲಾರದ ರಾಕ್ಷಸನ್ಹಂಗ ಝಾಡಿಸಿ ಬಾಗಿಲಿಗ ಒದ್ದು ಬಿಟ್ಟೆ! ಅದು ಮುರಕೊಂಡು ಒಳಗ ಜಡ್ವಾಗಿ ಮಲಗಿದ್ದ ಕೂಸಿನ ಮ್ಯಾಲ ಬಿದ್ದು, ರಕ್ತ ಕಾರಿಕೊಂಡು ಅದು ಜೀವಬಿಡ್ತು! ಇದು ನೀನಾಗಿ ನಿನ್ನ ಮಗಳನ್ನು ಕೊಲೆ ಮಾಡಿಧಂಗಲ್ಲೇನು?"

ಮಾನ್ಯಾನ ಮೋರೆ ತಟ್ಟನೇ ಕಳೆಗುಂದಿತಾದರೂ ಸಮರ್ಥಿಸಿಕೊಳ್ಳಲು ಹೆಣಗಾಡಿದ-"ನನ್ಮಗಳನ್ನ ನೀವೆಲ್ಲಾ ಸೇರಿ ಕೊಂದುಹಾಕಿ ಆ ತಪ್ಪನ್ನ ನನ ಮ್ಯಾಲ ಹೊರ್ಸಲಿಕ್ಕ ನೋಡ್ತಿದ್ದೀರಲ್ಲಾ...! ಮಗನೆ ನೀ ಕಂಡಿಯೇನು ನಾ ಅಲ್ಲಿ ಬಂದಿದ್ದು, ಕಾಲಿಂದ ಒದ್ದಿದ್ದನೆಲ್ಲ?"

"ಸಾಕ್ಷಿ ಹೇಳಿಸಲೇನು?" ಚಂದು ಕೇಳಿದ.

"ಹೂಂ" ಎನ್ನುವ ಧೈರ್ಯವಾಗದೇ ಮಾನ್ಯಾ ಪಂಚರತ್ತ ದೀನ ನೋಟ ಬೀರಿದಾಗ ಅವರು ಮಾತು ಬದಲಿಸಿದರು-"ಮಾತು ಜಾಡು ತಪ್ಪಿ ಎತ್ತೆತ್ತ್ಲಾಗೋ ಹೊಂಟುಬಿಡ್ತು! ಅದಿರಲಿ-ಆ ಪ್ರಸ್ತಾಪ ಹಿಂದಾಗಡಿ ಎತ್ತ್ವಾ ಮಂತ. ಹೇಳು ಮಾಸ್ತರಪ್ಪ-ನಿಮ್ಮಪ್ಪನ ಹೆಸರು ನೀಯದಕ್ಕ ಹೇಳೊ ವಲ್ಲಿ?"

"'ಅಪ್ಪ ಅರುವಿಲ್ದ' ಮಗಳನ್ನ ಕೊಂದ್ರೆ ನಮ್ಮಪ್ಪ ಅರುವಿಟ್ಟು ಕೊಂಡೇ ನಮ್ಮವ್ವನ ಕೊಂದುಹಾಕ್ದ!!"

ಎಲ್ಲರ ಕಣ್ಣು ಹರಸಿಂಗನತ್ತ ತಿರುಗಿದವು; ಹರಸಿಂಗ್ ನೆಲ ನೋಡಿದ.

"ಏನಲೇ ಹುಡುಗ! ಹಂಗಾದ್ರ ನೀ ಹರಸಿಂಗ್‌ನ ಮಗನೇನು!" ಕುತೂಹಲ ಮಿಶ್ರಿತ ಅನುಮಾನದಿಂದ ಪ್ರಶ್ನಿಸಲಾಯಿತು.

"ನಾ ಕಳ್ಳನಲ್ಲ, ಸುಳ್ಳನಲ್ಲ, ಕಾಮುಕನಲ್ಲ, ಕೊಲೆಗಾರನಲ್ಲ. ಆತನ ಮಗ ಹ್ಯಾಂಗ ಆಗತೀನಿ?"

ಸಭಿಕರ ಕಣ್ಣುಗಳು ಚಂದುವಿನಲ್ಲಿ ನೆಟ್ಟವು. ಕೆಲವು ಪ್ರೀತಿ-ಅಭಿಮಾನ ಸೂಸಿದರೆ, ಮತ್ತೆ ಕೆಲವು ದ್ವೇಷ ಪ್ರತೀಕಾರದ ಬೆಂಕಿ ಕಾರಿದವು. ಚಂದು ಬೇರೆ ಯಾರೂ ಅಲ್ಲ, ತನ್ನ ಖಾಸಾ ಮೈದುನ! ಎಂಬುದು ತಿಳಿದು ಬಂದಾಗ ಸೋನಿಯ ಮನದಲ್ಲಿ ಆನಂದದ ತರಂಗಗಳೆದ್ದು ಕಣ್ಣೀರ ಮೂಲಕ ಹೊರಚೆಲ್ಲಲಾರಂಭಿಸಿದವು. ಇಷ್ಟು ಬುದ್ಧಿವಂತನಾದ, ವಿವೇಕಿಯಾದ ಕರುಣಾಳುವಾದ ಮೈದುನನನ್ನು ಪಡೆದ ತಾನೆಷ್ಟು ಅದೃಷ್ಟಶಾಲಿನಿ. ಆಕೆ ಕುಳಿತಲ್ಲೇ ಬಿಕ್ಕಳಿಸಿ ಅತ್ತು ಸಮಾಧಾನಗೊಂಡಳು.

"ಕೆಸರಿನಾಗ ಕಮಲದ ಹೂ ಹೊಂಡೋಹಂಗ, ಎಂಥ ನೀಚನ ಹೊಟ್ಟೆಯಾಗ ಎಂಥ ಧರಮರಾಯ ಹುಟ್ಟಿ ಬಂದಿಯೋಪ್ಪ! ಅಪ್ಪನ ಹೆಸರು ಹೇಳಿಕ್ಕ ನೀ ಚೌಕಾಶಿ ಮಾಡಿದ್ದು ಬರೋಬರಿನ ಐತಿಬಿಡು!" ಎಂದು ಲಚ್ಮಿ 'ತುಟಿ ಬಿಚ್ಚುವುದಿಲ್ಲ'ವೆಂದು ಕೊಟ್ಟಿದ್ದ ವಚನವನ್ನು ಭಂಗ ಮಾಡಿದಾಗ, 'ಶ್! ದೊಡ್ಡವ್ವ!' ಎಂದು ಆಕೆಯ ತುಟಿಯಮೇಲೆ ತನ್ನ ಬೆರಳಿರಿಸಿದ ಚಂದು.

"ನೂರ್‌ನೂರು ವರ್ಸ ಸಂತೋಸಲಿಂದ ಬಾಳುಮಗ!" ಲಚ್ಮಿ ಆತನ ಕೈಯನ್ನು ತನ್ನ ಹಣೆಗೆ ಒತ್ತಿಕೊಂಡು ಶುಭಕೋರಿದಳು.

ಎರಡು ದಶಕಗಳಷ್ಟು ಹಿಂದಿನ ನೆನಪು ಉಳಿಸಿಕೊಂಡವರು ತಮ್ಮ ಅಕ್ಕಪಕ್ಕದಲ್ಲಿ ಕುಳಿತವರಿಗೆ ಜೂರುಪಾರು ಹಂಚತೊಡಗಿ "ತನ್ನ ಹೆಂಡ್ತಿ ಜಮುಣೆಬಾಯಿ-ಸಣ್ಣಮಗ ಚಂದ್ರ್ಯಾಮ ಸಿಂಗನ್ನ ಕರಕೊಂಡು ಯಾರ ಕೂಡಾನೋ ಓಡಿಹ್ವಾದ್ಲು' ಅಂತ ಈ ಹರಸಿಂಗ್ ಸುದ್ದಿ ಹಬ್ಬಿಸಿದ!...ಹಿಂದಾಗಡಿ ಮಂದಿ ಹೇಳಾಕ ಸುರುಮಾಡಿದ್ರು-'ಜಮುಣೆಬಾಯಿ ಯಾರನ್ನೂ ಕಟ್ಕೊಂಡ್ ಓಡೋಗಲಿಲ್ಲ- ಹರಸಿಂಗ್‌ನೇ ಆಕಿವ ಗೋಣು ಮುರ್ದು ಸಾಯಿಸಿಬಿಟ್ಟ! ಜ್ವಾಳದ ಹೊಲದಾಗ ಆಕನ ಹೆಣ ಹೂಳ್ತಿದ್ವಾಗ, ಎಳೆ ಹುಡುಗ ಚಂದ್ರ್ಯಾಮ ಸಿಂಗ್ ಅಪ್ಪನ್ನ ನೋಡ್ಕೊಂಡು ಊರೇ ಬಿಟ್ಟು ಎತ್ತಾಗೋ ಓಡ್ಹೋದ!...' ಅಂತ ಅಪ್ಪ-ಮಗ ತಮ್ಮ ದಂಧೆಯಾಗ ತಾವು ಮುಣುಗಿಬಿಟ್ರು. ಓಡ್ಹೋದೊನ ಸುದ್ದಿ ಮರೆತುಬಿಟ್ರು!... ಈಗ ನೋಡು! ಅಪ್ಪ-ಮಗನ ಕುಂಡಿಗ ಬತ್ತಿ ಹಚ್ಕೋಹಂಗ ತಯಾರಾಗಿ ಬಂದಾನ ಸರ್ದಾರ!..."

ಎಲ್ಲರೂ ಗುಜುಗಜು ಮಾತಾಡುತ್ತ ಮೈಮರೆತು ಕುಳಿತುಬಿಟ್ಟಾಗ "ಕೇಳ್ರಿ ಇನ್ನೇನೋ ಕೇಳಬೇಕು ಅಂದ್ರಲ್ಲಾ..." ಎಂದು ಚಂದು ಎಚ್ಚರಿಸಿದ.

"ನಿಮ್ಮಪ್ಪನ ಹೆಸರು ನೀ ಹೇಳಿಲ್ಲಂದ್ರೂ ನಮಗೆಲ್ಲ ಗೊತ್ತಾತಲ್ಲೋ ತಮ್ಮಾ! ನಮ್ಮ ದಿಬ್ಬದ ಹುಡುಗನೇ ಆದಿ ಅಂದಮ್ಯಾಲ ಇನ್ನೇನೂ ಕೇಳೂದು ಬ್ಯಾಡ ಹೇಳೂದು ಬ್ಯಾಡ ಬಿಡು. ಸಭಾದಾಗ ಎರಡು ಮಾತು ಹೇಳಬೇಕು ಅಂದ್ಯಲ್ಲ-ಅದೇನು ಹೇಳು.' ಮುಖಂಡರು ಅನುಮತಿ ಇತ್ತರು.

"ಮನುಷ್ಯ ಜಾತಿಯೊಳಗ ಗಂಡು-ಹೆಣ್ಣು ಅಂತ ಎರಡು ಇದ್ರು ಸಹಿತ, ಇಬ್ರು ಮನುಷ್ಯರೇ. ಇಬ್ಬರ ಮನಸ್ಸಿನ್ಯಾಗೂ ತಮ್ಮದೇ ಆದಂಥ ಆಸೆಗಳು-ಅನ್ನಿಸಿಕೆಗಳು ಇರ್ತಾವ. ಈ ವಿಚಾರದಲ್ಲಿ ಇಬ್ಬರ ಭಾವನೆಗಳಿಗೂ ಕಿಮ್ಮತ್ತು ಕೊಡಬೇಕಾಗ್ತದ...ಈಗ ಮಾನ್ಸಿಂಗ್ ತನ್ನ ಮನಸ್ಸಿನ ಆಸೆ ಪ್ರಕಾರ ಮತ್ತೊಬ್ಬಾಕಿನ ಮಾಡ್ಕೊಂಡ್ ಬಂದಾನ. ತನ್ನ ಹೆಂಡ್ತಿ ಮ್ಯಾಲ ಪ್ರೀತಿ, ಗೌರವ ಇಟ್ಟಿರುವಂಥ ಯಾವ ಗಂಡಸೂ ಕೂಡ ಈ ರೀತಿ ಅನ್ಯಾಯ ಮಾಡಲಿಕ್ಕ ಮುಂದಾಗೋದಿಲ್ಲ. 'ಈತ ಹೆಂಡ್ತಿಯನ್ನ ಮನಿ ಬಾಗ್ಲ ಕಾಯುವ ನಾಯಿ!' ಅಂದ್ರೂ ಕೂಡ, ಹಿರಿಯೋರು, ಬುದ್ಧಿವಂತ್ರೂ ಆದ ನೀವು ಸಹಿಸಿ ಕೊಂಡು ಗಪ್ ಕುಂತೀರಿ! ಇಷ್ಟಿದ್ರೂ ಕೂಡ "ನೀ ಬೇಕಾಗಿದ್ದಿ!" ಅಂತ-ಸೋನಿ ಬಾಯಿಗ ಒತ್ತಾಯ ಮಾಡಲಿಕ್ಕ ಹತ್ತೀರಿ! ಹೆಣ್ಣು ಮಕ್ಕಳನ್ನ ಇಷ್ಟೊಂದು ತಾತ್ಸಾರವಾಗಿ, ಕ್ರೂರವಾಗಿ ನೋಡೋ ಅಂಥ ಗಂಡಸರು ಬಹುತೇಕ ಇಲ್ಲಿ ಬಿಟ್ರೆ ಬ್ಯಾರೆ ಎಲ್ಲೂ ಇರಲಿಕ್ಕಿಲ್ಲ!

"ಆದ್ದರಿಂದ ನಾನು ತಮ್ಮಲ್ಲಿ ಬೇಡಿಕೊಳ್ಳೋದಿಷ್ಟೆ-ಮಾನಸಿಂಗ್‌ನ ಇಷ್ಟಕ್ಕ ಹೆಂಗ್ ಬೆಲೆ ಕೊಡ್ತಿರೋ, ಹಂಗ್ ಸೋನಿಬಾಯಿಯ ಇಷ್ಟಕ್ಕೂ ನೀವು ಬೆಲೆಕೊಡಬೇಕಾಗ್ತದ. ತನಗ ಬೇಕಾದವಳನ್ನ ತಂದು ಮನಿಯಾಗ ಇಟ್ಕೊಳ್ಳಲಿಕ್ಕ ಆತನಿಗ ಪರವಾನಗಿ ಕೊಟ್ಟೀರಿ ಅಂದಮ್ಯಾಲ ಆಕಿ ಬ್ಯಾರೆ ಮನಿಯಾಗ ಇರಲಿಕ್ಕೂ ಪರವಾನಗಿ ಕೊಡ್ರಿ. ನ್ಯಾಯ ಗಂಡಿಗೊಂದು ಹೆಣ್ಣಿ ಗೊಂದು ಮಾಡಬಾರ್ದು; ಇಬ್ಬರಿಗೂ ಒಂದೇ ರೀತಿಯ ನ್ಯಾಯ ಕೊಡ ಬೇಕು!..."

ಅವನ ವಿನಂತಿಗೆ ಪಂಚರಿಂದ ಒಮ್ಮತದ ತೀರ್ಪು ಹೊರಬಿತ್ತು.

"ನಮ್ಮ ಮಾಸ್ತರ ಸಾಹೇಬ ಹೇಳ್ಳಿಕ್ಕ ಹತ್ಯಾನ-ಗಂಡುಮಗನಿಗೊಂದು, ಹೆಣ್ಣುಮಗಳಿಗೊಂದು ನ್ಯಾಯ ಮಾಡಬ್ಯಾಡ್ರಿ ಅಂತ. ಇದಕ್ಕ ನಾವೇನು ಸಿಟ್ಟು ಮಾಡ್ಕೊಳಂಗಿಲ್ಲ. ಯದಕ್ಕಂದ್ರ ಅಂಪ ಎಷ್ಟು ಕಲ್ತೋನಾದ್ರು ಸೈತ ನಮ್ಮ ಕುಲದ ರೀತಿ-ರಿವಾಜು ನಮ್ಮ ಹಿರೇರ ಕಟ್ಟು-ಕರಾರು ಆತಗ ಇನ್ನ ತಿಳಿದಿಲ್ಲ. ಹಿಂಗ ಕುಲಾಚಾರ ಬಿಟ್ಟು ಕೆಟ್ಟು ಹೋಗಿರೋ ಮಂದಿ ಭಾಳ ಆಗ್ಯಾರ ಅಂಬೊ ಸುದ್ದೀನೂ ನಾವು ಕೇಳಾಕ ಹತ್ತೇವಿ! ಅಂಥವರಿಗೆಲ್ಲ ನಮ್ಮ ಸೇವಾಲಾಲ ಒಮ್ಯಲ್ಲ ಒಮ್ಮೆ ಶಿಕ್ಷಾ ಕೊಟ್ಟೇ ಕೊಡತಾನ!"

ಮಾಸ್ತರ ಹೇಳೂಹಂಗ ಹೆಣ್ಣು ಮಕ್ಕಳು ಗಂಡುಮಕ್ಕು ಮನುಸ್ಯಾರೇ ಇದ್ರು ಸೈತ ಹೆಣ್ಣುಮಗಳು-ಎಡ, ಗಂಡುಮಗ ಎಂಥಾನೇ ಇರಲಿ ಬಲ. ಇದರ ಸಲುವಾಗಿ ಹೆಣ್ಣು ಮಗಳು ತನ್ನ ಗಂಡನ ಹಿಡಿತದಾಗೇ ಇದ್ದು, ಆತನ ಸೇವಾ ಮಾಡಿಕೊಂಡ್ ಇರಬೇಕಾಗ್ತದ! ಇಷ್ಟಾದ್ರ ಸಂಸಾರ ನೆಟ್ಟಗ ನಡಿಲಿಕ್ಕ ಸಾಧ್ಯ ಅದ.

ಈವತ್ತು ನಾವು ಸೋನಿಬಾಯಿಗ ಆಕಿನ ಇಚ್ಛಾದ ಪ್ರಕಾರ ನ್ಯಾಯ ಕೊಟ್ಟೆವಂದ್ರ, ನಾಳೆ ಊರಾನ ಬ್ಯಾರೆಬ್ಯಾರೆ ಹೆಣ್ಣು ಮಕ್ಕು ಸೈತ ಸಣ್ಣಪುಟ್ಟ ಮಾತಿಗೆಲ್ಲ ಸೆಟಗೊಂಡು 'ನಾನು ಗಂಡನ್ನ ವಲ್ಲೆ' 'ನೀನೂ ಗಂಡನ್ನ ವಲ್ಲೆ' ಅಂತ ಬಾಳು ಮೂರಾಬಟ್ಟೆ ಮಾಡಿಕೊಂಡು, ಬಸವೀರಾಗಿ ಊರಿನ ಮಾನ ಹರಾಜು ಹಾಕ್ತಾರ!

ಆದ ಕಾರಣ ನಮ್ಮಜ್ಜ ಮುತ್ತಜ್ಜೋರು ಮಾಡಿರೋ ರಿವಾಜಿನ ಪ್ರಕಾರ ಸೋನಿಬಾಯಿ ಗಂಡನ ಮನಿಗ ಹೋಗಿ ಬಾಳ್ವೆ ಮಾಡಿಕೊಂಡಿರಬೇಕು. ಹೋಗಲಿಲ್ಲಂದ್ರ ಆಕಿನ ಗಂಡ ಕೊಡೋ ಶಿಕ್ಷಾಕ್ಕ, ಆಕಿನs ಜುಮ್ಮೇದಾರಳಾಗಿರಬೇಕು!" ಯಾರೋ ಪಟಪಟನೆ ಚಪ್ಪಾಳೆ ಇಕ್ಕಿ ಸ್ವಾಗತಿಸಿದರು.

"ಬರೋಬ್ಬರಿ ಮಾತು!" ಕೆಲವು ಸಭಿಕರಿಂದ ಮೆಚ್ಚುಗೆಯ ನುಡಿ ಕೇಳಿ ಬಂದಿತು. ಮಾಸ್ಯಾ ಹೆಮ್ಮೆಯಿಂದ ಚಂದುವಿನತ್ತ ನೋಡಿ ನಸುನಕ್ಕ.

"ನಮ್ಮಾತಿಗ-ಅಂದ್ರ ಪಂಚಾಯ್ತಿ ಕೊಟ್ಟ ನ್ಯಾಯಕ್ಕ ನೀ ಒಪ್ಪಿದಿಯಲ್ಲಾ ತಂಗಿ?" ಸೋನಿಯನ್ನು ಕೇಳಲಾಯಿತು.

"ನಿಮ್ಮ ನ್ಯಾಯ ನೀವು ಮಾಡೀರಿ ಬಿಡ್ರಿ. ಇನ್ನು ಮ್ಯಾಲ ನನ್ನನ್ನ!"

"ನಿಮ್ಮನ್ಸಂದ್ರ?!"

"ಈ ಊರು ಬಿಟ್ಟು ಎಲ್ಲಾನ ಹೋಗಿಬಿಡಬೇಕು ಅನ್ನಿಸಿದ್ರ ಹೊಂಟೋಗ್ತೀನಿ; ಬಾವಿಗ ಹಾರಿ ಜೀವ ಕಳ್ಕೊಬೇಕು ಅನ್ನಿಸಿದ್ರ ಸಾಯ್ತೀನಿ..."

"ಇಷ್ಟು ಹೊರತು ಗಂಡನ ಮನಿಗ ಹೋಗಂಗಿಲ್ಲ?"

"ಪೈಲಿನs ಹೇಳೀನಲ್ರಿ. ಸಾಯಿತೀನಿ ಖರೆ ಹೋಗಂಗಿಲ್ಲಂತ!"

ಮುಖಂಡರು ಗೊಂದಲಕ್ಕೊಳಗಾದವರಂತೆ ಕ್ಷಣ ಕಾಲ ಮೌನವಹಿಸಿದರು.

"ಇಂಥ ಬಗೆಹರಿಯಲಾರದ ವಿಚಾರ ಇತ್ಯರ್ಥ ಮಾಡಲಿಕ್ಕ ನಮ್ಮ ಮರಿಯಮ್ಮದೇವಿ ಅದಾಳಲ್ರಿ!" ಸಭಿಕರ ನಡುವಿದ್ದ ಕಾಶಪ್ಪ ಪರಿಹಾರ ಸೂಚಿಸಿದ.

"ಖರೆ, ಮನ್ಸರ ಕೈಯಾಗ ಆಗಲಾರದ್ದನ್ನ ದೇವಿ ಮಾಡೇ ಮಾಡ್ತಾಳ. ಆಕಿ ಹೆಂಗ್ ಅಪ್ಪಣೆ ಕೊಡ್ತಾಳ-ಹಂಗ್ ನೀವಿಬ್ರು ನಡ್ಕೋಬೇಕು ನೋಡ್ರಪ್ಪ...ಇದಕ್ಕ ನೀ ಏನಂತೀಯಪ್ಪ ಮಾನ್ಯಾ?" ಎಂದು ಮುಖಂಡರು ಪ್ರಶ್ನಿಸಿದಾಗ, ಮಾನ್ಯಾ ಕಾಶಪ್ಪನ ಮೋರೆ ನೋಡಿದ...ನಂತರ "ಹಂಗೇ ಆಗಲೇಳ್ರಿ. ದೇವಿ ಏನಮ್ತಾಳ ಅದರಂಗ ನಡಕೊಳ್ಳಿಕ ನಾ ತಯಾರಿದ್ದೀನಿ!" ಎಂದೊಪ್ಪಿಕೊಂಡ.

"ದೇವಿ ಅಪ್ಪಣೆ ಕೇಳೂದಂದ್ರ ಖಾಲಿ ಪುಗಸಟ್ಟೆ ಆಗ್ತದೇನು!" ಪಂಚಾಯ್ತಿಯವನೊಬ್ಬ ರಾಗವೆಳೆದ.

"ಹಾಂ ಮತ್ತೆ. ಕಡೇಕ ಒಂದಾರ ಮರಿಕೊಟ್ಟು ಎಡೆಮಾಡಿ, ಸಂತೋಷಪಡಿಸಿ ಅಪ್ಪಣೆ ಬೇಡಿದ್ವಂದ್ರ ಆ ತಾಯಿನೂ ಪಿರೀತಿಯಿಂದ ದಾರಿ ತೋರ್ತಾಳ!"

"ಅಷ್ಟೇ ಆಗಲೇಳ್ರಿ." ಒಪ್ಪಿದ ಮಾನ್ಯಾ.

"ಏನವ್ವಾ ಸೋನಿ. ದೇವಿಗ ಅಪ್ಪಣೆ ಬೇಡಲಿಕ್ಕ ಆಗಲಂತಿಯೋ ಬ್ಯಾಡಂತಿಯೋ?"

"ಹೆಂಗಾಸ ಮಾಡ್ರಿ" ಎಂದು ಸೋನಿ ಉದಾಸಳಾಗಿ ಹೇಳಿದಾಗ "ಹಂಗಂದ್ರ ಹ್ಯಾಂಗಾಗ್ತದ? ಆಕಿನ ಸೇವಾಕ್ಕ ನೂರ್-ನೂರೈವತ್ತು ರೂಪೈ ಖರ್ಚು ಬರತೈತಿ. ಅದರಾಗ ನೀ ಅರ್ಧ, ಅಂವ ಅರ್ಧ ಹಾಕ್ಕೋಬೇಕಾಗ ತೈತಿ!..." ಎಂದು ತಾಕೀತು ಮಾಡಲಾಯಿತು.

"ನಾ ಎಲ್ಲಿಂದ ತಂದು ಕೊಡ್ಲಿರೀಯಪ್ಪಾ ಆಸಕೊಂದ್ ರೊಕ್ಕ? ಕೂಲಿ ನಾಲಿ ಮಾಡಿ ನಾಕ್ ದುಡ್ ತರೂವ್ ಒಪ್ಪತ್ತಿನ ಕೂಳಿಗ ಸಾಕಾಗವಲ್ಲು!"

"ನೀ ಕೂಲಿನಾರ ಮಾಡು, ಕಳುವಾರ ಮಾಡು. ಪಂಚಾಯ್ತಿ ಮುಂದ ಅವೆಲ್ಲಾ ಸುಕ್ಕ-ದುಕ್ಕ ಹೇಳ್ಕೊಳೋಹಂಗಿಲ್ಲ!...ದೇವ್ತಿ ಸೇವೆಗೆ ತಲಾಗ ಎಪ್ಪತ್ತೈದು ರೂಪೈ ತಂದು ಈ ಸದ್ದೆ ಇಲ್ಲಿಡಬೇಕು ನೀವಿಬ್ರು. ಇಲ್ಲಾದರ ನೀ ಗಂಡನ ಮನಿಗೆ ಈಗಿಂದೀಗಲೇ ಹೋಗಬೇಕು. ಈವೆರಡು ಮಾತಿಗೂ ಒಲ್ಲೆ ಅಂದಿ-ನಾವು ಊರಿಂದ ಬಹಿಷ್ಕಾರ ಹಾಕಬೇಕಾಗತೈತಿ! ನೀರು-ಬೆಂಕಿ ಸೈತ ನಿನಗ ಬಂಗಾರ ಆಗತಾವ! ವಿಚಾರಮಾಡಿನೋಡು!"

ಸೋನಿಗೆ ಸಿಟ್ಟೂ ಬಂತು; ಜೊತೆಗೆ ಅಳುವೂ ಬಂತು. ಆದರೆ ಅವೆರಡು ಮಾಡಬಾರದೆಂದು ನಿನ್ನೆ ರಾತ್ರಿ ಚಂದು ಆದೇಶ ನೀಡಿದ್ದಾನೆ...ಆತನೇ ಏನೋ ಹೇಳಲೆಂದು ಎದ್ದು ನಿಂತ. ಅಷ್ಟರಲ್ಲಿ ಪವಾರ್ "ಆ ಹೆಣ್ಣು ಮಗಳನ್ನ ಕಾಡಿಸೋದು ಬ್ಯಾಡ. ಆಕಿನ ಪರವಾಗಿ ಇವತ್ತು ನಾನು ಸಭಾಕ್ಕ 75 ರೂಪೈ ರೊಕ್ಕ ಕೊಡತೀನಿ. ಪಂಚಾಯ್ತುರು ತಗೋಬೇಕು" ಎಂದು ಹೇಳಿ ಕಾಳಪ್ಪನನ್ನು ತನ್ನ ಮನೆಗೆ ಕಳುಹಿಸಿ, ಹಣ ತರಿಸಿಕೊಂಡು ಸಭೆಗೆ ಒಪ್ಪಿಸಿದ.

ಪವಾರನ ಈ ಉಪಕಾರವನ್ನು ಸ್ವೀಕರಿಸಬೇಕೋ, ನಿರಾಕರಿಸಬೇಕೋ ತೋಚದಂತಾಗಿ ಸೋನಿ, ಲಚ್ಮಿಯ ಮುಖ ನೋಡಿದಳು. ಸಿಟ್ಟು ಅಸಹನೆ ಅಲ್ಲಿ ಎದ್ದು ಕಾಣುತ್ತಿತ್ತು. ಚಂದುವಿನ ಕಡೆ ನೋಡಿದಳು-ವ್ಯಥೆಯೋ ಹತಾಶೆಯೋ ಯಾವ ಭಾವನೆಯನ್ನೂ ಗುರುತಿಸಲಾಗದೆ ಚಿಂತಿಸುತ್ತ ಕುಳಿತಳು.

ಹರಸಿಂಗ್ ಗೊಣಗಿಕೊಳ್ಳುತ್ತ ತನ್ನ ಮಗನ ಪರವಾಗಿ ರೂಪಾಯಿಗಳನ್ನು ಎಣಿಸಿಕೊಟ್ಟ. ಕೂಡಲೇ ಕಾರ್ಯಾರಂಭವಾಯಿತು. ಒಂದು ಕುರಿ ಎರಡು ಗಡಿಗೆ ಹೆಂಡ ತರಿಸಲಾಯಿತು. ಕುರಿ ಕಡಿದು ಗುಡಿಯ ಮುಂದೆ ಒಲೆ

ಹೂಡಿ ಅಡಿಗೆಗೆ ಇಟ್ಟಿದ್ದಾಯಿತು. ಪ್ರತಿಯೊಬ್ಬ ಸದಸ್ಯನ ಮನೆಯಿಂದಲೂ ಒಂದೊಂದು ಪಾವು ಜೋಳದ ಹಿಟ್ಟು ಸಂಗ್ರಹಿಸಿ, ಒಂದಿಬ್ಬರು ರೊಟ್ಟಿ ತಟ್ಟಲು ಕುಳಿತರು. ಗುಡಿಯ ಪೂಜಾರಿಯಾದ ಕಾರಣ ಕಾಶಪ್ಪನ ಮನೆಗೂ ಒಂದಿಷ್ಟು ಮಾಂಸ ಕಳುಹಿಸಲಾಯಿತು.

ರಾತ್ರಿ 12 ಗಂಟೆ ಸುಮಾರಿಗೆ ಗಂಡಸರ ಅಡಿಗೆ ಮುಗಿದು, ದೇವತೆಗೆ ಎಡೆ ಇಕ್ಕಿ ಪೂಜೆ ಮಾಡಿದ್ದಾಯಿತು. ನಂತರ ಎಲ್ಲರೂ ಊಟಕ್ಕೆ ಕುಳಿತರು. ಅಲ್ಲಿ ಹೆಂಗಸರು ಬರುವಂತಿರಲಿಲ್ಲವಾದ್ದರಿಂದ ಲಚ್ಮಿ-ಸೋನಿ ಮನೆಗೆ ಹೊರಟು ಹೋಗಿದ್ದರು. ಅವರೊಡನೆ ಹೊರಡಲಿದ್ದ ಚಂದುವನ್ನು ಯಾರೋ ಒಬ್ಬರು ತಡೆದು ಊಟಕ್ಕೆ ನಿಲ್ಲುವಂತೆ ಸೂಚಿಸಿದ್ದರಿಂದ, ಅವನು ಅಲ್ಲೀ ಅಂಗಳದ ಮೂಲೆಯಲ್ಲಿ ಕುಳಿತುಕೊಂಡಿದ್ದ.

ಹಿಂದಿನಿಂದ ಯಾರೋ ತನ್ನ ಹೆಗಲಮೇಲೆ ಕೈ ಇಟ್ಟಾಗ ಬೆಚ್ಚಿ ಹಿಂದಿರುಗಿ ನೋಡಿದ-ಹರಸಿಂಗ್ ಬಂದು ನಿಂತಿದ್ದ. "ಏನು ಬೇಕಿತ್ತು?" ಕುಡಿದು ಮತ್ತನಾಗಿದ್ದ ಅವನನ್ನು ಕಂಡು ತುಸು ಒರಟಾಗಿಯೇ ಕೇಳಿದ ಚಂದು.

"ಏನ್ ಬ್ಯಾಡ ಚಂದ್ರಾಮ್ ಎಷ್ಟೊಂದು ದೊಡ್ಡಾತ ಆಗೀಯಲ್ಲ ಅಂತ ಸಂತೋಷ ಆತ್ತು...ಸನೇಹದಿಂದ ನೋಡಬೇಕು ನನ್ನ ಮಗನ್ನ ಅನ್ನಿಸ್ತು! ಬಂದೆ..." 'ಸರಿ ನೋಡಿಕೊ' ಎನ್ನುವಂತೆ ಚಂದು ಸುಮ್ಮನೆ ಕುಳಿತ.

"ನನ ಮ್ಯಾಲ ಭಾಳ ಸಿಟ್ಟದ ನಿನ್ಗ; ಅಲ್ಲೇನು ಮಗ?...ನೀ ಇನ್ನು ನನಗ ಯಾವಾಗ್ಲೂ 'ಅಪ್ಪ' ಅನ್ನಂಗಿಲ್ಲ!..." ಎನ್ನುತ್ತ ಅವನು ದೊಡ್ಡ ದನಿಯಲ್ಲಿ ಮಕ್ಕಳಂತೆ ಅಳತೊಡಗಿದ. "ನಿಮ್ಮವ್ವ ಚಲೋ ಹೆಣ್ಣು ಮಗ ಅಂಬೋದು ಹಿಂದಾಗಡಿ ತಿಳಿತೋ ಮಗ!...ಮಂದಿ ಮಾತು ಕೇಳಿ ಹಾದರಗಿತ್ತಿ ಅಂತ ತಿಳ್ಕೊಂಡು ನಾ ಕೆಟ್ಟೆ ನೋಡು...!"

ಕುಡಿದ ಮತ್ತು ಇಳಿದ ನಂತರವೂ ಮುದುಕ ಇದೇ ಮಾತಾಡಬಹುದೇ? ಎಂದು ಚಂದು ಯೋಚಿಸುತ್ತಿದ್ದ.

"ನಿನ್ನ ಅತ್ತಿ ಅಂಬೋ ಹಾದರಗಿತ್ತಿ ಎಷ್ಟು ಕತಿ ಮಾಡಿದಾಳ

ನೋಡಿದ್ಯಾ?" ಚಂದು ಮುದುಕನ ಮುಖದಲ್ಲಿ ಏನನ್ನೋ ಹುಡುಕಾಡಿ ಸೋತವನಂತೆ ದೃಷ್ಟಿ ತಗ್ಗಿಸಿದ.

"ಈ ಮಾನ್ಯಾಗ ಎಷ್ಟೆಷ್ಟೋ ತಿಳಿಸಿ ಹೇಳ್ದೆ...ಆ ರಂಡಿ ಏನಾರ ಮಾಡ್ಕೊಂಡ್ ಹಾಳಾಗೊಲ್ಲಲ್ಯಾಕ-ಆಕೆನ ಸುದ್ದಿ ಬಿಟ್ಟು ಬಿಡು ಅಂದಕೇಸಿ... ಮಗ ಕೇಳೂಲ್ಲ!...ನೂರ್ನೂರ್ ರೂಪ್ಯಾ ಖಾಲಿ ಪುಕ್ಕಟೆ ದಂಡ ಬಿದ್ವು!"

ಇದ್ದಕ್ಕಿದ್ದಂತೆಯೇ ಗಂಡಸರ ನಡುವೆ ಗಲಾಟೆ ಪ್ರಾರಂಭವಾಯಿತು. "ಮಗನ, ನಿನ್ನೊಬ್ಬನಿಗs ಏನು ಹೆಂಡ್ತಿ-ಮಕ್ಕಳ ಮ್ಯಾಲ ಪಿರೀತಿ ಇರೋದು? ನಮಗಿಲ್ಲ ಇಲ್ಲೇನು? ಪಂಚಾಯ್ತಿ ಸಾರು ನೀ ಹೆಂಗ್ ತುಡುಗು ಮಾಡಿ ಮನಿಗ ಕಳ್ಸಿ ಕೊಟ್ಟೆ ಅದನ್ನ ಮೊದಲು ಹೇಳು!" ಬಡ ಪೀರಪ್ಪನ ಮೇಲೆ ಎಲ್ಲರೂ ಮುಗಿಬಿದ್ದರು.

ಅವರೆಲ್ಲಾ ಕುಡಿತದಲ್ಲಿ ಮಾತುಕತೆಯಲ್ಲಿ ತೊಡಗಿದ್ದರಿಂದ ತನ್ನನ್ನು ಗಮನಿಸಲಾರರೆಂದು ಭಾವಿಸಿದ ಪೀರಪ್ಪ, ಕುದಿಯುತ್ತಿದ್ದ ಸಾರಿನ ಗಡಿಗೆ ಯಿಂದ ನಾಲ್ಕು ಸೌಟು ಸಾರು ಕದ್ದು ತನ್ನ ಪುಟ್ಟ ಮಗನ ಕೈಲಿ ಮನೆಗೆ ಕಳು ಹಿಸಿಕೊಟ್ಟಿದ್ದ.

"ಖಾರ ಇಲ್ಲ, ಹಿಂಡಿ ಇಲ್ಲ, ಅವ್ವ ಬರೀ ರೊಟ್ಟಿ ತಿನ್ನಾಕ ಹತ್ಯಾಳ ಅಂತ ನನ್ಮಗ ಬಂದು ಕೇಳ್ದ. ಮನಸ್ಸು ತಡೀಲಾರ್ದೆ ಒಂದೆಲ್ಡು ಸೌಟು ಕೊಟ್ಟುಕಳಿಸಿಬಿಟ್ಟೆ! ನಿಮ್ಮ ಕಾಲು ಬೀಳ್ತೀನಿ ಬಡವನ ತಪ್ಪ ಹೊಟ್ಯಾಗ ಹಾಕ್ಕೊಂಡ್ ಕ್ಷಮಾ ಮಾಡ್ರಿ!" ಪೀರಪ್ಪ ಮುಖಂಡರ ಕಾಲು ಹಿಡಿಯುತ್ತಿದ್ದ.

"ಅದೆಲ್ಲಾ ಆಗೂದಿಲ್ಲ...ನನ್ನ ಮನಿಯಾಗ ಬಂದು ನೋಡುಬಾ. ನನ್ನ ಹೆಂಡ್ರು-ಮಕ್ಳು ಸೈತ ಬರೇ ರೊಟ್ಟಿನs ಉಂಬಾಕ ಹತ್ಯಾರ. ಹಿಂಡಿಲ್ಲ, ಕಾರಿಲ್ಲ, ಒಂದ್ ಹಳ್ಳು ಉಪ್ಪಿಟಕೊಂಡು ತಿಮ್ತಾರ...ಹಂಗಾದ್ರ ನಾನೂ ತುಡುಗು ಮಾಡಬೇಕೇನು?" ಜೋಪಡಿಯ ದುರ್ಗ ಜಕ್ಕಿಸಿ ಕೇಳ ಹತ್ತಿದ.

"ನಿಮ್ಮ ಮನಿಗುಳಾಗ ಹಿಂದಿ ಅಷ್ಟೇ ಇಲ್ಲ; ರೊಟ್ಟಿ ಉಂಬಾಕ ಹತ್ಯಾರ ಪುಣವಂತ್ರು ನೀವು. ನನ್ಮನಿಯಾಗ ಇವತ್ತು ರೊಟ್ಟಿನೂ ಮಾಡಿಲ್ಲ. ಹಿಟ್ಟಿರ

ಬಾರದಕ್ಕ ನೀರು ಕುಡ್ದು ಮಕ್ಕೊಂಡಾರ ನಸ್ಮನಿ ಮಂದಿ. ಅವೆಲ್ಲಾ ಇಲ್ಲಿ ಹೇಳಿ ಏನು ಉಪಯೋಗ. ಬರ್ರಿ ಉಂಬಾಕ ಹೊಟ್ಟೆ ಹಸೀತಾ ಐತಿ!" ಎಂದು ದೇವಲ್ಯಾ ಎಲ್ಲರನ್ನು ಊಟಕ್ಕೆ ಆಹ್ವಾನಿಸಿದ.

"ನಿಂದ್ರೊ ದೇವಣ್ಣ ಉಣ್ಣಾಮಂತ. ಮೊದ್ಲು ಈ ಕಳ್ಳ ನನ್ಮಗನ ನ್ಯಾಯ ಬಗೆಹರೀಲಿ!" ಎಂದು ಎಲ್ಲರೂ ಗುಡಿ ಅಂಗಳದಲ್ಲಿ ಕುಕ್ಕರಗಾಲಲ್ಲಿ ಕುಳಿತು ತುರ್ತು ಪಂಚಾಯ್ತಿ ಶುರುಮಾಡಿದರು.

ಇದೆಲ್ಲವನ್ನು ಕಂಡ ಚಂದು "ಬರೆ ಗಂಡು ಮಕ್ಳೇ ಉಣ್ಣಬೇಕಂತ ಯಾವ ರೂಲ್ಸು ಅದ? ನಿಮ್ಮ ನಿಮ್ಮ ಹೆಂಗಸರು ಮಕ್ಕಳನ್ನ ಕೂಡ ಕರೆದು ಬಿಡ್ರಿ. ಅವರೂ ಮಾಡ್ಲಿ" ಎಂದು ಸಲಹೆ ಮಾಡಿದ.

"ಹೆಣ್ಣುಮಕ್ಕಳನ್ನ ಇಲ್ಲಿಗ ಕರಿಯಾದ! ಭೇಷ್ ಹೇಳ್ತಿದಿಬಿಡು ಮಾಸ್ತರ. ಊರವರನ್ನೆಲ್ಲ ಕರೆಯೋದು ಒತ್ತಟ್ಟಿಗಿರಲಿ, ಬರೆ ಹತ್ತು ಮಂದ್ಗಿ ಕರದು ನೋಡು. ತಂತಮ್ಮ ಮಕ್ಕಳ ಕಟಿಕೊಂಡು ಹೊಡಿಯಾಕ ಕುಂತರಂದ್ರ, ಕಡೇಕ ಒಂದು ತುಕಡಿ ರೊಟ್ಟಿ, ಅರ್ಧಸೌಟು ಸಾರು ಉಳ್ಯಾರಂಗಿಲ್ಲ ಇಲ್ಲಿ!" ಎಂದು ಅವನ ಮಾತನ್ನು ತಳ್ಳಿ ಹಾಕಲಾಯಿತು.

ಪೀರ ಸಾರು ಕಳವು ಮಾಡಿದ ತಪ್ಪಿಗೆ, ಪಂಚಾಯ್ತಿಗೆ 50 ರೂಪಾಯಿ ಜುಲ್ಮಾನೆ ಕೊಡಬೇಕು. ಇಲ್ಲವಾದರೆ ಬರುವ ಹುಣ್ಣಿಮೆ ದಿನ ಎರಡು ಹುಂಜ, ಒಂದು ಗಡಿಗೆ ಹೆಂಡವನ್ನೂ 'ದೇವ್ತಿಗೆ ಒಪ್ಪಿಸ'ಬೇಕೆಂದು ತೀರ್ಮಾನ ವಾಯಿತು.

ನಂತರ ಎಲ್ಲರೂ ಊಟಕ್ಕೆ ಕುಳಿತರು. ಮುಖಂಡರಿಗೆ ಗೌರವ ಸೂಚಿಸಲು ಎಂದಿನಂತೆ ಅವರೆಲ್ಲರಿಗೂ ಒಂದೊಂದು ಗುಂಡಿ ಎಲುಬನ್ನು ಬಡಿಸಲಾಯಿತು. ತನ್ನ ತಟ್ಟೆಗೆ ಅದು ಬಂದೇ ಇಲ್ಲವೆಂದೂ, ಈ ರೀತಿ ತನ್ನನ್ನು ಅಪಮಾನಿಸಿದ್ದರಿಂದ, ತಾನು ಊಟ ಮಾಡಲೊಲ್ಲೆನೆಂದೂ, ಪವಲ್ಯಾ ಎದ್ದು ಹೊರಟಾಗ ಉಳಿದವರೆಲ್ಲರೂ ಬಲವಂತದಿಂದ ಆತನ ಕೈಹಿಡಿದು ಕೂರಿಸಬೇಕಾಯಿತು.

ಗಡಿಗೆ ತಳ ಗೋರಾಡಿ ಗುಂಡಿ ಎಲುಬು ಹುಡುಕಾಡಿದ್ದಾಯಿತು.

ಅದು ಕಳುವಾಗಿರುವುದು ಖಚಿತವಾದಾಗ, ಪರಸ್ಪರ ನಿಂದೆ ಬೈದಾಟ ಸುರು ವಾಯಿತು. "ಎಲ್ಡ್ ಸೌಟು ನೀರುಸಾರು ತೆಗೆದುಕೊಂಡಿವಕ್ಕ ನನಗ 50 ರೂಪ್ಯಾ ದಂಡ ಹಾಕಿದ್ರಿ. ಈಗ ಗುಂಡಿ ಎಲುಬನ್ನೇ ಕದ್ದಾರಲ್ಲ ಇವಕ್ಕೇ ನಂತೀರಿ?" ಎಂದು ಪೀರ ಪ್ರಶ್ನಿಸತೊಡಗಿದ.

"ಮಗನೇ, ಅದನ್ನ ನೀನೇ ಯಾಕ ಕದ್ದಿರಬಾರ್ದು?" ಎಂದು ಕೆಲವರು ಆತನ ಮೇಲೇ ತಿರುಗಿಬಿದ್ದು ಜಗಳವಾಡಿದರು. ಪವಲ್ಯಾನಿಗೆ ಪರಿಹಾರಾರ್ಥ ವಾಗಿ ಒಂದು ಸೌಟು ಹೆಚ್ಚಿನ ಬಾಡನ್ನು ಬಡಿಸುವುದರೊಂದಿಗೆ ಅಂದಿನ ಸಮಸ್ಯೆ ತಾತ್ಕಾಲಿಕವಾಗಿ ಪರಿಹಾರ ಕಂಡಿತು.

ದೇವರ ಸೇವೆಯ ಹೆಸರಿನಲ್ಲಿ ಭರ್ಜರಿ ಭೋಜನಕ್ಕೆ ಅವಕಾಶ ಮಾಡಿ ಕೊಂಡಿದ್ದ ಕಾಶಪ್ಪ ಈಗ ಭಾರಿ ಪೇಚಿಗೆ ಸಿಕ್ಕಿಕೊಂಡಿದ್ದ. ಗುಡಿಯ ಮುಂದ ಊಟಕ್ಕೆ ಕೂರುವ ಮೊದಲೇ ಮೋತಿ ಪವಾರ್ ಐವತ್ತು ರೂಪಾಯಿಗಳನ್ನು ತಂದು ಅವನ ಕೈಗಿಕ್ಕಿದ. "ನಾಳೆ ದೇವಿಗ್ತ ಅಪ್ಪಣೆ ಕೊಡುವಾಗ ಸೋನಿ ಇಚ್ಛಾ ನೆರವೇರಬೇಕು ನೋಡು!" ಎಂದು ಅಧಿಕಾರವಾಣಿಯುಲ್ಲಿ ನುಡಿದಾಗ "ಯದಕ್ಕಣ್ಣಾ?" ಎಂದು ವಿಸ್ಮಯದಿಂದ ಪ್ರಶ್ನಿಸಿದ ಕಾಶಪ್ಪ.

"ಯದಕ್ಕಂತ ಕೇಳ್ತಿದ್ದಿಯಲ್ಲಲೇ ಮತ್ತ? ಗೊತ್ತಿಲ್ಲೇನು ಆಕಿನ 75 ರೂಪ್ಯಾ ಖರ್ಚು ನಾ ಹಾಕ್ಕೊಂಡಿದ್ದು?... ಅಷ್ಟೆಲ್ಲಾ ಮಾಡಿದ ಮ್ಯಾಲೂ ಆಕೆ ಗಂಡನ ಮನಿಗ ಹೋಗಿ ಸೇರ್ಕೊಂಡಳಂದ್ರ ನನ್ನಾಸಿ ಹ್ಯಾಂಗ ಕೈಗೂಡ ತೈತಿ? ಒಬ್ಬಕಿನs ಇದ್ದಳಂದ್ರ ಒಮ್ಮೆಯಲ್ಲ ಒಮ್ಮೆ ಒಲ್ದಾಳುಬಿಡು!" ಪವಾ ರನ ಮಾತು ಕೇಳಿ ಕಾಶಪ್ಪನ ಎದೆಯೊಡೆಯಿತು! ಮಾನ್ಯಾ 'ದೇವಿ ಸೇವೆ'ಗೆ ಒಪ್ಪಿಕೊಳ್ಳುವ ಮೊದಲು ಕಣ್ಸನ್ನೆಯಿಂದ ತನ್ನ ಒಪ್ಪಿಗೆ ಪಡೆದಿದ್ದಾನೆ. ಆತನ ಇಚ್ಛೆಗೆ ಸರಿಯಾಗಿ 'ಅಪ್ಪಣೆ' ಕೊಡಿಸಿದರಾಯಿತೆಂದು ತಾನು ಖುಷಿಯಿಂದ ಉಂಡು ತಿಂದು, ಆಣೆ ಪ್ರಮಾಣ ಸಹಿತವಾಗಿ ವಚನ ಕೊಟ್ಟಾಗಿದೆ! "ಆ ಹೊತ್ತಿನಾಗೇನಾರ ಕೈ ಕೊಟ್ಟೀ-ನಿನ್ನ ಕತಿ ಅಲ್ಲಿಗ ಮುಗೀತು ಅಂತ ತಿಳ್ಕೊ- ಈವತ್ತು ನೀ ಏನು ಊಟ ಉಂಡ್ರೂ ಇದೇ ಕಡೆ ಆಗತೈತಿ!" ಎಂದು ಬೇರೆ ಹೆದರಿಸಿದ್ದಾನೆ!... ಈಗೇನು ಮಾಡುವುದು" ಕಾಶಪ್ಪ ಅಪಲಾರದೆ, ಅನುಭವಿ ಸಲಾರದೆ ಒದ್ದಾಡಿದ.

“ಯದಕ್ಕಲೇ ಕಾಶ್ಯ ಹಿಂದ ಮುಂದ ನೋಡಾಕ ಹತ್ತಿ?” ಪವಾರ ಸಂದೇಹದಿಂದ ಪ್ರಶ್ನಿಸಿದ.

“ನನ್ನ ಕೈಯಾಗ ಏನೈತಣ್ಣಾ?...ದೇವ್ತಿ ಹೆಂಗಂಮ್ತಾಳೋ ಹಂಗೆ!...”

ಪವಾರನ ಕಣ್ಣು ಕೆಂಪಾದವು. ಆತ ಕಾಶ್ಯನ ಕೊರಳುಪಟ್ಟಿಯನ್ನು ಹಿಡಿದು ಜಗ್ಗುತ್ತ-“ಲೇ ಕಾಶ್ಯಾ ನನ್ಮಗನ! ಇಂಥ ನಾಟ್ಕದ ಮಾತ್ನೆಲ್ಲ ನನ ಮುಂದಾಡಲಿಕ್ಕ ಬರಬ್ಯಾಡ. ಯಾವಾಕಿನಾರ ಸೂಳೆ ಮುಂದ ಹೋಗಿ ಹೇಳು-ಒಪ್ಕೊಂತಾಳ. ನಿನ ಪೂಜಾರ್ಕಿ ನಿನಮ್ಯಾಲ ಬರೋ ದೇವ್ತಿ—ಇದರೊಳಗಿಂದೆಲ್ಲಾ ವಿಚಾರ ನನಗೊತ್ತಿಲ್ಲಂತ ತಿಳ್ದೀಯೇನಲೇ ? ನನಗೆ ಮೋಸ ಮಾಡಿ ನೀ ಅದೆಂಗ್ ಜೀವಸಹಿತ ಉಳಿದಿರ್ತಿದಿ ನೋಡಾಮು ಹೋಗಲೇ!” ಎಂದು ಗರ್ಜಿಸಿದಾಗ, ಕಾಶಪ್ಪ ಥರಥರನೆ ಕಂಪಿಸುತ್ತ ಕೈಜೋಡಿಸಿದ.

“ನಾ ಹಂಗೇ ಸುಳ್ಳೇ ಒಂದ್ಮಾತು ಹೇಳಿದ್ದಕ್ಕ ಎಷ್ಟು ಸಿಟ್ಟಿಗೇಳ್ತಿಯಲ್ಲಣ್ಣಾ! ಇಷ್ಟೆಲ್ಲಾ ನಿನ್ನ ಕಡಿಯಿಂದ ತಗೊಂಡ್‌ಕೇಸಿ ಮತ್ತ ಮೋಸ ಮಾಡಲಿಕ್ಕ ಬರ್ತದಾ? ಅಷ್ಟೂ ನಿಯತ್ತಿಲ್ದ ನನ್ಮಗ ಅಂತ ತಿಳಿದಿಯೇನು ನನ್ನನ್ನ ?!” ಹಲ್ಲು ಗಿಂಜಿದ.

“ಹಾಂ, ಹಂಗ ದಾರಿಗ ಬಾರೋ ಯಪ್ಪ. ಸುಳ್ಳೇ ನನ್ನ ಸಿಟ್ಟಿಗೆಬ್ಬಿಸಿದಿ ನೋಡು” ಎಂದು ಪವಾರ ಖುಷಿಗೊಂಡು, ಕಾಶಪ್ಪನ ಕೈಗೆ ಒಂದು ಬೀಡಿಯ ಕಟ್ಟನ್ನಿತ್ತು, ‘ಅಪ್ಪಣೆ’ಯ ಬಗ್ಗೆ ಮತ್ತೊಮ್ಮೆ ಎಚ್ಚರಿಸಿ ಹೊರಟುಹೋಗಿದ್ದ.

ಬೆಳಕು ಹರಿಯಲು ಇನ್ನು ತುಸುವೇ ಸಮಯವಿತ್ತು. ಕಾಶಪ್ಪನ ಮೈ ನಡುಕ ಹೆಚ್ಚುತ್ತಲೇ ಇತ್ತು. ಮಾನ್ಯಾ-ಪವಾರ ಕೂಡಿ ಹಾಕಿಸಿದ್ದ ‘ದೇವಿ ಪ್ರಸಾದ’ ಹೊಟ್ಟೆಯಲ್ಲಿ ವಿಷವಾಗಿ ಕಲಸಿದಂತೆ ಭಾಸವಾಗುತ್ತಿತ್ತು. ಪವಾರ ಕೊಟ್ಟ ಬೀಡಿಯ ಕಟ್ಟು, ನೋಟುಗಳು ಕಿಸೆಯೊಳಗಿನ ಶೂಲವಾಗಿ ಪರಿಣಮಿಸಿದವು. ಮಲಗಿ ನಿದ್ದೆ ಮಾಡಲು ಪ್ರಯತ್ನಿಸಿದ. ಬೆಂಕಿಯ ಮೇಲೆ ಮಲಗಿದ ಅನುಭವವಾಗಿ ಎದ್ದು ಕುಳಿತ, ಮತ್ತೆ ಮಲಗಿ ಹೊರಳಾಡಿದ. ತಲೆಗೇನೋ ಉಪಾಯ ಹೊಳೆದಂತಾಗಿ ಚಂದುವಿನ ಮನೆಯತ್ತ ಓಡಿದ.

ಗುಡಿಯ ಬಳಿ ನಡೆದ ಜಗಳ, ಜುಲ್ಮಾನೆ, ನ್ಯಾಯ ತೀರ್ಮಾನದ ವೈಖರಿ-ಎಲ್ಲದರ ಬಗ್ಗೆ ಗಾಢವಾಗಿ ಆಲೋಚಿಸುತ್ತ ಮಲಗಿದ್ದ ಚಂದುವಿಗೆ ಇನ್ನು ನಿದ್ದೆಹತ್ತಿರಲಿಲ್ಲ. ಹೊರಗಿನಿಂದ "ಚಂದಪ್ಪ" ಎಂಬ ಕೂಗು ಕೇಳಿಸಿ ದೊಡನೆ ದಿಗ್ಗನೆ ಎದ್ದು ತಟ್ಟಿಸರಿಸಿ ನೋಡಿದ ಕೂಡಲೇ ಕಾಶಪ್ಪ ಉದ್ದಕ್ಕೆ ಬಿದ್ದು ತನ್ನೆರಡು ಕೈಗಳಿಂದಲೂ ಅವನ ಕಾಲು ಕಟ್ಟಿಕೊಂಡು "ಚಂದ್ರಪ್ಪ ಇವತ್ತು ನನ್ನ ಜೀವ ಉಳ್ಸೋದು ನಿನ್ನ ಕೈಯಾಗೈತಿ!" ಎಂದ.

ಚಂದು ಕಾಲು ಬಿಡಿಸಿ, ಎದುರಿಗೆ ಕೂರಿಸಿಕೊಂಡು "ಏನು ವಿಷಯ ಎಂದು ಕೇಳಿದ. ಕಾಶಪ್ಪ ನಡೆದುದೆಲ್ಲವನ್ನು ಸಾದ್ಯಂತವಾಗಿ ವಿವರಿಸಿ "ನನ್ನ ತಪ್ಪನ್ನೆಲ್ಲ ನಿನ ಹೊಟ್ಟಿಯಾಗ ಹಾಕ್ಕೊಂಡು ಹೆಂಗಾರ ಮಾಡಿ ಇದೊಂದು ಸರ್ತಿ ನನ್ನ ಉಳಿಸಿಬಿಡು ಚಂದಪ್ಪ! ಇನ್ನೊಮ್ಮೆ ಇಂಥ ಕಾರ ಭಾರಕ್ಕೆಲ್ಲ ಕೈಹಚ್ಚಂಗಿಲ್ಲ!" ಎಂದು ಗೋಗರೆದ.

ಹಳ್ಳಿಯ ಸುಧಾರಣೆಯ ಬಗ್ಗೆ ಕನಸು ಕಾಣುತ್ತಿರುವ ತನಗೆ ಕಾಲ್ತೊಡ ಕಾಗಿ ಪರಿಣಮಿಸಿರುವ ಈ ಪವಾರ, ಮಾನ್ಯಾರಂಥ ಕೊಬ್ಬಿದ ಕುಳಗಳನ್ನು ನಿವಾರಣೆ ಮಾಡಿಕೊಳ್ಳುವುದಾದರೂ ಹೇಗೆ?...ಬೆಂಕಿಯನ್ನು ಬೆಂಕಿಯಿಂದಲೇ ಆರಿಸಲು ಯತ್ನಿಸುವುದು ಬೇಡ, ನೀರು ಹನಿಸಿ ನೋಡುವುದೊಳಿತು-ಎಂದೆಲ್ಲಾ ಯೋಚಿಸಿದ ಚಂದು "ನನ್ನ ಕೈಲಾದ ಪ್ರಯತ್ನ ಮಾಡ್ತೀನಿ, ನೀ ಹೋಗು ಕಾಶಪ್ಪ" ಎಂದ.

"ಏನ್ ಪ್ರಯತ್ನ ಚಂದಪ್ಪ?" ಕಾಶಪ್ಪ ನಂಬಿಕೆ ಸಾಲದೆ ಕೇಳಿದ."

"ಬೆಳಕು ಹರಿದಾಗ ನಿನಗ ಗೊತ್ತಾಗತೈತಿ."

"ಅದೆಲ್ಲಾರ ನಡೀಲಿಲ್ಲಂದ್ರ ನನ್ಗತಿ?"

"ಬ್ಯಾರೆದೊಂದು ಪ್ರಯತ್ನ ಮಾಡೋದು ನೀ ಹೋಗು." ಎಂದಾಗ ಮುಂದಡಿ ಇಟ್ಟ ಕಾಶಪ್ಪ ಮತ್ತೇನೋ ನೆನಸಿಕೊಂಡು ತಗ್ಗಿದ ದನಿಯಲ್ಲಿ "ಚಂದ್ರಪ್ಪ, ನಾ ಈಗೇನು ನಿನಬಲ್ಲಿ ಹೇಳೀನಿ ಸುದ್ದಿ, ಅದು ಯಾರಿಗೂ ಗೊತ್ತಾಗಬಾರ್ದು. ಗೊತ್ತಾತಂದ್ರ ನನ್ನ ಮರ್ವಾದಿ ಹೋಗತೈತಿ!" ಎಂದ. ಚಂದುವಿಗೆ ನಗು ಬಂತು. "ನಿನ ಮರ್ವಾದಿ ಅಷ್ಟು ಸುಲಭದಾಗ ಹೋಗೋ ವಂಥದ್ದಲ್ಲ! ಕಾಳಜಿ ಮಾಡಬ್ಯಾಡ ಹೋಗು." ಎಂದು ಆತನನ್ನು ಕಳುಹಿಸಿ

ಕೊಟ್ಟು ತಾನು ಮಲಗಿಕೊಂಡ. ರಾತ್ರಿಯೆಲ್ಲಾ ನಿದ್ದೆ ಇಲ್ಲದೆ ಕಣ್ಣುರಿಯು ತ್ತಿದ್ದುವಾದರೂ, ನಿದ್ದೆ ಮಾಡಲು ಸಾಧ್ಯವಾಗಲಿಲ್ಲ.

ತಟ್ಟಿಯಿಂದ ಸೂರ್ಯನ ಎಳೆಗಿರಣ ತೂರಿ ಬಂದಾಗ, ಹಾಸಿಗೆಯಿಂದ ಎದ್ದು ಮುಖ ತೊಳೆದುಕೊಂಡ. ತನ್ನ ಶಿಷ್ಯನೊಬ್ಬ ಕೊಟ್ಟುಹೋದ ಆಡಿನ ಹಾಲಿನಿಂದ ಒಂದ್ ಕಪ್ ಚಹ ಮಾಡಿ ಕುಡಿದು, ರಾತ್ರಿ ನಿರ್ಧರಿಸಿದಂತ ಮಾನ್ಯಾನ ಮನೆಗೆ ಹೋದ.

ಚಂದು ತಮ್ಮನೆಂದು ತಿಳಿದ ನಂತರವೂ ತಂದೆ-ಮಗನಿಗೆ ಆತನ ಬಗ್ಗೆ ವಿಶೇಷ ಪ್ರೀತಿ ಅಭಿಮಾನವೇನೂ ಹುಟ್ಟಿರಲಿಲ್ಲವಾದ್ದರಿಂದ, ಉತ್ಸಾಹದ ಸ್ವಾಗತವೇನೂ ದೊರಕಲಿಲ್ಲ. ಹರಸಿಂಗ್ ಕುಡಿದಿರಲಿಲ್ಲವಾದ್ದರಿಂದ ಮಾತಾಡಿಸುವುದರಲ್ಲಿ ಆಸಕ್ತಿ ಕಳೆದುಕೊಂಡಿದ್ದ.

"ಕೂತ್ಕೋ ಬಾ. ಅಪ್ಪಗ 'ಅಪ್ಪ' ಅನ್ನಲಾರದ ದೊಡ್ಡ ಮನ್ಸ-ನಮ್ಮನಿತಾನ ಬಂದು ಬಿಟ್ಟೀಯಲ್ಲ!" ಮಾನ್ಯಾ ಮೂದಲಿಕೆಯೊಡನೆ ಕರೆದಾಗ, ಚಂದು ನಡುಮನೆಯಲ್ಲಿ ಹಾಕಲಾಗಿದ್ದ ಒಂದು ಕುರ್ಚಿಯಲ್ಲಿ ಕುಳಿತುಕೊಂಡ. ಬಹುಶಃ ಈ ಊರಿನಲ್ಲಿ ಕುರ್ಚಿ ಇಟ್ಟಿರುವುದು ಇದೊಂದೇ ಮನೆಯಲ್ಲಿ ಎಂದುಕೊಂಡ. ಮನೆತುಂಬ ಒಮ್ಮೆ ಕಣ್ಣಾಡಿಸಿದ. ತಾನು ಚಿಕ್ಕವನಿದ್ದಾಗ ಹೇಗಿತ್ತೋ ಈಗಲೂ ಅದೇ ಸ್ಥಿತಿಯಲ್ಲಿದೆ ಈ ಮನೆ! ಎಂದುಕೊಂಡ. ಅಡಿಗೆಮನೆಯಲ್ಲಿ ತನ್ನ ತಾಯಿಯ ಬದಲಾಗಿ ಬೇರೊಬ್ಬ ಹೆಂಗಸು ಬಂದಿದ್ದಾಳೆ. ನಡುಮನೆಯಲ್ಲಿ ಇದೊಂದು ಕುರ್ಚಿ. . .

ರಬ್ಬುರಬ್ಬಾದ ಕೆಂಪು ಹಳದಿ ಪಟ್ಟಿಯ ಅಂಗಿತೊಟ್ಟು, ಧೋತ್ರ ಉಟ್ಟು-ಮಾನ್ಯಾ ಎಲ್ಲಿಯೋ ಹೊರಡುವ ತಯಾರಿ ನಡೆಸುತ್ತಿರುವಂತೆ ಕಂಡು ಬಂದಾಗ, ಚಂದು ಕೇಳಿದ-"ನಿನಗೆ ಸಮಯ ಇದ್ರೆ ಒಂದು ವಿಚಾರ ಮಾತಾಡ ಬೇಕಂತ ಬಂದೆ—"

"ಇರೋ ಟೈಮ್‌ನೊಳಗೇ ಹೇಳು ಏನದು?" ತಾತ್ಸಾರದಿಂದ ನುಡಿದ.

''ಈ ಹಳ್ಳಿ ಸುಧಾರಣೆ ಕೆಲಸದಲ್ಲಿ ನೀನೂ ಭಾಗವಹಿಸಬೇಕು ಅಂತ ಕೇಳಿಕೊಳ್ಳಲಿಕ್ಕ ಬಂದೀನಿ.''

''ಹಂಗಂದ್ರ?'' ಮಾನ್ಯಾ ಅರ್ಥವಾಗದೆ ಕೇಳಿದ.

"ನೀ ಹೆಂಗೂ ಅಕ್ಷರ ಕಲಿತವ ಇದ್ದೀ. ರಾತ್ರಿ ಹೊತ್ತು ಒಂದ್ ತಾಸು ಇಲ್ಲೇ ವಯಸ್ಕ ಮಂದಿಗ ಅಕ್ಷರ ಕಲಿಸಿಕೊಡು. ಸರ್ಕಾರದಿಂದ ಇಂದಿಷ್ಟು ಗೌರವಧನ ಅಂತ ನಿನಗೂ ಬರತೈತಿ! ಕಲಿಸಲಿಕ್ಕೆ ಮಾಸ್ತರರು ನೇಮಕ ಆಗುವರೆಗೂ ಮಾಡು ಸಾಕು...ಮುಂದ ನಿನ್ನ ಮನ್ಸು."

"ನೀ ಈ ಊರು ಬಿಟ್ಟು ಹೊಂಟೀ ಏನು ?" ವ್ಯಂಗ್ಯ ಬೆರೆಸಿ ಕೇಳಿದ ಮಾನ್ಯಾ.

"ಇಲ್ಲ ನಾ ಮಕ್ಕಳ ಶಾಲಿ ನೋಡಿಕೊಳ್ತೀನಿ. ರೈತ ಸಂಘ, ಮಹಿಳೆಯರ ಸಂಘ ಇವನ್ನೆಲ್ಲ ಮಾಡೋ ಪ್ರಯತ್ನ ನಡೆಸೀನಿ. ಕಛೇರಿಗ, ಪ್ಯಾಟಿಗೆ ಓಡಾಡಬೇಕಾಗತೈತಿ. ಒಬ್ಬಾಂವನೇ ಎಲ್ಲಾ ಮಾಡಲಿಕ್ಕೆ ಸಾಧ್ಯ ಆಗೊದಿಲ್ಲ. ಈ ಊರಾಗ ನನಗ ಸಹಾಯ ಮಾಡೋ ಅಂಥ ವಿದ್ಯಾವಂತ್ರು ಸದ್ಯಕ್ಕಂತ್ರು ಯಾರೂ ಇಲ್ಲ. ಇರೋನು ನೀ ಒಬ್ಬ. ಅದಕ್ಕೆ ನೀನು ಸಹಕಾರ ಕೊಡು ಅಂತಿರೋದು!"

"ಆ ಸುಡುಗಾಡು ದಂಧ ಮಾಡ್ಕೊಂಡ ಕೂಡಾಕ ನಿನ್ನಂಗ ನನಗ ಬ್ಯಾರೆ ಉದ್ಯೋಗಿಲ್ಲಂತ ತಿಳಿದಿ ಏನು? ಅಷ್ಟಕ್ಕೂ ಇಲ್ಲೇ ಕತ್ತಿಯಂಥ ಮಂದಿ ಅಕ್ಷಾರ ಕಲ್ತು ಏನ್ಮಾಡ್ತಾರ? ಕಲ್ತಾಂವ ನಾನೇ ಎಲ್ಲಾ ಮರೆತು ಕುಂತೀನಿ!"

"ಅದೆಲ್ಲಾ ಮಾಡೋದ್ರಿಂದ ಹೊಟ್ಟೆ ತುಂಬತೈತೇನೋ ಚಂದ್ರಾಮ. ಆ ಮಂದಿಗ ಕಲ್ಸಿದ್ರ ನಿನಗೇನು ಫಾಯ್ದ ಸಿಕ್ಕಂಗಾತು? ಇವೆಲ್ಲಾ ಹುಚ್ಚು ಬಿಟ್ಟುಬಿಡು ನೀನು!" ಮುದುಕ ಉಪದೇಶ ನೀಡಿದ.

ಜೋಡಿ ಮುಂಡಗಳೊಡನೆ ತಾನು ಮಾತಿಗೆ ತೊಡಗಿರುವಂತೆ ಅನ್ನಿಸಿ, ಚಂದುವಿಗೆ ಅಲ್ಲಿಂದ ಎದ್ದು ಹೋಗಬೇಕೆನಿಸಿತು. ಆದರೂ ಕೊನೆಯ ಪ್ರಯತ್ನವೆಂದು ಮತ್ತೊಂದು ಕೋರಿಕೆ ಮುಂಡಿಸಿದ-"ನಾ ಮಾಡ್ತಿರೋ ದಂಧಾ ಕೆಟ್ಟದಲ್ಲ ಅಂಬೋದು ನನಗ ಗೊತ್ತದ ಬಿಡು. ಅಂಥ ಅಪಾಯದ ಕೆಲ್ಸಕ್ಕ ನಾ ಎಂದೂ ಕೈ ಹಚ್ಕೋನೇ ಅಲ್ಲ...ಇರಲಿ-ಸಂಗಮ್ಮ ಮಿಷನ್‌ದಾಗ ಅರಿವಿ ಹೊಲಿತಾರಂತ ಕೇಳ್ದೆ. ಇಲ್ಲಿ ಮಹಿಳಾ ಸಂಘ ಒಪನ್ ಮಾಡಿ ಇವರನ್ನ ಸದ್ಯಕ್ಕೆ ಟೀಚರ್ ಅಂತ ನೇಮಿಸಿದರ-ಹತ್ತಾರು ಹೆಣ್ಣುಮಕ್ಕಳು ಹೊಲಿಗಿ ಕಲೀಲಿಕ್ಕ ಅನುಕೂಲ ಆಗ್ತದ. ಇವರು ಪಡೋ ಶ್ರಮಕ್ಕೂ ಪ್ರತಿಫಲ ಸಿಗ್ತದ..."

ಅತ್ತಿಗೆ ಎನ್ನದೆ 'ಸಂಗಮ್ಮ' ಎಂದು ಸಂಬೋಧಿಸಿದ್ದು ಮಾನ್ಯಾನಿಗೆ ಸಿಟ್ಟು ಬರಿಸಿತು. "ಸೋನಮ್ಮನ ಸಹವಾಸ ಸಾಕಾಯ್ತೇನು? ಈಗ ಸಂಗವ್ವನ ಮ್ಯಾಲ ಕಣ್ಣು ಹಾಕಿರುಹಂಗ ಕಾಣತೈತಿ!" ಎಂದು ಆತ ರೇಗಿಕೊಂಡಾಗ ಚಂದು ಸಹನೆಯಿಂದ ಉತ್ತರಿಸಿದ-"ಆ ವಿಚಾರದಾಗ ನಾನು ನಿನ್ನಂಗ ಶಾಪಗ್ರಸ್ತನಲ್ಲ. ಹೆಂಗಸರನ್ನ ಕಂಡ ಕೂಡ್ಲೆ ನಿನಗ ತಲಿ ಕೆಡುಹಂಗ ನನಗ ಕೆಡೋದಿಲ್ಲ. ಅವರನ್ನ ನಾನು ಅಗದಿ ಗೌರವದಿಂದ ನೋಡ್ತೇನಿ!"

"ಅದಕ್ಕೇ ಅಲ್ಲ. ಆಕಿ ಮನಿಗ ಬರಲಾಗಧಂಗ ನೀ ಪ್ರಯತ್ನ ನಡ್ಸಿರೋದು?''

"ನಾ ಯಾಕ ಅಡ್ಡಿ ಪಡಿಸಲಿ? ಪ್ರೀತಿ ವಿಶ್ವಾಸ ಇಲ್ಲದ ಕಡೆ ನೀಯಾದ್ರು ಹೋಗತಿದ್ದಿಯೇನು? ಹಂಗೇ ಆಕಿನೂ ಕೂಡ. ನೀ ಪ್ರೀತಿಯಿಂದ ಒಂದು ಮಾತು ಕರದ್ರ ಸಾಕು. ಈಗಂದ್ರ ಈಗ ಬರ್ತಾಳ ಅತ್ತಿಗಿ!''

"ಒಂದ್ ಸರ್ತಿ ಏನು? ಹತ್ತತ್ತು ಸರ್ತಿ ಕರ್ದೇನಿ-ಬರೋವಲ್ಲಳು ಆ ರಂಡೇ! ಆ ಹೆಣ್ಣು ಹೆಂಗ್ಸಿಗೇ ಅಷ್ಟು ಕೆಟ್ಟ ಹಟ ಇರುವಾಗ, ನನ್ನಂಥ ಮೀಸಿ ಹೊತ್ತ ಗಂಡ್ಸಿಗ ಇರಬಾರದೇನು?''

"ಇದೊಂದು ದುರ್ಗುಣ ನೀ ಬಿಟ್ಟಿದ್ಯಂದ್ರ ಸ್ವಲ್ಪಾರ ಮನುಷ್ಯನಾಗಿ ಬದುಕ್ತಿದ್ದಿ!'' ಚಂದು ನೊಂದು ನುಡಿದಾಗ, ಮಾನ್ಯಾ ಒದರಾಡತೊಡಗಿದ-"ಲೇ ಮಳ್ಳನಮ್ಮಗನೆ! ನನಿಗೆಲ್ಲಾ ಗೊತ್ತೈತಲೇ...ಆ ಲೌಡಿನ ನೀ ಕಟ್ಕೋಬೇಕು ಅಂತಿರೋದು. ಅದಕ್ಕೇ ಆ ಇಬ್ಬರು ಲೌಡೇರು ಹೊಲ-ಮನಿ ಪಾಲು ಕೇಳು ಅಂತ ನಿನ್ನನ್ನ ಇಲ್ಲಿಗೆ ಕಳ್ಸಿರೋದು. ಆ ಮಾತು ಎತ್ತಲಿಕ್ಕ ನೀ ಇಷ್ಟೆಲ್ಲಾ ನಾಟ್ಕ ಮಾಡ್ತಿರೋದು...ಇವೆಲ್ಲ ನನಗ ಗೊತ್ತಿಲ್ಲಾಂತ ತಿಳಿದಿ ಏನಲೇ? ನೋಡಲೇ, ನೀ ಎಷ್ಟು ಲಾಗ ಹಾಕಿದರೂ ಹರಸಿಂಗನ ಹೊಲ-ಮನಿಯೊಳಗ ನಿನಗ ಪಾಲು ಸಿಗಲಿಕ್ಕ ಸಾಧ್ಯ ಇಲ್ಲ! 'ಅಂವ ನನ್ನ ಮಗನೇ ಅಲ್ಲ! ಯಾರೋ ಒಬ್ಬ ಬಿಕನಾಸಿ ಆಸ್ತಿ ಹೊಡ್ಕೋಳ್ಳಿಕ್ಕ ನಾಟ್ಕ ಮಾಡ್ಕೊಂಡ್ ಬಂದಾನ!' ಅಂತ ಅಪ್ಪ ಹೇಳ್ಕಿ ಕೊಡ್ತಾನ! ಬೇಕಾದ್ರ ಆತನ್ನೇ ಕೇಳು-ಎದುರಿಗೇ ಕುಂತಾನ ಗೂಟ ಹೊಡಿಧಂಗ! ..''

ಮಾನ್ಯಾ ಹಾಗೂ ಮುದುಕನನ್ನು ಚಂದು ಮರುಕದಿಂದ ದಿಟ್ಟಿಸಿ

ನೋಡಿದ. "ಮಾನ್‌ಸಿಂಗ್, ಚಂಬಲಕಣಿವೆಯ ಡಕಾಯಿತರೂ ಕೂಡ ಪರಿವರ್ತನೆ ಹೊಂದಿ ಮನುಷ್ಯ ಸಮಾಜದಲ್ಲಿ ಸೇರಿಕೊಂಡ್ರು ಅನ್ನೋದನ್ನ ಕೇಳಿದ್ವೆ, ಓದಿದ್ದೆ. ಅದೇ ಆಸೆಯಿಂದ ನಿನ್ನ ಮನಿಗ ಬಂದಿದ್ದೆ. ಆದ್ರ ನೀ ನನ್ನನ್ನ ಸ್ವಲ್ಪಾದ್ರೂ ತಿಳ್ಕೊಳ್ಳಿಕ್ಕ ಪ್ರಯತ್ನ ಪಡಲಿಲ್ಲ...'ಅಪ್ಪಾ ಅಣ್ಣಾ' ಅಂತ ನಾನು ತಪ್ಪೀಕೂಡ ಈ ನಾಲಿಗಿಯಿಂದ ನುಡಿಲಿಕ್ಕ ಇಷ್ಟಪಡೋದಿಲ್ಲಂದ ಮ್ಯಾಲ, 'ಆತನ ಮಗ ನಾನು' ಅಂತ ಆಸ್ತಿ ಕೇಳ್ತಿನಾ...? ನಮ್ಮಪ್ಪನ ಕುತ್ತಿಗಿ ಹಿಚುಕಿದ ದಿನಾನೇ ಈ ಅಪ್ಪಾ ಅಂಬಾತ ನನ್ನ ಪಾಲಿಗ ಸತ್ತುಹೋದ. ಇಷ್ಟು ದಿನ ನಿನ್ನನ್ನ ಅಣ್ಣಾ ಅನ್ನದಿದ್ರು ಒಬ್ಬ ಸ್ನೇಹಿತ ಅಂತ ತಿಳ್ಕೊಂಡಿದ್ದೆ. ಈಪತ್ತಿನಿಂದ ನನಗ ನೀನೊಬ್ಬ ಪರಿಚಿತ ಅಷ್ಟೆ!" ಎಂದು ಹೇಳಿ ಚಂದು ಅಲ್ಲಿಂದೆದ್ದು ಹೊರಬಂದ. ತನ್ನ ಪಾಲಿಗೆ ಎಂದೋ ಸತ್ತಿದ್ದ ಅಪ್ಪ-ಅಣ್ಣನನ್ನು ಮತ್ತೊಮ್ಮೆ ನಾಡಿ ಹಿಡಿದು ಪರೀಕ್ಷಿಸುವ ವ್ಯರ್ಥ ಕೆಲಸಕ್ಕೆ ಕೈಹಾಕಿದ್ದಕ್ಕಾಗಿ ತನ್ನನ್ನು ತಾನೇ ಹಳಿದುಕೊಳ್ಳುತ್ತ ಜೋಪಡಿಗೆ ಬಂದಾಗ, ಬಾಗಿಲಲ್ಲಿ ಕಾದಿದ್ದ ಕಾಶಪ್ಪ ಕಾಣಿಸಿದ.

"ನನ್ನ ಪ್ರಯತ್ನ ನಡೀಲಿಲ್ಲ ಕಾಶಪ್ಪ. ನಾ ಹೇಳಿದ್ಹಂಗ ಮಾಸ್ತ್ಯಾ ಕೇಳಿದ್ದ ಸಂದ್ರ ಈ ಹಳ್ಳಿಯಾಗ ಯಾವ ಗೊಂದಲವೂ ಆಗ್ತಿದ್ದಿಲ್ಲ!...."

"ಹಂಗಾದ್ರ ಈಗೇನು ಮಾಡಬೇಕಂತಿ ಚಂದಪ್ಪ." ಕಾಶಪ್ಪ ಕೇಳಿದ.

"ಖರೇ ವಿಚಾರನೆಲ್ಲ ನೀನೇ ಮಂದಿಗ ತಿಳಿಸಿಬಿಡು. ತಪ್ಪ ಒಪ್ಪಿಕೊ, ಕ್ಷಮಾ ಕೇಳು, ಮಂದಿ ಕ್ಷಮಾ ಮಾಡೇಮಾಡ್ತಾರ. ಇದರಿಂದ ನಿನಗೂ ಚಲೋದಾಗ್ತದ. ಊರಿಗೂ ಚಲೋದಾಗ್ತದ."

ಕಾಶಪ್ಪ ಬೆಚ್ಚಿದ. "ಏನಂತ ಹೇಳ್ಲಿ ಚಂದಪ್ಪ ಮಂದಿಗ?"

"ಹಿಂಗಿನ್ನಿಗ...ನನಮ್ಯಾಲ ದೇವ್ರಿ ಬರ್ತಾಳಂಬೋದು ಪೂರಾ ಸುಳ್ಳು ಇದು ಮಾಸ್ತ್ಯಾಗ, ಪವಾರಗ ಗೊತ್ತೈತಿ!...ಅದಕ್ಕ..."

ಕಾಶಪ್ಪ ನಡುವೆಯೇ ಚೀರಿಕೊಂಡ-"ಅಯ್ಯಯ್ಯೋ! ಏನ್ ಮಾತಾಡ್ತಿದ್ದೀ ಚಂದಪ್ಪ! ಹೊಟ್ಟೆ ಸಲುವಾಗಿ ನಾ ಯಾವಾಗರೆ ಒಮ್ಮೆ ಸುಳ್ಳಾಡಬೇಕಾಗತೈತಿ! ಅಷ್ಟಕ್ಕೇ ದೇವ್ರಿ ನನಮ್ಯಾಲ ಬರೋದೇ ಸುಳ್ಳು ಅಂದು

ಬಿಡೋದಾ? ಹಿಂಗಾದ್ರ ಮಂದಿ ನನ್ನ ನಂಬ್ತಾರಾ? ದೇವ್ರಿಗ ನಂಬ್ತಾರ. ಆ ನನತಾಯಿ ಕರುಣೆಯಿಂದ್ಲೇ ನಾವು ಬದುಕಿಕೊಂಡು ಇಲ್ಲೀತಾನ!." ಕಾಶಪ್ಪ ಸಮರ್ಥಿಸಿಕೊಳ್ಳಲಾರಂಭಿಸಿದಾಗ, ಚಂದು ಬೇಸರಗೊಂಡು ಹೇಳಿದ "ಹೋಗ್ಲಿಬಿಡು. ಈಪತ್ತು ನಿಮ್ಮ ಪೂಜಿಗೀಜಿ ಶುರುವಾಗೋ ಹೊತ್ತಿಗ ನಾ ಹೋಗಿ ಪೋಲೀಸರನ್ನ ಕರಕೊಂಡ್ ಬಂದುಬಿಡ್ತೀನಿ. ಸುಮ್ನ ಪೋಲೀಸ್ ಬಂದೋಬಸ್ತ್ ಇರಿಸಿಬಿಡಾಮು!"

ಕಾಶಪ್ಪ ಮತ್ತೂ ಭೀತನಾದ. "ನಿನ್ನ ಕಾಲು ಬೀಳ್ತೀನಿ-ಪೋಲೀಸ್ರುನ್ನ ಮಾತ್ರ ಊರಿಗ ಕರೆಸಬ್ಯಾಡ ಚಂದಪ್ಪ!"

"ಯಾಕ?! ಅವರು ನಿನಗೇನೇನೂ ಮಾಡಂಗಿಲ್ಲ. ನಿನಮ್ಯಾಲ ಯಾರಾರ ಕೈ ಮಾಡಲಿಕ್ಕ ಬಂದ್ರ ಅಂಥೋರನ್ನ ಹಿಡಿದು ವಿಚಾರಿಸಿಕೊಳ್ತಾರ ಅಷ್ಟೆ" ಎಂದು ಧೈರ್ಯಹೇಳಿದ ಚಂದು.

"ನಿನಿಗಿನ್ನ ಗೊತ್ತಿಲ್ಲ ಚಂದಪ್ಪ. ಈ ಊರಿನ ಭಾಳಷ್ಟು ಮಂದಿ ಕಳ್ಳ ರಂಬೋದು ಪೋಲೀಸರಿಗ ಗೊತ್ತದ! ಅದಕ್ಕೇ ಇಲ್ಲಿ ಮಂದಿ ಅವರನ್ನ ಕಂಡ್ರ ಊರಾಗ ನಿಂದ್ರಂಗಿಲ್ಲ. ಗುಡ್ಡದ ಹಾದಿ ಹಿಡಿದುಬಿಡ್ತಾರ... ಈ ಮಾನ್ಯಾನ ಸವಾಸಕ್ಕೆ ಬಿದ್ದು ನಾನೂ ಒಂದ್ ನಾಲ್ಕೈದು ಸರ್ತಿ ರೊಪ್ಪದಾಗಿನ ಕುರಿ ಕದ್ದು ಪೋಲೀಸರತಾವ ಜಗ್ಗಿ ಬಡಿಸಿಕೊಂಡೀನಿ! ಮಾನ್ಯಾನೂ ಮೈ ಮೆತ್ತಗಾಗೋ ಹಂಗ ಬಡಸಿಕೊಂಡಾನ!....ಈಗ ಅವರೇನಾರ ಇಲ್ಲಿಗ ಬಂದರು ಅಂದ್ರ..." ಎಂದು ಕಾಶಪ್ಪ ವಿವರಿಸುತ್ತಿದ್ದಂತೆಯೇ "ಗೊತ್ತಾತು ಬಿಡಪ್ಪ. ಏನು ಬದುಕು ನಡೆಸೀರಪ್ಪ ನೀವೆಲ್ಲಾ!" ಎಂದು ವಿಷಾದದಿಂದ ಉದ್ಗರಿಸಿದ ಚಂದು- "ಹಂಗಾದ್ರ ಅದೇನು ಪೂಜೆ ನಡೆಸು ಹೋಗು. ಗದ್ಲ ಏನಾರ ಆಗೋ ಸಂಭವ ಇತ್ತಂದ್ರ ನಮ್ಮ ಹುಡುಗರೆಲ್ಲಾ ನಿನ್ನ ಬೆಂಗಾವಲಿಗಿರ್ತಾರ. ನಾ ಎಲ್ಲಾ ಹೇಳಿರ್ತೀನಿ" ಎಂದು ಭರವಸೆ ನೀಡಿದ. ಅದೇ ಹೊತ್ತಿಗೆ ತೇಕುತ್ತ ಓಡಿಬಂದ ಕಾಶಪ್ಪನ ಮಗ-"ಲಗೂ ಬಾರಪ್ಪ, ಭಾಳಷ್ಟು ಮಂದಿ ಬಂದು ನಿಂತಾರ. ಗುಡಿ ಬಲ್ಲಿ ನಿನ್ನ ಕರೀಲಿಕ್ಕ ಹತ್ಯಾರ" ಎಂದು ಕರೆದಾಗ ಕಾಶಪ್ಪ ಸೋತ ಕಾಲೆಳೆಯುತ್ತ ಮಗನನ್ನು ಹಿಂಬಾಲಿಸಿದ.

ಹೊತ್ತು ಏರತೊಡಗಿತ್ತು. ಬಿಸಿಲ ಪ್ರಖರತೆಯಿಂದಾಗಿ ಗುಡಿಯ

ಮುಂದೆ ಜಮಾಯಿಸಿದ್ದ ಜನಗಳ ಮೈಯಿಂದ ಬೆವರು ಕಿತ್ತು ಹರಿಯುತ್ತಿತ್ತು. ದೇವಿಗೆ ಕಾಯಿ ಒಡೆದು, ಮಂಗಳಾರತಿ ಬೆಳಗಿ ಹೊರಬಂದಿದ್ದ ಕಾಶಪ್ಪ ಸಂಪೂರ್ಣವಾಗಿ ತೊಯ್ದು ತೊಪ್ಪಡಿಯಾಗಿದ್ದ; ತನ್ನ ತಲೆಯ ಮೇಲೆ ದೇವಿಯ ಉತ್ಸವ ಮೂರ್ತಿಯನ್ನು ಹೊರಿಸಿದೊಡನೆ ಆತ ಗಡಗಡ ನಡುಗ ಲಾರಂಭಿಸಿದ. ಎಷ್ಟು ಬೇಗ ಆತನ ಮೈಯಲ್ಲಿ ದೇವಿಯ ಆವಾಹನವಾಯಿ ತೆಂದು ಕೆಲವರು ಅಚ್ಚರಿಪಟ್ಟರು.

"ಸೋನಿ ಗಂಡನ ಮನಿಗ ಹೋಗಬೇಕು ಅನ್ನೋದು ಅಮ್ಮನ ಇಚ್ಛಾ ಆಗಿತ್ತಂದ್ರ, ಹೀಂಗ ಬಲಕ್ಕ ಹೋಗಿ ಆ ಬೇವಿನಮರ ಮುಟ್ತಾಳ. ಹೋಗೋದು ಬ್ಯಾಡ ಅನ್ನು ಹಂಗಿತ್ತಂದ್ರ-ಅತ್ತಾಗಾಸ್ ಎಡಕ್ಕ ತಿರುಗಿ ಬೈಲಿ ನಾಗ ಹೋಗಿ ನಿಂದರತಾಳ. ನೋಡ್ಬೇಕು-ಅಮ್ಮಾ ಯಾವ ದಾರಿ ತೋರಿ ಸ್ತಾಳೋ! ಮೂರ್‌ಲೋಕದ ಒಡತಿಗೆ ಗೊತ್ತಿರಲಾರದ್ದೇನೈತಿ?'' ನೆರೆದ ಜನ ಮಾತಾಡಿಕೊಳ್ಳುವುದು ಕಾಶಪ್ಪನ ಕಿವಿಗೆ ಬೀಳುತ್ತಲೇ ಇತ್ತು.

ದೇವಿಯ ತೀರ್ಪಿಗಾಗಿ ಕುತೂಹಲದಿಂದ ಕಾದುನಿಂತಿದ್ದ ಓಣಿಯ ಪೆಂಗಸರೊಡನೆ ಲಚ್ಚಿ-ಸೋನಿಯರೂ ನಿಂತುಕೊಂಡಿದ್ದರು. ಚಂದು ಹಾಗು ಅವನ ಶಿಷ್ಯರು ವಾತಾವರಣವನ್ನು ಎಚ್ಚರಿಕೆಯಿಂದ ಗಮನಿಸುತ್ತ ಕಾಶಪ್ಪನಿಗೆ ಸಮೀಪವಾಗಿ ಅಡ್ಡಾಡುತ್ತಿದ್ದರು. ಪೂಜಾರಿಯ ಕಾಲುಗಳ ಚಲನೆಯ ಮೇಲೆ ಸ್ಥಿರನೋಟ ನೆಟ್ಟು, ತಡಿಕೆಯ ಮರೆಯಲ್ಲಿ ನಿಂತಿದ್ದ ಸಂಗಿಯ ಮುಖದ ಮೇಲೆ ಆತಂಕ ಎದ್ದು ಕಾಣುತ್ತಿತ್ತು. ದೇವಿ ಎಡಕ್ಕೆ ತಿರುಗಿ 'ಆ ನನ್ನ ಸವತಿ ಅತ್ತಲೇ ಉಳಿದುಕೊಂಡರೆ ನಿನಗೊಂದು ಹುಂಜ ಕೊಟ್ಟು ಜೋಡು ತೆಂಗಿನಕಾಯಿ ಒಡೆಸುತ್ತೇನೆ' ಎಂದು ಆಕೆ ಮನಸ್ಸಿನಲ್ಲೇ ಹರಕೆ ಯನ್ನೂ ಮಾಡಿಕೊಂಡಿದ್ದಳು.

ಅರ್ಧಗಂಟೆ ಕಳೆಯಿತು. 'ದೇವಿ' ಯಾವ ನಿರ್ಣಯವನ್ನೂ ತೆಗೆದ್ಕೊ ಕೊಳ್ಳದೆ ನಿಂತಲ್ಲೇ ನಿಂತುಬಿಟ್ಟಾಗ, ಜನಗಳಿಗೆ ಬಿಸಿಲತಾಪ ಹೆಚ್ಚಿದಂತಾಗಿ 'ಉಸ್, ಉಸ್!' ಎಂದು ಉಸಿರೆಳೆದು ಬೆವರು ಒರಿಸಿಕೊಂಡರು.

"ಯಾಕವ್ವಾ ತಾಯಿ? ನಮ್ಮ ಮೇಲೆ ಸಿಟ್ಟೇನವ್ವಾ? ಲಗೂ ದಾರಿ ತೋರ್ಸಿಬಿಡವ್ವ! ದಗದಕ್ಕ ಹೋಗೋ ಮಕ್ಕಳಿಗ ಹರಕತ್ ಮಾಡಬ್ಯಾಡವ್ವ!''

ಎಂದು ಗೌಡ-ಹಿರಿಯರು ದೇವಿಗೆ ವಿನಂತಿಸಿಕೊಂಡಿದ್ದಾಯಿತು. ಎಷ್ಟಾದರೂ ಬಲಕ್ಕೆ ತಿರುಗಿ ಬೇವಿನ ಮರದತ್ತ ಹೋಗದೆ ಡೋಲಾಯಮಾನ ಸ್ಥಿತಿಯಲ್ಲೇ ಓಲಾಡುತ್ತಿರುವ "ದೇವಿ"ಯನ್ನು ಕಂಡು ಮಾನ್ಯಾನ ಕಣ್ಣುಗಳು ರಕ್ತದುಂಡೆಗಳಂತೆ ರಂಗೇರುತ್ತಿದ್ದವು! ಅವನ್ನು ಕಂಡು ಫಕ್ಕನೆ ಬಲಕ್ಕೆ ತಿರುಗ ಬಯಸುವ ಕಾಲುಗಳು. ತೀರಾ ಸಮೀಪದಲ್ಲೇ ನಿಂತು ತನ್ನ ಚಲನೆಯ ಮೇಲೆ ಕಣ್ಣಿಟ್ಟು, ಗಳಿಗೆಗೊಮ್ಮೆ ಮೀಸೆ ಹುರಿಮಾಡಿಕೊಳ್ಳುತ್ತಿದ್ದ ಪವಾರನನ್ನು ಕಂಡೊಡನೆ, ಎಡದ ಬಯಲಿನತ್ತ ಓಡಲು ತವಕಿಸುತ್ತಿದ್ದವು! ಈ ರೀತಿಯಾಗಿ "ದೇವಿ"ಯು 'ಕತ್ತರಿಯ ಗೋಟಡಿಕೆ'ಯಾಗಿ ಪಾಡು ಪಡುತ್ತಿರಲು ಒಮ್ಮೆಲೆ 'ಪೋಲೀಸ್ರು ಬಂದ್ರು ಪೋಲೀಸ್ರು ಬಂದ್ರು!' ಎಂಬ ಗುಲ್ಲೆಬ್ಬಿತು! ಜನಗಳು ಗಾಬರಿ ಬಿದ್ದು "ಯಾಕೆ ಬಂದ್ರು? ಎಲ್ಲಿಗೆ ಬಂದ್ರು?" ಎಂದು ಪರಸ್ಪರ ಪ್ರಶ್ನಿಸತೊಡಗಿದರು. ಈ ಶಬ್ದ ಕಿವಿಗೆ ಬಿದ್ದೊಡನೆ 'ದೇವಿ'ಯ ಚಣ್ಣ ನಿಂತಲ್ಲೇ ಒದ್ದೆಯಾಯಿತು!

"ಯದಕ್ಕ ಬಂದಾರೋ ಏನೋ ಯಾರಿಗೊತ್ತು. ಅತ್ತಾಗ ಗೌಡ್ರ ಮನಿಕಡಿ ನಾಕು ಮಂದಿ ಹೋಗ್ಯಾರ, ಇತ್ತಾಗ ಗುಡಿಕಡೆ ನಾಕ್ ಮಂದಿ ಬರಲಿಕ್ಕ ಹತ್ಯಾರ!" ಯಾರೋ ಹೇಳಿದರು. ಕಾಶಪ್ಪ ತಾನು ದೇವಿ ಹೊತ್ತಿರುವೆನೆಂಬುದನ್ನು ಮರೆತು, ಗುಡಿಯ ಬಲಭಾಗದಲ್ಲಿದ್ದ ತನ್ನ ಮನೆಯತ್ತ ಓಡಲಾರಂಭಿಸಿದ.

ಬಲಕ್ಕೆ ತಿರುಗಿ ಬೇವಿನಮರ ಮುಟ್ಟಲೆಂದೇ "ದೇವಿ" ಓಡುತ್ತಿದ್ದಾಳೆಂದು ಉಳಿದ ಜನ ಭಾವಿಸಿದರು. ಇದನ್ನು ಕಂಡ ಪವಾರನಿಗಂತು ಕ್ರೋಧ ಉಕ್ಕಿಬಂತು! 'ಕಡಿಗೂ ಕೈ ಕೊಟ್ಟೆ ಏನಲೆ, ನಿಯತ್ತಿಲ್ದ ಸೂಳೇಮಗನೆ!' ಕರಕರ ಹಲ್ಲು ಮಸೆಯುತ್ತ ಹತಾರಕ್ಕಾಗಿ ಅತ್ತಿತ್ತ ಕಣ್ಣಾಡಿಸಿದ-ಸಕ್ರ್ಯಾನ ಮನೆ ಮುಂದೆ ಕಟ್ಟಿಗೆ ಕಡಿಯಲು ಹರಿತಗೊಳಿಸಿ ಇಡಲಾಗಿದ್ದ ಕೊಡಲಿ ಕಾಣಿಸಿತು. ವಿವೇಚನೆ ಕಳೆದುಕೊಂಡಿದ್ದ ಪವಾರ ಕೂಡಲೇ ಅವನ್ನು ಕೈಗೆತ್ತಿಕೊಂಡ. ಓಡುತ್ತಿದ್ದ ಕಾಶ್ಯನತ್ತ ಬೀಸಿ ಹೊಡೆದ. ಗುರಿ ತಪ್ಪಲಿಲ್ಲ. ಅವನ ಕೊರಳಿನ ಅರ್ಧಭಾಗದಷ್ಟು ಕತ್ತರಿಸಿ ರಕ್ತ ಚಿಲ್ಲನೆ ಚಿಮ್ಮಿತು! ಕಾಶಪ್ಪ ವಿಕಾರ ಸ್ವರದಲ್ಲಿ ಕಿರುಚಿಕೊಳ್ಳುತ್ತ ಉತ್ಸವಮೂರ್ತಿ ಸಹಿತವಾಗಿ ನೆಲಕ್ಕುರುಳಿ ಒಂದೆರಡು ಗಳಿಗೆ ವಿಲವಿಲ ಒದ್ದಾಡಿ ಸ್ತಬ್ಧನಾದ!

ಕ್ಷಣಾರ್ಧದಲ್ಲಿ ಜರುಗಿಹೋದ ದುರ್ಘಟನೆ ನೆರೆದವರ ಎದೆಯುನ್ನು ತಲ್ಲಣ ಗೊಳಿಸಿತು. 'ಹೋ' ಎಂದು ಹೊರಟ ಆಕ್ರಂದನ ಇಡೀ ಹಳ್ಳಿಯ ಒಡಲನ್ನು ಭೇದಿಸಿಕೊಂಡು, ಮಾನ್ಯಾನ ಮನೆಯನ್ನು ಮುತ್ತಿಗೆ ಹಾಕಲು ಹೊರಟ್ಟಿದ್ದ ಪೋಲೀಸರ ಕಿವಿಗೂ ಮುಟ್ಟಿತು. ಬೂಟುಗಾಲನ್ನು ಟಕ್ ಟಕ್‌ಗುಟಿಸುತ್ತ ಅವರು ಹೆಣ ಬಿದ್ದಲ್ಲಿಗೆ ಬಂದರು. 'ಈ ಕೊಡ್ಲಿ ಯಾರ್‍ದು? ಈತನ ಕೊಲೆ ಮಾಡಿದವರ್‍ಯಾರು?' ಎಂದೆಲ್ಲಾ ಪ್ರಶ್ನೆ ಮಾಡಿದರು. ಆದರೆ ಉತ್ತರ ಬಲ್ಲವರು ತುಟಿಬಿಚ್ಚಲು ಹೆದರಿ ಮೆಲ್ಲಗೆ ಅಲ್ಲಿಂದ ಜಾರಿಕೊಂಡರು.

ಕಾಶಪ್ಪನತ್ತ ಸಂಪೂರ್ಣ ನಿಗಾವಹಿಸಿದ್ದ ಚಂದು ಮತ್ತು ಆತನ ಶಿಷ್ಯರು 'ಪೋಲೀಸರು ಬಂದರು!' ಎಂಬುದನ್ನು ಕೇಳಿ ಅತ್ತ ಲಕ್ಷ್ಯ ಹೊರಳಿಸಿದ್ದರು. 'ಅವರಿಗೆ ದೂರು ನೀಡಿದವರ್‍ಯಾರು? ಅಥವ ಬೇರೆ ಯಾವುದಾದರು ಕಾರಣಕ್ಕಾಗಿ ಇಲ್ಲಿಗೆ ಬಂದಿರಬಹುದೆ?' ಎಂದೆಲ್ಲಾ ಅವರು ಚರ್ಚೆ ನಡೆಸಿದ್ದಾಗ, ಇತ್ತ ದುರಂತ ನಡೆದುಹೋಗಿತ್ತು! ಕೊಡಲಿ ಯಾರದು? ಕೊಂದವರ್‍ಯಾರು? ಎಂಬುದು ಇವರೂ ಕೂಡಿದಂತೆ ಬಹಳಷ್ಟು ಮಂದಿಗೆ ತಿಳಿಯಲೇ ಇಲ್ಲ.

ರಕ್ತದ ಹೊಳೆಯಲ್ಲಿ ಮುಳುಗಿದ್ದ ಹೆಣದ ಸುತ್ತಲೂ ಬೋರಾಡಿ ಅಳುತ್ತಿದ್ದ ಕಾಶಪ್ಪನ ಹೆಂಡತಿ ಮಕ್ಕಳನ್ನು ಪೋಲೀಸರು ತಮ್ಮದೇ ಆದ ರೀತಿಯಿಂದ 'ಸಮಾಧಾನ' ಹೇಳಿದರು "ಏಯ್, ಹಿಂಗ್ಯಾಕ ಗಂಟ್ಲಾ ಹರ್‍ಕೊಳ್ತೀರಾ? ತಿರುಗಿ ಬರ್‍ತಾನ? ಗದ್ಲಾ ನಿಲ್ಲಿಸ್ರಿ ಇನ್ನ-ನಾ ಕೇಳಿದ್ದಕ್ಕೆ ಜವಾಬು ಕೊಡ್ರಿ-ಯಾರು ಆತನ್ನ ಕೊಂದೋರು?"

ಕಾಶಪ್ಪನ ಹೆಂಡತಿ ರಾಂಬಾಯಿ ತಲೆ ಎತ್ತಿ ನೆರೆದ ಗುಂಪಿನತ್ತ ನೋಡಿದಳು. ಭಯ ಹುಟ್ಟಿಸುವ ಅವಳ ದೊಡ್ಡ ದೊಡ್ಡ ಕಣ್ಣುಗಳು ಯಾರನ್ನೋ ಅರಸತೊಡಗಿದವು-"ಹಾಂ! ಅಗೋ ಅಲ್ಲಿ ನಿಂತಾಳ ನೋಡ್ರಿ. ಆ ರಂಡಿನೇ ನನ ಗಂಡನ್ನ ಕೊಂದಾಕಿ! ಎಲ್ಲಾ ಆಕೆ ಇಂದ್ಲೇ ಆಗಿದ್ದು ಸಾಯೇಬ್ರೆ. ಹಿಡಕೊಂಡ್ ಹೋಗ್ರಿ ಆ ಲೌಡಿನ ಮೊದ್ಲು!"

"ಇವಳು ಕೊಂದ್ಲಾ? ಹೆಸರೇನು ಈಕೆದು?" ಪೋಲೀಸ್ ನಂಬಿಕೆ ಸಾಲದೆ ಅನುಮಾನದಿಂದ ಕೇಳಿದ.

"ಸೋನಿ ಅಂತ. ಖರೇ ಈಕಿನ್ನ ಕೊಲ್ಲಿಸ್ಯಾಳ್ರಿ. ಅಗೋ ಆಕೆನ ಬಾಜುದಾಗ ನಿಂತಾನಲ್ರಿ ಮಾಸ್ತರ-ಆತನ್ನ ಇಟ್ಟುಕೊಂಡಾಳ್ರಿ. ಅದಕ್ಕ ತನ್ನ ಗಂಡನ ಮನಿಗ ಹೋಗಾಕ ವಲ್ಲೆ ಅಂದಳ್ರಿ!..."

"ಏಯ್ ರಾಮ್ಲೀ, ಬಾಯಿಮುಚ್ಚೆ! ಸುಳ್ಳು ಪಳ್ಳು ಒದರಿದಿ ಅಂದ್ರ ಅಲ್ಲೇ ಬಿದ್ದಿರೊ ಕೊಡ್ಲಿಯಿಂದ ನಿನ ನಾಲಿಗಿನೇ ಕಡಿದೇನು ರಂಡೆ!" ಎಂದು ಆಕೆಯನ್ನು ಜಬರಿಸಿ, ಲಚ್ಮಿ ಪೋಲೀಸರ ಗಮನ ಸೆಳೆದಳು.

"ಯಾಕವ್ವಾ? ನಿನಗ ಗೊತ್ತೇನು ಈ ಮನುಷ್ಯಾನ್ನ ಯಾರು ಕೊಲೆ ಮಾಡಿದರಂಬೋದು?" ಅವರು ಅವಳನ್ನು ವಿಚಾರಿಸಿದರು.

"ಗೊತ್ರೀ ಸಾಹೇಬ್ರೆ. ಪೋತಿ ಪವಾರ್ ಅಂಬಾತ ಈ ಕಾಶ್ಯಾನ್ನ ಕೊಂದಾನ್ರಿ!"

"ನೀ ಕಣ್ಣಿಂದ ಕಂಡೇನು ಇದನ್ನ?"

"ನಾ ಒಬ್ಬಾಕಿ ಅಲ್ರಿ. ಜಗ್ಗಿ ಮಂದಿ ಕಂಡಾರ್ರಿ. ನಿಮ್ಮುಂದೆ ಬಾಯಿ ಬಿಡಲಿಕ್ಕ ಅಂಜ್ತಾರ್ರಿ. ಪವಾರನೇ ಕೊಂದಾನ್ರಿ!"

"ಅಂವ ಯಾಕ ಕೊಂದ ಗೊತ್ತದೇನು?"

"ಚೌಬೀಸ್ ತಾಸೂ ಏನೇನಾರ ಕಾರುಬಾರು ನಡಸ್ಕಂಡಿರ್ತಿದನ್ರಿ ಹಲ್ಕಾ ಸೂಳೆಮಗ. ಕಡೇಕ ಅವರವರೊಳಗ ಏನೇನಾತೋ, ಏನೇನಿಲೊಲ್ಲ-ಕುಂಡಿಗ ಮಣ್ಣಾ ಕ್ಕೊಂಡ್ ಹೋಗ್ಯಾನ್ರಿ!" ಪೋಲೀಸರು ಲಚ್ಮಿಯ ಹೆಸರು, ಆಕೆಯ ಗಂಡನ ಹೆಸರನ್ನು ಕೇಳಿ ಬರೆದುಕೊಂಡರು.

"ಈ ಕಾಶಪ್ಪ ಅನ್ನೋ ಮನುಷ್ಯ ಕೊಲೆಯಾಗಿದ್ದರ ಹಿನ್ನೆಲೆ ನನಗ ಪೂರಾ ಗೊತ್ತಾದ ಸಾರ್. ಸಾಕ್ಷಿ ಆಧಾರ ಸಹಿತವಾಗಿ ನಾ ನಿಮಗ ವಿವರ ಒದಗಿಸ್ತೀನಿ" ಎಂದು ಚಂದು ಹೇಳಿದಾಗ "ಸಹಕಾರಕ್ಕಾಗಿ ಥ್ಯಾಂಕ್ಸ್" ಎಂದ ಪೋಲೀಸ್.

"ನಿಮ್ಮ ಹೆಸರು?"

"ಚಂದು"

"ತಂದೆ ಹೆಸರು?"

"ಹೀರಾಪವಾರ್"

ಕೂಡಲೇ ಪೋಲೀಸ ಲಚ್ಚಿ-ಚಂದು ಇಬ್ಬರ ಮುಖವನ್ನೂ ನೋಡಿದ.

"ಈಕೆ ನಿಮ್ಮ ತಾಯಿನಾ?" ಎಂದು ಕೇಳಿದ.

"ಹೌದು ಸಾರ್ ನನ್ನ ತಾಯಿ"

"ಈತ ಒಬ್ನೇ ಮಗ ಸಾಹೇಬ್ರ ನನಗೆ. ಚಿನ್ನದಂಥ ಗುಣದೋನು!"

"ತಾಯಿ-ಮಗ ಅಂತ ಹೇಳ್ಕಿ ಕೊಡ್ತಾ ಅದಾರಲ್ಲಾ! ಈತ ಹರಸಿಂಗನ ಮಗನಲ್ವೇನು?" ನೆರೆದವರಲ್ಲಿ ಗುಸುಗುಸು ಶುರುವಾಯಿತು. "ಹಂಗೇ ತಿಳ್ಕೊಂಡೀವಿ ಖರೆ. ಒಳಗ ಹ್ಯಾಂಗೋ ಏನೋ? ಹಿಂದ್ಕ ಆಕೆ ಮಗನೂ ಒಬ್ಬ ಕಳೆದು ಹೋಗಿದ್ವನಂತ...ಆತೇನಾರ ಹೊಳ್ಳಿಗಿಳ್ಳಿ ಬಂದಾನೋ ಏನೋ ಯಾರಿಗ್ಗೊತ್ತು?" "ಇದ್ದೀತು ಬಿಡು. 'ಈತ ನನ್ಮಗ ಅಲ್ಲಪ್ಪ. ಸುಳ್ಳೇ ಯಾರೋ ಸುದ್ದಿ ಹಬ್ಬಿಸ್ಯಾರ' ಅಂತಿದ್ನಂತ ಹರಸಿಂಗ ನಮ್ಮಾಮನ ಕೂಡ!—"

"ಆಲ್‌ರೈಟ್. ಈ ಕೊಡ್ಲಿ ಯಾರದ್ದು ಅನ್ನೋದು ನಿಮಗ್ಯಾರಿಗಾದ್ರು ಗೊತ್ತಾ" ಪೋಲೀಸ್ ಪ್ರಶ್ನಿಸಿದ.

ಲಚ್ಚಿ-ಚಂದು ಪೋಲೀಸರೊಡನೆ ಅತ್ಯಂತ ಆಪ್ತವಾಗಿ ಮಾತಾಡಿದ್ದನ್ನು ಕಂಡು, ಉಳಿದವರು ಭೀತಿರಹಿತರಾಗಿ ಮಾತಾಡುವಷ್ಟು ಧೈರ್ಯತಾಳಿದರು. "ಅದನ್ನ ಇತ್ತಾಗ ತರ್ರೀ ಸಾಹೇಬ್ರೆ. ಕಾವು ನೋಡಿದ್ರ ತಾನೇ ತಿಳಿತೈತಿ-ಯಾರದಂಬೋದು!" ಒಬ್ಬ ಕೊಡಲಿಯನ್ನು ಕೈಗೆ ಹಿಡಿದು ಪರೀಕ್ಷಿಸ ಬಯಸಿದ.

"ಈಗದನ್ನ ಮುಟ್ಟೋಹಂಗಿಲ್ಲ. ಹತ್ತಿರಕ್ಕೆ ಬಂದು ನೋಡಿ ಹೇಳು"

ಆತ ಕೆಲಕ್ಷಣ ಬಗ್ಗಿ ನೋಡಿ ಪರೀಕ್ಷಿಸಿದ ನಂತರ "ಇದು ಸಕ್ರ್ಯಾನ ಕೊಡ್ಲಿ ಇದ್ದಂಗ ಕಾಣಸತೈತ್ರಿ!"

ಸಕ್ರ್ಯಾನನ್ನು ಅಲ್ಲಿಗೆ ಕರೆಸಲಾಯಿತು. ತಾನು ನಿರಪರಾಧಿ ಎಂದು ಹೇಳಲು ಆತ ಎಷ್ಟೇ ಪ್ರಯತ್ನಪಟ್ಟರೂ ಬಾಯಿಂದ ಒಂದಕ್ಷರವೂ ಹೊರಡಲಿಲ್ಲ. ಹೆದರಿದ ಗುಬ್ಬಚ್ಚಿಯಾಗಿ ಗರಬಡಿದವರಂತೆ ಆತ ನಿಂತು ಬಿಟ್ಟಾಗ 'ಸ್ಟೇಷನ್‌ದಾಗ ಬಾಯಿ ಬಿಚ್ಚಿಸ್ತೀವಿ ನಡಿ!' ಎಂದರು ಪೋಲೀಸರು.

ಇತ್ತೀಚೆಗೆ ತಾನೆ ರಸ್ತೆ ರಿಪೇರಿಯಾಗಿದ್ದರಿಂದ ಪೋಲೀಸರ ವ್ಯಾನು ಸಲೀಸಾಗಿ ಹಳ್ಳಿಯಲ್ಲಿ ಬಂದು ನಿಂತಿತು. "ನಾವು ದೂರು ಕೊಟ್ಟಿಲ್ಲವಲ್ಲ ಸಾರ್

ತಮಗೆ! ಇಲ್ಲಿ ಅನಾಹುತವಾಗ್ತದಂಬೋದು ಹೆಂಗ್ ಗೊತ್ತಾಯ್ತು?" ಚಂದು ಪೋಲೀಸರನ್ನು ಪ್ರಶ್ನಿಸಿದ.

"ನಾವು ಮಾನಸಿಂಗ್ ಅನ್ನೋ ಕೇಡಿಯನ್ನ ಮತ್ತ ಸಂಗವ್ವ ಅನ್ನೋ ಹೆಂಗಸನ್ನ ಬಂಧಿಸಲಿಕ್ಕ ಬಂದೀವಿ. ಈ ಜಿಲ್ಲಾದೊಳಗ ನಡೆದ ಹತ್ತು ಕಳವು-ದರೋಡೆ ಪ್ರಕರಣಗಳಲ್ಲಿ, ಎರಡು ಕೊಲೆ ಕೇಸಿನಲ್ಲಿ ಈ ಆಸಾಮಿಯ ಮುಖ್ಯ ಪಾತ್ರ ಅದ! ಆ ಹೆಂಗಸು ಕೂಡಾ ಕಳ್ಳರ ಕೂಟದಾಗ ಅದಾಳ. ಅವರ ಪೈಕಿ ಥಾಮಸ್ ಅನ್ನೋನೊಬ್ಬ ಮಾತ್ರ ತಲೆ ತಪ್ಪಿಸಿಕೊಂಡಾನ. ನಮ್ಮ ವ್ಯಾನ್ ಶಬ್ದ ಕೇಳಿ ಇವರೂ ಕೂಡ ತಪ್ಪಿಸ್ಕೋಬಹುದು ಅಂತ್ಲೇ ನಾವು ಮೆಯಿನ್‌ರೋಡ್‌ನಲ್ಲಿ ಅದನ್ನ ನಿಲ್ಲಿಸಿ ಬಂದಿದ್ವಿ. ನಾವಿಷ್ಟು ಮುಂದಾ ಲೋಚ್ನೆ ಮಾಡಿದ್ರೂ ಮಕ್ಳು ನಮ್ಮನ್ನು ಸತಾಯಿಸಿ ಬಿಟ್ರು. ನಮ್ಮೋರು ಕಷ್ಟಪಟ್ಟು ಹುಡುಕಾಡಿ, ಬಣಿವೆ ಸಂದೀಲಿ ಹೊಕ್ಕೊಂಡಿದ್ದೋರನ್ನು ಎಳ್ಕೊಂಬಂದಿದ್ದಾರೆ.!"

ಕಾಶಪ್ಪನ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆತನ ಹೆಂಡತಿಯನ್ನೂ, ಊರ ಮುಖಂಡರನ್ನೂ, ಹರಸಿಂಗ್, ಚಂದು, ಲಚ್ಮಿ, ಸೋನಿಯನ್ನೂ ಪೋಲೀಸರು ವಿಚಾರಣೆಗಾಗಿ ಕರೆದೊಯ್ಯಲು ಸಿದ್ಧರಾದರು. ಮೋತಿಪವಾರ್ ತಲೆತಪ್ಪಿಸಿಕೊಂಡಿದ್ದರಿಂದ ಅವನನ್ನು ಪ್ರಯಾಸದಿಂದ ಹುಡುಕಿತಂದು ವ್ಯಾನಿನಲ್ಲಿ ದಬ್ಬಲಾಯಿತು.

ಕೊಡಲಿ ಸಕ್ರ್ಯಾನದ್ದೆಂಬ ಕಾರಣದಿಂದಾಗಿ ಅವನೂ ವ್ಯಾನು ಏರಬೇಕಾಯಿತು. ಅವನ ಹೆಂಡತಿ ಪೋಲೀಸರ ಕಾಲು ಹಿಡಿದುಕೊಂಡು ಅಳುತ್ತ "ನನ ಗಂಡ ಯಾವ ತಪ್ಪೂ ಮಾಡಿಲ್ಲ ಮಾರಾಜ್? ಗುಡ್ಡಕ್ಕ ಒಯ್ಯಲಿಕ್ಕಂತ ಕೊಡ್ಲಿ ಹೊರಗಿಟ್ಟಿದ್ದ. ಅದನ್ನ ಆ ಪವಾರ್ಯಾ ಎತ್ಕೊಂಡ್‌ಕೇಸಿ ಪೂಜಾರಿಗ ಹೊಡ್ದಾನ. ..ನನಗಂಡನ್ನ ಬಿಟ್ಟುಬಿಡ್ರಿ ಮಾರಾಜ್! ಜೈಲಿಗ ಹಾಕಬ್ಯಾಡ್ರಿ!" ಎಂದು ಬೇಡಿಕೊಳ್ಳತೊಡಗಿದಳು.

ಅವಳಿಂದ ಕಾಲುಬಿಡಿಸಿಕೊಂಡ ಪೋಲೀಸ್-ನಿನ್ನ ಗಂಡನ್ನ ಜೈಲಿಗ ಹಾಕೋದಿಲ್ಲ ಬಾಯಿ, ಇನ್ನೊಂದು ತಾಸಿಗೆ ಹೊಳ್ಳಿ ಕಳಿಸ್ತೀವಿ. ಅಂಜಬ್ಯಾಡ!" ಎಂದು ಭರವಸೆ ಇತ್ತಾಗ, ಸೆರಗಿನಿಂದ ಕಣ್ಣೊರೆಸಿಕೊಂಡ ಆಕೆ

"ಏಯ್, ಬರೋ ಮುಂದೆ ಮಾರಾಜ್ರ ಕಡೆಯಿಂದ ದ್ಯಾಸ್‌ಮಾಡಿ ಕೊಡ್ಲಿ ಇಸ್ಕೊಂಬಾ!" ಎಂದು ಗಂಡನಿಗೆ ತಾಕೀತು ಮಾಡಿದಳು. ಸಕ್ರ್ಯಾ 'ಹೂಂ' ಎಂದರೆ ಏನು ಅನಾಹುತ ಕಾದಿದೆಯೋ ಎಂಬಂತೆ, ಬಹುಮೆಲ್ಲಗೆ ತಲೆಯಾಡಿಸಿ ಒಪ್ಪಿಗೆ ಸೂಚಿಸಿದ.

ತಮ್ಮವರೆಲ್ಲರೂ ಪೋಲೀಸರ ಅತಿಥಿಗಳಾಗಿ ಹೊರಟಿರುವುದನ್ನು ಕಂಡು ಆತಂಕಪಡುತ್ತ, ಕಣ್ಣೀರು ಸುರಿಸುತ್ತ, ಸಿಂಬಳ ಸೀಟಿಹಾಕುತ್ತ ಗುಂಪಾಗಿ ನಿಂತಿದ್ದರು 'ದಿಬ್ಬ'ದ ಜನ. ಕಂಕುಳಲ್ಲಿ ಕೂಸನ್ನೆತ್ತಿಕೊಂಡು ಕಣ್ಣೀರಿಡುತ್ತ ಅವರೊಡನೆ ನಿಂತಿದ್ದ ಕಾಶಪ್ಪನ ಹಿರಿಯ ಮಗಳು ಸೋನಿಯನ್ನು ಒಂದೇ ಸಮನೆ ಬೈಯತೊಡಗಿದಳು-"ನಮ್ಮಪ್ಪನ್ನ ನುಂಗಿ ಹಾಕ್ದಲ್ಲೇ ಮಾರಿ! ನಮ್ಮನಿ ಹಾಳು ಮಾಡಿದ್ಯಲ್ಲೇ! ನಿನ ಗಂಡನ ಮನಿಗ ನೀ ಸೀದಾ ಹೊಂಟೋಗಿದ್ಯಂದ್ರ ಇಂಥ ಭಾನಗಡಿ ಯದಕ್ಕ ನಡೀತಿತ್ತೇ ಬಸ್ವಿ!—ಮರಿಯಮ್ಮ ತಾಯಿ ನಿನ್ನ ನುಂಗಿಬಿಡಬಾರದೇನೆ!...."

"ಚಲೋ ವೈದ್ನ ಸಿಕ್ಕ—ಉಡುಕಿ ಮಾಡಿಕೊಂಬಾಕ ಅಂತ ಕೈಹಿಡಿದ ಗಂಡನ್ನ ಜೈಲಿಗ ಹಾಕಿಸ್ತಿದ್ದಾಳ ರಂಡಿ।"

ಲಚ್ಮಿ ಆಗಲೇ ವ್ಯಾನಿನಲ್ಲಿ ಕುಳಿತುಬಿಟ್ಟಿದ್ದರಿಂದ ಇಳಿದು ಬಂದು ಅವಳಿಗೆ ಒದೆಯುವ ಅವಕಾಶವಿಲ್ಲದ್ದಕ್ಕಾಗಿ ಚಡಪಡಿಸಿದಳು. ದುಃಖ, ಅಪಮಾನ, ವ್ಯಥೆಯಿಂದ ಬಳಲುವ ಆ ಕ್ಷಣಗಳು ಅಸಹನೀಯವಾಗಿ, ವ್ಯಾನು ಮುಂದೆ ಚಲಿಸಬಾರದೇ ಎಂದು ಚಡಪಡಿಸಿದಳು ಸೋನಿ.

ಬೈಯುತ್ತಿದ್ದವರನ್ನು ಹಿಂದೆ ಸರಿಸಿ ಮುಂದೆ ಬಂದ ಚಿಕ್ಕಪುಟ್ಟ ಹುಡುಗರು ಗುಂಪೊಂದು "ಚಂದು ಮಾಸ್ತರ, ನೀ ಹೊಳ್ಳಿ ಯಾವಾಗ ಬರ್ತೀಯಾ? ಸಾಲಿ ಯಾವಾಗ ಸುರು ಮಾಡ್ತೀಯಾ? ಎಂದು ಕೂಗಿ ಕೇಳಿದರು. ಚಂದು ಎಲ್ಲಾ ನೋವು-ಆತಂಕಗಳನ್ನೂ ಮರೆತು ಮುದದಿಂದ ಉತ್ತರಿಸಿದ-"ನಾಳೆ ಮುಂಜಾನೆ ಶಾಲಿ ಹೊತ್ತಿಗ ಬಂದು ಬಿಡ್ತೇನಿ. ಎಲ್ರು ತಯಾರಾಗಿ ಬಂದಿರಬೇಕು" ಹುಡುಗರು ಕೈಬೀಸಿದರು.

ವ್ಯಾನುಚಲಿಸಿತು ಮೊದಲು ಮಂದಗತಿಯಲ್ಲಿ! ನಂತರ ತೀವ್ರಗತಿಯಲ್ಲಿ! ತಂಗಾಳಿ ನುಗ್ಗಿಬಂತು. ಇನ್ನು ಮುಂದೆ ಖಾಯಂ ಆಗಿ ಜೈಲು ಶಿಕ್ಷೆ ಅನುಭವಿ

ಸುವವರಿಗೂ, ಸಾಕ್ಷಿ ಪುರಾವೆ ನೀಡಿ ತಿರುಗಿ ಮನೆಗೆ ಬರುವವರಿಗೂ ಕಾಶಪ್ಪನ ಹೆಣಕ್ಕೂ ಸಹ ಅದು ಸ್ಪರ್ಶಿಸಿತು.

ಆ ಸ್ಪರ್ಶಸುಖದ ಅನುಭವ ಉಂಟಾದೊಡನೆ, ತಾಯಿ, ಅತ್ತಿಯು ರೊಡನೆ ಕುಳಿತಿದ್ದ ಸೀತೆ ಹರ್ಷ ವ್ಯಕ್ತಪಡಿಸಿದಳು-"ಈಗೆಷ್ಟು ಆರಾಮು ಅದ!"

ವಾಹನದ ಚಲನೆಯಿಂದ, ತಂಗಾಳಿಯ ಸ್ಪರ್ಶದಿಂದ ಈ ಪುಟ್ಟ ಹುಡುಗಿ ಗುಂಟಾದ ಸುಖಾನುಭವ ಇಲ್ಲಿ ಕುಳಿತಿರುವವರೆಲ್ಲರಿಗೂ ಆಯಿತೆ ಹೇಗೆ? ಚಂದು ಕುತೂಹಲದಿಂದ ಪ್ರತಿಯೊಬ್ಬರ ಮುಖವನ್ನೂ ಗಮನಿಸಿ ನೋಡಿದ.

ಸೋನಿಯ ಮುಖ ಸುಂದರ ಹೂವಿನಂತೆ ಅರಳಿತ್ತು. ದೊಡ್ಡವ್ವನ ಮೋರೆಯ ಗಂಟು ಸಡಲಿ ಸಹಜರೀತಿಯ ಪ್ರಸನ್ನಮುದ್ರೆ ತಳೆದಿತ್ತು. ಕೆಲ ವರ ಮುಖದ ಸ್ನಾಯುಗಳು ಸೂಕ್ಷ್ಮವಾಗಿ ಸಂಕುಚನ ಹೊಂದಿ ಹಿತವನ್ನು ಪರಿಗ್ರಹಿಸಲೆತ್ನಿಸುತ್ತಿದ್ದವು. ಇನ್ನು ಕೆಲವರು ಕೆನ್ನೆಗುಂಟ ಇಳಿಯುತ್ತಿದ್ದ ಬೆವರನ್ನು ಸಹ ಒರೆಸಿಕೊಳ್ಳುವ ಗೋಜಿಗೆ ಹೋಗದೆ ಚಿಂತಾಕ್ರಾಂತರಾಗಿ, ಹತಾಶಭಂಗಿಯಲ್ಲಿ ಚಲನಪೂರ್ವ ಸ್ಥಿತಿಯಲ್ಲೇ ಉಳಿದಿದ್ದರು!

ತಮ್ಮ ತಮ್ಮ ಮನೋವ್ಯಾಪಾರಕ್ಕೆ ತಕ್ಕಂತೆ ಈ ಜನ ಸುಖವನ್ನು ಸ್ವೀಕರಿಸುತ್ತಿದ್ದಾರೆ ಅಥವಾ ನಿರಾಕರಿಸುತ್ತಿದ್ದಾರೆ ಎನ್ನಿಸಿತು. ಕಿಟಕಿಯಿಂದ ಮತ್ತೆ ಗಾಳಿ ಬೀಸಿತು. ಧೂಳು ರಾಚಿತು, ಚಂದು ಕಣ್ಣುಮುಚ್ಚಿದ, ಮತ್ತೆ ತೆರೆದ...